ಬುಡಕಟ್ಟು ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಎನ್.ಹುಚ್ಚಪ್ಪ ಮಾಸ್ತರರ ಪಾತ್ರ

[ಸಮಾಜ ಶಾಸ್ತ್ರದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ]

ಸಂಶೋಧಕಿ
ಕಟ್ಟೆ ವಿಜಯಲಕ್ಷ್ಮಿ

ಮಾರ್ಗದರ್ಶಕರು
ಡಾ. ಹಿ.ಚಿ.ಬೋರಲಿಂಗಯ್ಯ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ ೫೮೩ ೨೭೬.

೨೦೦೭-೦೮

ಬುಡಕಟ್ಟು ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಎನ್.ಹುಚ್ಚಪ್ಪ ಮಾಸ್ತರರ ಪಾತ್ರ

[ಸಮಾಜ ಶಾಸ್ತ್ರದಲ್ಲಿ ಎಂ.ಫಿಲ್. ಪದವಿದಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ]

ಸಂಶೋಧಕಿ
ಕಟ್ಟಿ ವಿಜಯಲಕ್ಷ್ಮಿ

ಮಾರ್ಗದರ್ಶಕರು
ಡಾ. ಹಿ.ಚಿ.ಬೋರಲಿಂಗಯ್ಯ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ ೫೮೩ ೨೭೬.

೨೦೦೭–೦೮

ಪ್ರಮಾಣ ಪತ್ರ

"ಬುಡಕಟ್ಟು ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಎನ್.ಹುಚ್ಚಪ್ಪ ಮಾಸ್ತರರ ಪಾತ್ರ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಸಮಾಜಶಾಸ್ತ್ರದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭-೦೮ ನೇ ಸಾಲಿನಲ್ಲಿ ಡಾ. ಹಿ.ಚಿ.ಬೋರಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಕ.ವಿ.ವಿ. ಹಂಪಿ-ವಿದ್ಯಾರಣ್ಯ
ದಿನಾಂಕ : 25-11-2008

Vlaxmi

ಕುಮಾರಿ ಕಟ್ಟೆ ವಿಜಯಲಕ್ಷ್ಮಿ
ಎಂ.ಫಿಲ್.ಸಂಶೋಧನಾ ವಿದ್ಯಾರ್ಥಿನಿ
ಬುಡಕಟ್ಟು ಅಧ್ಯಯನ ವಿಭಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬.
ಗಿರಿಸೀಮೆ.

ಮಾರ್ಗದರ್ಶಕರ ಪ್ರಮಾಣ ಪತ್ರ

"ಬುಡಕಟ್ಟು ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಎಸ್.ಹುಚ್ಚಪ್ಪ ಮಾಸ್ತರರ ಪಾತ್ರ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಕಟ್ಟಿ ವಿಜಯಲಕ್ಷ್ಮಿ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಸಮಾಜಶಾಸ್ತ್ರದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಕ.ವಿ.ವಿ. ಹಂಪಿ–ವಿದ್ಯಾರಣ್ಯ
ದಿನಾಂಕ : ೨5-11-೨೦೦8

(ಡಾ.ಹಿ.ಚಿ.ಬೋರಲಿಂಗಯ್ಯ)
ಪ್ರಾಧ್ಯಾಪಕರು, ಕುಲಸಚಿವರು ಮತ್ತು ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬.
ಗಿರಿಸೀಮೆ.

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

ಭಾರತೀಯ ಸಮಾಜದಲ್ಲಿ ಏಣಿ-ಶ್ರೇಣಿಯ ವ್ಯವಸ್ಥೆ ಇದೆ. ಜಾತಿ-ಜಾತಿಗಳು, ವರ್ಗ-ವರ್ಗಗಳು, ಕೀಳರಿಮೆ ಮತ್ತು ಮೇಲ್ ಹಿರಿಮೆಯ ರೂಪದಲ್ಲಿ ಆವರಿಸಿಕೊಂಡಿದೆ. ಪ್ರಭುತ್ವ ಎನ್ನವುದು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೋಸ್ಕರ ಪಾರಂಪರಗತವಾದ ಶೋಷಣೆಯನ್ನು ನಿರ್ಮಿಸುತ್ತಲೇ ಇರುವುದು ಇಂದು ಎಲ್ಲರಿಗೂ ತಿಳಿದ ಸಂಗತಿ. ಆದ್ದರಿಂದ ಬಡವರು, ಬಡವರಾಗುತ್ತಲೇ, ಶ್ರೀಮಂತರು ಶ್ರೀಮಂತರಾಗುತ್ತಲೇ ಇರುವುದನ್ನು ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ನಡೆದ ಅಧ್ಯಯನಗಳೆಲ್ಲವೂ ನಮಗೆ ಸಾಕ್ಷಿಯಾಗಿ ನಮ್ಮ ಕಣ್ಮುಂದೆ ನಿಲ್ಲುತ್ತವೆ. ಇವೆಲ್ಲವುಗಳನ್ನು ಚರ್ಚಿಸುತ್ತಾ ಹೋರಟರೆ ನಮಗೆ ಮಾನವನ ಮೂಲ ಬದುಕು ನೆನಪಿಗೆ ಬರುತ್ತದೆ.

ಆದಿಮಾನವನ ಬದುಕು ಗೆಡ್ಡೆ-ಗೆಣಸುಗಳಿಂದ ಪ್ರಾರಂಭವಾಗಿ ಕುಮ್ರಿ ಬೆಸಾಯ, ಭೇಟೆ, ಪಶುಪಾನೆ, ಕೃಷಿ ಹೀಗೆ ಬದುಕು ಕವಲೊಡೆದ ದಾರಿಯಲ್ಲಿ ನಡೆದುಬಂದು ಇಡೀ ಬುಡಕಟ್ಟುಗಳ ಪಾರಂಪರಾಗತವಾದ ಬದುಕು ತನ್ನ ಮೂಲರೂಪದಲ್ಲಿ ವಿಭಿನ್ನವಾದ ನೆಲೆಯನ್ನು ಕಂಡಿರುವುದು ಗೋಚರವಾಗುತ್ತದೆ. ಆದ್ದರಿಂದ ನಾಡಿನ ಸಮುದಾಯಗಳಿಗೂ ಮತ್ತು ಕಾಡಿನ ಬೆಟ್ಟದ ಕಣಿವೆಗಳಲ್ಲಿ ಜೀವಿಸುವ ಸಮಾಜಗಳಿಗೂ ತುಂಬಾ ಅಂತರವಿದೆ. ಬುಡಕಟ್ಟುಗಳ ಸಮಗ್ರವಾದಂತಹ ಸುಧಾರಣೆ ಆಗದೇ ಇರುವುದು ಇಂದು ದುರಂತವೇ ಸರಿ. ಆದ್ದರಿಂದ ಯಾವುದೇ ಅಧ್ಯಯನಗಳು ವಸ್ತು ನಿಷ್ಠ ಮತ್ತು ಸಾರ್ವತ್ರಿಕ ಸಮಾನತೆಯನ್ನು ಸೃಷ್ಟಿಮಾಡುವಂತ ದಾರಿಯಲ್ಲಿ ನಡೆಯಲೇಬೇಕಾಗಿರುವುದು ಅನಿವಾರ್ಯವಾಗಿದೆ.

ಚರಿತ್ರೆಯ ಪುಟಗಳನ್ನು ಬಿಚ್ಚಿಟ್ಟಾಗ ಮಾನವ ಜಮೀನ್ದಾರಿಕೆ ಮತ್ತು ಬಂಡವಾಳಶಾಹಿಯ ಹಿಡಿತದಿಂದ ಹೊರಬರಲು ಎಷ್ಟೋ ಪ್ರಯತ್ನ ಪಟ್ಟರೂ ಮೇಲಿನ ವರ್ಗವು ದುಡಿತದ ಆಧಾರದ ಮೇಲೆ ಬದುಕುವ ವರ್ಗವನ್ನು ತನಗೆ ಇಷ್ಟ ಬಂದಂತೆ ಬಳಸಿಕೊಂಡಿದೆ. ಇದು ಚರಿತ್ರೆಯ ಉದ್ದಕ್ಕೂ ನಡೆದು ಬಂದಿರುವ ಸಂಗತಿಯಾಗಿದೆ.

ಭಾರತವು ವಿವಿಧ ರೀತಿಯ ಸಂಸ್ಕೃತಿಯನ್ನು ಹೊಂದಿರುವ ಜನಸಮುದಾಯಗಳು ವಾಸಿಸುವ ದೇಶ. ಇಲ್ಲಿ ಹಲವಾರು ಸಮುದಾಯಗಳು ತಮ್ಮದೇ ಆದ ರೂಢಿ ಸಂಪ್ರದಾಯ, ಭಾಷೆ, ಧರ್ಮ, ವೃತ್ತಿ ಇಟ್ಟುಕೊಂಡು ಬಹುಮುಖಿ ಸಂಸ್ಕೃತಿಯನ್ನು ಹೊಂದಿವೆ. ಕಾಶ್ಮೀರದಿಂದ

ಕನ್ಯಾಕುಮಾರಿಯವರೆಗೆ ಅವರದೇ ಆದ ಪ್ರದೇಶಕ್ಕೆ ಅನುಗುಣವಾಗಿ ಪ್ರತಿಯೊಂದು ಬುಡಕಟ್ಟು ಪರಸ್ಪರ ಸಾಂಸ್ಕೃತಿಕ ಆಚರಣೆಗಳಲ್ಲಿ ಒಂದು ಮತ್ತೊಂದು ಬುಡಕಟ್ಟಿಗೆ ಸಾಮ್ಯವಿರುವಂತೆ ಕಂಡು ಬಂದರೂ ಸಹ ಅನೇಕ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ.

ಕನಾಟಕದಲ್ಲಿ ಒಟ್ಟು ಐವತ್ತು ಪರಿಶಿಷ್ಟ ಬುಡಕಟ್ಟುಗಳಿವೆ. ಕೆಲವು ಬುಡಕಟ್ಟುಗಳನ್ನು ಅಲೆಮಾರಿ ಬುಡಕಟ್ಟಗಳು (Nomadic Tribes) ಎಂದು ಇನ್ನೂ ಕೆಲವು ಬುಡಕಟ್ಟುಗಳನ್ನು ಅರೆ ಅಲೆಮಾರಿ ಬುಡಕಟ್ಟುಗಳು (Semi Nomadic Tribes) ಎಂದು ಪರಿಣಗಿಸಿ, ಮೀಸಲಾತಿಯ ಹಿಂದುಳಿದ ವರ್ಗ (Backward Class) ಗಳ ಪಟ್ಟಿಗೆ ಸೇರಿಸಲಾಗಿದೆ.

ಬುಡಕಟ್ಟು ಎಂದರೇನು? ಎಂಬುದನ್ನು ಕುರಿತು ವಿಚಾರ ಮಾಡುವುದು ಇಲ್ಲಿ ತುಂಬ ಅಗತ್ಯವಾಗಿದೆ. ಜಗತ್ತಿನಾದ್ಯಂತ ಹಳ್ಳಿಗಳಲ್ಲಿ ಜನರು ವಾಸಮಾಡುತ್ತಾರೆ. ಆದ್ದರಿಂದ ಇವರ ಸಂಸ್ಕೃತಿಯನ್ನು ಕ್ರಮವಾಗಿ ಗ್ರಾಮೀಣ ಮತ್ತು ನಗರ ಸಂಸ್ಕೃತಿ ಎಂದು ಕರೆಯಬಹುದು. ಇದರ ಜೊತೆಗೆ ಬುಡಕಟ್ಟುಗಳು ತಮ್ಮದೇ ಸಂಸ್ಕೃತಿಯನ್ನು ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದಿವೆ. ಈ ವರ್ಗಗಳಲ್ಲಿ ರಕ್ತ ಸಂಬಂಧ ಬಹುಮುಖ್ಯವಾದ ಅಂಶ ಬುಡಕಟ್ಟುಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆ ರಕ್ತ ಸಂಬಂಧದ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ತುಂಬಾ ಕಟ್ಟುನಿಟ್ಟಾದ ನಿಯಮಗಳನ್ನು ಅವು ಹೊಂದಿದೆ. ಹೊರಗಿನಿಂದ ಯಾರೇ ಬಂದರೂ ಅನುಮಾನದಿಂದಲೇ ನೋಡುವ ಪದ್ಧತಿಯಿರುತ್ತದೆ. ಬುಡಕಟ್ಟುಗಳು ತಮ್ಮದೇ ಆದ ಭಾಷೆ, ಆಚಾರ, ಸಂಪ್ರದಾಯಗಳನ್ನು ಹೊಂದಿರುವುದರಿಂದ ಇವರನ್ನು ವಿಜ್ಞಾನಿಗಳು ಆದಿಮ ಬುಡಕಟ್ಟುಗಳೆಂದು ಕರೆದಿದ್ದಾರೆ.

ಸಾಮಾನ್ಯವಾಗಿ ಒಂದು ದೇಶದ ಮೂಲ ನಿವಾಸಿಗಳನ್ನು ಆದಿವಾಸಿ (Tribes) ಎಂದು ಕರೆದಿರುವುದಲ್ಲದೆ ಸಂಚಾರಿ ಜನಾಂಗ, ಬುಡಕಟ್ಟು ಜನಾಂಗ ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಬುಡಕಟ್ಟು ಶಬ್ಧದ ಅರ್ಥವನ್ನು ಅತೀ ಸರಳವಾಗಿ ಹೇಳುವುದಾದರೆ ಬುಡಕಟ್ಟುಗಳು ಚಿಕ್ಕದಾಗಿ, ಏಕಾಂಗಿಯಾಗಿ ಹಾಗೂ ಪರಸ್ಪರ ಹೊಂದಾಣಿಕೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿರುವ ಸಮಾಜ.

ಭಾರತದಲ್ಲಿ ಬುಡಕಟ್ಟು ಸಮುದಾಯಗಳ ಅಧ್ಯಯನ ಒಂದು ಶತಮಾನದ ಕಾಲದಿಂದ ಇಲ್ಲಿಯವರೆಗೆ ನಡೆದು ವಿವಿಧ ಮಜಲುಗಳನ್ನು ಅಧ್ಯಯನ ಮಾಡಿರುವುದನ್ನು ಕಾಣಬಹುದು. ಆದ್ದರಿಂದ ಇಂದು ಅಂತರ್ ಶಿಸ್ತಿನ ಅಧ್ಯಯನಗಳು ನಡೆಯುತ್ತಿವೆ. ಜಾನಪದ, ಭಾಷೆ,

ಸಮಾಜಶಾಸ್ತ್ರ, ಮಾನವ ಶಾಸ್ತ್ರಗಳ ಅಧ್ಯಯನಗಳು ವಸ್ತುನಿಷ್ಠವಾಗಿ ನಡೆದಿವೆ. ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯಗಳನ್ನು ಕುರಿತು ಅಧ್ಯಯನ ಮಾಡಿದ ಸಂಶೋಧನೆಗಳನ್ನು ಅವಲೋಕಿಸಿದರೆ ಸಾಮಾಜಿಕ ಪರಿವರ್ತನೆಗೆ ಅನುಗುಣವಾಗಿ ಬುಡಕಟ್ಟು ಸಮುದಾಯಗಳ ಬದುಕು ಬದಲಾವಣೆಗೆ ಒಳಪಟ್ಟಿರುವುದು ಗೋಚರಿಸುತ್ತದೆ.

ಭಾರತದ ಬುಡಕಟ್ಟುಗಳ ಅಧ್ಯಯನ ಮಾಡಿರುವವರಲ್ಲಿ ಭಾರತೀಯ ವಿದ್ವಾಂಸರುಗಳಲ್ಲದೇ ಪಾಶ್ಚಾತ್ಯ ವಿದ್ವಾಂಸರು ಸಹ ಅಧ್ಯಯನ ಮಾಡಿದ್ದಾರೆ. ಮಿಲ್ಸ್ ಅವರು, ಲ್ಹೋಟ್ ನಾಗಾ, ಅಮಾನಾಗಾ, ಹಾರೂ ರೆಂಗ್ಮಾನಾಗಾ ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಭಾರತದ ಬುಡಕಟ್ಟುಗಳ ಅಧ್ಯಯನದಲ್ಲಿ ವೆರಿಯರ್ ಎಲ್ವಿನ್ ಪಾತ್ರ ಬಹಳ ಮುಖ್ಯವಾದುದು. ಇವರು ಮಧ್ಯಭಾರತ ಹಾಗೂ ಈಗಿನ ಭಾರತದ ಬುಡಕಟ್ಟುಗಳ ಬಗ್ಗೆ ಅಪಾರ ಅಧ್ಯಯನ ಮಾಡಿದ್ದಾರೆ.

ಮಾನವನು ಮುಲತಃ ಸಮಾಜಜೀವಿ ಎಂಬ ಮಾತನ್ನು ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ಹೇಳಿದ್ದನ್ನು ನಾವು ಮರೆಯುವಂತಿಲ್ಲ. ಮಾನವ ಸಮಾಜಜೀವಿ ಮತ್ತು ಸಮೂಹ ಜೀವಿಯಾಗಿ ಸಾಮಾಜಿಕ ನಿಯಮಗಳ ಚೌಕಟ್ಟಿನಲ್ಲಿ ಬದುಕುವುದು ಆತನಿಗೆ ಅನಿವಾರ್ಯವಾಗಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ ವ್ಯಾಪಕವಾದ ರೀತಿಯಲ್ಲಿ ಮತ್ತು ಸಮಗ್ರ ಸ್ವರೂಪದಲ್ಲಿ ಆಗಿಲ್ಲ. ಸ್ವಾತ್ರಂತ್ರ್ಯ ಪೂರ್ವದಲ್ಲಿ ಥರ್ಸ್ಟನ್ ಅನಂತಕೃಷ್ಣ ಅಯ್ಯರ್ ಎ.ಎ.ಡಿ. ಲೂಯಿಸ್ ಮುಂತಾದವರು ಬುಡಕಟ್ಟುಗಳನ್ನು ಪರಿಚಯಿಸುವಂತಹ ಕೆಲಸವನ್ನು ಮಾಡಿದರು. ಅನಂತರದಲ್ಲಿ ಅಧ್ಯಯನದ ದೃಷ್ಟಿಯಿಂದ ಹೇಳುವುದಾದರೆ ಈ ಕ್ಷೇತ್ರ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿತು. ಸ್ವಾತಂತ್ರ್ಯ ನಂತರದಲ್ಲಿ ಅಲ್ಲಲ್ಲಿ ಅಂತಹ ಪ್ರಯತ್ನಗಳು ನಡೆದವು. ಕಳೆದ ಒಂದು ದಶಕದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಾನಪದ ಅಕಾಡೆಮಿ ಮತ್ತು ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗವು ಕರ್ನಾಟಕದ ಸಮಗ್ರ ಅಧ್ಯಯನ ಹಾಗೂ ಭಾರತದ ಬುಡಕಟ್ಟುಗಳ ಅಧ್ಯಯನ ಮಾಡುತ್ತಿರುವುದನ್ನು ಗಮನಿಸಬಹುದು.

ಸಮುದಾಯವು ಪರಿವರ್ತನಶೀಲ ಗುಣವುಳ್ಳದ್ದು. ಸಮಾಜದಲ್ಲಿರುವ ಜನವರ್ಗದ ಬದುಕು ಬದಲಾವಣೆ ಹೊಂದುತ್ತಲೇ ಇರುತ್ತದೆ. ಇದು ಅಗತ್ಯ ಹಾಗೂ ಅನಿವಾರ್ಯವೂ ಹೌದು. ಆದ್ದರಿಂದ ಕಾಲಕಾಲಕ್ಕೆ ಒಂದೊಂದು ಜನವರ್ಗಗಳ ಅಧ್ಯಯನ ಮಾಡುವುದರ

ಮೂಲಕ ಆಯಾ ಜನವರ್ಗಗಳ ಅಂದಿನ ಬದುಕುವ ರೀತಿ, ರಿವಾಜುಗಳನ್ನು ದಾಖಲಿಸುವುದು ಅಗತ್ಯ. ಇದು ಸಂಶೋಧಕರಿಗೆ ಅಧ್ಯಯನಕಾರರಿಗೆ, ನಿರ್ಧಿಷ್ಟ ಜನವರ್ಗಗಳನ್ನು ಕುರಿತು ಅಧ್ಯಯನ ಮಾಡಲು ಆಕರಗಳಾಗುತ್ತವೆ. ಹಾಗೂ ಆಯಾ ಜನವರ್ಗಗಗಳಿಗೆ ನ್ಯಾಯ ದೊರಕಿಸಿದಂತಾಗುತ್ತದೆ.

ಸಾಮಾಜಿಕ ಜೀವಿಯಾಗಿರುವ ಮಾನವನು ಸಮುದಾಯದ ಜೀವಿಯೂ ಹೌದು. ಸಮುದಾಯಿಕ ಜೀವನವು ಮಾನವನ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಬೋಗಾರ್ಡ್ಸ್ ಅವರು ನಾವು ನಮ್ಮವರು ಎಂಬ ಭಾವನೆಯೊಂದಿಗೆ ಒಂದು ನಿಶ್ಚಿತ ಭೂಪ್ರದೇಶದಲ್ಲಿ ವಾಸಿಸುವ ಜನಸಮೂಹವನ್ನು ಸಮುದಾಯ ಎನ್ನಬಹುದು ಎಂದು ವ್ಯಾಖ್ಯಾನಿಸಿದ್ದಾರೆ. ಹೊರ ನೋಟಕ್ಕೆ ಸಮುದಾಯವು ಸ್ಥಿರವಾಗಿ ಕಂಡರೂ ಯಾವುದೇ ಕಾಲದಲ್ಲೂ ಬದಲಾಗದೇ ಉಳಿದಿಲ್ಲ. ಮಾನವನ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಬದಲಾವಣೆಗಳು ಉಂಟಾಗುತ್ತವೆ. ಈ ರೀತಿಯಲ್ಲಿ ಬದಲಾವಣೆ ಹೇಗೆ ಉಂಟಾಗುತ್ತವೆ ಎಂಬ ವಿಷಯವನ್ನು ತಿಳಿಯುವುದು ಅವರ ಮುಖ್ಯ ಉದ್ದೇಶವಾಗಿದೆ.

ಭಾರತದ ವಿವಿಧ ಸಮಾಜಗಳಲ್ಲಾಗಿರುವ ರೂಪಾಂತರಗಳನ್ನು ಅಯಯನ ಮಾಡಲು ದೇಶಿಯ ಮತ್ತು ವಿದೇಶಿದ ಸಮಾಜ ವಿಜ್ಞಾನಿಗಳು ಅನೇಕ ಪ್ರಸ್ಥಾವನೆಗಳನ್ನು ಹುಟ್ಟು ಹಾಕಿದ್ದಾರೆ. ಯೋಗೇಂದ್ರಸಿಂಗ್, ಎಂ.ಎಸ್.ಶ್ರೀನಿವಾಸ, ಜೆ.ಎಫ್.ಸ್ಟಾಲ್, ವಾಯಿಡೂಮೋ, ಎಚ್.ವಿ.ಗೌಲ್ಡ್ ಇವರಲ್ಲಿ ಪ್ರಮುಖರು. ಮೇಲಿನ ವಿದ್ವಾಂಸರು ಭಾರತದ ಸಾಮಾಜಿಕ ಚಲನೆಗಳನ್ನು ವಿವಿಧ ಕಾಲಘಟ್ಟಗಳಲ್ಲಿ ಅಧ್ಯಯನಕ್ಕೊಳಪಡಿಸಿದ್ದಾರೆ. ಇವರೆಲ್ಲರಲ್ಲಿ ಹೆಚ್ಚು ಚರ್ಚೆಗೆ ಒಳಗಾದವರು ವೆರಿಯರ್ ಎಲ್ವಿನ್. ಕರ್ನಾಟಕದಲ್ಲಿ ಜಿ.ಎಸ್.ಘುರ್ಯೆ, ಡಾ॥ ಹಿ.ಚಿ.ಬೋರಲಿಂಗಯ್ಯ, ಕೆ.ಎಂ.ಮೇತ್ರಿ, ಡಾ॥ ಸಿ.ಪಾರ್ವತಮ್ಮ ಮುಖ್ಯರಾಗುತ್ತಾರೆ. ಸಮಾಜಶಾಸ್ತ್ರ ಎಂ.ಎನ್.ಶ್ರೀನಿವಾಸ ಭಾರತದ ಸಮುದಾಯಗಳ ಸಾಮಾಜಿಕ ಬದಲಾವಣೆಯನ್ನು ಎರಡು ನಿಖರ ಪ್ರಸ್ಥಾನಗಳ ಮೂಲಕ ಅಧ್ಯಯನ ಮಾಡಿದ್ದಾರೆ. ಈಗಾಗಲೇ ಎಲ್ಲರಿಗೂ ಗೊತ್ತಿರುವಂತೆ ಮೊದಲನೇ ಪ್ರಸ್ಥಾನ "ಸಂಸ್ಕೃತೀಕರಣ" ಎರಡನೆಯದು "ಪಾಶ್ಚಾತೀಕರಣ" ಈ ಎರಡು ಪ್ರಸ್ಥಾನಗಳು ಎರಡು ಭಿನ್ನ ರೀತಿಯ ಬದಲವಾಣೆಗಳನ್ನು ಸೂಚಿಸಿದರೂ ಸಹ ಇವುಗಳ ತಾತ್ವಿಕ ದೃಷ್ಟಿಕೋನ ಒಂದೇ ಆಗಿದೆ.

ಪ್ರಕೃತಿ ಮತ್ತು ಆದಿಮ ಮನುಷ್ಯನ ಸಂಬಂಧ ಅನನ್ಯವಾದದ್ದು. ಇಂತಹ ಒಂದು ಸಂಬಂಧ ಯಾವತ್ತೂ ಗುತ್ತೆದಾರರ ಕೈಗೆ ತಲುಪಿತೋ ಅಂದು ಬುಡಕಟ್ಟು ಸಮುದಾಯದ

ಬದುಕು ಅತಂತ್ರತೆಯ ಕಡೆಗೆ ಹೆಜ್ಜೆಗಳನ್ನು ಹಾಕಿತು. ಮನುಷ್ಯನ ಪ್ರತಿನಿತ್ಯದ ಮೂಲಭೂತ ಅವಶ್ಯಕತೆಗಳನ್ನು ತಿನ್ನುವ, ಕುಡಿಯುವ ಮತ್ತು ದಿನಬಳಕೆಯ ವಸ್ತುಗಳನ್ನು ಪ್ರಕೃತಿಯಿಂದ ಉಚಿತವಾಗಿ ಆದಿಮ ಕಾಲದಲ್ಲಿ ಪಡೆಯುತ್ತಿದ್ದ. ಬುಡಕಟ್ಟು ಸಮಾಜದ ಬದುಕನ್ನು ನಿಯಂತ್ರಿಸುವ ಹಾಗೂ ನಿರೂಪಿಸುವಲ್ಲಿ ಪ್ರಕೃತಿಯ ಪಾತ್ರ ಪ್ರಮುಖವಾದುದೆಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಮನುಷ್ಯ ಪ್ರಕೃತಿಯನ್ನು ಎಂದು ಉಪಭೋಗ ವಸ್ತುವೆಂದು ಭಾವಿಸಿದನೋ ಅಂದಿನಿಂದ ಪ್ರಕೃತಿಯನ್ನು ಅರೆಬೆತ್ತಲೆ ಮಾಡತೊಡಗಿದ ಗುತ್ತಿಗೆದಾರ ಸಂಸ್ಕೃತಿಯೂ ಇಲ್ಲಿಂದಲೇ ಉಗಮವಾಯಿತು. ಪ್ರಕೃತಿಯಲ್ಲಿ ಪ್ರಕೃತಿಯ ಒಂದಂಗವಾಗಿ ಬದುಕುತ್ತಿದ್ದ ಬುಡಕಟ್ಟು ಜನರನ್ನು ಉಪಭೋಗ ವಸ್ತುಗಳಂತೆ ತಮ್ಮ ಮನಸಿಚ್ಛೆ ದುಡಿಸಿಕೊಂಡರು. ಕಾಡಿನ ಕಂಟ್ರಾಕ್ಟದಾರಿ ಸಂಸ್ಕೃತಿಯು ಬುಡಕಟ್ಟು ಸಮುದಾಯಗಳ ಬದುಕಿಗೆ ಮಾರಕವಾಗಿ ಪರಿಣಮಿಸಿತು. ಬುಡಕಟ್ಟು ಸಮುದಾಯಕ್ಕಷ್ಟೇ ಅಲ್ಲ, ಇಡೀ ಮನುಷ್ಯ ಸಮಾಜವೇ ಇಂದು ಪ್ರಕೃತಿಯಿಂದ ಸಂಪೂರ್ಣವಾಗಿ ಬಿಡುಗಡೆಗೊಂಡಿದ್ದು ಪ್ರಕೃತಿಯನ್ನೇ ಮನುಷ್ಯ ತನ್ನ ಅಸೀಮ ಶಕ್ತಿಯಿಂದ ತನ್ನ ಇಷ್ಟಕ್ಕೆ ಬಂದಂತೆ ಮಾರ್ಪಡಿಸಿಕೊಳ್ಳುತ್ತಿದ್ದಾನೆ. ಇಂದು ಪ್ರಕೃತಿ ಮತ್ತು ಮನುಷ್ಯನ ನಡುವೆ ತುಂಬಾ ಸಂಕೀರ್ಣ ಸಂಬಂಧಗಳೇರ್ಪಡುತ್ತಿವೆ. ಇದು ಕಾಡಿನ ಬುಡಕಟ್ಟು ಸಮುದಾಯದಿಂದ ಹಿಡಿದು ರಾಜ್ಯದ, ರಾಷ್ಟ್ರದ, ವಿಶ್ವದ ಸಂಬಂಧಗಳ ಮಧ್ಯೆ ಅತ್ಯಂತ ಸಂಕೀರ್ಣ ಸ್ಥಿತಿ ನಿರ್ಮಾಣಗೊಳ್ಳುತ್ತಿವೆ.

ಯಾವುದೇ ಸಮುದಾಯವು ತನ್ನದೇ ಆದ ಜೀವನ ವಿಧಾನವನ್ನು ಹೊಂದಿರುತ್ತದೆ. ಈ ಜೀವನ ವಿಧಾನಕ್ಕನುಗುಣವಾಗಿ ಸಂಸ್ಕೃತಿಯೂ ರೂಪುಗೊಂಡಿರುತ್ತದೆ. ಹಾಗೆಯೇ ಆದಿವಾಸಿ ಸಮುದಾಯವು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುತ್ತದೆ. ಈ ಸಂಸ್ಕೃತಿಯನ್ನು ವಂಶಪಾರಂಪರ್ಯವಾಗಿ ಉಳಿಸಿಕೊಂಡು ಕಾಲಕ್ಕೆ ತಕ್ಕಂತೆ ಬೆಳೆಸಿಕೊಂಡು ಬರುತ್ತದೆ. ಸಾಮಾನ್ಯವಾಗಿ ಅವರು ಯಾವುದೋ ಒಂದು ಪ್ರದೇಶದ ಮೂಲನಿವಾಸಿಗಳಾಗಿರುತ್ತಾರೆ. ಅನೇಕ ಶತಮಾನಗಳಿಂದಲೂ ಬೆಟ್ಟ, ಗುಡ್ಡ, ಮರಳುಗಾಡು, ಹಿಮಪ್ರದೇಶ ಅಥವಾ ದ್ವೀಪಗಳಲ್ಲಿ ವಾಸವಾಗಿರುತ್ತ ಬಹುಕಾಲದವರೆಗೂ ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳ ಪ್ರಭಾವಕ್ಕೆ ಸಿಕ್ಕದೇ, ತಮ್ಮ ಸಂಸ್ಕೃತಿಯನ್ನು ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬರುವುದುಂಟು. ಅಂದರೆ, ಇತರರಿಗಿಂತ ಭಿನ್ನವಾದ ಪ್ರತ್ಯೇಕವಾದ ಜೀವನಕ್ರಮವನ್ನು ರೂಢಿಸಿಕೊಂಡು ಬದುಕುತ್ತ ತಮ್ಮ ಅನನ್ಯ ಸಾಂಸ್ಕೃತಿಕ ಮೌಲ್ಯಗಳನ್ನು ಇಂದಿನವರೆಗೂ ಜೀವಂತವಾಗಿ ಉಳಿಸಿಕೊಂಡು ಬಂದಿರುವ ಒಂದು ಗುಂಪಿನ ಅಥವಾ ಸಮುದಾಯದ ಜನರನ್ನು ಆದಿವಾಸಿಗಳು ಎಂದು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ಸಾವಿರಾರು ವರ್ಷಗಳಿಂದ ನಗರ ಸಂಸ್ಕೃತಿಯ ಆಕ್ರಮಣ ಶೀಲ

ಪ್ರಭಾವದಿಂದ ಉದ್ದೇಶಪೂರ್ವಕವಾಗಿ ತಪ್ಪಿಸಿಕೊಂಡು ದಟ್ಟ ಅರಣ್ಯಗಳಲ್ಲಿ ಗುಡ್ಡಗಾಡು ಪ್ರದೇಶಗಳಲ್ಲಿ ಅನ್ಯ ಸಂಪರ್ಕ ದೂರವಾದ ನೆಲೆಗಳಲ್ಲಿ ವಾಸಿಸುತ್ತ ತಮ್ಮದೇ ಆದ ಭಾಷೆ, ಆಚಾರ, ವಿಚಾರ, ದೈವ, ಮೂಲಪುರುಷ ಸಂಪ್ರದಾಯ, ನಂಬಿಕೆ, ಉಡುಪು, ತೊಡುಪು, ಹಾಡು, ಪಆಡು, ಆಟ, ಮಾಟ, ವಿಧಿ, ನಿಷೇಧ, ಮಂತ್ರ, ಮಾಟ, ಆಹಾರ, ಪಾನೀಯಗಳನ್ನು ಮತ್ತು ಸಾಮಾಜಿಕ ಕಟ್ಟುಪಾಡುಗಳನ್ನು ಹೊಂದಿ ನಾಗರಿಕ ಕಣ್ಣಿಗೆ ವಿಚಿತ್ರವೆಂಬಂತೆ ಬದುಕುತ್ತಿರುವ ಸಮುದಾಯಗಳಿವು.

ಕರ್ನಾಟಕದ ಬುಡಕಟ್ಟುಗಳು ಮತ್ತು ಕೆಳಸ್ತರದ ಸಮುದಾಯಗಳ ಎರಡು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಸಮಾಜವಾದದ ಗುರಿ, ಉದ್ದೇಶಗಳನ್ನು ಮೆಲುಕು ಹಾಕುವುದು ವಸ್ತು ಸ್ಥಿತಿಗೆ ಅಗತ್ಯವಾಗಿದೆ. ಆದ್ದರಿಂದ ಹೋರಾಟ, ಕ್ರಾಂತಿ, ಪ್ರತಿಭಟನೆ ಬಂಡವಾಳಶಾಹಿಯ ನಾಶಗಳೆಲ್ಲವೂ ಸಮುದಾಯಗಳ ಬದುಕಿನ ಪಲ್ಲಟವೇ ವಿನಃ ಅತೀಶಕ್ತಿ ಅಲ್ಲ. ಈ ಎಲ್ಲ ಹಿನ್ನೆಲೆಯಿಂದ ಸಾಗರ ತಾಲ್ಲೂಕಿನ ಸಮಾಜವಾದದ ತತ್ವ ಸಿದ್ಧಾಂತಗಳೆಲ್ಲವೂ ಆ ಭಾಗದ ಸಮಾನತೆಯನ್ನು ಸೃಷ್ಠಿಮಾಡುವ ಅಂಶಗಳಾಗಿವೆ.

ಸಾಗರವು ಬ್ರಿಟೀಷರ ಆಡಳಿತ ಅವಧಿಯ ಕಾಲದಿಂದ ಹಿಡಿದು ಇಲ್ಲಿಯವರೆಗೂ ಬೌದ್ಧಿಕವಾದ ಚರ್ಚೆಗಳು, ಕಮ್ಮಟಗಳು, ಪರಿಸರ ಹೋರಾಟಗಳು, ಜಮೀನ್ದಾರಿಕೆಯ ವಿರುದ್ಧ ಪ್ರತಿಭಟನೆಗಳು ಕುರಿತು ಅರಿವನ್ನು ಮೂಡಿಸುವ ತರಬೇತಿ ಶಿಬಿರಗಳು, ಕಾಯ್ದಿಟ್ಟ ಭೂಮಿಯನ್ನು ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ಸಮುದಾಯಗಳಿಗೆ ಹಂಚುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳು ಈ ಭಾಗದಲ್ಲಿ ನಡೆದಿರುವುದು ಅವಿಸ್ಮರಣೀಯವಾಗಿದೆ.

ಬೇಸಾಯ ಪದ್ಧತಿಯ ಪ್ರಾರಂಭದಲ್ಲಿ ಬುಡಕಟ್ಟು ಮಹಿಳೆಯಿಂದ ಪ್ರಾರಂಭವಾದದು ಎಂಬುದಕ್ಕೆ ಸಾಹಿತ್ಯದ ಆಕರಗಳಲ್ಲಿ ದಾಖಲಾಗಿವೆ. ಆದ್ದರಿಂದ ಆದಿಮಾನವ ಅಲೆಮಾರಿಯಾಗಿ ತನ್ನ ಬದುಕನ್ನು ಗೊತ್ತು ಗುರಿ ಇಲ್ಲದೇ ವಸ್ತುಗಳ ವಿನಿಮಯದ ಬದುಕನ್ನು ರೂಢಿಸಿಕೊಂಡು ಹಂತ ಹಂತವಾಗಿ ಕಾಡು ಮೇಡುಗಳಲ್ಲಿ ಜೀವಿಸುತ್ತಿದ್ದ ಸಂಗತಿ ಆಶ್ಚರ್ಯಕರವಾದುದು. ಇಲ್ಲಿ ಸಮಾಜವು 'ಆಗಸ್ಟ್ ಕೋಮ್ಟ್' ಅವರು ಹೇಳಿದ ಮೂರು ಹಂತಗಳ ಸೂತ್ರದ ದಾಟಿಯಲ್ಲಿಯೇ ರೂಪಾಂತರಗೊಂಡಿರುವುದು ಇಲ್ಲಿಯವರೆಗೂ ತಿಳಿದ ಸಂಗತಿಯಾಗಿದೆ. ಸಾಗರ ತಾಲ್ಲೂಕಿನ ಭೌಗೋಳಿಕತೆಗೆ ಅನುಗುಣವಾಗಿ ಅಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳಾದ ಹಸಲರು, ಸಿದ್ದಿಯರು, ಕುಣಬಿಯರು, ಗೌಳಿಯರು, ದೀವರು, ಗೊಂಡರು ಈ ಎಲ್ಲ ಸಮುದಾಯಗಳು ಕಾಡು ಉತ್ಪನ್ನಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ಪಾರಂಪರಾಗತವಾದ ಬದುಕಿನ

ನೆಲೆಯನ್ನು ಶೋಧಿಸುತ್ತಾ ಹೊರಟಿವೆ. ಈ ಸಮುದಾಯಗಳನ್ನು ಜಾಗತೀಕರಣ ಮತ್ತು ಆಧುನೀಕರಣಗಳೆಂಬ ಭೂತಗಳು ಪಲ್ಲಟಗೊಳಿಸಿರುವುದಲ್ಲದೇ ಗೊಂದಲವಾದ ಸಾಮಾಜಿಕ ವ್ಯವಸ್ಥೆಯನ್ನು ಉಂಟುಮಾಡಿವೆ. ಈ ಪರಿಣಾಮವಾಗಿ ಇಂದು ಬುಡಕಟ್ಟುಗಳಿಗೆ ಶಿಕ್ಷಣದ ಅವಶ್ಯಕತೆಯ ಜರೂರು ಉಂಟಾಗಿದೆ.

ಇಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ಬುಡಕಟ್ಟು ಸಮುದಾಯಗಳನ್ನು ಕುರಿತು ರೂಪಿಸುವ ಯೋಜನೆಗಳೆಲ್ಲವೂ ಭೂಮಾಲಿಕರ ಅಭಿವೃದ್ಧಿಗೆ ಪೂರಕವಾದ ಕಾಯ್ದೆ ಕಟ್ಟಳೆಗಳಾಗಿವೆಯೇ ವಿನಃ ಪಶ್ಚಿಮ ಘಟ್ಟದ ಗಿರಿಜನರ ಅಭಿವೃದ್ಧಿಗೆ ಪೂರಕವಾಗಿರದೇ ಇರುವುದು ಕಟುಸತ್ಯವಾಗಿದೆ. ಅಲ್ಲದೆ ಅರಣ್ಯಾಧಿಕಾರಿಗಳು ಬುಡಕಟ್ಟುಗಳನ್ನು ಬದುಕಲು ಬಿಡದೆ ಸರ್ವಾಧಿಕಾರಿಯ ಮನೋಧೋರಣೆಯನ್ನು ಗಿರಿಜನರ ಮೇಲೆ ಬಲವಂತವಾಗಿ ಹೇರಿರುವುದು ಹಾಗೂ ಭೂಮಾಲಿಕರ ಕೈಗೊಂಬೆಯಂತೆ ವರ್ತಿಸುತ್ತಿರುವುದು ದುರಂತವೇ ಸರಿ. ಈ ಹಿನ್ನೆಲೆಯಿಂದ ಪ್ರಸ್ತುತ ಸಮಾಜದಲ್ಲಿ ಪ್ರಾಥಮಿಕ ಸೌಲಭ್ಯಗಳಿಂದ ವಂಚಿತರಾಗಿ ಕಾಡೆ ನಮ್ಮ ಸಾಮ್ರಾಜ್ಯ, ವನದೇವತೆಯೇ ನಮ್ಮ ತಾಯಿ, ಸೂರ್ಯನೇ ನಮ್ಮ ಆರಾಧ್ಯ ದೈವ ಎಂದುಕೊಂಡು ಆಧುನಿಕ ಸಂಪರ್ಕವಿಲ್ಲದೆ ಭೂಮಾಲಿಕರ ತೋಟಗಳಲ್ಲಿ ಜೀತದಾಳುಳಾಗಿ ಜೀವನ ಸಾಗಿಸುತ್ತಿರುವ ಬುಡಕಟ್ಟುಗಳ ಸ್ಥಿತಿ ಶೋಚನೀಯವಾಗಿದೆ. ಈ ಹಿನ್ನೆಲೆಯಿಂದ ಬುಡಕಟ್ಟುಗಳ ಸಾರ್ವತ್ರಿಕ ಅಭಿವೃದ್ಧಿಗೆ ಪೂರಕವೆಂಬಂತೆ ಗಿರಿಜನ ಆಶ್ರಮ ಶಾಲೆಗಳು ಬುಡಕಟ್ಟುಗಳ ದಾಪುಗಾಲಿನ ಅಭಿವೃದ್ಧಿಗೆ ಪೂರಕ ಶಕ್ತಿಯಾಗಿ ಅಲ್ಲಲ್ಲಿ ಎದ್ದುನಿಂತಿರುವುದು ಬುಡಕಟ್ಟುಗಳ ಸಾಮಾಜಿಕ ಬದಲಾವಣೆಗೆ ಪೂರಕವಾಗಿದೆ. ಆದರೆ ಈ ಎಲ್ಲಾ ಶಾಲೆಗಳು ಬುಡಕಟ್ಟುಗಳು ವಾಸಿಸುವ ಹಾಡಿಗಳಲ್ಲಿಯೇ ನಿರ್ಮಾಣವಾಗಬೇಕಾಗಿದೆ.

ಇಂಥ ಗಿರಿಜನ ಆಶ್ರಮ ಶಾಲೆಗಳಲ್ಲಿ ನಿಷ್ಪಕ್ಷಪಾತವಾಗಿ ಶಿಕ್ಷಕನ ಕಾರ್ಯವನ್ನು ನಿರ್ವಹಿಸಿದ ಎನ್.ಹುಚ್ಚಪ್ಪ ಮಾಸ್ತರರ ಪಾತ್ರ ಹಿರಿದಾದುದಾಗಿದೆ. ಒಂದು ಸಮುದಾಯದ ಅಭಿವೃದ್ಧಿ ದೃಷ್ಟಿಯಿಂದ ಬುಡಕಟ್ಟುಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಶಿಕ್ಷಕನ ಪಾತ್ರ ಪ್ರಮುಖವಾದುದು. ಶಿಕ್ಷಕನಾಗಿ, ಸಾಂಸ್ಕೃತಿಕ ಕಲಾವಿದನಾಗಿ, ಜಾನಪದ ವಿದ್ವಾಂಸನಾಗಿ, ಬರಹಗಾರನಾಗಿ ಬುಡಕಟ್ಟುಗಳಲ್ಲಿ ಒಬ್ಬರಾಗಿ ತಮ್ಮ ಇಡೀ ಬದುಕನ್ನು ಬುಡಕಟ್ಟುಗಳ ಶ್ರೇಯಸ್ಸಿಗೆ ಮುಡುಪಾಗಿಟ್ಟು ದೇಶೀಯ ಬದುಕನ್ನು ಮೈಗೂಡಿಸಿಕೊಂಡವರಾಗಿರುವ ಹುಚ್ಚಪ್ಪ ಮಾಸ್ತರರ ಜೀವನ ಕುರಿತ ಈ ಅಧ್ಯಯನ ಪ್ರಸ್ತುತ ಸಮಾಜಕ್ಕೆ ಉಪಯುಕ್ತಕರವಾದುದಾಗಿದೆ ಎಂದು ನಾನು ಭಾವಿಸಿ ಈ ಪ್ರಬಂಧ ರಚನೆಗೆ ಕೈ ಹಾಕಿದ್ದೇನೆ.

೧.೨ ಅಧ್ಯಯನದ ಉದ್ದೇಶ:

ಮನುಷ್ಯನ ಇತಿಹಾಸ ಇಂದು ನಿನ್ನೆಯದಲ್ಲ. ಅದಕ್ಕೆ ಸಹಸ್ರಾರು ವರ್ಷಗಳ ಇತಿಹಾಸ ಪರಂಪರೆ ಇದೆ. ನಿಸರ್ಗದಲ್ಲಿ ಇರುವ ಇತರೆ ಪ್ರಾಣಿಗಳಂತೆ ಮನುಷ್ಯನ ಜೀವನವನೂ ಆರಂಭವಾಯಿತು. ಆದರೆ, ಮೆದುಳು ಬೆಳೆದಂತೆ ಇತರ ಪ್ರಾಣಿಗಳಿಗಿಂತ ಭಿನ್ನವಾಗಿ ಮನುಷ್ಯ ಆಲೋಚಿಸತೊಡಗಿದ. ಆದಿಮ ಮಾನವ ನಿಸರ್ಗದಲ್ಲಿ ಒಬ್ಬನಾಗಿ ಬೆಳೆದರೂ ಅವನಿಗೆ ಆಲೋಚನಾ ಶಕ್ತಿ ಉಂಟಾದುದು ಕಾರಣ ಅವನ ಚಟುವಟಿಕೆಗಳು ಭಿನ್ನವಾದವು. ಮನಸ್ಸಿನಲ್ಲಿ ಉಂಟಾದ ಭಾವನೆಗಳನ್ನು ತನ್ನ ಚಟುವಟಿಕೆಗಳ ಮೂಲಕ ವ್ಯಕ್ತಪಡಿಸಲು ಪ್ರಾರಂಭಿಸಿದ್ದೇ ಮನುಷ್ಯ ಸಂಸ್ಕೃತಿಯ ಉಗಮಕ್ಕೆ ಕಾರಣವಾಯಿತು ಎನ್ನಬಹುದು. ಈ ವ್ಯಕ್ತಪಡಿಸುವಿಕೆ ಹಲವು ಆಯಾಮಗಳಲ್ಲಿ ನಡೆಯಿತು. ಅಂತಹ ವಿವಿಧ ಅಭಿವ್ಯಕ್ತಿ ಸ್ವರೂಪವನ್ನು ನಾವು 'ಕಲೆ' ಎಂದು ಕರೆದಿದ್ದೇವೆ.

ಕಲೆ ಇಂದು ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಹಾಗೆಂದಾಕ್ಷಣ ಇದು ಏಕಸ್ವರೂಪದಲ್ಲಿ ಇದೆ ಎಂದು ಭಾವಿಸುವಂತಿಲ್ಲ. ಬಹುಶಃ ಪ್ರಪಂಚದಲ್ಲಿ ಎಷ್ಟು ಮನುಷ್ಯರಿರಬಹುದೋ ಅಷ್ಟು ಸಂಖ್ಯೆಯ ಅಭಿವ್ಯಕ್ತಿ ಸ್ವರೂಪಗಳನ್ನು ಕಲೆ ಎಂದು ಕರೆಯುವುದರಲ್ಲಿ ಅರ್ಥವಿದೆ. ಕಲೆಗೆ ಒಂದು ಚೌಕಟ್ಟು ಇರುತ್ತದೆ, ಉದ್ದೇಶವಿರುತ್ತದೆ ಅಲ್ಲದೆ ಮನುಷ್ಯನ ಬದುಕಿನ ಪಾರಂಪರಾಗತ ಆಶಯಗಳನ್ನು ವ್ಯಕ್ತಪಡಿಸುವ ಹಂಬಲವಿರುತ್ತದೆ. ಹಾಗೆಯೇ ಒಂದು ಸ್ವರೂಪದಲ್ಲಿ ಕಾಣಿಸಿಕೊಳ್ಳುವ ಕಲಾತ್ಮಕ ಸಂಗತಿಗಳನ್ನು ನಾವು ಕಲೆ ಎಂದು ಕರೆಯುತ್ತೇವೆ. ಕಲೆಗೆ ನಾನಾ ಮುಖಗಳಿವೆ. ಬಹುಶಃ ಮನುಷ್ಯನ ಮನಸ್ಸು ಎಷ್ಟೆಲ್ಲಾ ರೀತಿಯಲ್ಲಿ ಆಲೋಚಿಸಬಹುದೋ ಅಷ್ಟೆಲ್ಲಾ ರೀತಿಯ ಕಲಾ ಸ್ವರೂಪಗಳು ಇರಲು ಸಾಧ್ಯ. ಸಹಸ್ರಾರು ವರ್ಷಗಳ ಜೀವನಾನುಭವದ ತಾಲೀಮಿನಲ್ಲಿ ಪಕ್ವಗೊಂಡ ಸೃಜನಾತ್ಮಕ ಸ್ವರೂಪಗಳನ್ನು ಕಲೆ ಎಂದು ಕರೆದಿದ್ದೇವೆ. ಹೀಗೆ ಯಾವುದೇ ಕಲೆಯೆಂಬುದು ಅದು ಆಧುನಿಕ ಕಲೆಯಾಗಿರಲಿ ಅಥವಾ ಸಾಂಪ್ರದಾಯಿಕ ಕಲೆಯಾಗಿರಲಿ ಅದು ದಿಢೀರನೆ ಹುಟ್ಟಿಕೊಂಡಿದ್ದಲ್ಲ. ಅದಕ್ಕೆ ಸಹಸ್ರಾರು ವರ್ಷಗಳ ಇತಿಹಾಸವಿದೆ ಮತ್ತು ಪರಂಪರೆಯ ಆಸರೆ ಇದೆ.

ಆಧುನಿಕ ಸಮಾಜ ವ್ಯವಸ್ಥೆಯಲ್ಲಿ ಬಡಕಟ್ಟು ಜನರ ಬದುಕು ತೀವ್ರವಾದ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಇಂದು ನಾವು ನೋಡುತ್ತಿರುವ ಈ ಎಲ್ಲಾ ನಾಗರೀಕತೆಗಳಿಗೆ ಮೂಲದ್ರವ್ಯವೆನಿಸಿದ ಆದಿಮ ಸಮಾಜದ ಮೂಲಗಳನ್ನು ಸಂರಕ್ಷಿಸಿಕೊಂಡು ಬಂದಿರುವ ಬುಡಕಟ್ಟುಗಳ ಸಂಸ್ಕೃತಿಯನ್ನು ಹಾಗೂ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಸುಧಾರಣೆ

ಮಾಡುವುದರಲ್ಲಿ ಒಬ್ಬ ವ್ಯಕ್ತಿಯ ಪಾತ್ರ ಎಷ್ಟು ಪ್ರಮುಖವಾದುದು ಎನ್ನುವುದರ ಬಗ್ಗೆ ಅಧ್ಯಯನ ಮಾಡುವುದೇ ಈ ಪ್ರಬಂಧದ ಉದ್ದೇಶ. ಬೇರುಗಳಿಲ್ಲದೇ ಕಾಂಡ ಮತ್ತು ಚಿಗುರುಗಳು ಇರಲು ಸಾಧ್ಯವಿಲ್ಲ. ಹಾಗೆಯೇ ಒಂದು ಸಮುದಾಯ ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ಅದು ತನ್ನಿಂದ ತಾನೇ ಆಗದೆ ಅನೇಕ ಜನರ ವ್ಯಕ್ತಿಗಳ ಪರಿಶ್ರಮದ ಫಲವಾಗಿರುತ್ತದೆ. ವಾಸ್ತವವಾಗಿ ಇವತ್ತಿನ ಆಧುನೀಕರಣ ಮತ್ತು ಜಾಗತೀಕರಣಗಳ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ನಮ್ಮ ಬೇರುಗಳನ್ನು ನಾವು ಶೋಧಿಸಿಕೊಳ್ಳುವ ಅಗತ್ಯವಿದೆ. ಅಂತಹ ಬೇರುಗಳನ್ನು ಸಂರಕ್ಷಿಸಿದ ಪ್ರಮುಖ ವ್ಯಕ್ತಿಯ ಪರಿಚಯವನ್ನು ಮಾಡಿಕೊಡುವುದು ತುಂಬಾ ಪ್ರಮುಖವಾದುದೆನಿಸುತ್ತದೆ. ಅಂತಹ ಒಂದು ಪ್ರಯತ್ನವೇ ನನ್ನ ಅಧ್ಯಯನ.

ವೈಚಾರಿಕ, ವೈಜ್ಞಾನಿಕ ಹಾಗೂ ಶಾಸ್ತ್ರೀಯ ವಿಧಾನಗಳನ್ನು ಅಳವಡಿಸಿಕೊಂಡ ಕನ್ನಡ ಸಂಶೋಧನೆಯು ಇಂದು ಹೊಸ ಹೊಸ ಜ್ಞಾನಶಾಖೆಗಳಡಿಯಲ್ಲಿ ಹಲವಾರು ನೂತನ ಪರಿಕಲ್ಪನೆ ಹಾಗೂ ವ್ಯಾಖ್ಯಾನಗಳೊಂದಿಗೆ ದಾಪುಗಾಲು ಹಾಕುತ್ತಿದೆ. ಮಾಹಿತಿ ತಂತ್ರಜ್ಞಾನದಂತಹ ಶೀಘ್ರಗತಿಯ ಬದಲಾವಣೆಯ ಗಾಳಿಯು ಎಲ್ಲಾ ಕ್ಷೇತ್ರಗಳಲ್ಲಿ ಹರಡಿದಂತೆ ಸಂಶೋಧನಾ ಕ್ಷೇತ್ರವನ್ನೂ ಆವರಸಿಕೊಂಡಿದೆ. ಈ ರೀತಿಯ ಬುಡಕಟ್ಟು ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ವಿಶೇಷವಾದ ಸಾಧನೆಗೈದ ವ್ಯಕ್ತಿಗಳ ಅಧ್ಯಯನಗಳು ಹಳೆಯ ಮಾದರಿಗಳೆನಿಸಿ ಕೆಲವರಿಂದ ಕಡೆಗಣಿಸಲ್ಪಟ್ಟಿವೆ. ಆದರೆ ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ತೋರಿಸಲು ಗತಕಾಲದ ಜನಜೀವನದ ಚಾರಿತ್ರಿಕ ಸತ್ಯಾಂಶಗಳನ್ನು ತಿಳಿದುಕೊಳ್ಳಲು ಚರಿತ್ರೆಯಲ್ಲಿ ಕಳಚಿಹೋದ ಕೊಂಡಿಗಳನ್ನು ಜೋಡಿಸಲು ಭೂತ-ವರ್ತಮಾನಗಳಿಂದ ಭವಿಷ್ಯತ್ತನ್ನು ರೂಪಿಸಿಕೊಳ್ಳಲು ಹುಚ್ಚಪ್ಪ ಮಾಸ್ತರರಂಥ ವ್ಯಕ್ತಿಗಳ ಅಧ್ಯಯನಗಳು ಎಂದೆಂದಿಗೂ ಪ್ರಸ್ತುತವೆನಿಸುತ್ತವೆ.

ಬುಡಕಟ್ಟು ಸಮುದಾಯಗಳಿಗೇ ಮೀಸಲಾದ ಗಿರಿಜನ ಶಾಲೆಯ ಮಾಸ್ತರರಾಗಿ ಹಾಗೂ ಜಾನಪದ ಕಲಾವಿದರಾಗಿ ಸಮಾಜಕ್ಕೆ ತಮ್ಮದೇ ಆದ ಅಗಾಧವಾದ ಕೊಡುಗೆಯನ್ನು ನೀಡಿದ, ಇಂತಹ ಪ್ರಮುಖ ವ್ಯಕ್ತಿಗಳ ಬದುಕುಬರಹದಂಥ ಮಾದರಿಯ ಕೆಲವೇ ಅಧ್ಯಯನಗಳು ಈವರೆಗೆ ನಡೆದಿದ್ದರೂ ಕೂಡ ಇನ್ನೂ ಅನೇಕ ಪ್ರಮುಖ ವ್ಯಕ್ತಿಗಳ ಜೀವನ ಬರಹ ಮತ್ತು ಸಾಧನೆಗಳ ಬಗೆಗೆ ವಸ್ತುನಿಷ್ಠವಾದ, ಸಂಶೋಧನಾತ್ಮಕ ಅಧ್ಯಯನದ ಅವಶ್ಯಕತೆಯಿದೆ. ಎಲೆಮರೆಯ ಕಾಯಿಯಂತೆ ಬೆಳಕಿಗೆ ಬರದ, ವಿಶಿಷ್ಟ ಪ್ರತಿಭೆಗಳನ್ನು ಮೈಗೂಡಿಸಿಕೊಂಡಿರುವವರನ್ನು ಗುರುತಿಸಿ ಅವರ ಬಗೆಗೆ ಅಧ್ಯಯನ ಕೈಗೊಂಡು ಒಂದು ಸಮುದಾಯದಲ್ಲಿ ಅವರ ಸ್ಥಾನಮಾನವನ್ನು

ಗುರಿಸಿಸುವುದು ಮುಖ್ಯವೆಂಬುದು ನನ್ನ ಭಾವನೆ. ಅದಕ್ಕಾಗಿ ಸಾಮುದಾಯಿಕ, ಶೈಕ್ಷಣಿಕ ಮತ್ತು ವೈಚಾರಿಕತೆಯ ತರಿಕೂಟದಂತಿರುವ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವುದರಲ್ಲಿ ಮತ್ತು ಬುಡಕಟ್ಟು ಸಮುದಾಯದ ಮಕ್ಕಳ ಬುದ್ಧಿ ಮಟ್ಟವನ್ನು ಸುಧಾರಿಸುವಲ್ಲಿ ಮತ್ತು ಸಾಮಾನ್ಯ ಜನರಲ್ಲಿ ಸಾಮಾಜಿಕ ಕಳಕಳಿಯನ್ನು ಮೂಡಿಸುವಲ್ಲಿ ವಿಶಿಷ್ಟವಾದ 'ವ್ಯಕ್ತಿತ್ವ'ವನ್ನು ಗಳಿಸಿಕೊಂಡಿದ್ದ ಪ್ರಮುಖ ವ್ಯಕ್ತಿಯ ಸ್ಥಾನದಲ್ಲಿ ನಿಲ್ಲಬಲ್ಲ ಎನ್.ಹುಚ್ಚಪ್ಪ ಮಾಸ್ತರರ ವೈವಿಧ್ಯಮಯ ಬದುಕನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಬುಡಕಟ್ಟು ಜನರ ಕುರಿತಾಗಿ ಬಹಳ ಒಲವು ಹೊಂದಿರುವ ಹುಚ್ಚಪ್ಪ ಮಾಸ್ತರರು ಸ್ವತಹ ದೀವರು. ಇವರು ಹಸಲರು, ಸಿದ್ದಿಯರು, ಗೊಂಡರು, ಕುಣುಬಿಯರು ಇತ್ಯಾದಿ ಜನಾಂಗಗಳ ಕಲೆಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಅನೇಕ ಕಡೆ ಬುಡಕಟ್ಟು ಕಲೆಗಳ ಬಗ್ಗೆ ಉಪನ್ಯಾಸ ಮತ್ತು ಪ್ರತ್ಯಕ್ಷಿಕೆಗಳನ್ನು ನೀಡಿದ್ದಾರೆ. ಕಲೆಯಲ್ಲಿ ಯುವಜನರಿಗೆ ತರಬೇತಿ ನೀಡಿದ್ದಾರೆ. ಸ್ವತಃ ಕಲಾವಿದರಾಗಿ ಚಿಂತಕರಾಗಿ ಸ್ಮರಣೀಯ ಸೇವೆ ಮಾಡಿದ್ದಾರೆ.

ಗಿರಿಜನ ವಸತಿ ಶಾಲೆಯ ಶಿಕ್ಷಕರಾಗಿ ಬದುಕಿನುದ್ದಕ್ಕೂ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿರುವ ಹಿರಿಯ ಜಾನಪದ ವಿದ್ವಾಂಸ ಎನ್.ಹುಚ್ಚಪ್ಪ ಮಾಸ್ತರ್ ಅವರ ಬಗ್ಗೆ ಇದುವರೆಗೂ ಯಾವುದೇ ರೀತಿಯ ಸಣ್ಣಪುಟ್ಟ ಅಧ್ಯಯನಗಳೂ ನಡೆಯದೇ ಇರುವುದು ವಿಶಾದದ ಸಂಗತಿ. ಆದ್ದರಿಂದ ಇವರ ಜೀವನದ ಸಮಗ್ರ ಮಾಹಿತಿ ಕಲೆಹಾಕಿ ವ್ಯಕ್ತಿತ್ವದ ಪರಿಚಯ ಮತ್ತು ಅವರು ಗಿರಿಜನ ಆಶ್ರಮ ಶಾಲೆಯ ಮಾಸ್ತರರಾಗಿ ಬುಡಕಟ್ಟು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯನ್ನು ಯಾವ ಯಾವ ರೀತಿ ಮಾಡಿದ್ದಾರೆ ಮತ್ತು ಬುಡಕಟ್ಟು ಸಮುದಾಯದ ಜನರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮುಂದುವರೆಯಲು ಯಾವ ಯಾವ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದಾರೆ ಹಾಗೆಯೇ ಬುಡಕಟ್ಟು ಜನರ ಜೀವನ ಸುಧಾರಣೆಯಲ್ಲಿ ಯಾವ ರೀತಿಯಲ್ಲಿ ಅಗಾಧವಾದ ಪಾತ್ರವನ್ನು ವಹಿಸಿದ್ದಾರೆ ಎನ್ನುವ ಅವರ ಸಮಗ್ರ ಜೀವನ ದರ್ಶನವನ್ನು ಚಿತ್ರಿಸುವುದು ಈ ಪ್ರಬಂಧದ ಮುಖ್ಯ ಉದ್ದೇಶ ಅದರ ಮೂಲಕ ನಾಡಿಗೆ ಗಿರಿಜನ ಆಶ್ರಮ ಶಾಲೆಯ ಶಿಕ್ಷಕರಾದ ಎನ್.ಹುಚ್ಚಪ್ಪ ಮಾಸ್ತರರ ಪರಿಚಯ ಮಾಡಿಕೊಡುವುದು ನನ್ನ ಈ ಬರವಣಿಗೆಯ ಉದ್ದೇಶವಾಗಿದೆ.

೧.೩ ಅಧ್ಯಯನದ ವ್ಯಾಪ್ತಿ:

ಭಾರತವು ತನ್ನ ಪ್ರಾಕೃತಿಕ ಹಿನ್ನೆಲೆಯಲ್ಲಿ ಅನೇಕ ಬುಡಕಟ್ಟು ಸಮುದಾಯಗಳನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದೆ. ಬುಡಕಟ್ಟುಗಳ ಅಧ್ಯಯನ ಇಂದು ಕ್ರಮಬದ್ಧ ಹಾಗೂ ಮಂದಗತಿಯ ಬೆಳವಣಿಗೆಯಲ್ಲಿ ಸಾಗುತ್ತಿದೆ. ಭಾರತೀಯ ಸಮಾಜವನ್ನು ಅರ್ಥಮಾಡಿಕೊಳ್ಳಬೇಕಾದರೆ ಬುಡಕಟ್ಟು ಸಮುದಾಯಗಳ ಅಧ್ಯಯನ ಅತ್ಯವಶ್ಯಕವಾಗಿ ಆಗಬೇಕಾಗಿದೆ. ಒಂದು ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ಅಧ್ಯಯನವೆಂದರೆ ಆ ಸಮುದಾಯದ ಜೀವನ ವಿಧಾನದ ಒಟ್ಟು ತಿಳುವಳಿಕೆ ಎಂದು ತಿಳಿಯಬೇಕು. ಇದರಿಂದಾಗಿ ಬುಡಕಟ್ಟು ಧರ್ಮ, ನಂಬಿಕೆ, ಆಚರಣೆ, ವಿಧಿ ನಿಷೇಧ, ಶೈಕ್ಷಣಿಕ ಮಟ್ಟ, ಸಾಮಾಜಿಕ ಪ್ರಗತಿ, ಉದಾರ ಮನೋಭಾವ, ವೈಚಾರಿಕ ಪ್ರಜ್ಞೆ ಇವೆಲ್ಲವುಗಳನ್ನೂ ಅಧ್ಯಯನ ಮಾಡುವುದೇ ಆಗಿದೆ.

ಯಾಂತ್ರಿಕೃತ ನಾಗರೀಕತೆ, ವಸಾಹತುಶಾಹಿ, ಕೈಗಾರೀಕರಣ ಮುಂತಾದ ವೈಜ್ಞಾನಿಕ ಆವಿಷ್ಕಾರಗಳು ಇಡೀ ಮಾನವ ಕುಲವನ್ನು ಸ್ಪರ್ಧೆಗೀಡು ಮಾಡಿದೆ. ಈ ಎಲ್ಲಾ ಅಂಶಗಳಿಂದ ಭಾರತೀಯ ಸಮಾಜದ ಜೀವನ ಕ್ರಮವು ಹೊಸ ಹೊಸ ಬಗೆಯ ರೂಪಾಂತರಕ್ಕೆ ನಾಂದಿಯಾಗಿದೆ. ಹಾಗೆಯೇ ಮಾನವ ಜನಾಂಗದ ಬದುಕನ್ನು ಪ್ರಮುಖವಾಗಿ ಆರ್ಥಿಕತೆಯು ನಿಯಂತ್ರಿಸುತ್ತಿದೆ.

೧೮ನೇ ಶತಮಾನದ ಕಾಲಾವದಿಯಿಂದ ಇಲ್ಲಿಯವರೆಗೆ ಭಾರತದಲ್ಲಿ ಪಾಶ್ಚಾತ್ಯರ ಪ್ರಭಾವದಿಂದ ಔದ್ಯೋಗಿಕ ಕ್ರಾಂತಿ ಹಾಗೂ ಯಾಂತ್ರಿಕ ಬದುಕಿನ ಕಾರಣದಿಂದ ಆರ್ಥಿಕ, ಸಾಮಾಜಿ, ಸಾಂಸ್ಕೃತಿಕವಾಗಿ ಅನೇಕ ಬದಲಾವಣೆಗಳು ಕಾಣಿಸಿಕೊಂಡಿರುವುದಷ್ಟೇ ಅಲ್ಲದೆ ರಂಗಭೂಮಿ, ಜಾನಪದೀಯ ಪರಂಪರೆಯಲ್ಲಿಯೂ ಬದಲಾವಣೆಯಾಗಿರುವುದರಿಂದ ಶಿಕ್ಷಕರಾಗಿ ಬುಡಕಟ್ಟುಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯನ್ನು ಎಷ್ಟರ ಮಟ್ಟಿಗೆ ಮಾಡಲಾಗಿದೆ ಎಂಬುದು ಚರ್ಚೆಯಾಗಬೇಕಾಗಿದೆ.

ಆದಿವಾಸಿ ಸಮುದಾಯಗಳ ಬದುಕು ಅತ್ಯಂತ ದಯನೀಯವಾಗಿರುವ ಈ ಸಂದರ್ಭದಲ್ಲಿ ಅವರ ಬಗೆಗಿನ ಅಧ್ಯಯನಗಳು ಅವರಲ್ಲಿ ಸಾಮಾಜಿಕ ಎಚ್ಚರವನ್ನುಂಟು ಮಾಡುವ ಪ್ರಯತ್ನದಲ್ಲಿರಬೇಕು. ಆದಿವಾಸಿ ಸಮುದಾಯಗಳು ಸಹ ತಮ್ಮ ಕೀಳರಿಮೆ, ಆಂತರಿಕ ಭೀತಿಯಿಂದ ಹೊರಬಂದು ಸಾಮಾಜಿಕವಾಗಿ ತಮ್ಮನ್ನು ತಾವು ಹೆಮ್ಮೆಯಿಂದ ಗುರುತಿಸಿಕೊಳ್ಳುವಂತಾಗಬೇಕು ತಮ್ಮ ಸಂಸ್ಕೃತಿಯ ಮಾನವೀಯ ತುಡಿತಗಳನ್ನು ಉಳಿಸಿಕೊಂಡೆ

ಮನುಷ್ಯ ಸಮಾಜದ ನಿರ್ಮಾಣದಲ್ಲಿ ನಿರ್ಭೀತಿಯಿಂದ ಆದಿವಾಸಿ ಸಮುದಾಯಗಳು ತೊಡಗಿಸಿಕೊಳ್ಳಬೇಕಾಗಿದೆ. ಸ್ಪರ್ಧಾತ್ಮಕವಾದ ಈ ಜಗತ್ತು ಮನುಷ್ಯರ ನಡುವಿನ ಕನಿಷ್ಠ ಸೌಜನ್ಯ ಮತ್ತು ಹೃದಯ ಸಂವಾದದ ಸಾಧ್ಯತೆಯನ್ನು ಇಲ್ಲವಾಗಿಸಿದೆ. ನಿರ್ವ್ಯಾಜ ಮಾನವ ಪ್ರೇಮ ಮತ್ತು ನಿಷ್ಠುರ ಸಮಾನತೆಯೇ ಅಡಿಗಲ್ಲಾಗುವ ಹೊಸ ಸಾಂಸ್ಕೃತಿಕ ಪರಿಸರವನ್ನು ಕಟ್ಟುವ ನಿರಂತರ ಪ್ರಯತ್ನ ಎಲ್ಲ ಪ್ರಾಮಾಣಿಕ ಜನಪರ ಸಂಘಟನೆಗಳ ಕಾರ್ಯಯೋಜನೆಯಲ್ಲಿರಬೇಕಾಗಿದೆ. ವೈಜ್ಞಾನಿಕ ಶಿಕ್ಷಣ ಮತ್ತು ಪ್ರಗತಿಯಿಂದ ಅಂತಹುದೊಂದು ಸಾಮಾಜಿಕ ಜವಾಬ್ದಾರಿಯ ವಾತಾವರಣ ನಿರ್ಮಾಣವಾಗಬೇಕಾಗಿದೆ.

ಒಂದು ಸಮುದಾಯದ ಜೀವನ ಪದ್ಧತಿಯು ಸದಾ ಬದಲಾವಣೆಗೆ ಒಳಪಟ್ಟಿರುತ್ತದೆ. ಹಾಗಾಗಿ ಹಿಂದೇ ಒಂದು ಕಾಲದಲ್ಲಿ ಒಂದು ಸಮುದಾಯದಲ್ಲಿದ್ದ ಜೀವನ ವಿಧಾನ ಇವತ್ತಿನ ಸಮುದಾಯದಲ್ಲಿ ಇದ್ದ ಜೀವನ ವಿಧಾನ ಸಾಕಷ್ಟು ಬದಲಾವಣೆ ಹೊಂದಿರುತ್ತದೆ. ಸಂಸ್ಕೃತಿ ಎನ್ನುವುದು ಸದಾ ಬದಲಾವಣೆಗೆ ಒಳಗಾಗುವಂತಹದ್ದು ಅದು ಅದರ ಮುಖ್ಯ ಗುಣ. ಹೀಗಿರುವಾಗ ಆದಿವಾಸಿ ಸಮುದಾಯದವರು ಬದಲಾವಣೆಗೊಳ್ಳುವುದಕ್ಕೆ ಪೂರಕವಾಗಿ ನಮ್ಮ ಅಭಿವೃದ್ಧಿಗಳಿರಬೇಕಾಗುತ್ತದೆ. ಮೊದಲು ಕಾಡನ್ನು ಆಶ್ರಯಿಸಿಕೊಂಡು ಜೀವನ ನಡೆಸುತ್ತಿದ್ದರು. ಈ ದಿನ ಅವರು ಬದುಕಲು ನಾವು ಬಿಡುತ್ತಿಲ್ಲ ಹಾಗಾಗಿ ಅದೇ ಪರಂಪರೆಯ ಕಾಡಿನ ಜೀವನದ ರೀತಿಯಲ್ಲಿ ಬದುಕಲು ಅವರಿಗೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ಯಾವುದೇ ಅಭಿವೃದ್ಧಿ ಯೋಜನೆಗಳು ಅವರಿಗೆ ಮುಳುವಾಗದೆ ಅವರ ಜೀವನ ವಿಧಾನವನ್ನು ಸುಧಾರಿಸುವಂತದ್ದಾಗಿರಬೇಕು. ಬುಡಕಟ್ಟು ಜನರ ಜೀವನವನ್ನು ಸಾಮಾಜಿಕ ಬದಲಾವಣೆಗಳ ಹೆಸರಲ್ಲಿ ಕಲುಷಿತಗೊಳಿಸದೇ ಸರಿಯಾದ ದಿಕ್ಕಿನ ಕಡೆ ಅವರನ್ನು ತೆಗೆದುಕೊಂಡು ಹೋಗಬೇಕಿದೆ. ಅದು ಶಿಕ್ಷಣದಿಂದ ಮಾತ್ರ ಎಂದು ಹೇಳಬಹುದು. ಒಂದು ಸಮುದಾಯದಲ್ಲಿ ಹೆಚ್ಚೆಚ್ಚು ಜನರು ಶಿಕ್ಷಣವನ್ನು ಪಡೆಯುವುದರಿಂದ ಅಂತಹ ಸಮುದಾಯವು ಉತ್ತಮ ಸ್ಥಾನವನ್ನು ಹೊಂದುತ್ತದೆ. ಹಾಗಾಗಿ ಒಂದು ಸಮುದಾಯವು ಸುಧಾರಣೆಯಾಗಬೇಕಾದರೆ ಮತ್ತು ಸಾಮಾಜಿಕ ತಿಳುವಳಿಕೆಯನ್ನು ಹೊಂದಬೇಕಾದರೆ ಶಿಕ್ಷಣದ ಜೊತೆಗೆ ಶಿಕ್ಷಕರ ಪಾತ್ರವೂ ತುಂಬಾ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಒಬ್ಬ ಶಿಕ್ಷಕನಿಂದ (ಗುರುವಿನಿಂದ) ಮಾತ್ರ ಒಂದು ಸಮಾಜ ಇಲ್ಲವೇ ಸಮುದಾಯದ ಜನರ ಜೀವನ ವಿಧಾನವನ್ನು ಉತ್ತಮವಾಗಿ ರೂಪಿಸಲು ಸಾಧ್ಯ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಎನ್ನುವ ಮಾತಿನಂತೆ ಮಕ್ಕಳು ಬುದ್ಧಿವಂತರಾದಾಗ ಮಾತ್ರ ಅವರು ಮುಂದೊಂದು ದಿನ ಸಮಾಜವನ್ನು ಸುಧಾರಣೆ ಮಾಡಲು ಸಾಧ್ಯ. ಅಂತಹ

ಮಕ್ಕಳ ಬುದ್ಧಿಮಟ್ಟವನ್ನು ಚುರುಕುಗೊಳಿಸವಲ್ಲಿ ಮತ್ತು ಒಂದು ಸಮುದಾಯವು ಸುಧಾರಣೆಯಾಗುವಲ್ಲಿ ಶಿಕ್ಷಕನ ಪಾತ್ರವು ತುಂಬಾ ಮುಖ್ಯವಾಗಿರುತ್ತದೆ. ಒಂದು ಮಗುವಿಗೆ ತಾಯಿಯೇ ಮೊದಲ ಗುರು ಎನ್ನುವ ನೀತಿ ಮಾತಿದೆ. ಎರಡನೆಯ ಗುರುವೇ ಶಿಕ್ಷಕ ಎನ್ನಬಹುದು.

ಒಂದು ಕಡೆ ಇಂದಿನ ಜಗತ್ತು ಆಧುನಿಕೋತ್ತರ ಸಮಾಜವಾಗಿ ಮಾರ್ಪಾಡಾಗುತ್ತಾ ವೇಗದ ಯುಗವಾಗಿ, ಮಾಹಿತಿಯ ಯುಗವಾಗಿ, ಸ್ಪರ್ಧೆಯ ಯುಗವಾಗಿ ಹಾಗೂ ವ್ಯಾಪಾರಿ ಮನೋಧರ್ಮದ ಯುಗವಾಗಿ ಮಾರ್ಪಡುತ್ತಿದ್ದರೆ ಮತ್ತೊಂದೆಡೆ ವಿಶ್ವದ ನಾನಾ ಮೂಲೆಗಳಲ್ಲಿ ೨೦೦ ದಶಲಕ್ಷಕ್ಕೂ ಹೆಚ್ಚಿನ ಜನರು ಕಾಡಿನ ಮರೆಯಲ್ಲಿ, ಗುಡ್ಡಗಳ ತಪ್ಪಲಿನಲ್ಲಿ ಹಿಂದುಳಿದವರು, ಕಾಡುಜನರು, ಅನಾಗರೀಕರು, ಆದಿವಾಸಿಗಳು ಮುಂತಾದ ಹಣೆಪಟ್ಟಿಗಳೊಂದಿಗೆ ಜೀವನ ನಡೆಸುವ ಹೋರಾಟದಲ್ಲಿ ತೊಡಗಿದ್ದಾರೆ. ಈ ಸಾಂಸ್ಕೃತಿಕ ಸಮೂಹಗಳ ಸಾಮಾಜಿಕ ರಚನೆ, ವೈಯಕ್ತಿಕ ಆಶೋತ್ತರಗಳು ಜೀವನ ಶೈಲಿ, ಅಂತರ್‌ಕ್ರಿಯೆಯ ವ್ಯವಸ್ಥೆಗಳು ಸಾಂಕೇತಿಕ ವಿಧಾನಗಳೆಲ್ಲವೂ ನಾವು ಬದುಕುತ್ತಿರುವ ಆಧುನಿಕ ಸಾಮಾಜಿಕ ವ್ಯವಸ್ಥೆಯಿಂದ ಸಾಕಷ್ಟು ಭಿನ್ನವಾದವುಗಳು. ತಮ್ಮ ಪರಿಸರದೊಂದಿಗೆ ಅನನ್ಯ ಹಾಗೂ ಅನ್ಯೂನ್ಯ ಸಂಬಂಧವನ್ನು ಇಟ್ಟುಕೊಂಡಿರುವ ಇಂತಹ ಸಮುದಾಯಗಳು ನಮ್ಮ ನಾಗರೀಕ ಪೂರ್ವಾಗ್ರಹಗಳಲ್ಲದೇ ಅರ್ಥಮಾಡಿಕೊಳ್ಳುವುದು ಜಾಗತಿಕ ಸಮಾಜದ ಭವಿಷ್ಯದ ಹಿತದೃಷ್ಠಿಯಿಂದ ಅಗತ್ಯವಾದ ಕೆಲಸ ಅಂದರೆ ಜಗತ್ತಿನಾದ್ಯಂತ ನೆಲೆಸಿರುವ ಬುಡಕಟ್ಟುಗಳ ಸಮಗ್ರ ಅಧ್ಯಯನ ಮತ್ತು ಅವರೊಂದಿಗೆ ಸಾಮಾಜಿಕ ಮುಖ್ಯವಾಹಿನಿಯ ಗಾಢವಾದ ಸಕಾರಾತ್ಮಕ ಸಂಬಂಧಗಳು ಅಭಿವೃದ್ಧಿಯ ದಾರಿಯಲ್ಲಿ ನಡೆಯಲೇಬೇಕಾದವುಗಳಾಗಿವೆ. ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಬುಡಕಟ್ಟುಗಳ ಅಭಿವೃದ್ಧಿಯ ಕುರಿತು ಎರಡು ಮಹತ್ವದ ದೃಷ್ಟಿಕೋನಗಳು ಹೊರಹೊಮ್ಮಿವೆ. ಮೊದಲನೆ ದೃಷ್ಟಿ ಕೋನವು "ಪ್ರಜಾಪ್ರಭುತ್ವದಲ್ಲಿ ಅಭಿವೃದ್ಧಿಯು ಸರ್ಕಾರದ ಕರ್ತವ್ಯ ಹಾಗೂ ನಿರೀಕ್ಷೆ" ಎಂದು ವಾದಿಸುತ್ತಿದೆ. ಈ ತರಹದ ಮಾದರಿಯು ಬುಡಕಟ್ಟಿನ ಅಭಿವೃದ್ಧಿ ಅಥವಾ ಸುಧಾರಣೆಯ ಎಲ್ಲಾ ಜವಾಬ್ದಾರಿಗಳನ್ನು ಸರ್ಕಾರದ ನಿರ್ವಹಣೆಗೆ ಬಿಡುತ್ತದೆ. ಎರಡನೆಯ ದೃಷ್ಠಿಕೋನವು "ಜನಪರ ಅಭಿವೃದ್ಧಿಯಲ್ಲಿ ಜನಸಾಮಾನ್ಯರ ಭಾಗವಹಿಸುವಿಕೆ ಅತ್ಯಂತ ಮಹತ್ವದ್ದು" ಎಂಬ ಪ್ರಮೇಯವನ್ನು ಮುಂದಿಡುತ್ತದೆ. ಈ ದೃಷ್ಟಿಕೋನವನ್ನು ಆಧರಿಸಿ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು ಬುಡಕಟ್ಟುಗಳ ಅಭಿವದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುವುದನ್ನು ರಕ್ಷಿಸಲಾಗುತ್ತದೆ. ಆದರೂ ಗಿರಿಜನ ಆಶ್ರಮ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡುವವರ ಪಾತ್ರವು ಅತ್ಯಂತ ಮಹತ್ವದ್ದು.

ಈ ಎಲ್ಲಾ ಹಿನ್ನೆಲೆಯಿಂದ ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಗಿರಿಜನ ಶಾಲೆ, ಬುಡಕಟ್ಟು ಮಕ್ಕಳು, ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿ ಹಾಗೂ ಈ ಮೇಲೆ ಹೇಳಿದ ಅಂಶಗಳ ಜೊತೆಗೆ ಹುಚ್ಚಪ್ಪ ಮಾಸ್ತರರ ಬದುಕು ಮತ್ತು ಬರಹಕ್ಕೆ ಸೀಮಿತಗೊಂಡಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಕುಗ್ವೆ ಗ್ರಾಮದ ದೀವರ ಸಮುದಾಯಕ್ಕೆ ಸೇರಿದ ಎನ್.ಹುಚ್ಚಪ್ಪ ಮಾಸ್ತರರು ಎಷ್ಟರ ಮಟ್ಟಿಗೆ ಬುಡಕಟ್ಟುಗಳ ಮನಸ್ಸಿನ ಶಿಕ್ಷಕನಾಗಿ ಸುಧಾರಣೆಯನ್ನು ಕೈಗೊಂಡಿದ್ದಾರೆ ಎಂಬುದಷ್ಟೇ ಅಧ್ಯಯನದ ಪ್ರಮುಖ ಆಸಕ್ತಿಯಾಗಿದೆ.

ಪ್ರಸ್ತುತ ಅಧ್ಯಯನವು ಸಮಾಜಶಾಸ್ತ್ರೀಯ ಅಧ್ಯಯನವಾಗಿದ್ದರೂ ಸಹ ಇಂತಹ ಅಧ್ಯಯನದಲ್ಲಿ ಅಂತರ್‌ಶಿಸ್ತಿಯ ಅಂಶಗಳನ್ನು ಬಳಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ನನ್ನ ಅಧ್ಯಯನವು ಈ ಕೆಳಗಿನ ಅಂಶ ಮತ್ತು ವ್ಯಾಪ್ತಿಗಳನ್ನೊಳಗೊಂಡಿದೆ.

- ಹುಚ್ಚಪ್ಪ ಮಾಸ್ತರ್ ಮತ್ತು ಹಸಲರು, ದೀವರ ಮಕ್ಕಳ ಒಡನಾಟ,
- ಗಿರಿಜನ ಶಾಲೆಯ ಸ್ಥಾಪನೆಯ ಉದ್ದೇಶ,
- ಪ್ರಾರಂಭದಲ್ಲಿ ಗಿರಿಜನ ಶಾಲೆಗೆ ಮಕ್ಕಳ ಸೇರ್ಪಡೆ ಪ್ರಮಾಣ ಮತ್ತು ಪ್ರಯತ್ನ,
- ಗಿರಿಜನ ಶಾಲೆಯ ಮಕ್ಕಳ ಮನೋಭಾವನೆಗಳ ತುಲನೆ,
- ಗಿರಿಜನ ಶಾಲೆಗಳಿಗೆ ಸರ್ಕಾರದ ಮತ್ತು ಸಾರ್ವಜನಿಕರ ಪ್ರೋತ್ಸಾಹ,
- ಮಕ್ಕಳ ಶಾಲೆಯ ಸೇರ್ಪಡೆಯಲ್ಲಿ ಎನ್.ಹುಚ್ಚಪ್ಪ ಮಾಸ್ತರರ ಪಾತ್ರ,
- ಗೊಂಡರು, ಕುಣಬಿ ಹಾಗೂ ಸಿದ್ದಿಯರ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟಂತೆ ಎನ್.ಹುಚ್ಚಪ್ಪ ಮಾಸ್ತರರ ಪಾತ್ರ ಮತ್ತು ಪ್ರೋತ್ಸಾಹ.
- ಎನ್.ಹುಚ್ಚಪ್ಪ ಮಾಸ್ತರರು ಬುಡಕಟ್ಟುಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ತೊಡಗಿಸಿಕೊಂಡ ಬಗೆಗಳು.
- ಎನ್.ಹುಚ್ಚಪ್ಪ ಮಾಸ್ತರ್ ರವರಿಗೆ ಬಂದ ಪ್ರಶಸ್ತಿಗಳು ಮತ್ತು ಸನ್ಮಾನಗಳು.

ಅಡಿಟಿಪ್ಪಣಿ

೧. ಬುಡಕಟ್ಟು ಸ್ಥಿತ್ಯಂತರುಗಳು, ಎ.ಎಸ್.ಪ್ರಭಾಕರ (ಪು.೩೦-೩೭).

೨. ಗಿರಿಜನ ನಾಡಿಗೆ ಪಯಣ, ಹಿ.ಚಿ.ಬೋರಲಿಂಗಯ್ಯ (ಪು.೧೧-೧೩).

೩. ಕಾಡುಕಾಂಕ್ರೇಟ್ ಮತ್ತು ಜಾನಪದ, ಹಿ.ಚಿ.ಬೋರಲಿಂಗಯ್ಯ.

೪. ದಲಿತರು ಮತ್ತು ಜಾಗತೀಕರಣ, ಮೊಗಳ್ಳಿ ಗಣೇಶ

ಅಧ್ಯಾಯ ೨

೨.೧ ಸಾಗರ ತಾಲ್ಲೂಕಿನ ಭೌಗೋಳಿಕ ಪರಿಸರ ಹಾಗೂ ಸಾಂಸ್ಕೃತಿಕ ವೈವಿಧ್ಯತೆ:

ಬುಡಕಟ್ಟು ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಎನ್.ಹುಚ್ಚಪ್ಪ ಮಾಸ್ತರರ ಬಗ್ಗೆ ಅಧ್ಯಯನ ಮಾಡುತ್ತಿರುವ ಈ ಸಂದರ್ಭದಲ್ಲಿ ಅವರು ಮುಲತಃ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನವರಾಗಿರುವುದರಿಂದ ಪ್ರಸ್ತುತ ಅಧ್ಯಯನಕ್ಕೆ ಸಾಗರ ತಾಲೂಕಿನ ಭೌಗೋಳಿಕ ಪರಿಸರದ ಪರಿಚಯವನ್ನು ಕೊಡುವುದು ಇಲ್ಲಿ ಸೂಕ್ತವೆನಿಸುತ್ತದೆ.

ಈ ಜಿಲ್ಲೆ ಹೆಸರಿಗೆ ತಕ್ಕಂತೆ ಪಶ್ಚಿಮ ಘಟ್ಟಗಳಿಂದ ಆವೃತ್ತವಾಗಿದೆ. ಅಲ್ಲದೆ ಇಡೀ ದೇಶದಲ್ಲೇ ದೊಡ್ಡದೆನಿಸಿಕೊಂಡ ಜಲಪಾತವನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದೆ. ಅದೇ ವಿಶ್ವವಿಖ್ಯಾತಿಯನ್ನು ಪಡೆದ ಜೋಗ ಜಲಪಾತ. ಇದಲ್ಲದೆ ಅನೇಕ ನದಿಗಳ ಉಗಮದ ಸ್ಥಳವು ಹೌದು. ತುಂಗ-ಭದ್ರಾ ನದಿಗಳು ಈ ಜಿಲ್ಲೆಯ ಉದ್ದಕ್ಕೆ ಹರಿಯತ್ತವೆ. ಈ ನದಿಗಳಿಂದ ಲಕ್ಷಾಂತರ ಜನಸಮುದಾಯಕ್ಕೆ ಆಶ್ರಯ ಸಿಕ್ಕಿದೆ. ಶಿವಮೊಗ್ಗ ಜಿಲ್ಲೆ ನದಿಗಳಿಗೆ ಜೀವನವನ್ನು ಕೊಟ್ಟಿರುವುದಲ್ಲದೆ ಅನೇಕ ಪ್ರಾಣಿ ಸಂಕುಲಗಳಿಗೂ ಆಶ್ರಯ ತಾಣವಾಗಿದೆ. ಇದಕ್ಕೆ ಸಾಕ್ಷಿಯಾಗಿ ಶಿವಮೊಗ್ಗದಿಂದ ಸಾಗರಕ್ಕೆ ಹೋಗುವ ಮಾರ್ಗದಲ್ಲಿ ಒಂದು ಸಿಂಹಧಾಮವನ್ನು ನೋಡಬಹುದಾಗಿದೆ. ಈ ಜಿಲ್ಲೆ ಅನೇಕ ಸಾಂಬಾರು ಪದಾರ್ಥಕ್ಕೆ ಬೇಕಾಗಿರುವ ಹಾಗೂ ಗಿಡಮೂಲಿಕೆಗಳ ಸಸ್ಯ ರಾಶಿಯನ್ನು ತನ್ನ ಒಡಲಿನಲ್ಲಿ ಬಚ್ಚಿಟ್ಟುಕೊಂಡಿದೆ. ಈ ಜಿಲ್ಲೆಯಲ್ಲಿ ಒಟ್ಟು ೬ ತಾಲ್ಲೂಕುಗಳಿದ್ದು, ಒಂದೊಂದು ತಾಲ್ಲೂಕು ಒಂದೊಂದು ರೀತಿಯ ವೈಶಿಷ್ಟ್ಯತೆಯಿಂದ ಮೆರೆದಿವೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಸಾಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆಯಲ್ಲಿಯೇ ಭಿನ್ನವಾಗಿದೆ ವೈಶಿಷ್ಟ್ಯತೆಯಿಂದ ಕೂಡಿದೆ. ಏಕೆಂದರೆ ಸಾಗರವು ಒಂದು ಐತಿಹಾಸಿಕ ಸ್ಥಳವಾಗಿದೆ. ಇಲ್ಲಿ ಇಕ್ಕೇರಿ ಮತ್ತು ಕೆಳದಿಗಳೆರಡೂ ಸಹ ಪುರಾತನ ಕಾಲದಿಂದ ರಾಜ್ಯಭಾರ ಮಾಡಿದ ಸ್ಥಳಗಳಾಗಿವೆ. ಸಾಗರದಲ್ಲಿ ರಾಜ್ಯಭಾರ ಮಾಡಿದ ರಾಜರುಗಳಲ್ಲಿ ಶಿವಪ್ಪನಾಯಕ ಮತ್ತು ಕೆಳದಿಯ ಚನ್ನಮ್ಮರು ನಮಗೆ ನೆನಪಿಗೆ ಬರುತ್ತಾರೆ. ಸಾಗರ ತಾಲ್ಲೂಕು ಹಾಗೂ ಶಿವಮೊಗ ಜಿಲ್ಲೆಯು ರಾಜಭಾರಕ್ಕಷ್ಟೇ ಸೀಮಿತವಾಗಿರದೇ ಅನೇಕ ರೀತಿಯ ಬುಡಕಟ್ಟುಗಳಿಗೂ ಆಶ್ರಯವನ್ನು ನೀಡಿರುವುದನ್ನು ನೋಡಬಹುದು. ಆದುದರಿಂದಲೇ ಬುಡಕಟ್ಟುಗಳು ಹೆಚ್ಚಾಗಿರುವುದನ್ನು ನಾವು ಕಾಣಬಹುದು. ಈ ಜಿಲ್ಲೆಗೆ ಸೇರಿದ ಮೆಗಾನೆ ನಿಜಕ್ಕೂ ಮೇಘಗಳ ಮಧ್ಯೆ ಮನೆ ಮಾಡಿದಂತೆಯೇ ಕಾಣಿಸುತ್ತದೆ. ಪ್ರೊ.ಹಿ.ಚಿ.ಬೋರಲಿಂಗಯ್ಯನವರು

ತಮ್ಮ ಗ್ರಂಥವಾದ "ಗಿರಿಜನ ನಾಡಿಗೆ ಪಯಣ" ಎಂಬುದರಲ್ಲಿ ಈ ಪ್ರದೇಶವನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಮೆಗಾನೆಯು ಒಂದು ಬೃಹತ್ ಅಭಯಾರಣ್ಯ ಬೆಟ್ಟದ ಒಡಲಲ್ಲಿ ಇರುವುದರಿಂದ ಈ ಮೆಗಾನೆ ಗರಿಕೆಯ ಹುಲ್ಲುಹಾಸಿನ ಕೊನೆಯಲ್ಲಿ ಒಂದಿಷ್ಟು ಮನೆಗಳ ಸಾಲು, ಸುತ್ತ ಹಸಿರು ಗದ್ದೆಗಳು, ಬೋರ್ಗರೆಯುವಂತಹ ಝುಳು ಝುಳು ಹರಿಯುವ ನೀರಿನ ತೊರೆಗಳೆಲ್ಲವೂ ಯಾವುದೇ ಕ್ರಿಯಾಶೀಲವಲ್ಲದ ಮನಸ್ಸನ್ನು ಕ್ರಿಯಾಶೀಲಗೊಳಿಸುವ ಆಕರ್ಷಣೆ ಈ ತಾಲೂಕಿನಲ್ಲಿದೆ. ಈ ರೀತಿಯಾಗಿ ಶಿವಮೊಗ್ಗ ಜಿಲ್ಲೆಯು ವಿವಿಧ ದೃಷ್ಟಿಕೋನಗಳಿಂದ ತನ್ನ ಅಸ್ತಿತ್ವವನ್ನು ಇಟ್ಟುಕೊಂಡಿರುವುದಲ್ಲದೇ ಪ್ರಕೃತಿಯ ಶ್ರೀಮಂತಿಕೆಯನ್ನೂ ಕೂಡ ಮೈಗೂಡಿಸಿಕೊಂಡಿದೆ. ಭಿನ್ನಭಿನ್ನವಾದ ಸಾಂಸ್ಕೃತಿಕ ತಾಣವನ್ನು ತನ್ನ ಒಡಲಿನೊಳಗಡೆ ತನಗೆ ಅರಿವಿಲ್ಲದೇ ಬಚ್ಚಿಟ್ಟುಕೊಮಡಿರುವದು ಈ ಜಿಲ್ಲೆಯ ಔದಾರ್ಯವಾಗಿದೆ.

ಸಾಗರ ತಾಲೂಕಿನ ವೈವಿದ್ಯತೆಯನ್ನು ಕುರಿತು ಚರ್ಚಿಸಲು ಪ್ರಾರಂಭಿಸಿದರೆ ಒದೊಂದು ಗ್ರಾಮವೂ ಕೂಡ ಐತಿಹಾಸಿಕ, ಸಾಂಸ್ಕೃತಿಕ ಹೋರಾಟ, ಸಾಮಾಜಿಕ ಸುಧಾರಣೆ, ಸಮತಾವಾದ, ಕಾಗೋಡು ಚಳುವಳಿಯ ಹೋರಾಟಗಳೆಲ್ಲವೂ ಇಲ್ಲಿನ ಚಿಂತನ ಶ್ರೀಮಂತಿಕೆಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಈ ಎಲ್ಲಾ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ವಿಷಯ ವಸ್ತುವಾಗಿರುವ ಬುಡಕಟ್ಟುಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಎನ್.ಹುಚ್ಚಪ್ಪ ಮಾಸ್ತರರ ಪಾತ್ರವು ಯಾವ ರೀತಿಯಾದುದು ಎಂಬುದು ಮುಖ್ಯವಾಗಿರುತ್ತದೆ. ಸಾಗರ ತಾಲೂಕಿನ ಸುತ್ತಮುತ್ತ ಸೊರಬ, ತೀರ್ಥಹಳ್ಳಿ, ಭಟ್ಕಳ, ಶಿವಮೊಗ್ಗ, ಹಾನವಟ್ಟಿ, ಆಗೊಂಬೆ, ಜೋಗ, ತುಂಗ, ಲಿಂಗನಮಕ್ಕಿಗಳೆಲ್ಲವೂ ವಿಶ್ವವಿಖ್ಯಾತಿ ಪಡೆದ ಪರಂಪರೆಯನ್ನು ಮೈಗೂಡಿಸಿಕೊಂಡಿರುವ ಸ್ಥಳಗಳಾದರೂ ಶಿರಸಿ, ಸಿದ್ದಾಪುರಗಳೂ ಕೂಡ ಸಾಗರದ ವಶಿಷ್ಟ್ಯತೆಗೆ ಮೆರಗನ್ನು ನೀಡುವ ಸ್ಥಳಗಳಾಗಿವೆ. ಇಲ್ಲಿ ಜಾನಪದ ಸೊಗಡಿನ ತರಬೇತಿ ಕೇಂದ್ರವಾದ ಹಾಗೂ ರಂಗಕಲಾ ವೇದಿಕೆಯಾದ ಹೆಗ್ಗೋಡಿನ ನಿನಾಸಂ ಕೂಡ ತಾಲೂಕಿನ ಸಾಂಸ್ಕೃತಿಕ ಮತ್ತು ಬೌದ್ಧಿಕ ಕಿರೀಟಕ್ಕೆ ಬೆನ್ನೆಲುಬಾಗಿ ನಿಂತಿರುವುದು ಎಲ್ಲರಿಗೂ ಗೋಚರಿಸುವ ಸಂಗತಿಯಾಗಿದೆ. ಆದ್ದರಿಂದ ಸಾಗರವು ಭೌಗೋಳಿಕವಾಗಿ ಅರಣ್ಯದೊಳಗಿನ ದೀಪದಂತೆ ತನ್ನ ಅಸ್ಥಿತ್ವವನ್ನು ಇಟ್ಟುಕೊಂಡಿರುವದಲ್ಲದೇ ಶರಾವತಿ ಮತ್ತು ಲಿಂಗನಮಕ್ಕಿ ಅಣೆಕಟ್ಟೆಗೆ ಆಶ್ರಯ ತಾಣವಾಗಿದೆ. ಅಲ್ಲದೆ ಅನೇಕ ಬುಡಕಟ್ಟುಗಳಿಗೆ ತನ್ನ ಹೃದಯದೊಳಗೆ ಸ್ಥಾನವನ್ನು ಕೊಟ್ಟಿರುವುದು ಗಮನಾರ್ಹವಾದುದು. ಸರ್ಕಾರಕ್ಕೆ ಮತ್ತು ಸಮಾಜಕ್ಕೆ ಬೆಲೆಬಾಳುವ ತೇಗ, ಗಂಧದ ಮರಗಳು, ಹೊನ್ನೆ, ಸಿಲ್ವರ್, ಬೀಟೆ ಹಾಗೂ ಗಿಡಮೂಲಿಕೆಗೆ ಸಂಬಂಧಿಸಿದ ಸಸ್ಯ ಸಂಕುಲಗಳಿಂದ ಕೂಡಿದ ಸಮೃದ್ಧಿ ತಾಣವಾಗಿದೆ.

ಈ ಹಿನ್ನೆಲೆಯಿಂದ ರಾಜ್ಯದ ಪ್ರವಾಸಿಗರನ್ನು ಕೈಬೀಸಿ ಕರೆಯುವ ಪ್ರವಾಸಿ ತಾಣವೂ ಆಗಿದೆ. ಭೌಗೋಳಿಕವಾಗಿ ವರ್ಷದಲ್ಲಿ ಹೆಚ್ಚುಕಾಲ ಮಳೆ ಬೀಳುವುದರಿಂದ ವಾಣಿಜ್ಯ ಬೆಳೆಗಳಾದ ಅಡಿಕೆ, ತೆಂಗು ಹಾಗೂ ಸಾಂಬಾರು ಪದಾರ್ಥಗಳು ಹಾಗೂ ಭತ್ತ ಕಾಯಿ ಪಲ್ಯೆಗಳಿಂದ ಭೌಗೋಳಿಕ ಶ್ರೀಮಂತಿಕೆಗೆ ಪೂರಕವಾದ ವಾತಾವರಣವನ್ನು ರೂಪಸಿಕೊಂಡಿರುವ ತಾಣವಾಗಿದೆ.

ಅಪ್ಪಟ ಮಲೆನಾಡಿನ ತಾಲೂಕಾಗಿ ಇಲ್ಲಿಯ ಭೂಮಿಯು ಫಲವತ್ತತೆಯಿಂದ ಕೂಡಿರುವುದಲ್ಲದೇ ಫಲವತ್ತಾದ ಭೂಮಿಗೆ ಅನುಗುಣವಾದ ಬೆಳೆಗಳು ಹೆಚ್ಚು ಇಳುವರಿಯನ್ನು ದೊರಕಿಸಿಕೊಡುವಂತಹದ್ದಾಗಿದೆ. ಈ ಹಿನ್ನೆಲೆಯಿಂದ ಪ್ರತಿಯೊಬ್ಬ ರೈತ ಕಾರ್ಮಿಕ ಜಮೀನ್ದಾರರುಗಳೆಲ್ಲರೂ ಯಾವುದೇ ನೀರಿನ ಕೊರತೆಯನ್ನು ಅನುಭವಿಸದೇ ವರ್ಷವಿಡೀ ವರುಣನ ಹಾಗೂ ನಿಸರ್ಗದ ಮಕ್ಕಳಂತೆ ಬದುಕನ್ನು ಸಾಗಿಸುವ ಹಾಗೂ ಸ್ವಲ್ಪ ಮಟ್ಟಿಗಾದರೂ ಸಾರ್ವತ್ರಿಕ ಸಮಾನತೆ, ಸಾರ್ವತ್ರಿಕ ಅಭಿರುಚಿಯ ವಾತಾವರಣ ಸೃಷ್ಟಿಯಾಗಿರುವುದನ್ನು ಅವಲೋಕಿಸಬಹುದಾಗಿದೆ.

ಬೆಳಕು ಮತ್ತು ಸುವಾಸನೆಗೆ ಸಾಗರ ತಾಲ್ಲೂಕು ಹೆಸರುವಾಸಿಯಾದುದು. ಜೋಗ ಜಲಪಾತವು ಬೆಳಕನ್ನೂ, ಇಲ್ಲಿನ ಶ್ರೀಗಂಧವು ಸುವಾಸನೆಯನ್ನೂ ನೀಡಿ ಈ ತಾಲ್ಲೂಕಿನ ಶೋಭೆಯನ್ನು ಹೆಚ್ಚಿಸಿದೆ. ಶರಾವತಿ ಹಾಗೂ ಜೋಗ ಜಲಪಾತದಿಂದ ಇಡೀ ನಾಡೇ ಬೆಳಕನ್ನು ಪಡೆದುಕೊಂಡಿರುವುದು ಹೆಮ್ಮೆ ಪಡುವ ಸಂಗತಿ. ಜೋಗ ಜಲಪಾತವು ಇಂದು ಒಂದು ಪ್ರವಾಸಿ ಕೇಂದ್ರವೆನಿಸಿದೆ. ವಿಖ್ಯಾತ ಶಿಲ್ಪಿ ಸರ್ ಎಂ.ವಿಶ್ವೇಶ್ವರಯ್ಯನವರು ಈ ಜಲಪಾತವನ್ನು ವೀಕ್ಷಿಸಿದಾಗ "ಅಯ್ಯೋ ಎಷ್ಟು ಶಕ್ತಿ ವ್ಯರ್ಥವಾಯಿತಲ್ಲಾ!" ಎಂದು ಉದ್ಗಾರವೆತ್ತಿ ನಾಡಿನ ಅಭ್ಯುದಯಕ್ಕೆ ಪೂರಕ ಯೋಜನೆಯೊಂದನ್ನು ನಿರ್ಮಿಸಿದರು. ವ್ಯರ್ಥವಾಗುತ್ತಿರುವ ಜಲಶಕ್ತಿಯನ್ನು ಇದರ ಸಮರ್ಥ ಯೋಜನಾ ಸಾಮರ್ಥ್ಯದಿಂದಲೇ ಈ ತಾಲ್ಲೂಕಿನ ಜೋಗದಿಂದ ನಾಡಿನ ಒಳಹೊರಗೂ ವಿದ್ಯುದ್ದೀಪಗಳನ್ನು ಕಾಣುತ್ತಿದ್ದೇವೆ.

ಸಾಗರ-ಸೊರಬದ ಶ್ರೀಗಂಧದ ಕೆತ್ತನೆಗಳು ವಿಶ್ವವಿಖ್ಯಾತವೆನಿಸಿವೆ. 'ಗಂಧದ ಬೀಡು' ಎಂದು ಕಾವ್ಯಮಯವಾಗಿ ಈ ತಾಲ್ಲೂಕನ್ನು ವರ್ಣಿಸಲಾಗಿದೆ. ಮಹಾತ್ಮಾ ಗಾಂಧೀಜಿಯವರು ೧೯೨೭ ರಲ್ಲಿ ಸಾಗರಕ್ಕೆ ಭೇಟಿಯಿತ್ತಾಗ ಗುಡಿಗಾರರ ಕಲೆಯನ್ನು ಕಂಡು ಅಪ್ರತಿಭರಾಗಿದ್ದರು. ಹೆಮ್ಮೆಯ ಸಂಗತಿಯೆಂದರೆ, ಸೂಕ್ಷ್ಮ ಕುಸುರಿ ಕಲಾ ಚಾತುರ್ಯದಿಂದ ರಚಿಸಲ್ಪಟ್ಟ 'ಗೀತೋಪದೇಶ' ಕಲಾಕೃತಿ ವಿಶ್ವಸಂಸ್ಥೆಯ ಸಭಾಂಗಣದಲ್ಲಿ ಪ್ರದರ್ಶಿತವಾಗಿದೆ. ಸಾಗರ-ಸೊರಬ ಗುಡಿಗಾರರು ಇದನ್ನು ನಿರ್ಮಿಸಿ ತಾಲೂಕಿನ ಹಿರಿಮೆಗೆ ಕಾರಣರಾಗಿದ್ದಾರೆ. ಈ ತಾಲೂಕಿನ

ತಲಕಳಲೆ, ಜೋಗ ಮುಂತಾದ ಪ್ರಕೃತಿ ಸೌಂದರ್ಯವನ್ನು ಮೆಚ್ಚದವರಿಲ್ಲ. ಶರಾವತಿ ನದಿಯು ಈ ತಾಲೂಕಿನ ಜೋಗದಲ್ಲಿ ದುಮುಕುತ್ತ ಭಾರತದಲ್ಲಿಯೇ ಅತಿ ದೊಡ್ಡ ಜಲಪಾತವಾಗಿ ಜಗತ್ಪ್ರಸಿದ್ಧವಾಗಿದೆ. ವರದಾ ನದಿಯ ತೀರದಲ್ಲಿರುವ ಸಾಗರವು ಶಿವಮೊಗ್ಗದಿಂದ ೪೫ ಮೈಲಿ ದೂರವಿದೆ. ಪೂರ್ವಕ್ಕೆ ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು, ದಕ್ಷಿಣಕ್ಕೆ ಹೊಸನಗರ, ಪಶ್ಚಿಮಕ್ಕೆ ಶಿವಮೊಗ್ಗ ಹಾಗೂ ಶಿಕಾರಿಪುರ, ಉತ್ತರಕ್ಕೆ ಸೊರಬ ತಾಲ್ಲೂಕುಗಳ ಮೇರೆಯನ್ನು ಒಳಗೊಂಡಿದೆ.

ಬೆಟ್ಟಗಳು ನದಿಗಳು:

ಹಲವಾಡಿ ಮತ್ತು ಗೋವರ್ದನಗಿರಿ ಕೋಗಾರ ಮುಂತಾದ ಕಡೆಗಳಲ್ಲಿರುವ ಅರಣ್ಯ ಸಂಪತ್ತು ಈ ತಾಲೂಕಿನ ವರದಾನವಾಗಿದೆ. ಗೋವರ್ದನಗಿರಿ ಬೆಟ್ಟವು ಸುಮಾರು ೮೪೮ ಮೀಟರ್ ಎತ್ತರವಾಗಿದೆ. ವರದಾ ನದಿಯು ಸುಮಾರು ೮೫೦ ಚದರ ಮೈಲಿಯಿಂದ ನೀರು ಬರುವ ಪ್ರದೇಶವನ್ನು ಹೊಂದಿದೆ. ಇದು ವರದಾ ಮೂಲದಲ್ಲಿ ಉದ್ಭವಿಸಿ ಬನವಾಸಿ, ಧಾರವಾಡ, ಹಾವೇರಿ ಮಾರ್ಗವಾಗಿ ಹರಿದು ತುಂಗಭದ್ರ ನದಿಯಲ್ಲಿ ಸಂಗಮವಾಗುತ್ತದೆ. ದಂಡಾವತಿ ಇದರ ಉಪನದಿ. ಅಲ್ಲಿಂದ ಬಿಜಾಪುರ ಜಿಲ್ಲೆಯ ಕೂಡಲಸಂಗಮದಲ್ಲಿ ಕೃಷ್ಣಾನದಿಯನ್ನು ಸೇರಿ ಬಂಗಾಳಕೊಲ್ಲಿಯಲ್ಲಿ ವಿಲೀನವಾಗುತ್ತದೆ. ಶರಾವತಿಯು ತೀರ್ಥಹಳ್ಳಿಯ ಅಂಬುತೀರ್ಥದಲ್ಲಿ ಹುಟ್ಟಿ ಈ ತಾಲೂಕನ್ನು ಹಾದುಹೋಗಿ ಕಾರವಾರ ಜಿಲ್ಲೆಯ ಹೊನ್ನಾವರದಲ್ಲಿ ಸಮುದ್ರಕ್ಕೆ ಸೇರುತ್ತದೆ. ೧೯೨೩ ರಲ್ಲಿ ಈ ತಾಲೂಕಿಗೆ ಆಗಮಿಸಿದ ಇಟಲಿ ಪ್ರವಾಸಿ ಪಿತ್ರೊ ಡೆಲ್ಲವಲ್ಲಿ ಹಾಗೂ ಕ್ರಿ.ಶ. ೧೯೬೭ ರಲ್ಲಿ ಪ್ರವಾಸ ಮಾಡಿದ ಇಂಗ್ಲೆಂಡಿನ ಪೀಟರ್ ಮಂಡಿಯು ಈ ತಾಲೂಕನ್ನು ವರ್ಣಿಸುತ್ತ ಇಂಗ್ಲೆಂಡಿನಂತೆ ಅನೇಕ ಗುಡ್ಡ ಕಣಿವೆಗಳು ಮನೋಹರವಾಗಿವೆ ಎಂದು ವರ್ಣಿಸಿದ್ದಾನೆ. ಮಾವಿನ ಹೊಳೆ ಎಂದು ಕರೆಯಲ್ಪಡುವ ಚಿಕ್ಕ ನದಿಯೊಂದು ಹೊಳೆಗೂಡು ಎಂಬಲ್ಲಿ ಹುಟ್ಟಿ ತಟ್ಟಗುಂಡಿ ಗ್ರಾಮದಲ್ಲಿ ವರದಾ ನದಿಯಲ್ಲಿ ವಿಲೀನಗೊಂಡಿದೆ.

ಈ ತಾಲೂಕಿನಲ್ಲಿ ಗಿಜಗಾರುವಿನ ಸಮೀಪವಿರುವ ಕೋರನಕೋಟೆ ಗುಡ್ಡದಲ್ಲಿ ಕಬ್ಬಿಣದ ಅಂಶವಿರುವ ಕನಿಜಗಳಿವೆ. ಅಂಬರಗುಡ್ಡದ ಹತ್ತಿರ ಕೋಟೆಬಾರೆ ಪ್ರದೇಶದಲ್ಲಿಯೂ ವಿಫುಲವಾದ ಕಬ್ಬಿಣದ ಅದಿರಿನ ಸಂಗ್ರಹಗಳಿರುವುದು ಸಮೀಕ್ಷೆಗಳಿಂದ ವ್ಯಕ್ತಪಡುತ್ತದೆ. ಪಿಂಗಾಣಿ ವಸ್ತುಗಳ ತಯಾರಿಕೆಯಲ್ಲಿ ಬಳಸಲಾಗುವ ಉತ್ತಮ ಜಾತಿಯ ಜೇಡಿ ಮಣ್ಣು ಸಾಗರ ತಾಲೂಕಿನ ಬಳಿ ದೊರಕುತ್ತದೆ. ಕಟ್ಟಡ ಹಾಗೂ ರಸ್ತೆಗಳಿಗೆ ಬೇಕಾಗುವ ಹಲವು ಕಚ್ಚಾ ಸಾಮಗ್ರಿಗಳು ಇಲ್ಲಿ ವಿಫುಲವಾಗಿ ದೊರೆಯುತ್ತವೆ. ಸಾಗರ ತಾಲೂಕಿನಲ್ಲಿ ೨೫೮೪.೫ ಮಿಲಿ ಲೀಟರ್‌ಗಳಷ್ಟು

ವಾರ್ಷಿಕ ಸರಾಸರಿ ಮಳೆ ಬೀಳುತ್ತದೆ. ಇಲ್ಲಿ ೧೭ ಸೃಷ್ಟಿ ಮಾಪನ ಕೇಂದ್ರಗಳಿರುವುದು ಈ ತಾಲೂಕಿನ ಭೌಗೋಳಿಕ ಲಕ್ಷಣಕ್ಕೆ ಮೆರಗನ್ನು ನೀಡುತ್ತದೆ.

ಪೌರಾಣಿಕವಾಗಿ ಸಾಗರವು ಪೌರಾಣಿಕ ಹಿನ್ನೆಲೆಯಲ್ಲಿ ವರದಾ ಮಹಾತ್ಮೆ ಹಾಗೂ ಸಹ್ಯಾದಿಕೊಂಡದ ಪ್ರಕಾರ ಸಾಗರ ತಾಲೂಕಿನ ಹಲವು ಕ್ಷೇತ್ರಗಳು ಪುರಾಣ ಯುಗವನ್ನು ಸೂಚಿಸುತ್ತವೆ. ಶ್ರೀಮನ್ನಾರಾಯಣನ ವರಪ್ರಸಾದದಿಂದ ಉದ್ಭವಿಸಿದ ಭಾಗೀರತಿಯು ಶಿವನ ಶಿರದಿಂದ ಹೊರಟು ಭಕ್ತರನ್ನು ಪಾವನಗೊಳಿಸಲು ವರದಾ (ವರವನ್ನು ನೀಡುವ) ನದಿಯಾಗಿ ಉದ್ಭವಿಸಿರುವಳೆಂದು ಹೇಳಲಾಗಿದೆ. ಭಗವಾನ್ ಶ್ರೀಧರ ಸ್ವಾಮಿಗಳ ತಪೋಭೂಮಿಯಾಗಿದ್ದ ವರದಪುರದಲ್ಲಿ ವ್ಯಾಸ ಹಾಗೂ ಅಗಸ್ತ್ಯ ಮುನಿಗಳು ತಪಸ್ಸು ಮಾಡಿದ ಕ್ಷೇತ್ರ ಎಂಬ ಐತಿಹ್ಯವಿದೆ. ವರದಪುರದಲ್ಲಿ ಸಗರ ಚಕ್ರವರ್ತಿಯಿಂದ ಸಾಗರ ಎಂಬುದಾಗಿ ಉದ್ಗರಿಸಲಾಗಿದೆ. ಗೌಜ ಗ್ರಾಮವು ಗೌತಮ ಕ್ಷೇತ್ರವೆನಿಸಿದ್ದು ಜನಮೇಜಯನ ಸರ್ಪಯಾಗದ ಸಂಗತಿಯನ್ನು ನೆನಪಿಸುತ್ತದೆ. ಕ್ರಿ.ಶ. ೩೫೭ ರ ಗಂಗ ಮಾದವನ ಕಾಲದ ಅತ್ಯಂತ ಪ್ರಾಚೀನ ಕನ್ನಡ ಭಾಷೆಯ ತಾಮ್ರ ಪಟವೊಂದು ಕಾನಗರ್ತಿಯದೆಂದು ತಿಳಿದುಬಂದಿದೆ. ಕ್ರಿ.ಶ. ೮ ನೆಯ ಶತಮಾನದಲ್ಲಿ ಜೀನದತ್ತನಿಂದ ಪೂಜಿಸಲ್ಪಡುತ್ತಿದ್ದ ಅಂಧಾಸುರ ಇದನ್ನು ಆಳುತ್ತಿದ್ದುದು ತಿಳಿಯುತ್ತದೆ. ಈ ತಾಲೂಕಿನ ಅನೇಕ ಪ್ರದೇಶಗಳು ಚಾಲುಕ್ಯ, ರಾಷ್ಟ್ರಕೂಟ, ಸಾಂತರ ಹಾಗೂ ಕದಂಬರ ಆಳ್ವಿಕಗೆ ಒಳಪಟ್ಟಿತ್ತು. ಸಾಂತರ ದೊರೆಗಳ ೪೭ ಶಾಸನಗಳಲ್ಲಿ ಹವಲು ಈ ತಾಲೂಕಿನಲ್ಲಿಯೇ ಉಪಲಬ್ಧವಿವೆ. ಹೊಸಗುಂದದಲ್ಲಿರುವ ಅವಶೇಷಗಳು ಸಾಂತರ ದೊರೆಗಳ ರಾಜಧಾನಿಯ ಸೂಚನೆಗಳನ್ನು ಬಿಂಬಿಸುತ್ತವೆ. ಕ್ರಿ.ಶ. ೧೨೭೮ ರಲ್ಲಿ ಸೇತುನಾಡರ ಆಡಳಿತಕ್ಕೂ ಹಲವು ಪ್ರದೇಶಗಳು ಒಳಗೊಂಡಿದ್ದವು. ವರದ ದೇವಾಲಯದಲ್ಲಿ ಚಾಲುಕ್ಯರ ಕಾಲದ ಮೂಲ ವಿಗ್ರಹವೊಂದು ಲಕ್ಷ್ಮಿತೀರ್ಥದಲ್ಲಿ ಮುಳುಗಿರುವುದನ್ನು ತಿಳಿಯಲಾಗಿದೆ. ಹೊಯ್ಸಳರ ಕಾಲದಲ್ಲಿ ಕುಂದಾಡು ಪರಣಗಕ್ಕೆ ಸೇರಿದ ಚಂದ್ರಗುತ್ತಿ ಸಾಗರದ ಆಡಳಿತಕ್ಕೊಳಪಟ್ಟಿತ್ತು. ಸೊರಬದ ೩೭೫ ನೇ ಶಾಸನದ ಪ್ರಕಾರ ಬನವಾಸಿ ೧೨ ಸಾವಿರ ಸೀಮೆಗೆ ರಾಜಧಾನಿಯಾಗಿದ್ದ ಚದ್ರಗುತ್ತಿಯು ಹವಲು ಕಾಲದ ವರೆಗೆ ವಿಜಾಪುರದ ಆದಿಲ್‌ಷಹಾ ಅಧೀನಕ್ಕೂ ಸೇರಿತ್ತು. ವಿಜಯನಗರದ ಚಕ್ರವರ್ತಿಗಳ ಕಾಲದಲ್ಲಿ ಅರಗ ರಾಜ್ಯ (ಮಲೆರಾಜ್ಯಕ್ಕೆ ಪೂರ್ವಕ್ಕೆ ಅನನ್ಯ ದೇಶ) ಪ್ರಾಂತದಲ್ಲಿ ಸಾಗರ ತಾಲ್ಲೂಕು ವಿಲೀನಗೊಂಡಿರುವುದನ್ನು ನೋಡಲಾಗುವುದು. ಗೇರು ಸೊಪ್ಪೆಯ ಭೈರವ ರಾಣಿಯು ಇಲ್ಲಿನ ಹಲವು ಪ್ರದೇಶಗಳನ್ನು ಆಳಿದ ನಂತರ ಕೆಳದಿ ಅರಸರು ಇದನ್ನು ತಮ್ ಒಡೆತನಕ್ಕೆ ಸೇರಿಸಿಕೊಂಡರು. ಕ್ರಿ.ಶ. ೧೫೮೩ ರಿಂದ ೧೬೩೦ ರ ವರೆಗೆ ಆಳಿದ ಕೆಳದಿಯ

ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ಸಾಗರವು ಅಸ್ತಿತ್ವಕ್ಕೆ ಬಂದಿತು. ಕ್ರಿ.ಶ. ೧೭೬೩ ರಲ್ಲಿ ಹೈದರಾಲಿಯು ಕೆಳದಿ ರಾಜ್ಯದ ಮೇಲೆ ನಡೆಸಿದ ದಂಡಯಾತ್ರೆಯಿಂದ ಈ ಪ್ರಾಂತವು ಆತನ ಅಧೀನವಾಯಿತು. ಸಂಶೋಧನೆ ಕೈಗೊಳ್ಳಬೇಕಾಗಿರುವ ವಿಷಯಕ್ಕೆ ಅನುಗುಣವಾಗಿರುವ ಈ ತಾಲೂಕಿನಲ್ಲಿ ಚಿಕ್ಕನಲ್ಲೂರು, ಕಂಬಳಿಕೊಪ್ಪ ಮುಂತಾದೆಡೆಯಲ್ಲಿರುವ ಪ್ರಾಚ್ಯ ಸಾಮಗ್ರಿಗಳು ಐತಿಹಾಸಿಕ ಸಂಗತಿಗಳನ್ನು ನಿರೂಪಿಸುವಲ್ಲಿ ಇಂದೂ ಕೂಡ ಸಾಕ್ಷಿಯಾಗಿ ನಿಲ್ಲುತ್ತವೆ. ಹೈದರ್ ಹಾಗೂ ಟಿಪ್ಪುವಿನ ಅನಂತರ ೧೮೦೦ ರಲ್ಲಿ ವಾಗನ ಬಂಡಾಯ ಆಯಿತು. ೧೮೩೦-೩೧ ರಲ್ಲಿ ಬೂದಿ ಬಸಪ್ಪನ ಬಂಡಾಯವೂ ಆಗಿರುವುದು. ಬೂದಿ ಬಸಪ್ಪ ಎಂಬಾತನ ನಿಜವಾದ ಹೆಸರು ಸಾದರ ಮಲ್ಲ. ಹಳ್ಳಿಯ ಪಟೇಲರು ಹಾಗೂ ಸಾಮಾನ್ಯ ರೈತಾಪಿ ಜನರು ಈತನನ್ನು ಕೆಳದಿ ರಾಜ್ಯದ ನಿರಂಕುಶ ಪ್ರಭು ಎಂದು ಸಾರಿ ನಾಯಕನನ್ನಾಗಿ ಮಾಡಿದರು. ನಂತರ ಮುಂದೆ ೧೮೩೧ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಹಾಗೂ ಬ್ರಿಟೀಷರ ಮುಖ್ಯ ಸೇನಾನಿ ಕರ್ನಲ್ ಬ್ರಿಂಗ್ಸ್‌ನ ಮುಂದಾಳತ್ವದಲ್ಲಿ ಈತನನ್ನು ನಿಗ್ರಹಿಸಲಾಯಿತು. ಈ ತಾಲ್ಲೂಕು ೧೯೨೭ ರಲ್ಲಿ ಮಹತ್ಮಾ ಗಾಂಧಿಯವರ ನೇತೃತ್ವದಲ್ಲಿ ಚಕ್ರವರ್ತಿ ರಾಜಗೋಪಾಲಾಚಾರಿ, ಗಂಗಾಧರರಾವ್, ದೇಶಪಾಂಡೆ ಮುಂತಾದ ರಾಜಕೀಯ ಪ್ರಮುಖರು ಈ ಸ್ಥಳಕ್ಕೆ ಬಂದು ಹೋಗಿದ್ದಾರೆ. ೧೯೪೭ ನೆಯ ಸ್ವತಂತ್ರ್ಯದ ನಂತರ ಮೈಸೂರು ರಾಜ್ಯದ ಭೂ ಸುಧಾರಣಾ ಆಂದೋಲನದಲ್ಲಿ ಈ ತಾಲೂಕಿನ ಕಾಗೋಡು ಗ್ರಾಮವು ೧೯೫೧ ರಂದು ರೈತ ಚಳುವಳಿಯೊಂದನ್ನು ಮಾಡಿದುದರ ಔಚಿತ್ಯವನ್ನು ಇಲ್ಲಿ ನೆನಪಿಸಬಹುದಾಗಿದೆ. ಇದು ಅಪೂರ್ವವಾದ ಸಾಮಾಜಿಕ ಕ್ರಾಂತಿಯನ್ನು ಹಬ್ಬಿಸಿತ್ತು. ಜಯಪ್ರಕಾಶ ನಾರಾಯಣ, ಡಾ॥ ಲೋಹಿಯಾ, ಶಾಂತವೇರಿ ಗೋಪಾಲಗೌಡ, ಶ್ರೀ ಗಣಪತಿಯಪ್ಪ ಮುಂತಾದವರು ಕಾಗೋಡಿಗೆ ಧಾವಿಸಿ ಸತ್ಯಾಗ್ರಹ ನಡೆಸಿ ಜಮೀನ್ದಾರಿ ಪದ್ಧತಿ ನಿರ್ಮೂಲನಕ್ಕೆ ತಳಹದಿ ಹಾಕಿದರ ಕುರಿತು ಪ್ರೊ. ಹಿ.ಚಿ.ಬೋರಲಿಂಗಯ್ಯ ಹಾಗೂ ಎನ್.ಹುಚ್ಚಪ್ಪ ಮಾಸ್ತರರು "ಕಾಗೋಡು ಚಳುವಳಿಯ ಸುವರ್ಣ ಸಂಪುಟ"ದಲ್ಲಿ ವಿಮರ್ಶಾತ್ಮಕವಾಗಿ ಚಿತ್ರಿಸಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಕಾಗೋಡು ಚಳುವಳಿಯಲ್ಲಿ ಕಾಗೋಡಿನ ಮುತ್ತನ ನಾಗಪ್ಪ, ಸವಾಯಿ ಮಾಸ್ತಮ್ಮ ಹಾಗೂ ಹಲವು ಸಣ್ಣ ಪುಟ್ಟ ಜಮೀನುದಾರ ಹಾಗೂ ರೈತರುಗಳು ಬಲಿದಾನವಾಗಿರುವುದು ಮರೆಯುವಂಥದ್ದಲ್ಲ ಹಾಗೂ ದೇಶದ ಭೂಸುಧಾರಣಾ ಕ್ರಾಂತಿಯು ಇತಿಹಾಸದಲ್ಲಿಯೇ ಕಾಗೋಡು ಸತ್ಯಾಗ್ರಹದ ಹೆಸರು ಅಜರಾಮರವಾಗಿ ಉಳಿದಿದೆ ಎಂಬುದೇ ನಮಗೆ ಹೆಮ್ಮೆಯ ವಿಷಯ.

ಸಾಗರ ತಾಲ್ಲೂಕು ಭೌಗೋಳಿಕವಾಗಿ ವೈವಿದ್ಯತೆಯ ಸಂಸ್ಕೃತಿಯನ್ನೊಳಗೊಂಡ ಪ್ರವಾಸಿ ಆಕರ್ಷಣ ತಾಣಗಳನ್ನು ಒಳಗೊಂಡಿದೆ. ಅವುಗಳಲ್ಲಿ ಆಧ್ಯಾತ್ಮಿಕ ಕ್ಷೇತ್ರಗಳು, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪ್ರವಾಸಿ ಕೇಂದ್ರಗಳು, ನೈಸರ್ಗಿಕ ಆಕರ್ಷಣಾ ತಾಣಗಳು, ವೈಜ್ಞಾನಿಕ ಹಾಗೂ ತಾಂತ್ರಿಕ ಅಧ್ಯಯನಕ್ಕೆ ಪೂರಕವಾದ ಪ್ರದೇಶಗಳಿರುವುದು ಇಲ್ಲಿ ಔಚಿತ್ಯವಾಗಿದೆ. ವರದಪುರ ಇದು ನಾಡ ಒದ್ದಳ್ಳಿಯ ಮದುರೆ ಗ್ರಾಮ ಸಾಗರದಿಂದ ೬ ಕಿಲೋ ಮೀಟರ್ ದೂರದಲ್ಲಿದೆ. ಇದು ಐತಿಹಾಸಿಕ ಹಾಗೂ ಆಧ್ಯಾತ್ಮಿಕ ಸಂಪತ್ತಿನಿಂದ ಕೂಡಿದ ನೈಸರ್ಗಿಕ ಕ್ಷೇತ್ರವಾಗಿದ್ದು ಮಹಿಶಾಸುರ ಮರ್ದಿನಿಯ ಸುಂದರ ಮೂರ್ತಿ ಇರುವ ದೇವಾಲಯವಾಗಿದೆ. ಒಂದು ಕಾಲದಲ್ಲಿ ಈ ಕ್ಷೇತ್ರವು ವ್ಯಾಸ ಮತ್ತು ಅಗಸ್ತ್ಯಾಶ್ರಮವಾಗಿತ್ತೆಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿಯ ಪ್ರಕಾರ ತಿಳಿದುಬಂದಿದೆ. ಇದು ತನ್ನದೇ ಆದ ಗೌಪ್ಯತೆಯನ್ನು ಕಾಪಾಡಿಕೊಂಡು ಬಂದಿರುವುದನ್ನು ನೋಡಲಾಗಿದೆ. ಸಾಗರದಲ್ಲಿ ವರದಮೂಲವು ಯಜ್ಞಕ್ಕಾಗಿ ಭಾಗೀರಥಿಯನ್ನು ಕರೆದುಕೊಂಡು ಹೋದ ಬಗೆಯನ್ನು ತಿಳಿಸುತ್ತದೆ. ಅಂದರೆ ಸಗರ ಚಕ್ರವರ್ತಿಯು ಭಗೀರಥಿಯನ್ನು ಕರೆದುಕೊಂಡು ಹೋಗಿ ವರದೆಯನ್ನು ಪ್ರಾರ್ಥಿಸಿದನಂತೆ. ಆಗ ವರದೆಯು ಪ್ರತ್ಯಕ್ಷಳಾಗಿ ಆತನ ಹಿಂದೆ ಬರುವುದಾಗಿ ತಿಳಿಸಿ ಎರಡು ಗಾವುದ ದೂರದ ಯಜ್ಞಶಾಲೆಯ ವರೆಗೂ ಹೋಗಿ ವರದಾತೀರ್ಥವಾಗಿ ನಿಂತಿದ್ದಾಳೆ. ನದಿಯ ರೂಪದಲ್ಲಿ ಸಗರ ಚಕ್ರವರ್ತಿಯೊಡನೆ ಹೊರಟಳು ಎಂಬುದಾಗಿ ಸ್ಥಳಪುರಾಣಗಳು ಇಲ್ಲಿ ತಿಳಿಹೇಳುತ್ತವೆ. ವರದಾ ಮೂಲದಲ್ಲಿರುವ ಧ್ವಜಸ್ತಂಭವು ಒಂದೇ ಶಿಲೆಯ ಭಾಗವೆಂದು ಹೇಳಲಾಗುವ ಪ್ರತೀತಿ ಇದೆ. ಇಕ್ಕೇರಿಯ ಅಗೋರೇಶ್ವರ ದೇವಾಲಯ ನಿರ್ಮಾಣದಲ್ಲಿ ಒಂದೇ ಶಿಲೆಯು ಬಹು ಉದ್ದವೆನಿಸಿದ್ದರಿಂದ ಅದನ್ನು ಮರೆಮಾಚಿ ಇಡಲಾಗಿದ್ದುದೂ ಅಲ್ಲದೆ ಕೆಳದಿ ಅರಸರ ಕಾಲದ ಹಲವು ದೇವಾಲಯಗಳು ಇಲ್ಲಿರುವುದು ಮುಖ್ಯವಾಗಿದೆ.

ಕೆಳದಿ ಸಾಗರದಿಂದ ೮ ಕಿಲೋ ಮೀಟರ್ ದೂರವಿದೆ. ಕ್ರಿ.ಶ. ೧೪೯೯ ರಿಂದ ೧೭೬೩ ರ ವರೆಗೆ ಆಳಿದ ಕೆಳದಿ ನಾಯಕರ ಮೂಲ ಸ್ಥಾನದ ಕೇಂದ್ರ ಸ್ಥಳವೇ ಕೆಳದಿ. ಶ್ರೀ ರಾಮೇಶ್ವರ ಪಾರ್ವತಾಂಭ ಹಾಗೂ ವೀರಭದ್ರ ದೇವಾಲಯಗಳು ಶಿಲ್ಪಕಲೆಯ ಆಗಾರವಾಗಿ ಕಂಡಿರುವುದಲ್ಲದೇ ಗಂಡಬೇರುಂಡ, ಮರಗೆತ್ತನೆಗಳು, ಪೂರ್ಣಿಮೆಯ ಚಂದ್ರೋದಯ ಕಾಲದಲ್ಲಿ ನೋಡಲು ರಮ್ಯವಾಗಿರುವ ಕೆರೆ ಇಂದೂ ಕೂಡ ಸಂಶೋಧಕರನ್ನು ಆಕರ್ಷಿಸುವ ತಾಣವಾಗಿದೆ. ಈ ತಾಲೂಕಿನಲ್ಲಿ ಇಕ್ಕೇರಿಯು ಐತಿಹಾಸಿಕವಾಗಿ ತನ್ನದೇ ಆದ ಅಸ್ತಿತ್ವವನ್ನು ಇಟ್ಟುಕೊಂಡಿದೆ. ಇದು ಸಾಗರದಿಂದ ೪ ಕಿಲೋ ಮೀಟರ್ ದೂರವಿದೆ. ಇಕ್ಕೇರಿಯು ಕೆಳದಿಯ ಎರಡನೆಯ

ರಾಜಧಾನಿ. ಭವ್ಯ ಅಘೋರೇಶ್ವರ ದೇವಾಲಯ, ಕೋಟೆ, ಅರಮನೆ ಅವಶೇಷಗಳು ಇಲ್ಲಿ ಸಾಗರದ ಇತಿಹಾಸವನ್ನು ಹಾಗೂ ಭೌಗೋಳಿಕತೆಯನ್ನು ಎತ್ತಿಹಿಡಿಯುತ್ತವೆ. ಸಾಗರದಿಂದ ಸೊರಬ ರಸ್ತೆಯಲ್ಲಿ ೯ ಕಿಲೋ ಮೀಟರ್ ದೂರದಲ್ಲಿರುವ ನಾಡಕಲಶಿಯಲ್ಲಿ ಹೊಯ್ಸಳ ಕಾಲದ ಎರಡು ಸುಂದರ ದೇವಾಲಯಗಳಿವೆ. ಸಾಗರದಿಂದ ಈಶಾನ್ಯಕ್ಕೆ ೨೪ ಕಿಲೋ ಮೀಟರ್ ಅಂತರದಲ್ಲಿ ಶಿವಮೊಗ್ಗ, ಗೇರುಸೊಪ್ಪೆ ಮಾರ್ಗದಲ್ಲಿರುವ ಆನಂದಪುರ ಒಂದು ಹೋಬಳಿಯ ಕೇಂದ್ರವಾಗಿದ್ದು ೧೮೭೫ ಕ್ಕೂ ಮುಂಚೆ ಇದು ತಾಲ್ಲೂಕು ಕೇಂದ್ರವಾಗಿತ್ತು. ಆಗ ಇದಕ್ಕಿದ್ದ ಹೆಸರು ಅನಂತಪುರ. ಕೆಳದಿ ರಾಜಮನೆತನದ ಸೋಮಶೇಖರ ನಾಯಕನು ಈ ಊರನ್ನು ಆನಂದಪುರವೆಂದೇ ಕರೆಯುತ್ತಿದ್ದುದು ಕ್ಷೇತ್ರಕಾರ್ಯದಲ್ಲಿ ತಿಳಿದ ಮಾಹಿತಿ. ಇಲ್ಲಿ ಸುಂದರ ಶಿವಲಿಂಗ ಮೂರ್ತಿಯ ದೇವಾಲಯ, ಆಂಜನೇಯ ಹಾಗೂ ರಂಗನಾಥ ದೇವಾಲಯಗಳು ಇತ್ತೀಚೆಗೆ ನಿರ್ಮಾಣವಾಗಿವೆ.

ಸಾಗರವು ಸುಂದರ ಪ್ರವಾಸಿ ತಾಣವಾಗಿದ್ದು ಸುಂದರ ಜೋಗ ಜಲಪಾತವು ವಿಶ್ವವಿಖ್ಯಾತವಾಗಿದೆ. ಸಾಗರದಿಂದ ಸುಮಾರು ೩೦ ಕಿಲೋ ಮೀಟರ್ ದೂರದಲ್ಲಿ ಇರುವುದಲ್ಲದೇ ಇದರ ವೈಖರಿಯನ್ನು ಕಂಡು ಪ್ರವಾಸಿಗರು ತಮ್ಮದೇ ಆದ ಶೈಲಿಯಲ್ಲಿ ಸಾಗರದ ಸಂಸ್ಕೃತಿ ಪರಂಪರೆಯನ್ನು ಗುಣಗಾನ ಮಾಡುತ್ತಾರೆ. ೯೬೭ ಅಡಿಗಳ ಪ್ರಪಾತದಲ್ಲಿ ದುಮ್ಮಿಕ್ಕುವ ಜಲಧಾರೆ ನೋಡಲು ಅದ್ಭುತ ರಮ್ಯವಾಗಿದೆ. ಸಾಗರದಿಂದ ೩೩ ಕಿಲೋ ಮೀಟರ್ ದೂರವಿರುವ ಲಿಂಗನಮಕ್ಕಿ ಅಣೆಕಟ್ಟು ಹಾಗೂ ವಿದ್ಯುತ್‌ಗಾರವು ಅದ್ಭುತವಾಗಿದ್ದು ಅಧ್ಯಯನಕ್ಕೆ ವಿಶಿಷ್ಟ ಕೇಂದ್ರ. ಇಲ್ಲಿರುವ ಆನೆಬಯಲು ವಿದ್ಯುತ್‌ಕೇಂದ್ರವು ಆಗ್ನೇಯ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡದಾಗಿದೆ. ಜೊಗದಲ್ಲಿರುವ ಮಹಾತ್ಮಾ ಗಾಂಧಿ ಹೈಡ್ರೋ ವಿದ್ಯುತ್ ಕೇಂದ್ರವು ತಾಂತ್ರಿಕ ಅಧ್ಯಯನ ಕ್ಷೇತ್ರದಲ್ಲಿ ವಿಫುಲ ಅವಕಾಶಗಳನ್ನು ನಿಡುತ್ತಿದೆ. ೧೧೨೦೦೦ ಕಿಲೋ ವ್ಯಾಟ್ ವಿದ್ಯುತ್ ಶಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಇದಕ್ಕಿದೆ. ದಕ್ಷಿಣ ಭಾರತಕ್ಕೆ ಬೆಳಕು ಲಭಿಸುವಂತಾಗಬೇಕಾದರೆ ಸಾಗರ ತಾಲೂಕಿನಲ್ಲಿರುವ ಈ ವಿದ್ಯುತ್ ಕೇಂದ್ರವು ತನ್ನದೇ ಆದ ಛಾಪನ್ನು ಇಟ್ಟುಕೊಂಡಿದೆ. ಇಲ್ಲಿ ಭೌಗೋಳಿಕವಾಗಿ ಲಿಂಗನಮಕ್ಕಿ, ತಲಕಳಲೆ ಜಲಾಶಯಗಳ ನಿಸರ್ಗ ಸೌಂದರ್ಯ ವರ್ಣನಾತೀತವಾದುದು. ನಿಸರ್ಗದ ಬೆರಗು ಹಾಗೂ ವಿಜ್ಞಾನ ವಿಸ್ಮಯ ಸಂಗಮದ ಆನಂದವನ್ನು ಇಲ್ಲಿ ಸವಿಯಬಹುದು. ಈ ಎರಡು ಜಲಾಶಯಗಳು ಪುಟ್ಟ ಪುಟ್ಟ ಕಾಡುದೀಪಗಳಿಗೆ ಹೆಸರಾಗಿವೆ. ಬೇಸಿಗೆ ಮತ್ತು ಚಳಿಗಾಲದಲ್ಲಿ ದೋಣಿ ವಿಹಾರ ನಡೆಸಲು

ಪ್ರವಾಸಿಗರಿಗೆ ವಿಶೇಷವಾದ ಯಾಂತ್ರಿಕ ದೋಣಿಗಳ ಸೌಲಭ್ಯವಿರುವುದು ಸಾಗರದ ಭೌಗೋಳಿಕ ಸೌಂದರ್ಯತೆಯನ್ನು ಇಮ್ಮಡಿಗೊಳಿಸಿದೆ.

ಕರ್ನಾಟಕ ರಾಜ್ಯದ ಕರಕುಶಲ ಅಭಿವೃದ್ಧಿ ನಿಗಮದ ಆಶ್ರಯದಲ್ಲಿ ರೂಪಿತವಾಗಿರುವ ಗಂಧ ಸಂಕೀರ್ಣ ಕೇಂದ್ರವು ಕೆಳದಿಗೆ ಹೋಗುವ ಮಾರ್ಗದಲ್ಲಿದೆ. ಶ್ರೀಗಂಧದದಿಂದ ಸಿದ್ಧಪಡಿಸಿದ ಸೂಕ್ಷ್ಮ ಕುಸುರಿನ ಕಲಾಕೃತಿಗಳನ್ನು ವಿಶ್ವದ ಎಲ್ಲೆಡೆಗೆ ನಿರ್ಯಾತ ಮಾಡುವ ಈ ಕೇಂದ್ರದ ಚಟುವಟಿಕೆಗಳು ಭೌಗೋಳಿಕವಾಗಿ ಗಮನಾರ್ಹವಾದುದಾಗಿದೆ. ಸಾಗರದ ಶ್ರೀ ಮಹಾಗಣಪತಿ ದೇವಾಲಯದ ಪಕ್ಕದಲ್ಲಿಯೇ ಮಸೀದಿಯೊಂದು ಹಿಂದು-ಮುಸ್ಲಿಂ ಮತೀಯ ಭಾಂದವ್ಯಕ್ಕೆ ಒಂದು ಮಾದರಿಯಾಗಿ ನಿಂತಿದೆ. ಮೂರು ವರ್ಷಕ್ಕೊಮ್ಮೆ ಸಾಗರದಲ್ಲಿ ನಡೆಯುವ ಮಾರಿ ಜಾತ್ರೆಯು ವೈಶಿಷ್ಟ್ಯಪೂರ್ಣವಾದುದಾಗಿದ್ದು, ಸಾಗರಕ್ಕೆ ಒಂದು ಮೆರಗಾಗಿದೆ. ಸಾಗರ ತಾಲ್ಲೂಕಿನಲ್ಲಿ ನಿನಾಸಂ ಸಂಸ್ಥೆ ಇದ್ದು, ಇದು ಶಿವರಾಮ ಕಾರಂತರ ರಂಗಮಂದಿರವೆಂಬ ನಾಮಫಲಕವನ್ನು ಹೊಂದಿದ್ದು ಸಾಗರದಿಂದ ಸುಮಾರು ೧೫ ಕಿಲೋ ಮೀಟರ್ ದೂರವಿರುವ ಹೆಗ್ಗೋಡಿನಲ್ಲಿದೆ. ಶ್ರೀ ಕೆ.ವಿ.ಸುಬ್ಬಣ್ಣನವರ ಪರಿಶ್ರಮದಿಂದ ೧೯೪೯ ರಲ್ಲಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯು ಗ್ರಾಮಾಂತರ ಕ್ಷೇತ್ರದ ರಂಗ ಸಂಸ್ಕೃತಿಯಲ್ಲಿ ವಿಫುಲ ಪ್ರಗತಿಯನ್ನು ಸಾಧಿಸಿದೆ. ಇಲ್ಲಿ ಹಲವು ಚಲನಚಿತ್ರ ಹಾಗೂ ರಂಗ ಕಲಾಪ್ರದರ್ಶನಗಳು, ಪ್ರತಿ ವಾರ ನಡೆಯುತ್ತವೆ.

ಸಾಗರವು ವರದಾಪುರದ ದೇವಾಲಯದಲ್ಲಿ ಶೋಭಿಸುವ ವೈವಿಧ್ಯಮಯ ಪದ್ಮಚಿತ್ರಗಳು ಪೋರ್ಚುಗೀಸರ ಸಂಕೇತವನ್ನೊಳಗೊಂಡ ಮರಗೆತ್ತನೆಗಳು ಕೆಳದಿಯ ಪಾರ್ವತಿ ದೇವಾಲಯದಲ್ಲಿರುವ ವಿವಿಧ ಮಾದರಿಯ ಪದ್ಮಗಳು ಸಾಗರದ ಭೌಗೋಳಿಕತೆಗೆ ಮರಗೆತ್ತನೆಯ ಕಲಾಕೃತಿಗಳು ವೈಶಿಷ್ಟ್ಯಪೂರ್ಣವಾಗಿವೆ ಎಂಬುದನ್ನು ಪ್ರವಾಸಿಗರಿಗೆ ಮನದಟ್ಟು ಮಾಡಿಸುವ ಕೃತಿಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗೋಚರಿಸಿರುವುದನ್ನು ನೆನಪಿಸಲಾಗುವುದು. ಇಲ್ಲಿ ಗುಡಿಗಾರರಿಂದ ಸಿದ್ಧಪಡಿಸಲ್ಪಟ್ಟ ಶ್ರೀಗಂಧ ಹಾಗೂ ದಂತದ ಸೂಕ್ಷ್ಮ ಕುಸುರಿನ ಕಲಾಕೃತಿಗಳು ವಿಶ್ವವಿಖ್ಯಾತಿ ಪಡೆದ ಬಗೆಯನ್ನು ಯಾವುದೇ ಸಂಶೋಧಕರು ಮರೆಯಲಾಗುವುದಿಲ್ಲ. ಸಾಗರದಲ್ಲಿ ಕವಿ ಲಿಂಗಣ್ಣಯ್ಯನವರು ರಚಿಸಿದ ವಿಕ್ಟೋರಿಯಾ ರಾಣಿ ಗೀತಾ ಸಂದೇಶವನ್ನು ಒಳಗೊಂಡ ಪಾರ್ಥಸಾರಥಿ, ವಾಯುಸ್ತುತಿ ಮಾರುತಿ, ಲಲಿತ ತ್ರಿಪುರ ಸುಂದರಿ, ಚಿತ್ರ ರಾಮಾಯಣ ಹಾಗೂ ಚಿತ್ರ ಭಾಗವತ ಮುಂತಾದವು ಸಾಗರದ ಭೌಗೋಳಿಕತೆಗೆ ಇಂದು ಸಾಕ್ಷಿಯಾಗಿ ನಿಲ್ಲುವುದನ್ನು ಗಮನಿಸಿದರೆ ಸಾಗರದ ಸಮಗ್ರವಾದ ಅಧ್ಯಯನದ ಔಚಿತ್ಯವನ್ನು ಮರೆಯಲಾಗುವುದಿಲ್ಲ.

ಸಾಗರವು ಸಾಹಿತ್ಯಿಕವಾಗಿ ತನ್ನದೇ ಆದ ಅಸ್ತಿತ್ವವನ್ನು ಪ್ರಾಚೀನ ಕಾಲದಿಂದಲೂ ಇಂದಿನ ಕಾಲಘಟ್ಟದ ವರೆಗೂ ಕಾಪಾಡಿಕೊಂಡು ಬಂದಿರುವುದು ಎಲ್ಲರಿಗೂ ತಿಳಿದ ಸಂಗತಿಯಾದರೂ ಇಲ್ಲಿ ಸಿನಿಮಾ ಕ್ಷೇತ್ರದಲ್ಲಿ ಚೋಮನದುಡಿ ಖ್ಯಾತಿಯ ಶ್ರೀಮತಿ ಪದ್ಮಾ ಕುಮಟ ಹಾಗೂ ಇತರ ಪ್ರಮುಖ ನಟಿಯರಾದ ಪಂಡರಿಬಾಯಿ, ಮೈನಾವತಿ ಈ ಸ್ಥಳದಿಂದಲೇ ಬಂದು ರಾಜ್ಯದಲ್ಲಿ ತಮ್ಮದೇ ಆದ ಛಾಪನ್ನು ಮಾಡಿಸಿರುವುದು ಗಮನಾರ್ಹವಾದುದು. ನಾಟಕ ಕ್ಷೇತ್ರದಲ್ಲಿ ಈ ತಾಲ್ಲೂಕು ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಇದಕ್ಕೆ ಪೂರಕವಾಗಿ ಈ ಕ್ಷೇತ್ರದಲ್ಲಿ ಶ್ರೀ ಎನ್.ಆರ್.ಮಾಸೂರ್, ಆರ್.ಪಿ.ಜನಾರ್ಧನ, ಎಚ್.ಜಿ.ಶ್ರೀಪತಿ, ಚಂದ್ರಶೇಕರ ಕಂಬಾರ, ಎನ್.ಹುಚ್ಚಪ್ಪ ಮಾಸ್ತರ್, ಕೆ.ವಿ.ಸುಬ್ಬಣ್ಣ ಮುಂತಾದವರಲ್ಲದೆ ನೂರಾರು ಸಾಹಿತಿಗಳು, ಕಲಾವಿದರು, ಜಾನಪದ ತಜ್ಞರು, ಜನಪದ ವಿದ್ವಾಂಸರು ಇಲ್ಲಿಂದಲೇ ಕಲಿತು ತಮ್ಮದೇ ಆದ ಪಾತ್ರದ ಅಭಿರುಚಿಯನ್ನು ಸಾಮಾಜಿಕ ಕಳಕಳಿಯಿಂದ ಮೆರೆಸಿ ಸಾಗರದ ವೈಭವತೆಯನ್ನು ನಾಡಿಗೆ ಪರಿಚಯಿಸಿಕೊಟ್ಟ ಬಗೆಯನ್ನು ಮರೆಯಲಾಗುವುದಿಲ್ಲ.

ಈ ಎಲ್ಲಾ ಕಾರಣಗಳಿಂದ ಸಾಗರ ತಾಲ್ಲೂಕು ಭೌಗೋಳಿಕವಾಗಿ ಇತರ ತಾಲ್ಲೂಕುಗಳಿಗೆ ಬೊಟ್ಟುಮಾಡಿ ತೋರಿಸುವ ವೈಶಿಷ್ಟ್ಯತೆಯ ಹಾಗೂ ವೈವಿಧ್ಯತೆಯ ತಾಲೂಕಾಗಿರುವುದಲ್ಲದೆ ಮಾದರಿಯ ಸಾಂಸ್ಕೃತಿಕ ತಾಲೂಕಾಗಿದೆ.

ಸಾಗರ ತಾಲ್ಲೂಕು ಜನಪದ ಕಲೆಯಾದ 'ಡೊಳ್ಳು' ಕುಣಿತಕ್ಕೆ ಕರ್ನಾಟಕದಲ್ಲೇ ಹೆಸರಾದುದಾಗಿದೆ. ಸಾಗರದ ಡೊಳ್ಳು ಅಮೇರಿಕಾ ಮತ್ತು ಯುರೋಪ್ ದೇಶಗಳನ್ನು ಸುತ್ತಿ ಬಂದಿದೆ. ಅಂಟಿಕೆ-ಪೆಂಟಿಕೆ, ಹಸಲರ ಕೋಲಾಟ, ಕುಣಬಿಯರ ಹೋಳಿಆಟ ಇಲ್ಲಿನ ವಿಶೇಷ ಕಲೆಗಳು. ದೀವರ ಸಮುದಾಯದ ವೈವಿಧ್ಯಮಯ ಚಿತ್ತಾರಗಳು ಈ ಸ್ಥಳದ ಸೃಜನಶೀಲತೆಗೆ ಹಿಡಿದ ಕೈಗನ್ನಡಿ.

೨.೨ ಸಾಗರ ತಾಲ್ಲೂಕಿನ ಸಾಮಾಜಿಕ ಪರಿಸರ:

ಸಾಗರ ತಾಲ್ಲೂಕು ಬೌದ್ಧಿಕವಾಗಿ ಶ್ರೀಮಂತವಾದ ತಾಲ್ಲೂಕು ಆದ್ದರಿಂದ ಈ ಭಾಗದ ಭೌಗೋಳಿಕ ವಾಯುಗುಣ, ನಿಸರ್ಗದ ಕೊಡುಗೆ, ಸಾಂಸ್ಕೃತಿಕ ಅಂಶಗಳು ಈ ತಾಲ್ಲೂಕಿನ ಸಾಮಾಜಿಕ ಪರಿಸರಕ್ಕೆ ಬೆನ್ನೆಲುಬಾಗಿ ನಿಲ್ಲುತ್ತವೆ. ಆದ್ದರಿಂದ ಭಾರತದ ಸಾಮಾಜಿಕ ಪರಿಸರವೆಂದ ತಕ್ಷಣವೇ ಜಾತಿಯ ಕಲ್ಪನೆ ಎಲ್ಲರಿಗೂ ಬರುವುದು ಸಹಜ. ಜಾತಿಯು ಶ್ರಮವಿಭಜನೆಯ ಆಧಾರದಲ್ಲಿ ರೂಫಗೊಂಡ ಒಂದು ಉತ್ಪಾದನಾ ಘಟಕ. ಭಾರತದ ಸಾಮಾಜಿಕ ವ್ಯವಸ್ಥೆ ಎಷ್ಟು ಸಂಕೀರ್ಣವೇ ಆ ವ್ಯವಸ್ಥೆಯ ಅಂತರ್ಗತ ಭಾಗವಾಗಿರುವ ಬುಡಕಟ್ಟುಗಳು ರೂಪುಗೊಳ್ಳುವುದಕ್ಕೆ ಕಾರಣವಾಗಿರುವ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಂಗತಿಗಳು ಸಹ ಅಷ್ಟೇ ಸಂಕೀರ್ಣವಾಗಿವೆ. ಶ್ರೇಣಿಕರಣದ ಕಾರಣಕ್ಕಾಗಿ ಇಂಡಿಯಾದಲ್ಲಿ ಬದುಕುತ್ತಿರುವ ದುಡಿಯುತ್ತಿರುವ ಸಮುದಾಯಗಳು ಯಾವ ಯಾವ ಹಂತಗಳನ್ನು ದಾಟಿ ಬಂದಿರುವರೋ ಆ ಎಲ್ಲಾ ಹಂತಗಳನ್ನು ಬುಡಕಟ್ಟುಗಳು ಸಹ ಹಾದು ಬಂದಿದ್ದಾರೆ. ಅಂದರೆ ಭಾರತದ ರಾಜಕೀಯ ಮತ್ತು ಆರ್ಥಿಕ ಚಲನೆಗಳು ಇಲ್ಲಿನ ಸಾಮಾಜಿಕ ಸಂಬಂಧಗಳನ್ನು ಸ್ವಚ್ಛವಾಗಿಯೇ ನಿಯಂತ್ರಿಸಿವೆ. ಹೀಗಾಗಿ ಭಾರತದ ಸಮಾಜದ ಪ್ರಧಾನ ಲಕ್ಷಣವೆಂದರೆ ಜಾತಿ ವ್ಯವಸ್ಥೆ. ಜಾತಿ ವ್ಯವಸ್ಥೆಯ ಮುಖ್ಯ ಉದ್ದೇಶ ಸಮಾಜದ ರಾಜಕೀಯ ಆರ್ಥಿಕ ಸ್ಥಿತಿಯನ್ನು ಸಾಮಾಜಿಕ ಶ್ರೇಣಿಕರಣದ ಮೂಲಕ ಸಮರ್ಥಿಸುವುದು. ಬಹುಸಂಖ್ಯಾತ ದುಡಿಯುವ ವರ್ಗದ ಜನರ ಶ್ರಮವನ್ನು ಬಂಡವಾಳವನ್ನಾಗಿಸಿ ಬದುಕುವ ಅಸಂಖ್ಯಾತ ಆಳುವ ವರ್ಗ ಯಾವುದೇ ಮಾಯಯ ಮೂಲಕ ಅಸಮಾನತೆಯನ್ನು ಚಿರಂತನಗೊಳಿಸಲು ಶ್ರೇಣಿಕರಣವನ್ನು ಸಮರ್ಥಿಸುವ ಪ್ರಯತ್ನಗಳು ಭಾರತದ ಸಮಾಜದ ಚರಿತ್ರೆಯಲ್ಲಿ ನಿರಂತರವಾಗಿ ನಡೆದಿವೆ.

ಜಾತಿ ವ್ಯವಸ್ಥೆ ದುಡಿಯುವವರ, ದುಡಿಸಿಕೊಳ್ಳುವವರ ಮಧ್ಯೆ ಒಂದು ಅಸಹಜ ಸಾಮಾಜಿಕ ಸಂಬಂಧವಾಗಿ ಏರ್ಪಟ್ಟಿತು. ಈ ಕಾರಣದಿಂದಾಗಿ ಭಾರತದ ಶ್ರೇಣಿಕರಣವು ಜಗತ್ತಿನ ಎಲ್ಲಾ ತಾರತಮ್ಯ ವ್ಯವಸ್ಥೆಗಳಿಗಿಂತ ಹೆಚ್ಚು ಸಂಕೀರ್ಣ ಮತ್ತು ಕ್ರೂರ ವ್ಯವಸ್ಥೆಯಾಗಿದೆ. ಪ್ರತಿಯೊಂದು ಜಾತಿ ಒಂದು ಸ್ವಯಂ ಪೂರ್ಣ ಉತ್ಪಾದನಾ ಘಟಕವಾಗಿ ತಮ್ಮ ಅಸ್ತಿತ್ವವನ್ನು ಸದಾ ಕಾಯುತ್ತಲೇ ಬಂದಿವೆ. ಯಾರು ಯಾವ ಯಾವ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು, ಯಾರು ಯಾವುದನ್ನು ಮಾಡಬಾರದು ಎಂಬ ನಿಯಮಗಳೇ ಭಾರತದ ಶ್ರೇಣಿಕರಣವನ್ನು ಜಾರಿಗೆ ತಂದವು. ಯಾವ ಗುಂಪಿನ ಜನ ಯಾವ ಬಗೆಯ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ನಿರ್ಧಾರವಾದುದು. ಆಯಾ ಸಮಾಜಿಕ ಗುಂಪುಗಳು ಅಂದಂದಿನ

ಚಾರಿತ್ರಿಕ ಘಟ್ಟದಲ್ಲಿ ಸಾಧಿಸಿದ ನಿರ್ಣಾಯಕ ಸೋಲು ಮತ್ತು ಗೆಲುವುಗಳನ್ನು ಅವಲಂಬಿಸಿತ್ತು. ಸೋತ ಸಮುದಾಯಗಳು ತಮಗೆ ದಕ್ಕಿದ ಇಲ್ಲವೇ ಏರಲ್ಪಟ್ಟ ಕೆಲಸಗಳನ್ನು ಅನಿವಾರ್ಯವಾಗಿ ನಿರ್ವಹಿಸಲೇ ಬೇಕಾಯಿತು. ಇಲ್ಲಿ ಕೆಲವು ಸಮುದಾಯಗಳ ಗೆಲುವು ಎಂದರೆ ಅಂದಂದಿನ ಒಟ್ಟು ಸಮಾಜದ ಹಣೆಬರಹವನ್ನು ರೂಪಿಸುವ ಆರ್ಥಿಕ ಮೂಲಗಳ ಮೇಲೆ ಸಾಧಿಸುವ ಹಿಡಿತ ಆಗಿದೆ. ಯಾವ ಉತ್ಪಾದನಾ ವಿಧಾನದಿಂದಾಗಿ ಸಮಾಜದಲ್ಲಿ ಅಧಿಕ ಉತ್ಪಾದನೆ ಆಗಿದೆ. ಆ ಉತ್ಪಾದನಾ ವಿಧಾನದ ಮೇಲೆ ನಿಶ್ಚಿತ ಒಡೆತನ ಸಾಧಿಸುವುದು ಗೆದ್ದ ಸಮುದಾಯಗಳ ಪರಿಪಾಠವಾಗಿದೆ. ಸಮಾಜದ ಮೇಲೆ ಒಡೆತನ ಸಾಧಿಸುವ ಸಮುದಾಯಗಳ ಬಹುಮುಖ್ಯ ಕೆಲಸ ದುಡಿಯುವ ಉತ್ಪಾದಕ ಸಮೂಹಗಳ ಕಾರ್ಯವೈಖರಿಯನ್ನು ಪರಂಪರೆಯ ಹೆಸರಲ್ಲಿ ಸಮರ್ಥಿಸುತ್ತಾ ಅದರ ಸತ್ಯಾಸತ್ಯತೆಗಳನ್ನು ಘೋಷಿಸುವುದು ಈ ಕಾರಣದಿಂದಾಗಿ ಪ್ರಪಂಚ ತಂತ್ರಜ್ಞಾನದ ಹೆಸರಿನಲ್ಲಿ ಎಷ್ಟೇ ಮುಂದುವರಿದಿದ್ದರು ಭಾರತ ಇನ್ನೂ ಸಾಂಪ್ರದಾಯಿಕ ಉತ್ಪಾದನಾ ವಿಧಾನವನ್ನು ಸಮರ್ಥಿಸುತ್ತಲೇ ಇದೆ. ಹೀಗಾಗಿ ಭಾರತದ ಉತ್ಪಾದನಾ ಕ್ಷೇತ್ರಗಳಲ್ಲಿ ಅಗಾಧ ಪ್ರಮಾಣದ ಕ್ರಾಂತಿಗಳು ಸಂಭವಿಸಲಿಲ್ಲ. ಆಗಾಗ ನಡೆದುಹೋದ ಬದಲಾವಣೆಗಳು ಭಾರತದ ಸಮಾಜದ ದುಡಿಯುವ ವರ್ಗಗಳ ಬದುಕಲ್ಲಿ ಯಾವ ಗಮನಾರ್ಹ ಹೊಸತನವನ್ನು ತರಲಿಲ್ಲ. ಕುಲಕಸುಬಿನ ಆಧಾರದ ಮೇಲೆ ಒಂದು ಜಾತಿಗೆ ಪ್ರಾಪ್ತವಾಗಿದ್ದ ಹೀನ ವೃತ್ತಿಗಳು ಆಧುನಿಕ ಜಗತ್ತಿನಲ್ಲಿ ಇಲ್ಲವಾಗಿ ಅಂತಹ ಜಾತಿಗಳು ಸಾಮಾಜಿಕ ಅವಮಾನಗಳನ್ನು ಮೀರಿ ನಿಲ್ಲಲು ಸಾಧ್ಯವಾಗಿದೆ.

ಈ ಪರಿಣಾಮವಾಗಿ ಸಾಗರವು ಒಂದು ಐತಿಹಾಸಿಕ ತಾಣವಾಗಿ ಶಿವಪ್ಪ ನಾಯಕನೆಂಬ ರಾಜನ ಆಳ್ವಿಕೆಗೆ ಒಳಪಟ್ಟು ಸಮರ್ಥವಾದ ಆಡಳಿತದ ದೃಷ್ಟಿಯಿಂದ ಇಲ್ಲಿ ಸಮಾಜ ರೂಪುಗೊಂಡ ಬಗೆಯನ್ನು ನೋಡಲಾಗುವುದು. ಇದಕ್ಕೆ ಸಾಕ್ಷಿಯಾಗಿ ಶಿವಪ್ಪ ನಾಯಕನ ಸಾಮ್ರಾಜ್ಯದಲ್ಲಿ ಎಡಮೂರಿ ಮತ್ತು ಬಲಮೂರಿ ಎಂಬ ವ್ಯಕ್ತಿಗಳು ಕೆಳಸ್ತರದ ವ್ಯಕ್ತಿಗಳು. ಈ ಅರಸರ ಕಾಲದಲ್ಲಿದ್ದು ಸಾಗರವು ಇತಿಹಾಸದ ಕಾಲಘಟ್ಟದಿಂದ ಇಲ್ಲಿಯವರೆಗೂ ಸಾಮಾಜಿಕ ಏಣೀ–ಶ್ರೇಣಿಯ ವ್ಯವಸ್ಥೆಯನ್ನು ತನ್ನಲ್ಲಿ ಇಟ್ಟುಕೊಂಡು ಸಾಗರವು ಕಾಗೋಡು ಚಳುವಳಿಯನ್ನು ಕಂಡಂತ ಸ್ಥಳವಾಗಿದೆ. ಸಾಗರ ತಾಲ್ಲೂಕಿನ ಅರಣ್ಯದೊಳಗಿನ ಕುಗ್ರಾಮವಾದ ಕಾಗೋಡಿನಲ್ಲಿ ಗೇಣಿರಹಿತರ ಸ್ವಾಭಿಮಾನದ ಕಿಡಿಯಾಗಿ ಕಾಣಿಸಿಕೊಂಡ ರೈತ ಚಳುವಳಿ ನಂತರ ಸಾಗರ ತಾಲ್ಲೂಕಿನಾದ್ಯಂತ ವ್ಯಾಪಿಸಿ ಚಿಂತನೆಗೆ ತಳಹದಿಯಾಯಿತು. ಈ ಐತಿಹಾಸಿಕ ಚಳುವಳಿ ನಡೆದು ಇದೀಗ ೫೬ ವರ್ಷಗಳು ಸಂದಿವೆ. ಸಾಗರದಲ್ಲಿ ಕಾಗೋಡು ಚಳುವಳಿಗಾಗಿ ಶ್ರಮಿಸಿದ

ಕಾಗೋಡು ಹೋರಾಟಗಾರರ ಇತಿಹಾಸ ಪ್ರಸಿದ್ಧ ವ್ಯಕ್ತಿಗಳ ಚಿತ್ರಣದಲ್ಲಿ ಹುಚ್ಚಪ್ಪ ಮಾಸ್ತರರ ಪಾತ್ರವು ಗಮನಹರಿಸಬೇಕಾದ ಸಂಗತಿ. ಈ ಭೂಮಿಯು ನಾಡಿನ ಇತಿಹಾಸದಲ್ಲಿ ಚರಿತ್ರಾರ್ಹವಾದ ಸ್ಥಳವಾಗಿದೆ. ಸಮಾಜವಾದಿ ಚಿಂತಕರಾದಂತ ಲೋಹಿಯಾ, ಶಾಂತವೇರಿ ಗೋಪಾಲಗೌಡರಂತ ಚಿಂತಕರು ಬಂದು ಉಳ್ಳವರ ವಿರುದ್ಧ ಹೋರಾಟ ಮಾಡಲಿಕ್ಕೆ ಪ್ರೇರೇಪಣೆಯನ್ನು ನೀಡಿದ ಕ್ರಾಂತೀಯ ಸ್ಥಳವಾಗಿದೆ. ಅಲ್ಲದೇ ಆ ಸ್ಥಳದಲ್ಲಿ ಮಂತ್ರಿಗಳು, ಜಾನಪದ ವಿದ್ವಾಂಸರು, ಸಾಹಿತಿಗಳು, ಸಮಾಜ ಸುಧಾರಕರು, ಮುಖ್ಯಮಂತ್ರಿಗಳು ಆಗಿ ಹೋಗಿರುವ ರಾಜಕೀಯದ ಶ್ರೀಮಂತ ಸ್ಥಳವೂ ಹೌದು.

ಸಾಗರ ತಾಲ್ಲೂಕಿನಲ್ಲಿ ಸಾಮಾಜಿಕವಾಗಿ ಮೇಲು-ಕೀಳು ಎಂಬ ಮನೋಭಾವನೆ ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಎಣೆದುಕೊಂಡು ಬಂದಿರುವುದಲ್ಲದೇ ಪ್ರಭುತ್ವ ಎನ್ನುವುದು ಶ್ರಮಿಕರ ಬದುಕನ್ನು ಪಲ್ಲಟಗೊಳಿಸುತ್ತಲೇ ತನ್ನ ಪಾರಂಪರಿಕ ವೃತ್ತಿಯಾಗಿ ರೂಢಿಸಿಕೊಂಡ ತಾಲ್ಲೂಕು ಹೌದು. ಅಲ್ಲದೇ ಅರಣ್ಯದಿಂದ ಸಮೃದ್ಧಿಯನ್ನು ಇಟ್ಟುಕೊಂಡು ಬೆಲೆಬಾಳುವ ಮರಗಳು, ವಾಣಿಜ್ಯ ಬೆಳೆಗಳು ಎಲ್ಲವು ಸಮಾಜದ ವ್ಯವಸ್ಥೆಯನ್ನು ಗಟ್ಟಿಗೊಳಿಸುವಲ್ಲಿ ಸಹಾಯಕವಾಗಿದೆ. ಸಾಗರದ ಸಾಮಾಜಿಕ ವ್ಯವಸ್ಥೆ ಒಳಗಡೆ ಸಾಗರ ಮತ್ತು ರಂಗವೇದಿಕೆಯ ಹೆಗ್ಗೂಡಿನಲ್ಲಿ ರೂಪಿತಗೊಂಡಿರುವುದು ಸಾಗರದ ಸಾಮಾಜಿಕ ವ್ಯವಸ್ಥೆ ಹಾಗೂ ಜಾನಪದ ಸಂಸ್ಕೃತಿಯ ಬೆಳವಣಿಗೆಗೆ ಪೂರಕವಾದ ಸಮಾನತೆಯ ವ್ಯವಸ್ಥೆ ಇಲ್ಲಿರುವುದು ಔಚಿತ್ಯಪೂರ್ಣವಾದುದು.

ಕೆಳದಿ ಅರಸರ ಕಾಲದಲ್ಲಿ ಸಾಗರವು ವ್ಯಾಪಾರ ಅಭಿವೃದ್ಧಿಗಳ ಮಾರುಕಟ್ಟೆ ಕೇಂದ್ರವಾಗಿತ್ತು. ಮೈಸೂರು ಒಡೆಯರ ಆಡಳಿತದಲ್ಲಿ ದಿನಾಂಕ ೫-೩-೧೮೭೬ ರಂದು ಸಾಗರದ ಪುರಸಭೆಯು "ಮುನಿಸಪಲ್ ಬೋಡ್" ಎಂಬ ನಾಮಾಂಕಿತದಿಂದ ಅಸ್ತಿತ್ವಕ್ಕೆ ಬಂದಿತು. ಆರಂಭದಲ್ಲಿ ಇಬ್ಬರು ಸರಕಾರಿ ಅಧಿಕಾರಿಗಳು ಹಾಗೂ ಸಭೆಯು ಆಕ್ಟ್ರಾಯಿ ಹಾಗೂ ಕಟ್ಟಡ ತೆರಿಗೆಯನ್ನು ಮಾತ್ರ ಆದಾಯವಾಗಿ ಹೊಂದಿತ್ತು. ದಿನಾಂಕ ೫-೩-೧೮೭೬ ರಂದು ಪ್ರಾರಂಭವಾದ ನಗರಸಭೆಯ ಮೊಟ್ಟ ಮೊದಲನೆ ನಡವಳಿಕೆಯ ಪ್ರತಿಯು ಪುರುಸಭೆಯಲ್ಲಿ ಈಗಲೂ ಇದೆ. ಮೈಸೂರು ಒಡೆಯರು ಸಾಗರಕ್ಕೆ ಭೇಟಿಯಿತ್ತಾಗ 'ಚಾಮರಾಜಪೇಟೆ' ಎಂಬ ಬಡಾವಣೆಯು ರೂಪುಗೊಂಡಿತು. ೧೯೭೬ ರಲ್ಲಿ ನಗರಸಭೆಯು ಶತಮಾನೋತ್ಸವವನ್ನು ಆಚರಿಸಿತು. ನಗರದ ಅಭಿವೃದ್ಧಿಗಾಗಿ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಕಾರ್ಯಪ್ರವೃತ್ತವಾಗಿದೆ. ವಿಶ್ವಬ್ಯಾಂಕಿನಿಂದ ಕೊಳೆ ನಿರ್ಮೂಲನಾ ಯೋಜನೆಯ

ಅಂಗವಾಗಿ ಸಾಮೂಹಿಕ ರೀತಿಯಲ್ಲಿ ಶೌಚಗೃಹಗಳ ನಿರ್ಮಾಣವೂ ನಿರ್ಮಿತಗೊಂಡಿದ್ದು ಸಾಗರ ಸ್ವಚ್ಛತೆಗೆ ಮೆರಗನ್ನು ತಂದಿದೆ. ಅಲ್ಲದೆ ಸಾಗರದ ನಿಸರ್ಗದ ವೈಭವಕ್ಕೆ ಪೂರಕವಾಗಿ ವರದಾ ನದಿಯ ನೀರಿನಿಂದ ಸುಮಾರು ೫ ಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿದ್ದು, ಒಬ್ಬರಿಗೆ ೧೮ ಗ್ಯಾಲನ್‌ನಂತೆ ನಲ್ಲಿಯ ಮೂಲಕ ನೀರನ್ನೂ ವಿತರಿಸಲಾಗುತ್ತಿದೆ. ಮುಂದುವರೆದು ಸಾಗರದ ಸಾಮಾಜಿಕ ಪರಿಸರವು ಸುವ್ಯವಸ್ಥಿತವಾದ ರೂಪದಲ್ಲಿ ರಚನೆಗೊಂಡಿದೆ ಎಂಬುದಕ್ಕೆ ಇಲ್ಲಿರುವ ಪುರಸಭೆಯು ಸರ್ಕಾರದ ಅಧಿಕಾರಿಗಳಿಗೆ, ಪರಿಶಿಷ್ಟ ಜನಾಂಗದವರಿಗೆ, ಇತರ ಮೇಲ್ವರ್ಗ ಮತ್ತು ನಿಮ್ನ ವರ್ಗಗಳೆಲ್ಲವುಗಳಿಗೂ ನೀರಿನ ಸೌಲಭ್ಯವನ್ನು ಸುವ್ಯವಸ್ಥಿತವಾಗಿ ಸರಬರಾಜು ಮಾಡುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ.

ಕರ್ನಾಟಕ ಗೃಹನಿರ್ಮಾಣ ಯೋಜನೆಯಡಿಯಲ್ಲಿ ಸಾಗರದ ಸಾಮಾಜಿಕ ವ್ಯವಸ್ಥೆಯು ನವನಿರ್ಮಾಣದ ಮನವರಿಕೆಯಿಂದ ಮಧ್ಯಮ ಮತ್ತು ಅಲ್ಪಾದಾಯದವರಿಗಾಗಿ ಕೆಲವು ಮನೆಗಳು ನಿರ್ಮಿಸಲ್ಪಟ್ಟಿವೆ.

ಸಾಗರ ತಾಲ್ಲೂಕಿನ ಸಂಪನ್ಮೂಲಗಳನ್ನು ಕ್ಷೇತ್ರಕಾರ್ಯದಲ್ಲಿ ಅವಲೋಕಿಸಿದಾಗ ಸಾಗರವು ನೈಸರ್ಗಿಕ ಸಂಪತ್ತಲ್ಲದೆ ಭೌದ್ಧಿಕ, ಹೋರಾಟ, ಜಾನಪದ, ವಿಮರ್ಶೆ ಈ ಎಲ್ಲಾ ಮಾನವ ಸಂಪತ್ತನ್ನು ಹೊಂದಿದ್ದರೂ ನೈಸರ್ಗಿಕ ಸಂಪತ್ತು ಹೆಚ್ಚಿನ ಶ್ರೀಮಂತಿಕೆಯಿಂದ ಕೂಡಿದ ಸಂಬಪದ್ಭರಿತ ತಾಲೂಕಾಗಿದೆ. ಆದ್ದರಿಂದ ಸಂಪನ್ಮೂಲತೆಯಲ್ಲಿ ಕೃಷಿಯ ದೃಷ್ಟಿಯಿಂದ ಯೋಗ್ಯತೆಯಿಂದ ಕೂಡಿದ ಭೂಮಿಯನ್ನು ಹೊಂದಿದೆ ಹಾಗೂ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಈ ಭೂಮಿಯಲ್ಲಿ ಭತ್ತ, ಕಬ್ಬು, ಅಡಕೆಗಳೆಲ್ಲವೂ ಉತ್ತಮವಾದ ಬೆಳೆಗಳಾಗಿವೆ. ಅಲ್ಲದೆ ಅರಣ್ಯ ಉತ್ಪನ್ನಗಳು, ವಿದ್ಯುಚ್ಛಕ್ತಿ ಸೌಲಭ್ಯಗಳು, ಶ್ರೀಗಂಧ, ಇತ್ಯಾದಿಗಳಿಂದ ಸಾಗರವು ಸಂಪನ್ಮೂಲತೆಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.

ಸಾಗರ ತಾಲ್ಲೂಕು ಪ್ರಧಾನವಾಗಿ ವ್ಯವಸಾಯವನ್ನೇ ಅವಲಂಭಿಸಿರುವ ಪ್ರದೇಶ. ಹಿಂದೆ ಈ ಪ್ರಾಂತವು ಕೆಳದಿ ಅರಸರಿಗೆ ಸೇರಿದ್ದು ಈ ನಾಯಕರು ಪರದೇಶಗಳಿಗೆ ಧಾನ್ಯಗಳನ್ನು ರಫ್ತು ಮಾಡುವುದರಿಂದ ತಮ್ಮ ದೇಶದಲ್ಲಿ ಬರಗಾಲ ಬರಬಹುದೆಂದು ಹೆದರಿ ದೃದೃಷ್ಟಿಯಿಂದಲೂ ಮುಂಜಾಗರೂಕತೆಯಿಂದಲೂ ಅವುಗಳನ್ನು ಕಣಜಗಳಲ್ಲಿ ಕೂಡಿಟ್ಟು ರಕ್ಷಿಸಿಡುತ್ತಿದ್ದರು. ಒಳ ದೇಶಕ್ಕೆ ಅಗತ್ಯವಾದಷ್ಟು ಇಟ್ಟುಕೊಂಡು ಉಳಿದ ಆಹಾರ ಧಾನ್ಯಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಿದ್ದರು. ಈ ಹಿನ್ನೆಲೆಯನ್ನು ಪ್ರಸ್ತುತ ಸಾಗರದ ಸಾಮಾಜಿಕ ಪರಿಸರಕ್ಕೆ ಅನ್ವಯಿಸಿಕೊಂಡು

ಅವಲೋಕಿಸಿದಾಗ ಸಾಗರವು ತಾನು ಉತ್ಪಾದಿಸಿದ ಉತ್ಪಾದನೆಗಳನ್ನು ಇತರ ತಾಲ್ಲೂಕು ಜಿಲ್ಲೆಗಳಿಗೂ ರಫ್ತು ಮಾಡುತ್ತಿದೆ.

ಕ್ರಿ.ಶ. ೧೬೪೨ ರಿಂದ ೧೬೬೦ ರಲ್ಲಿ ಆಳಿದ ಕೆಳದಿ ಶಿವಪ್ಪನಾಯಕನು ವ್ಯವಸಾಯ ಕ್ಷೇತ್ರದಲ್ಲಿ ನೂತನ ತಳಹದಿಯನ್ನು ಹಾಕಿದನು. ಈತನು ಜಾರಿಗೊಳಿಸಿದ 'ಸಿಸ್ತು' ಶಿವಪ್ಪನಾಯಕನ ಸಿಸ್ತು ಎಂಬುದಾಗಿ ಗಾದೆ ಮಾತಾಗಿದೆ. ಈ ಸಿಸ್ತು ವ್ಯವಸಾಯ ಕ್ಷೇತ್ರದಲ್ಲಿ ಬ್ರಿಟೀಷರಿಗೂ ಮಾರ್ಪಡಿಸಲಾಗದಷ್ಟು ಮುಂದಾಲೋಚನೆಯಿಂದ ಕೂಡಿತ್ತು.

ಈ ತಾಲ್ಲೂಕಿನಲ್ಲಿ ಭತ್ತ, ಕಬ್ಬು, ಅಡಕೆ ಹಾಗೂ ತೆಂಗಿನ ಬೆಳೆಗಳಿಗೆ ಅನುಸಾರವಾಗಿ ಮಣ್ಣಿನ ಸಾಂದ್ರತೆಯು ಒಳಗೊಂಡಿದೆ. ಬಹಳಷ್ಟು ಮಳೆಯ ಪ್ರಭಾವಗಳಿಂದ ಮಣ್ಣು ಜವಳು ಹಾಗೂ ಜವಳಿ ಬಣ್ಣದ ಲೋಹ ಮತ್ತು ಕಬ್ಬಿಣಾಂಶಗಳನ್ನು ವ್ಯಕ್ತಪಡಿಸುತ್ತದೆ. ವ್ಯವಸಾಯ ವಿಸ್ತರಣಾ ಯೋಜನೆಯನ್ವಯ ಕಸಬಾ, ಆನಂದಪುರ ಮತ್ತು ತಾಳಗುಪ್ಪ ಎಂಬುದಾಗಿ ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ.

ಸಾಗರ ತಾಲ್ಲೂಕಿನಲ್ಲಿ ೩೦,೦೨೪ ಹೆಕ್ಟೇರುಗಳಷ್ಟು ಸಾಗುವಳಿ ಲಭ್ಯವಿಲ್ಲದ ಜಮೀನಿದೆ. ಬೀಳು ಜಮೀನು ೧೦ ಆವಿರ ಹೆಕ್ಟೇರುಗಳಿಗೂ ಹೆಚ್ಚು. ನೀರಾವರಿಗೆ ಒಳಪಡುವ ಪ್ರದಶ ೮೮೩೬ ಹೆಕ್ಟೇರುಗಳು. ಕಾಲುವೆಗಳಿಂದ ೪೮ ಹೆಕ್ಟೇರುಗಳಷ್ಟು, ಕೆರೆಗಳಿಂದ ೬೭೯೫ ಹೆಕ್ಟೇರುಗಳಷ್ಟು, ಬಾವಿಗಳಿಂದ ೪೩ ಹೆಕ್ಟೇರುಗಳಷ್ಟು, ಇತರ ಮೂಲಗಳಿಂದ ೧೯೦೦ ಕ್ಕೂ ಹೆಚ್ಚು ಹೆಕ್ಟೇರುಗಳಷ್ಟು ಭೂಮಿ ನೀರಾವರಿ ಪ್ರದೇಶವಾಗಿದೆ.

೧೯೮೨-೮೩ ರ ಅಂತಿಮ ಮುನ್ಸೂಚನೆಯ ಪ್ರಕಾರ ಭತ್ತದ ಬೆಳೆಯ ವಿಸ್ತೀರ್ಣ ೧೫,೮೨೩ ಹೆಕ್ಟೇರುಗಳು, ಕಬ್ಬು ಬೆಳೆಯ ವಿಸ್ತೀರ್ಣ ೪೦೫ ಹೆಕ್ಟೇರುಗಳು, ಅಡಕೆಯು ೨೧೧೦ ಹೆಕ್ಟೇರುಗಳಲ್ಲಿ ಬೆಳೆಯುತ್ತದೆ, ಹಿಪ್ಪುನೇರಳೆಯನ್ನು ಅಲ್ಲಲ್ಲಿ ಬೆಳೆಯಲಾಗುತ್ತಿದೆ. ೧೦೧ ಹೆಕ್ಟೇರುಗಳಲ್ಲಿ ಮೆಣಸಿನಕಾಯಿಯನ್ನು, ೧೬೭ ಹೆಕ್ಟೇರುಗಳಲ್ಲಿ ತೆಂಗನ್ನೂ, ೬೩ ಹೆಕ್ಟೇರುಗಳಲ್ಲಿ ದ್ವಿದಳ ಧಾನ್ಯಗಳನ್ನೂ ಬೆಳೆಯಲಾಗುತ್ತಿದೆ.

ತೋಟಗಾರಿಕಾ ಇಲಾಖೆಯ ಆಶ್ರಯದಲ್ಲಿ ತೋಟಗಾರಿಕೆಯ ಕೇಂದ್ರವೊಂದು ೧೯೬೮-೬೯ ರಲ್ಲಿ ಸ್ಥಾಪಿಸಲ್ಪಟ್ಟು ಹಣ್ಣು, ಅಡಕೆ ಮುಂತಾದ ಬೆಳೆಯ ಅಭಿವೃದ್ಧಿಯನ್ನು ಸಾಧಿಸುತ್ತದೆ. ಈ ಇಲಾಖೆಯಿಂದ ೧೯೭೧-೭೨ ರಲ್ಲಿ ತರಬೇತಿ ಕೇಂದ್ರವೊಂದು ರೂಪುಗೊಂಡು ೭೨-೭೩ ರ ವರೆಗೆ ೬೨ ಜನರನ್ನು ತರಬೇತಿ ಹೊಂದಿರುತ್ತಾರೆ. ಎಸ್.ಎಸ್.ಎಲ್.ಸಿ. ತೇರ್ಗಡೆಯಾದವರು

ಇದಕ್ಕೆ ಅರ್ಹರಾಗಿದ್ದು ಅಭ್ಯರ್ಥಿಗಳಿಗೆ ೫೦ ರೂಪಾಯಿಯಂತೆ ಮಾಸಿಕ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಗೇರು ವ್ಯವಸಾಯ, ಜೇನು ಸಾಕಣೆ ಹಾಗೂ ತುಪ್ಪ ತಯಾರಿಕಾ ಘಟಕವೊಂದು ಸಾಗರದಲ್ಲಿ ಕಾರ್ಯವೆಸಗುತ್ತಿದೆ.

ಈ ತಾಲ್ಲೂಕಿನಲ್ಲಿ ಅಣೆಕಟ್ಟು ಹಾಗೂ ವ್ಯವಸಾಯಕ್ಕೆ ಸಂಬಂಧಪಟ್ಟ ನೀರಾವರಿ ಕಾಲುವೆಗಳಿರುವುದಿಲ್ಲ. ವರದಾನದಿಗೆ ಅಣೆಕಟ್ಟು ನಿರ್ಮಿಸಿ, ವ್ಯವಸಾಯವನ್ನು ಅಭಿವೃದ್ಧಿಪಡಿಸಲು ಯೋಜನೆಯೊಂದು ಸರಕಾರದ ಪರಿಶೀಲನೆಯಲ್ಲಿರುವುದಾಗಿ ತಿಳಿದುಬಂದಿದೆ. ಸ್ವಾಂತಂತ್ರ್ಯಪೂರ್ವಕ್ಕೆ ಮುಂಚೆ ಈ ತಾಲೂಕಿನ ಮತ್ತೂರಿನಲ್ಲಿ ವ್ಯವಸಾಯ ಕೇಂದ್ರವೊಂದು ಅಸ್ತಿತ್ವದಲ್ಲಿತ್ತು. ಅದು ಈಗ ಕಂಡುಬರುವುದಿಲ್ಲ. ಕೆಳದಿಯಲ್ಲಿ ಭತ್ತ ಬೀಜೋತ್ಪಾದನಾ ಕೇಂದ್ರವೊಂದು ಸರ್ಕಾರದಿಂದ ಮಂಜೂರಾಗಿದ್ದು, ಬಹುವರ್ಷಗಳಾದರೂ ಏಕೆ ನಿಂತಿದೆಯೋ ತಿಳಿಯದು. ಕರ್ನಾಟಕ ರಾಜ್ಯ ಉಗ್ರಾಣ ಸಂಸ್ಥೆಯ ಆಶ್ರಯದಲ್ಲಿ ಸಾಗರದಲ್ಲಿ ಉಗ್ರಾಣವೊಂದಿದೆ. ಈ ತಾಲೂಕಿನ ಪಶುಪಾಲನೆಯಲ್ಲಿ ಹಸು ಮತ್ತು ಎಮ್ಮೆಗಳು ಪ್ರಮುಖವಾದವುಗಳು. ಕ್ಷೀರೋದ್ಯಮ ಉದ್ಯಮೆಯಲ್ಲಿ ಈ ತಾಲ್ಲೂಕು ಅಷ್ಟು ಪ್ರಗತಿದಾಯಕವಾಗಿಲ್ಲದಿದ್ದರೂ ಇತ್ತೀಚೆಗೆ ಪಶು ಸಂಗೋಪನೆ ಸುಧಾರಿಸುತ್ತಿದೆ.

ಆರ್ಥಿಕ ಸಂಪನ್ಮೂಲತೆಯಲ್ಲಿ ಸಾಗರ ತಾಲ್ಲೂಕಿಗೆ ಅರಣ್ಯಗಳಿಂದ ಹೇರಳ ಆದಾಯಗಳಿಸಬಹುದಾಗಿದೆ. ಈ ಕೆಳಗಿನ ಅಂಕಿ ಅಂಶಗಳು ಇದನ್ನು ಪುಷ್ಟೀಕರಿಸಿ ಸಹಕಾರಿಯಾಗಿವೆ. ಸಾಗರ ವಿಭಾಗದ ಕ್ಷೇತ್ರ ವಿಸ್ತೀರ್ಣ ೧೬೦೦ ಚ.ಕಿ.ಮೀ.ಗಳು. ಸುರಕ್ಷಿತ ಅರಣ್ಯ ಪ್ರದೇಶ – (ಸಾಗರ ತಾಲ್ಲೂಕು) ೪೯೫೩.೨೧ ಹೆ.ಗಳು. ಶ್ರೀಗಂಧಕ್ಕೆ ೧೪೬೮೨ ಹೆ.ಗಳು ಮೀಸಲಾಗಿದೆ ಅಲ್ಲದೆ ಸುತ್ತಮುತ್ತ ತಾಲ್ಲೂಕುಗಳಿಂದಲೂ ಭಯವನ್ನು ಹುಟ್ಟಿಸುವಂತಹ ಕಾಡು ತೋಪುಗಳನ್ನು ಸಾಗರ ಪರಿಸರವು ತನ್ನ ಒಡಲಿನಲ್ಲಿಟ್ಟುಕೊಂಡಿರುವುದು ಗಮನಾರ್ಹವಾಗಿದೆ.

ಈ ತಾಲ್ಲೂಕಿನ ಕೋಗಾರ್ ಹಾಗೂ ಶರಾವತಿ ಪ್ರದೇಶದಲ್ಲಿರುವ ವನ್ಯಜೀವಿ ಸಂರಕ್ಷಣಾ ಅಂಗವಾಗಿ (ಬಂಡೀಪುರದಲ್ಲಿರುವಂತೆ) ವನ್ಯಪ್ರಾಣಿ ಸಂರಕ್ಷಣಾ ಘಟಕವು ಆರ್ಥಿಕ ಸಂಪನ್ಮೂಲತೆಯಲ್ಲಿ ಪ್ರಮುಖ ಸ್ಥಾನವನ್ನು ಗಳಿಸಬಹುದಾಗಿದೆ. ಇದನ್ನು ಪ್ರವಾಸೀ ಆಕರ್ಷಣೆಗೂ ಒಳಪಡಿಸುವಲ್ಲಿ ಮಲೆನಾಡಿನ ಅಭಿವೃದ್ಧಿಯಲ್ಲಿ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಈ ಕುರಿತು ಸರಕಾರಕ್ಕೆ ಯೋಜನೆಯೊಂದನ್ನು ಪರಿಶೀಲನೆಗೆ ಸಾದರಪಡಿಸಿ ಬಹುಕಾಲವಾಗಿದೆ. ಅಂತರರಾಷ್ಟ್ರೀಯ ಪ್ರವಾಸೀಕೇಂದ್ರವಾದ ಜೋಗ ಜಲಪಾತಕ್ಕೆ ವಿದೇಶೀ ವಿನಿಯಮ

ಸಂಪನ್ಮೂಲತೆಗೆ ಸಾಧಕವಾಗುತ್ತದೆ. ಒಂದು ಕಾಲದಲ್ಲಿ ಈಚಿನವರೆಗೂ ಇಲ್ಲಿದ್ದ ಹುಲಿ, ಆನೆ, ಕಾಡೆಮ್ಮೆ ಮುಂತಾದ ವನ್ಯ ಪ್ರಾಣಿಗಳು ಈಗ ಅಪರೂಪವಾಗುತ್ತಿವೆ.

ಈ ತಾಲ್ಲೂಕಿನ ಲಿಂಗನಮಕ್ಕಿ ಹಾಗೂ ತಲಕಳಲೆ ಮುಂತಾದ ಜಲಾಶಯಗಳು ವಿದ್ಯುದುತ್ಪಾದನೆಯಲ್ಲಿ ಆರ್ಥಿಕ ಸಂಪನ್ಮೂಲತೆಗೆ ಕಾರಣವಾಗಿವೆ ಹಾಗೂ ಮಾವಿನ ಹೊಳೆ ಜಲಾಶಯದಿಂದ ವ್ಯವಸಾಯೋತ್ಪಾದನೆ ಕೈಗೊಂಡಿರುವ ಯೋಜನೆಯು ಸಾಗರದ ಸಾಮಾಜಿಕ ಪರಿಸರಕ್ಕೆ ವಸ್ತುಸ್ಥಿತಿಯಾಗಿದೆ.

೧೯೬೯ ರಲ್ಲಿ ಆರಂಭವಾದ ಈ ಇಲಾಖೆಗೆ ಸಾಗರ, ಸೊರಬ, ಹೊಸನಗರ ಹಾಗೂ ಷಿಕಾರಿಪುರವೂ ಸೇರಿದ್ದವು. ಈಗ ಸಾಗರ ಒಂದೇ ಪ್ರತ್ಯೇಕ ವಿಭಾಗವಾಗಿದೆ. ತಾಲ್ಲೂಕಿನಲ್ಲಿ ಒಟ್ಟು ೭೦೫ ಕೆರೆಗಳಿವೆ. ೬೦೦ ಕ್ಕೂ ಹೆಚ್ಚು ಕರೆಗಳಲ್ಲಿ ಮೀನುಗಾರಿಕೆ ಉದ್ಯಮಗಳನ್ನು ಕೈಗೊಳ್ಳಲಾಗಿದೆ. ಶರಾವತಿ, ತಲಕಳಲೆ, ಲಿಂಗನಮಕ್ಕಿ ಹಾಗೂ ಶಿರೂರುಗಳನ್ನು ಪ್ರತ್ಯೇಕ ವಿಭಾಗವಾಗಿ ಪರಿಗಣಿಸಲ"ಆಗಿದೆ. ಚಿಕ್ಕ ಕೆರೆಗಳಲ್ಲಿರುವ ಉದ್ಯಮಗಳನ್ನು ಪಂಚಾಯತಿಗೆ ವಹಿಸಲಾಗಿದೆ. ಈ ಸಂಸ್ಥೆಯಲ್ಲಿ ತರಬೇತಿ ನೀಡಿ ಅಭ್ಯರ್ಥಿಗಳು ಸ್ವತಂತ್ರವಾಗಿ ತಮ್ಮ ಗ್ರಾಮಗಳಲ್ಲಿನ ಸಮೀಪದಲ್ಲಿರುವ ಕೆರೆಗಳಲ್ಲಿ ಮೀನು ಕೃಷಿಕೈಗೊಂಡು, ಇದನ್ನು ವ್ಯವಸಾಯದಂತೆ ಪರಿಗಣಿಸಿ ಸ್ವಂತ ಉದ್ಯೋಗವನ್ನು ಕಲ್ಪಿಸಿಕೊಳ್ಳುವುದು ಇದರ ಧ್ಯೇಯ.

ವ್ಯವಸಾಯ, ಅರಣ್ಯ ಹಾಗೂ ವಿದ್ಯುಚ್ಛಕ್ತಿಯ ಮುಖಾಂತರ ನೈಸರ್ಗಿಕ ಸಂಪತ್ತನ್ನು ಹೊಂದಿರುವ ಈ ತಾಲ್ಲೂಕು ಕೈಗಾರಿಕಾ ರಂಗದಲ್ಲಿ ದೇಶಕ್ಕೆ ವಿಫುಲ ಸೇವೆಯನ್ನು ಸಲ್ಲಿಸುತ್ತಿದೆ. ೧೯೧೮ ರಲ್ಲಿ ವರದಾ ಹಂಚಿನ ಕಾರ್ಖಾನೆಯೊಂದು ಸ್ಥಾಪಿತವಾಯಿತು. ಜೋಗದ ಮಹಾತ್ಮಾ ಗಾಂಧಿ ವಿದ್ಯುದ್ದೀಕರಣಕ್ಕೆ ಮತ್ತು ಈ ಕ್ಷೇತ್ರದ ಬೆಳವಣಿಗೆ ಇದು ತಳಹದಿಯಾಗಿದೆ. ಈ ತಾಲೂಕಿನ ತಾಳಕುಪ್ಪದಲ್ಲಿ ಇಂಡಿಯನ್ ಪ್ಲೇವುಡ್ ಕಾರ್ಖಾನೆ, ಮಳಂದೂರು ಮತ್ತು ಆನಂದಪುರ ರೈತಬಂಧು ಗ್ರಾಮೋದ್ಯೋಗ, ಅಲ್ಯುಮಿನಿಯಮ್, ಕಾಗದ ತಯಾರಿಕೆ, ಹಂಚಿನ ಕಾರ್ಖಾನೆ ಹಾಗೂ ವ್ಯವಸಾಯ ಸಾಮಗ್ರಿ ಉತ್ಪಾದನಾ ಕೈಗಾರಿಕಾ ಘಟಕಗಳಿವೆ. ಈ ತಾಲೂಕಿನಲ್ಲಿ ೨೫ ಕ್ಕಿಂತ ಹೆಚ್ಚು ಅಕ್ಕಿ ಗಿರಣಿಗಳಿವೆ. ಸಾಗರದಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ ಅಡಕೆ ಹಾಳೆಯಲ್ಲಿ ದೊನ್ನೆಗಳು, ಪೀಠೋಪಕರಣಗಳು, ಅಗರಬತ್ತಿ, ಕಾಗದದ ಚೀಲಗಳು ಹಾಗೂ ಪ್ಲಾಸ್ಟಿಕ್ ಗುಂಡಿಗಳನ್ನು ತಯಾರಿಸುವ ಕಾರ್ಖಾನೆಗಳಿವೆ. ರಾಜ್ಯದ ಕರಕುಶಲ ಅಭಿವೃದ್ಧಿ ನಿಯಮದ ಆಶ್ರಯದಲ್ಲಿ ಕೆಳದಿಯ ಮಾರ್ಗದಲ್ಲಿ ಶ್ರೀಗಂಧದ ಘಟಕವೊಂದು ಪ್ರಾರಂಭವಾಗಿದೆ. ಕೈಗಾರಿಕೆಗೆ ವಿದ್ಯುಚ್ಛಕ್ತಿಯೇ ಜೀವಾಳ. ಈ ತಾಲ್ಲೂಕಿನಲ್ಲಿರುವ ಜೋಗದ ಮಹಾತ್ಮಾ ಗಾಂಧಿ

ವಿದ್ಯುದ್ದಾಗಾರವು ಕೈಗಾರಿಕಾ ಕ್ಷೇತ್ರದಲ್ಲಿ ದೇಶಕ್ಕೆ ವಿಫುಲ ಕೊಡುಗೆಯನ್ನಿತ್ತಿದೆ. ಆನೆಬಯಲಿನ ವಿದ್ಯುಚ್ಛಕ್ತಿ ಕೇಂದ್ರವು ಆಗ್ನೇಯ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡದು.

ಕೆಳದಿ ಅರಸರಿಗೆ ಸೇರಿದ್ದ ಸಾಗರ ತಾಲ್ಲೂಕು ಪ್ರಾಚೀನ ಕಾಲದಿಂದಲೂ ಮಠ, ಅಗ್ರಹಾರ ಮತ್ತು ಮದರಸಾ ವಿದ್ಯಾಭ್ಯಾಸ ಸೌಕರ್ಯಗಳನ್ನು ಪಡೆದಿತ್ತು. ಕ್ರಿ.ಶ. ೧೬೨೩ ರಲ್ಲಿ ದೇವಾಲಯದ ಪೌಳಿಯೊಂದರಲ್ಲಿ ಇಟಲಿಯ ಪ್ರವಾಸಿ ಪಿತ್ರೋಡೆಲ್ಲವಲ್ಲೆಯು ಚಿಕ್ಕ ಮಕ್ಕಳಿಗೆ ಗಣಿತ ಪಾಠ ಮಾಡುತ್ತಿದ್ದನೆಂದು ತಿಳಿದುಬರುತ್ತದೆ. ೧೮೬೨ ರಲ್ಲಿ ಬಿ.ಎಲ್.ರೈಸ್‌ರವರ ಪ್ರೋತ್ಸಾಹದಿಂದ ಹೋಬಳಿ ಶಾಲಾ ಪದ್ಧತಿಯು ಜಾರಿಗೆ ಬಂದಿತು. ಇಲ್ಲಿ ಕನ್ನಡ ಭಾಷೆಯಲ್ಲಿಯೇ ವಿದ್ಯಾಭ್ಯಾಸವು ನಡೆಯುತ್ತಿತ್ತು. ೧೯೨೮ ನೇ ಜುಲೈಯಲ್ಲಿ ಸಾಗರ ನಗರಸಭೆಯು ಮೊಟ್ಟ ಮೊದಲು ಸಾಗರದಲ್ಲಿ ಪ್ರೌಢಶಾಲೆಯನ್ನು ಆರಂಭಿಸಿತು. ಹಾಗೂ ಈ ತಾಲ್ಲೂಕಿನಲ್ಲಿ ಸಹಾಯಕ ವಿದ್ಯಾಧಿಕಾರಿಗಳ ಕಛೇರಿಯು ಪ್ರಾರಂಭವಾಯಿತು. ಲಾಲ್‌ಬಹದ್ದೂರ್ ಕಲಾ ಹಾಗೂ ಸೋಬಣ್ಣಶೆಟ್ಟಿ ವಾಣಿಜ್ಯ ಕಾಲೇಜು ೦೧-೦೭-೧೯೬೪ ರಲ್ಲಿ ಸಾಗರ ಪ್ರಾಂತ್ಯ ವಿದ್ಯಾ ವರ್ಧಕ ಸಂಘದಿಂದ ಆರಂಭವಾಯಿತು.

ಕ್ರಿ.ಶ. ೧೬೩೪ ರಲ್ಲಿ ಕೆಳದಿ ನಾಯಕರು ವಿದೇಶಿಯರೊಂದಿಗೆ ಗೋವಾ ಮೂಲಕ ಅಕ್ಕಿ ಹಾಗೂ ಕರಿಮೆಣಸಿನ ವ್ಯಾಪಾರ ಮಾಡುತ್ತಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಮಾರವಾಡಿಗಳು ಹಾಗೂ ಇತರರು ವ್ಯಾಪಾರಸ್ಥರಿಗೆ ಸಾಲವನ್ನು ವಿತರಿಸುತ್ತಿದ್ದರು. ಕಾಲಕ್ರಮೇಣ ಸೊಸೈಟಿಗಳು ಹಾಗೂ ಬ್ಯಾಂಕ್‌ಗಳು ಈ ಕಾರ್ಯವನ್ನು ನಿರ್ವಹಿಸತೊಡಗಿದವು. ೧೯೧೫ ರಲ್ಲಿ ಸಾಗರದಲ್ಲಿ ಶ್ರೀ ಗಣಪತಿ ಕೊಅಪರೇಟಿವ್ ಸೊಸೈಟಿ ಪ್ರಾರಂಭವಾಯಿತು.

ಕೃಷಿ ಉತ್ಪನ್ನ ಮಾರಾಟಗಳನ್ನು ನಿಯಂತ್ರಿಸಲು ವ್ಯವಸಾಯೋತ್ಪನ್ನ ಮಾರುಕಟ್ಟೆ ಆರಂಭವಾಯಿತು. ಆಧುನಿಕ ಉಗ್ರಾಣ ಇತ್ಯಾದಿ ಕಟ್ಟಡಗಳನ್ನು ಹೊಂದಿ ಈ ವ್ಯವಸಾಯೋತ್ಪನ್ನ ಮಾರುಕಟ್ಟೆಯ ಅನೇಕ ಸೌಲಭ್ಯಗಳು ರೈತರಿಗೆ ದಾರಿದೀಪವಾಗಿವೆ. ಇಲ್ಲಿನ ಅಡಿಕೆ ಪರಿಷ್ಕರಣಾ ಸೊಸೈಟಿಯು ಅಡಿಕೆ ಬೆಳೆಗಾರರ ಕ್ಷೇಮಾಭಿವೃದ್ಧಿಗಾಗಿ ಪ್ರಯತ್ನಸುತ್ತಿದೆ.

ವೆಂಕಟಪ್ಪ ನಾಯಕನ ಕಾಲದಲ್ಲಿ ನಿರ್ಮಿಸಲ್ಪಟ್ಟ ರಾಜಮಾರ್ಗಗಳು ತುಂಬಾ ಅಗಲವಾಗಿದ್ದು ಸುರಕ್ಷಿತವಾಗಿವೆ. ಇಕ್ಕೇರಿ ಮತ್ತು ಸಾಗರಗಳನ್ನು ಜೋಡಿಸುವ ಸಮನಾದ ಮತ್ತು ನೇರವಾದ ರಾಜಮಾರ್ಗವು ಬಹುಸುಂದರವಾಗಿದ್ದು ಇಕ್ಕೆಲಗಳಲ್ಲಿ ಗಿಡಮರಗಳಿಂದ ಕೂಡಿದೆ. ಸಾಗರವು ಸಾರಿಗೆ ವ್ಯವಸ್ಥೆಯಲ್ಲಿ ಪ್ರಮುಖ ಕೇಂದ್ರ ಸ್ಥಳವಾಗಿದ್ದು, ಬೆಂಗಳೂರಿನಿಂದ ತಾಳಗುಪ್ಪಕ್ಕೆ

ಹೋಗುವ ಮಾರ್ಗದಲ್ಲಿ ಸುಮಾರು ೪೪–೨೦ ಕಿ.ಮೀ. ರೈಲು ಮಾರ್ಗವು ಈ ತಾಲೂಕಿನ ವ್ಯಾಪ್ತಿಯಲ್ಲಿ ಬರುತ್ತದೆ. ಈ ತಾಲೂಕಿನ ಎಲ್ಲ ಹಳ್ಳಿಗಳು ದೂರವಾಣಿ ಸಂಪರ್ಕವನ್ನು ಹಾಗೂ ಅಂಚೆ ಕಛೇರಿಯ ಸೌಲಭ್ಯವನ್ನು ಹೊಂದಿವೆ.

ಈ ತಾಲ್ಲೂಕಿನಲ್ಲಿ ನೊಂದಣಿಯಾದ ಹಾಗೂ ನೊಂದಣಿಯಾಗಿಲ್ಲದ ಅನೇಕ ಸಾಮಾಜಿಕ ಸೇವಾ ಸಂಘ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಪ್ರಮುಖವಾದುವು ಸಾಗರ ಪ್ರಾಂತ್ಯ ವಿದ್ಯಾವರ್ಧಕ ಸಂಘ, ಶಿವಪ್ಪ ನಾಯಕ ಮಿತ್ರವೃಂದ, ಮಹಿಳಾ ಸಮಾಜ, ಸೇವಾ ಸಾಗರ ಟ್ರಸ್ಟ್, ರೋಟರಿ ಸಂಸ್ಥೆ, ಲಯನ್ಸ್ ಕ್ಲಬ್, ಯೋಗಾಸನ ಕೇಂದ್ರ, ಹೊಲಿಗೆ ತರಬೇತಿ ಕೇಂದ್ರ, ಸಂಗೀತ ನಾಟ್ಯ ಹಾಗೂ ಕಸೂತಿ ತರಗತಿಗಳನ್ನು ನಡೆಸುತ್ತಿರುವ ಸಂಘ ಸಂಸ್ಥೆಗಳು ಪ್ರಮುಖವಾದವುಗಳಾಗಿವೆ.

ಈ ಎಲ್ಲಾ ಅಂಶಗಳಿಂದ ಸಾಗರದ ಭೌಗೋಳಿಕತೆಗೆ ಅನುಗುಣವಾಗಿ ಸಾಮಾಜಿಕ ಪರಿಸರವೂ ಪೂರಕವಾಗಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದ ವಸ್ತುನಿಷ್ಟವಾದ ಮಾಹಿತಿಯಾಗಿದೆ.

ಅಡಿಟಿಪ್ಪಣಿ

೫. ಕ್ಷೇತ್ರಕಾರ್ಯದಲ್ಲಿ ಲಭ್ಯವಾದ ಮಾಹಿತಿ.

೬. ಸಾಗರ ತಾಲ್ಲೂಕು ದರ್ಶನ.

೭. ದೊಂಬರು ಒಂದು ಚಾರಿತ್ರಿಕ ಅಧ್ಯಯನ, ಎ.ಎಸ್.ಪ್ರಭಾಕರ.

ಅಧ್ಯಾಯ ೩

ಹುಚ್ಚಪ್ಪ ಮಾಸ್ತರರ ಬದುಕು ಮತ್ತು ವ್ಯಕ್ತಿತ್ವ

ಸಾಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆಯ ಇತರ ತಾಲ್ಲೂಕುಗಳಿಗಿಂತ ವಿಶಿಷ್ಟವಾದ ತಾಲೂಕಾಗಿದ್ದು, ಇಲ್ಲಿ ದೀವರು ಮತ್ತು ಇತರ ಸಮುದಾಯಗಳು ಕಾಡಿನ ಪರಿಸರದಲ್ಲಿ ಜೀವಿಸುವವರಾಗಿದ್ದು ದೀವರು ವಿಶಿಷ್ಟ ಕಲೆಯನ್ನು ಮೈಗೂಡಿಸಿಕೊಂಡು ಸಾಗರ ತಾಲೂಕಿನಲ್ಲಿಯೇ ಹೆಚ್ಚಿನ ಜನಸಂಖ್ಯೆ ಉಳ್ಳ ಸಮುದಾಯವಾಗಿದೆ. ಈ ಕಾರಣದಿಂದ ಜಾನಪದ, ಹಸೆಚಿತ್ತಾರ ಈ ರೀತಿಯ ಕಲೆಗಳಲ್ಲಿ ತಮ್ಮ ಮಹತ್ವದ ಪಾತ್ರ ಇಟ್ಟುಕೊಂಡಿರುವುದು ಅಲ್ಲದೆ ಜಾನಪದ ರಂಗದ ಕರ್ಮಭೂಮಿಯಾಗಿ ಕಲೆಯನ್ನು ಉಳಿಸಿ ಬೆಳೆಸಿದ ಕೀರ್ತಿ ಸಾಗರ ತಾಲೂಕಿಗೆ ಸಲ್ಲುತ್ತದೆ.

ಈ ತಾಲ್ಲೂಕು ಸಮುದಾಯಗಳ ಹಾಗೂ ಕಲೆಗಳ ತವರೂರಾಗಿದೆ. ಈ ಹಿನ್ನೆಲೆಯಿಂದ ಇಲ್ಲಿ ವೈಶಿಷ್ಟ್ಯಪೂರ್ಣವಾದ ಸಾಂಸ್ಕೃತಿಕ ಅನನ್ಯತೆಯನ್ನು ಇಟ್ಟಕೊಂಡು ಬಂದಿರುವ ಸಮುದಾಯಗಳಲ್ಲಿ ದೀವರ ಸಮುದಾಯವೂ ಒಂದಾಗಿದೆ. ದೀವರಲ್ಲಿ ಹಳೆಪೈಕ ದೀವರು, ನಾಮಧಾರಿ ವಿಷ್ಣುಭಕ್ತರು ಮುಂತಾದ ಹೆಸರುಗಳಿಂದ ಕರೆಸಿಕೊಂಡಿದ್ದಾರೆ. ಅಲ್ಲದೆ ಮಲೆನಾಡಿನ ಬುಡಕಟ್ಟುಗಳಲ್ಲಿಯೇ ವಿಶಿಷ್ಟವಾದ ಹಬ್ಬಗಳ ಆಚರಣೆ ಅವರದ್ದಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಭೂಮಿ ಹುಣ್ಣಿಮೆ, ಗೌರಿ ಹುಣ್ಣಿಮೆ, ದೀಪಾವಳಿ ಮತ್ತು ಮಳೆ ಹಬ್ಬ ಮುಂತಾದವುಗಳಾಗಿದ್ದು ನಾಡಿನ ಜನರು ಆಚರಿಸುತ್ತಿರುವ ಇತರ ಹಬ್ಬಗಳನ್ನು ಇವರು ಕೂಡಾ ಆಚರಿಸುವುದನ್ನು ಕಾಣಬಹುದು.

ದೀಪಾವಳಿ ಹಬ್ಬದ ಆಚರಣೆ:

ದೀವರಲ್ಲಿ ದೀಪಾವಳಿಯು ದೊಡ್ಡ ಹಬ್ಬವಾಗಿದ್ದು, ಇದನ್ನು ವಿಶೇಷವಾಗಿ ಐದು ದಿನಗಳ ಕಾಲ ಆಚರಿಸುವ ಪದ್ಧತಿ ಇವರಲ್ಲಿದೆ. ಈ ಹಬ್ಬದಲ್ಲಿ ಹೆಣ್ಣುಮಕ್ಕಳು ವಿಶೇಷವಾಗಿ ಹಬ್ಬದ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ. ಅಲ್ಲದೆ ಬಲೀಂದ್ರ ಪೂಜೆಯೂ ಈ ಹಬ್ಬದ ವಿಶೇಷವಾಗಿದೆ.

ಗೌರಿಹಬ್ಬ:

ಈ ಹಬ್ಬ ದೀವರ ಹೆಣ್ಣುಮಕ್ಕಳಿಗೆ ಹೆಚ್ಚು ಸಂಭ್ರಮವನ್ನು ತರುವ ಹಬ್ಬವಾಗಿದೆ. ಈ ಗೌರಿ ಹಬ್ಬದಲ್ಲಿ ವಿಶೇಷವಾಗಿ ಮಾತೃ ಪ್ರಾಧಾನ್ಯತೆಯನ್ನು ಎತ್ತಿ ಹಿಡಿಯುವ ಹಾಗೂ ಹೆಣ್ಣಿನ ಸ್ಥಾನ-

ಮಾನದ ಅಸ್ತಿತ್ವವನ್ನು ಕುರಿತು ಜಾಗೃತಿಗೊಳಿಸುವ ಹಾಗೆಯೇ ಮದುವೆಯಾಗಿರುವ ಹೆಣ್ಣುಮಕ್ಕಳನ್ನು ತವರಿಗೆ ಕರೆತರುವ ವಿಶೇಷವಾದ ಹಬ್ಬವಾಗಿದೆ.

ದೀವರು ಮೂಲತಃ ಮಾತೃಪ್ರಧಾನವಾದ ಕುಟುಂಬವನ್ನು ಒಪ್ಪಿಕೊಂಡಿದ್ದು ಇವರು ಹೆಚ್ಚಾಗಿ ಸಾಮೂಹಿಕವಾಗಿ ಅವಿಭಕ್ತ ಕುಟುಂಬ ಪದ್ಧತಿಯನ್ನು ರೂಪಿಸಿಕೊಂಡು ಅನನ್ಯವಾದ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯ ಬದುಕನ್ನು ಪ್ರಾಮಾಣಿಕತೆಯಿಂದ ಕಟ್ಟಿಕೊಂಡಿರುವ ಸಮುದಾಯವಾಗಿದೆ. ಇಂತಹ ಸಮುದಾಯದಲ್ಲಿ ಶಿಕ್ಷಕರು, ಜಾನಪದ ವಿದ್ವಾಂಸರು, ಸಾಹಿತಿಗಳು, ಸೃಜನಶೀಲ ಬರಹಗಾರರು, ಸಮಾಜವಾದಿ ಚಿಂತನೆಯನ್ನು ಮೈಗೂಡಿಸಿಕೊಂಡಿರುವ ರಾಜಕೀಯ ಮುತ್ಸದ್ದಿಗಳು, ರಂಗ ಕಲಾವಿದರು, ಹೋರಾಟಗಾರರು, ನಾಟಿ ವೈದ್ಯರು ಮುಂತಾದ ರಂಗಗಳಲ್ಲಿ ಬಹುಮುಖ ವ್ಯಕ್ತಿತ್ವವನ್ನು ಬಾಲ್ಯದಿಂದಲೂ ರೂಪಿಸಿಕೊಂಡು ಬಂದಿರುವ ಸಮುದಾಯದ ಮನಸ್ಸುಗಳು ದೀವರ ಪ್ರತಿಬಿಂಬವಾಗಿ ನಿಲ್ಲುತ್ತವೆ.

ದೀವರ ಸಮುದಾಯದ ಪ್ರತಿಬಿಂಬವಾಗಿ ಪ್ರಮುಖ ವಿಚಾರವಂತರು ಹುಟ್ಟಿನಿಂದಲೇ ಸೃಜನಶೀಲ ಬದುಕನ್ನು ಮೈಗೂಡಿಸಿಕೊಡ ಬಹುಮುಖ ವ್ಯಕ್ತಿತ್ವದಲ್ಲಿ ಸ್ಥಿರತೆಯನ್ನು ಇಟ್ಟುಕೊಂಡು ಸಮಾಜಪರವಾದ ಕಾರ್ಯಚುಟುವಟಿಕೆಗಳಲ್ಲಿ ಇಲ್ಲಿಯವರೆಗೂ ವಿವಿಧ ವೇದಿಕೆಗಳ ಮುಖಾಂತರ ಬುಡಕಟ್ಟುಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸುಧಾರಣೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಯ ಮೂಲಕ ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ವಿದ್ವನ್ಮಣಿಗಳಲ್ಲಿ ಎನ್.ಹುಚ್ಚಪ್ಪ ಮಾಸ್ತರರು ಅತ್ಯಂತ ಪ್ರಮುಖರಾಗಿದ್ದಾರೆ. ಇವರು ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಕುಗ್ವೆಯಲ್ಲಿ ದೀವರ ಜನಾಂಗದ ನೆಲ್ಲೂರು ಹುಚ್ಚಪ್ಪ ಮತ್ತು ಪುಟ್ಟಮ್ಮ ದಂಪತಿಗಳಿಗೆ ಹಿರಿಯ ಮಗನಾಗಿ ೧೮-೦೫-೧೯೩೮ ರಲ್ಲಿ ಜನಿಸಿ ಶಿವಾನಂದ ಮತ್ತು ಹನುಮಂತಪ ಎಂಬ ಕಿರಿಯ ಸೋದರರ ಜೊತೆಯಲ್ಲಿ ಬಾಲ್ಯ ಜೀವನವನ್ನು ಆಟ-ಪಾಟದ ಮೂಲಕ ಪ್ರಾರಂಭಿಸಿದರು. ಮಾಸ್ತರರ ಪ್ರಾಥಮಿಕ ಶಿಕ್ಷಣವು ಕುಗ್ವೆಯಲ್ಲಿ ಪ್ರಾರಂಭವಾಗಿ ತನ್ನ ತಂದೆಯ ಕೃಷಿ ಬದುಕಿನ ಜೊತೆಯಲ್ಲಿಯೇ ಶಿಕ್ಷಣದ ಬದುಕು ದಾಪುಗಾಲಿನ ರೂಪದಲ್ಲಿ ಅಭಿವೃದ್ಧಿಯತ್ತ ಮುಖಮಾಡಿರುವುದು ವಿಶಿಷ್ಟವಾಗಿದೆ. ಮಾಸ್ತರರು ತನ್ನ ತಂದೆಗೆ ಹಿರಿಯ ಮಗನಾಗಿದ್ದರಿಂದ ತಂದೆಯ ಜೀವನದ ವಿವಿಧ ಮಜಲುಗಳಲ್ಲಿ ಸಹಾಯಕನಾಗಿರುವುದಲ್ಲದೇ ಶಿಕ್ಷಣವನ್ನೂ ಮುಂದುವರೆಸಿದುದು ಒಂದು ವಿಶಿಷ್ಟವೇ ಆಗಿದೆ. ಏಕೆಂದರೆ ಮಾಸ್ತರರ ಹುಟ್ಟೂರು ಕುಗ್ವೆ ಆಗಿರುವುದರಿಂದ ಮಲೆನಾಡಿನ ಸಹ್ಯಾದ್ರಿಯ ಬೆಟ್ಟಗಳನ್ನು ಇಳಿದು ತಾಳಗುಪ್ಪ ಮತ್ತು ಸಾಗರದ ವರೆಗೂ ಪಾದಯಾತ್ರೆಯ ಮೂಲಕವೇ ಶಿಕ್ಷಣವನ್ನು ಕಲಿಯಲು ಹೋಗಬೇಕಾದ

ಪರಿಸ್ಥಿತಿ ಅಂದು ಇದ್ದುದು ಗಮನಾರ್ಹ. ಯಾವುದೇ ಸಾರಿಗೆ ಸಂಪರ್ಕ ಇಲ್ಲದೇ ಮಲೆನಾಡಿನ ಪ್ರದೇಶವಾಗಿರುವುದರಿಂದ ವಿದ್ಯಾಭ್ಯಾಸವನ್ನು ಮಾಡುವುದು ಎಂದರೆ ಶೋಚನೀಯವಾದ ಸನ್ನಿವೇಶವೇ ಅಂದು ಸೃಷ್ಟಿಯಾಗಿತ್ತು. ಇಂತಹ ಸಂದರ್ಭದಲ್ಲಿ ಒಂದು ಕಡೆ ಕೃಷಿಯ ಬದುಕು ಹಾಗೂ ತಂದೆಯ ಮರಗೆಲಸದ ಬದುಕು ಮಾಸ್ತರರ ವಿದ್ಯಾಭ್ಯಾಸಕ್ಕೆ ಸ್ಫೂರ್ತಿಯಾಗಿ ನೆಲೆನಿಂತು ಜೀವನ ರೂಪುಗೊಂಡ ಬಗೆಯನ್ನು ಅವಲೋಕಿಸಲಾಗಿದೆ.

ಮಾಸ್ತರರು ಬಾಲ್ಯದಲ್ಲಿ ತನ್ನ ತಾಯಿಯಾದ ಪುಟ್ಟಮ್ಮ ಅವರ ಸಣ್ಣಪುಟ್ಟ ಕೆಲಸಗಳಲ್ಲಿ ಭಾಗಿಯಾಗುತ್ತಿದ್ದರು ಅಲ್ಲದೆ ಶಾಲೆಗೆ ಹೋಗುವ ಸಮಯದೊಳಗೆ ಎತ್ತುಗಳು ಹಾಗೂ ದನಕರುಗಳಿಗೆ ಹಸಿ ಮೇವನ್ನು ತರುವ ಜವಾಬ್ದಾರಿ ಹಾಗೂ ಅವುಗಳ ದಿನದ ಕರ್ಮಗಳ ಕಾರ್ಯವನ್ನು ಮಾಡುವುದು ಮಾಸ್ತರರ ದೈನಂದಿನ ಚಟುವಟಿಕೆಗಳಲ್ಲಿ ಒಂದಾಗಿತ್ತು. ಶಾಲೆಯಿಂದ ಬಂದ ನಂತರ ಬಿಡುವಿನ ವೇಳೆಯಲ್ಲಿ ಹಚ್ಚ ಹಸುರಿನ ಮಲೆನಾಡಿಗೆ ಒಂದಾಣಿಕೆಯಾಗಿಯೇ ಇವರ ಬಾಲ್ಯ ಜೀವನ ಶುದ್ಧ ಸಾಂಪ್ರದಾಯಿಕ ಹಿನ್ನೆಲೆಯಲ್ಲಿಯೇ ರೂಪುಗೊಂಡಿದೆ. ಇದಕ್ಕೆ ಸಾಕ್ಷಿಯಾಗಿ ತಾಯಿ ಪುಟ್ಟಮ್ಮ ಏಳುವ ಸೋಬಾನ ಪದಗಳು, ಕೋಲಾಟ ಪದಗಳು, ಲಾವಣಿಗಳೆಲ್ಲವುಗಳಲ್ಲಿ ಮಾಸ್ತರರು ದನಿಗೂಡಿಸಿ ಆಡುತ್ತಿದುದು ಅವರು ಜಾನಪದ ವಿದ್ವಾಂಸರಾಗಿ ಬೆಳೆಯಲಿಕ್ಕೆ ಸ್ಫೂರ್ತಿಯಾಗಿದೆ. ಸಾಗರದ ಪರಿಸರವು ಇವರ ಜೀವನ ರೂಪುಗೊಳ್ಳಲು ಪ್ರೇರಕ ಶಕ್ತಿಯಾಗಿದೆ. ಇವರ ಬಾಲ್ಯದ ಕೌಟುಂಬಿಕ ಜೀವನವು ಆರ್ಥಿಕವಾಗಿ ಕೆಳಮಟ್ಟದಲ್ಲಿದ್ದರೂ ವಿದ್ಯಾಭ್ಯಾಸದ ಜೀವನ ಮಾತ್ರ ಕಾಡು ಸಮೃದ್ಧಿ ಹೊಂದಿದಂತೆಯೇ ವಿದ್ಯಾಭ್ಯಾಸವೂ ಸಮೃದ್ಧಿ ಹೊಂದಿದುದು ವಿಶಿಷ್ಟವೇ ಸರಿ. ಇದಕ್ಕೆ ಪೂರಕವಾಗಿ ಮಾಸ್ತರರು ಮಾಧ್ಯಮಿಕ ಶಿಕ್ಷಣವನ್ನು ಕಲಿಯುವ ಹಂತದಲ್ಲಿಯೇ ತಾಯಿ ಹೇಳಿಕೊಟ್ಟ ನೀತಿ ನಿಯಮಗಳನ್ನು ಅನುಸರಿಸಿ ಸಂಘಟನೆ, ಸಹಕಾರದ ಮನೋಭಾವನೆ ಹಾಗೂ ಸಹಬಾಳ್ವೆಯ ಜೀವನದಲ್ಲಿ ತೊಡಗಿಸಿಕೊಂಡು ಗೆಳೆಯರ ಬಳಗವನ್ನು ಕಟ್ಟಿ ಕೋಲಾಟವನ್ನು ಆಡುತ್ತಿದ್ದುದ್ದು ಮುಖ್ಯವಾಗಿದೆ. ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದ ನಂತರ ತಮ್ಮ ಪ್ರೌಢ ಶಿಕ್ಷಣವನ್ನು ಸಾಗರದಲ್ಲಿಯೇ ಮುಂದುವರೆಸಿದರು. ಈ ಸಮಯದಲ್ಲಿ ತನ್ನ ಆತ್ಮೀಯ ಸ್ನೇಹಿತನಾದ ನರಹರಿಯ ಜೊತೆಗೂಡಿ ಅವರ ಮನೆಯಲ್ಲಿಯೇ ಇದ್ದು ವಿದ್ಯಾಭ್ಯಾಸವನ್ನು ಮುಂದುವರೆಸಿದರು. ನರಹರಿಯ ಸ್ನೇಹಿತರಾಗಿ ಅವರಿಗೆ ತಾನು ಹೊರೆಯಾಗಬಾರದೆಂದು ತಂದೆಯು ಬೆಳೆಯುತ್ತಿದ್ದ ಅಲ್ಪಸ್ವಲ್ಪ ಅಕ್ಕಿಯನ್ನು ನರಹರಿಯ ತಾಯಿಗೆ ತಂದುಕೊಡುವುದರ ಮೂಲಕ ತಾಯಿಯ ಪ್ರೀತಿಯನ್ನು ಗಳಿಸಿದರು.

ಪ್ರೌಢಶಿಕ್ಷಣವನ್ನು ಕಲಿಯುವ ಅವಧಿಯಲ್ಲಿ ನರಹರಿಯ ಪಕ್ಕದ ಮನೆಯಲ್ಲಿ ನಾ॥ ಡಿಸೋಜಾ ರವರು ಇದ್ದುದರಿಂದ ಅವರ ಪರಿಚಯವು ಮಾಸ್ತರರಿಗೆ ಲಭಿಸಿದ್ದು ಒಂದು ವಿಶಿಷ್ಟ. 'ನಾ॥ ಡಿಸೋಜಾ' ರವರು ಪ್ರಖ್ಯಾತ ಸಾಹಿತಿಯಾಗಿದ್ದು ಮಾಸ್ತರರಿಗಿಂತ ಒಂದು ವರ್ಷ ದೊಡ್ಡವರಾಗಿದ್ದುದಲ್ಲದೇ ಓದು ಬರಹದಲ್ಲಿ ಸಮಯಪಾಲನೆಯ ಜ್ಞಾನ ಅವರಿಗೆ ಇದ್ದುದು ಮಾಸ್ತರರಿಗೆ ಮನವರಿಕೆಯಾಗಿತ್ತು. ಡಿಸೋಜಾರವರಿಗೆ ಕಾಡು–ನಾಡು, ಪ್ರಾಣಿ–ಪಕ್ಷಿಗಳು, ಕಾಡಿನ ಒಳಗಿರುವ ಸಮುದಾಯಗಳು ಹಾಗೂ ಅವರ ಆಚಾರ–ವಿಚಾರಗಳ ಬಗ್ಗೆ ವಿಶೇಷವಾದ ಆಸಕ್ತಿ ಇತ್ತು. ಈ ಹಿನ್ನೆಲೆಯಿಂದ ಕಾಡಿನ ಬಗ್ಗೆ ಚನ್ನಾಗಿ ಗೊತ್ತಿರುವಂತಹ ವ್ಯಕ್ತಿಗಳ ಪರಿಚಯದ ಆಸಕ್ತಿಯೂ ಅವರಿಗೆ ಇರುವುದರಿಂದ ಮಾಸ್ತರರು ಹಾಗೂ ಕುಗ್ವೆ ಗ್ರಾಮದ ನಿವಾಸಿಯಾದ ಓಲೆಕಾರ ಪುಟ್ಟಪ್ಪರ ಪರಿಚಯ ಡಿಸೋಜಾರವರಿಗೆ ಅರ್ಥಗರ್ಭಿತವಾದ ರೀತಿಯಲ್ಲಿ ಆಯಿತು. ಏಕೆಂದರೆ ಪುಟ್ಟಪ್ಪ ಅನಕ್ಷರಸ್ಥರಾದರೂ ಕಾಡಿನ ಸಾವಿರಾರು ಮರಗಳ ಹೆಸರುಗಳನ್ನು ನಿಂತಲ್ಲಿಯೇ ಹೇಳುವಂತಹ ಜ್ಞಾನ ಅವರಲ್ಲಿತ್ತು. ಅಲ್ಲದೆ ನಾಟಿ ಔಷಧಿಯನ್ನು ಪುಟ್ಟಪ್ಪರು ತಯಾರಿಸಿ ಸಮುದಾಯಗಳ ಆರೋಗ್ಯವನ್ನು ಕಾಪಾಡುವಲ್ಲಿ ಶ್ರಮಿಸುತ್ತಿದ್ದರು. ಡಿಸೋಜಾ ರವರಿಗೆ ಪುಟ್ಟಪ್ಪರ ಪರಿಚಯ ಅತ್ಯವಶ್ಯಕವಾಗಿ ಸರಿಯಾದ ಸಮಯಕ್ಕೆ ಆಗಿದೆ. ಮಾಸ್ತರರಿಗೆ ಡಿಸೋಜಾರವರ ಬರಹ, ಸಾಹಿತ್ಯ, ತಿಳುವಳಿಕೆ, ಸೃಜನಶೀಲ ಆಲೋಚನೆಯ ಕ್ರಮಗಳೆಲ್ಲವೂ ಪ್ರಭಾವ ಬೀರಿರುವುದರಿಂದ ಹಾಗೂ ಅವರ ಪರಿಚಯ ಬೌದ್ಧಿಕತೆಯ ಗಟ್ಟಿತನವಾಗಿ ಮಾಸ್ತರರ ಮನಸ್ಸಿನಲ್ಲಿ ನೆಲೆ ನಿಂತಿದ್ದರಿಂದ ಇವರು ತಮ್ಮನ್ನು ತಾವು ಬರವಣಿಗೆಯಲ್ಲಿ ತೊಡಗಿಸಿಕೊಂಡು ವಿದ್ಯಾಭ್ಯಾಸ ಮುಗಿಯುವ ವೇಳೆಗೆ ಸಮಾಜದಲ್ಲಿ ಗುರುತಿಸುವಂತಹ ವ್ಯಕ್ತಿಯಾಗುವ ಹಂಬಲವು ಅವರ ಪ್ರಯತ್ನದ ದಾರಿಯಲ್ಲಿ ಕೈಜೋಡಿಸಿತು.

ಮಾಸ್ತರರ ಬದುಕು ಹತ್ತನೆಯ ತರಗತಿಯ ವಿದ್ಯಾಭ್ಯಾಸ ಮುಗಿದ ನಂತರ "ರಾಷ್ಟ್ರೀಯ ಸಮುದಾಯ ಯೋಜನೆ"ಯಲ್ಲಿ ಪ್ರಾರಂಭವಾಯಿತು. ಗ್ರಾಮದ ಸಮುದಾಯಗಳ ಅಭಿವೃದ್ಧಿಯ ಕಡೆ ತಮ್ಮನ್ನು ತಾವು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡರು. ಇದರ ಜೊತೆಗೆ ರಾತ್ರಿ ಶಾಲೆಯನ್ನು ಪ್ರಾರಂಭಿಸಿ ಅನಕ್ಷರಸ್ಥ ಜನರನ್ನು ಒಟ್ಟುಗೂಡಿಸಿ ಶಿಕ್ಷಣ ನೀಡುವಲ್ಲಿ ಮಗ್ನರಾದರು. ಶಿಕ್ಷಣಕ್ಕೆ ಪೂರಕವಾಗಿ ವಯಸ್ಕರ ಗ್ರಂಥಾಲಯವನ್ನು ಕೂಡಾ ಸ್ಥಾಪಿಸಿ ಬಿಡುವಿನ ಸಮಯವನ್ನು ಸದುಪಯೋಗಪಡಿಸಿದ ಕೀರ್ತಿ ಇವರದ್ದಾಗಿದೆ.

ಹಾಡು ಹಸೆಚಿತ್ತಾರಗಳಿಂದಾಗಿ ಸಾಂಸ್ಕೃತಿಕವಾಗಿ ಸಮೃದ್ಧವಾಗಿದ್ದ ದೀವರ ಜನಾಂಗದಲ್ಲಿ ಹುಟ್ಟಿ ಬೆಳೆದ ಮಾಸ್ತರರವರ ಬಾಲ್ಯವನ್ನು ಜಾನಪದ ಆವರಿಸಿಕೊಂಡಿತ್ತು. ಬಯಲಾಟ,

ಯಕ್ಷಗಾನಗಳ ಗೀಳು ಹತ್ತಿಸಿಕೊಂಡಿದ್ದ ಚಿಕ್ಕಪ್ಪ ತಾನು ಹೋದಲ್ಲೆಲ್ಲಾ ಮಾಸ್ತರರವರನ್ನು ತನ್ನೊಂದಿಗೆ ಕರೆದೊಯ್ಯುತ್ತಿದ್ದರು. ಮನೆಯ ಪರಿಸರದಿಂದ ಹಾಡಿನ ಪ್ರೇರಣೆ ಪಡೆದುಕೊಂಡಿದ್ದ ಮಾಸ್ತರರು ಅದಾಗಲೇ ಜನಪದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡತೊಡಗಿದ್ದರು. ಸಂಪ್ರದಾಯದ ಹಾಡುಗಳನ್ನು ಸೊಗಸಾಗಿ ಹಾಡುತ್ತಿದ್ದ ತಾಯಿ ಪುಟ್ಟಮ್ಮ ಇವರ ಮೊದಲ ಗುರು. ಹೀಗೆ ಆರಂಭವಾದ ಹಾಡಿನ ಹುಚ್ಚು ಹುಚ್ಚಪ್ಪನವರನ್ನು ನಂತರದ ದಿನಗಳಲ್ಲಿ ಪರಿಪೂರ್ಣ ಕಲಾವಿದರನ್ನಾಗಿಸಿತು. ನಿಧಾನವಾಗಿ ಅವರ ಆಸಕ್ತಿ ಕೋಲಾಟದ ಕಡೆ ಹರಿಯಿತು. ಕೈಗೆ ಕೋಲು ಬಂದವು. ಹರಿಜನ ಹಾಡಿಯ ಹುಡುಗರನ್ನು ಸೇರಿಸಿ ಕೋಲಾಟದ ತಂಡ ಕಟ್ಟಿ ಆಡತೊಡಗಿದರು. ಸಾಮಾಜಿಕ ಕಟ್ಟುಪಾಡುಗಳು ಬಲಿಷ್ಠವಾಗಿದ್ದ ಆ ಕಾಲದಲ್ಲಿ ತಮ್ಮ ಜನಾಂಗದವರ ಕೆಂಗಣ್ಣಿಗೆ ಬಿದ್ದರು. ಕೆಳಜಾತಿಯವರೊಂದಿಗಿನ ಮಾಸ್ತರರ ಒಡನಾಟ ಅವರಿಗೆ ಇಷ್ಟವಾಗಲಿಲ್ಲ. ಆಗಲೇ ವೈಚಾರಿಕ ಮತ್ತು ಮಾನವೀಯ ಗುಣಗಳಿಂದ ತಮ್ಮ ವ್ಯಕ್ತಿತ್ವವನ್ನು ಉದಾತ್ತವಾಗಿ ರೂಪಿಸಿಕೊಂಡಿದ್ದ ಹುಚ್ಚಪ್ಪನವರಿಗೆ ಹರಿಜನರೊಂದಿಗಿನ ಗೆಳೆತನ ಬಿಡಲಾರದಷ್ಟು ಗಟ್ಟಿಯಾಗಿತ್ತು. ಒಂದು ಸಂದರ್ಭದಲ್ಲಿ ಸರ್ಕಾರಿ ನೌಕರಿಯ ಸಹವಾಸವೇ ಬೇಡವೆಂದುಕೊಂಡು ತಮ್ಮ ವಿದ್ಯಾಭ್ಯಾಸದ ಎಲ್ಲ ಪ್ರಮಾಣಪತ್ರಗಳನ್ನು ಹರಿದೆಸೆದಿದ್ದ ಹುಚ್ಚಪ್ಪನವರು ನಂತರ ಪ್ರಮಾಣಪತ್ರಗಳ ನಕಲು ಪ್ರತಿಗಳನ್ನು ಪಡೆದುಕೊಂಡರು. ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ತಮ್ಮ ಕಾಳಜಿಗಳನ್ನು ವಿವರಿಸಿ ಕುಗ್ವೆ ಗ್ರಾಮದಲ್ಲಿ ರಾತ್ರಿ ಶಾಲೆ ತೆರೆದು ಮಾಸ್ತರಿಕೆ ಮಾಡುವ ಅವಕಾಶ ಪಡೆದುಕೊಂಡರು. ಹರಿಜನ–ಗಿರಿಜನರ ಮನೆ–ಮನೆಗಳಿಗೆ ಹೋಗಿ ಅವರಿಗೆ ಶಿಕ್ಷಣದ ಮಹತ್ವದ ಕುರಿತು ಮನವರಿಕೆ ಮಾಡಿಕೊಟ್ಟರು. ಆದರೆ ಈ ಬೆಳವಣಿಗೆಯನ್ನು ಸಹಿಸದ ಊರಿನ ತಮ್ಮ ಸಮಾಜದವರಿಂದಲೇ ಸಮಾಜದ ಬಹಿಷ್ಕಾರಕ್ಕೆ ಒಳಗಾದರು. ಈ ಘಟನೆ ಅವರ ಮುಂದಿನ ಬದುಕಿಗೊಂದು ಮಹತ್ತರವಾದ ತಿರುವು ನೀಡಿತು. ಬಹಿಷ್ಕಾರದಿಂದಾಗಿ ತೀವ್ರ ಅಘಾತಕ್ಕೊಳಗಾದ ಮಾಸ್ತರರು ಹೆದರಿ ಊರು ಬಿಟ್ಟು ದೂರದ ಹಾಸನಕ್ಕೆ ಹೊರಟರು. ಅಲ್ಲಿಯ ವಿದ್ಯಾಪೀಠವೊಂದರಲ್ಲಿ ಆಶ್ರಯ ಪಡೆದರು. ಅವರಿಗೆ ಇಲ್ಲಿಯೇ ಗಾಂಧೀಜಿ ಒಡನಾಡಿಗಳಾಗಿದ್ದ ಟಿ.ಆರ್.ಗೋವಿಂದರಾವ್‌ರವರ ಪರಿಚಯವಾಯಿತು. "ಟಿ.ಆರ್.ಗೋವಿಂದರಾವ್‌ರವರೇ ನನ್ನ ಮುಂದಿನ ಸಾಧನೆಗಳಿಗೆಲ್ಲಾ ಮುಖ್ಯ ಕಾರಣಕರ್ತರು. ಅವರಿಂದಲೇ ನನ್ನೊಳಗಿನ ಸೂಕ್ತ ಚೇತನಕ್ಕೆ ಪ್ರೇರಣೆ ದೊರೆಯಿತು." ಎಂದು ಅವರನ್ನು ಅಭಿಮಾನದಿಂದ ನೆನೆಯುತ್ತಾರೆ ಮಾಸ್ತರರು. ಕೆಲವು ತಿಂಗಳ ಅವಧಿಗೆಂದು ವಿದ್ಯಾಪೀಠದಲ್ಲಿ ನೆಲೆಸಿದ್ದ ಅವರಿಗೆ ಗೋವಿಂದರಾಯರೇ ಮನವೊಲಿಸಿ ಮತ್ತೆರಡು ವರ್ಷ ಅಲ್ಲಿಯೇ ಉಳಿಸಿಕೊಂಡರು. ಮಾಸ್ತರರವರ ಹಾಡಿನ ಅಭಿರುಚಿಯನ್ನು ಗುರುತಿಸಿ ಜಾನಪದ ಸಂಗೀತದ ಸಾಂಪ್ರದಾಯಿಕ

ನಿಯಮಗಳನ್ನು ತಿಳಿಸಿಕೊಡಲು ಹರಿಜನ ಮುದುಕನನ್ನು ಗುರುವಾಗಿ ನೇಮಿಸಿದರು. ೧೯೫೭ ರಲ್ಲಿ ನಡೆದ ಅಖಿಲ ಸರ್ವೋದಯ ಶಿಬಿರದಲ್ಲಿ ಪ್ರಸಿದ್ಧ ಗಾಂಧೀವಾದಿಗಳಾದ ರಂಗನಾಥ ದಿವಾಕರ, ಸಿದ್ದವನಹಳ್ಳಿ ಕೃಷ್ಣಶರ್ಮ, ಯಮುನಾಚಾರ್ಯ, ಕೆ.ಎಸ್.ನಾರಾಯಣಸ್ವಾಮಿ, ಗೋ.ರಾಮಚಂದ್ರರಾವ್ ಮೊದಲಾದವರು ಭಾಗವಹಿಸಿದ್ದರು. ಅವರೆಲ್ಲರನ್ನೂ ಉಪಚರಿಸುವ ಹೊಣೆಯನ್ನು ಗುರುಗಳು ಮಾಸ್ತರರಿಗೆ ವಹಿಸಿದ್ದರು. ಈ ಘಟನೆಯನ್ನು 'ಒಂದು ಅದ್ಭುತ, ಮರೆಯಲಾಗದ ಅನುಭವ. ನನಗೆ ಹೊಸ ಬಗೆಯ ಸಂಸ್ಕಾರವೊಂದು ಒದಗಿಬಂತು' ಎಂದು ಸ್ಮರಿಸಿಕೊಳ್ಳುತ್ತಾರೆ. ಅಲ್ಲಿಂದ ತವರು ನೆಲೆ ಕುಗ್ವೆಗೆ ಮರಳಿ ಬಂದರು. ಗ್ರಾಮ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆಗ ಕಾಗೋಡು ಭೂ ಹೋರಾಟದ ಕಾವು ತಾರಕಕ್ಕೇರಿತ್ತು. ಜೆ.ಪಿ.ಲೋಹಿಯ, ಗೋಪಾಲಗೌಡರು ಮೊದಲಾದ ಪ್ರಸಿದ್ಧ ಸಮಾಜವಾದಿಗಳು ಕಾಗೋಡಿಗೆ ಬಂದು ಭೇಟಿ ನೀಡುತ್ತಿದ್ದ ಕಾಲ. ತಮ್ಮ ಗ್ರಾಮದಲ್ಲಿ ಕಾರ್ಯಕ್ರಮವೊಂದನ್ನು ಸಂಘಟಿಸಿ ಮುಖ್ಯ ಭಾಷಣಕಾರರನ್ನಾಗಿ ಶಾಂತವೇರಿ ಗೋಪಾಲಗೌಡರನ್ನು ಆಹ್ವಾನಿಸಿದರು. ಅದೊಂದು ಯಶಸ್ವಿ ಕಾರ್ಯಕ್ರಮ. ಸಮಾಜವಾದದ ಆಲೋಚನೆಗಳು ಮಾಸ್ತರರ ವ್ಯಕ್ತಿತ್ವವನ್ನು ಆವರಿಸತೊಡಗಿದವು. 'ನಾನು ಕೇಳಿದ ಅಪರೂಪದ ಅತ್ಯಂತ ಪರಿಣಾಮಕಾರಿಯಾದ ಭಾಷಣ ಅದಾಗಿತ್ತು.' ಎಂದು ಅವರು ಹನಿಗಣ್ಣಾಗುತ್ತಾರೆ.

ಅಪ್ಪಟ ಹರಿಜನರ ಕಲೆಯಾದ ಕೋಲಾಟ ಅವರ ಆಸಕ್ತಿಯ ಮುಖ್ಯ ಭಾಗವಾಗತೊಡಗಿತ್ತು. ಮಾಸ್ತರರು ನಂತರ ದೀವರ ಹುಡುಗರ ಕೈಗೂ ಕೋಲು ಕೊಟ್ಟರು. ಹೆಜ್ಜೆ ಹಾಕಿ ಪದ ಹಾಡಿದರು. ಹಿಂದಿನಂತೆಯೇ ಮತ್ತೆ ಸಾಮಾಜಿಕ ಬಹಿಷ್ಕಾರದ ಸೊಲ್ಲು ಎದ್ದಿತಾದರೂ ಅವರು ಬೆದರಲಿಲ್ಲ. ಕಲಿಯಲು ಬಂದ ಹುಡುಗರಿಗೆ ಜನಪದದ ಮಹತ್ವ ಕುರಿತು ತಿಳಿಹೇಳಿದರು. ಕೋಲು ತಂಡ ಕಟ್ಟಿ ಊರೂರು ಸುತ್ತಿದರು. ಹಬ್ಬ ಹರಿದಿನ ಅದರಲ್ಲೂ ಕಾರ್ತಿಕ ಮಾಸದಲ್ಲಿಯಂತೂ ಒಂದೊಂದು ಊರಲ್ಲಿ ರಾತ್ರಿ ಕಳೆದು ಬೆಳಗಾಗುವ ತನಕ ಕೋಲಾಟ ಆಡುತ್ತಿದ್ದರು. ಸಮಾಜ ಕಲ್ಯಾಣ ಇಲಾಖೆಯ ಗಿರಿಜನ ವಸತಿ ಶಾಲೆ ಹಿರೇಮನೆಯಲ್ಲಿ ಶಿಕ್ಷಕರಾದ ನಂತರ ಸಾಗರ ತಾಲೂಕಿನ 'ಹಸಲರು' ಕುರಿತು ತೀವ್ರ ಆಸಕ್ತಿ ಹೊಂದಿ ಅವರ ಅಧ್ಯಯನ ಮಾಡಿದರು. ಅಕ್ಷರ ಕಲಿಕೆಯೊಂದಿಗೆ ಶುಚಿತ್ವದ ಪಾಠ ಹೇಳಿದರು. ಹಸಲರ ಮಕ್ಕಳಿಗೆ ಸ್ವತಃ ಕತ್ತರಿ ಹಿಡಿದು ತಲೆ ಕ್ಷೌರ ಮಾಡಿದರು. ಕೋಲಾಟದ ಹಾಡು ಹೇಳಿಕೊಟ್ಟರು. ಹಸಲರೊಂದಿಗೆ ಹೆಕ್ಕಿ-ಪಿಕ್ಕಿ ಮತ್ತು ಹೆಳವ ಅಲೆಮಾರಿ ಜನಾಂಗದವರೊಂದಿಗಿದ್ದು ಎಂಟು ವರ್ಷಗಳ ಕಾಲ ಅವರೊಂದಿಗೆ ನೆಲೆ ನಿಂತರು. ಅಸ್ಪೃಶ್ಯತೆಯ ವಿರುದ್ಧ ಪರೋಕ್ಷ ಸಮರವನ್ನೇ ಸಾರಿದರು.

ಹುಚ್ಚಪ್ಪನವರ ಸಾಧನೆಯ ಹಾದಿಯಲ್ಲಿ ಅನೇಕರು ಕಿರುಕುಳ ನೀಡಿದರು. ಅವರ ಮನಶಾಂತಿಯನ್ನು ಕದಡುವ ಪ್ರಯತ್ನ ಮಾಡಿದರು. ತಮ್ಮದೇ ಜಾತಿಗೆ ಸೇರಿದ ಜನರು ಇಂತಹ ಕೆಲಸಕ್ಕೆ ಕೈಹಾಕಿದ್ದು ಅವರಿಗೆ ನೋವುಂಟು ಮಾಡಿತ್ತು. ಇಲ್ಲ ಸಲ್ಲದ ಆರೋಪ ಆಪಾದನೆಗಳನ್ನು ತಲೆಗೆ ಕಟ್ಟಿ ಅವರ ಕಲಾಸಾಧನೆ ಮತ್ತು ಸಮಾನತೆಯ ಆಶಯದ ದನಿಯನ್ನು ಉಡುಗಿಸುವ ಪ್ರಯತ್ನ ಮಾಡಿದರು. ಅಸಮಾನತೆ, ಜಾತಿವ್ಯವಸ್ಥೆಯ ಕ್ರೌರ್ಯ ವಂಚನೆಗಳನ್ನು ಬಯಲಿಗೆಳೆಯುತ್ತಿದ್ದ ಮಾಸ್ತರರು ಸಹಜವಾಗಿಯೇ ವರ್ಗ ಮತ್ತು ವರ್ಣ ವ್ಯವಸ್ಥೆಯ ವಿರುದ್ಧವಾಗಿದ್ದರು. ಹೀಗಾಗಿ ಮೇಲ್ವರ್ಗದವರ ದ್ವೇಷವನ್ನು ಅವರು ಕಟ್ಟಿಕೊಳ್ಳಬೇಕಾಯಿತು. ಆದರೂ ಮಾಸ್ತರರು ಸಂಕಷ್ಟದಲ್ಲಿದ್ದಾಗ ಅವರ ಬೆನ್ನಿಗೆ ನಿಂತವರು ಮಾತ್ರ ಅದೇ ಮೇಲ್ವರ್ಗದ ಸಮುದಾಯದವರು. 'ನಾವು ಮೇಲ್ವರ್ಗದವರ ಮೂಲಭೂತವಾದವನ್ನು ವಿರೋಧಿಸಬೇಕೇ ವಿನಃ ಅವರ ಸಮುದಾಯವನ್ನಲ್ಲ. ಕೆಳವರ್ಗದಿಂದ ಬಂದ ನನ್ನಂತವನ ಪ್ರತಿಭೆಯನ್ನು ನಮ್ಮವರೇ ಗುರುತಿಸಿ ಪ್ರೋತ್ಸಾಹಿಸಲಿಲ್ಲ. ಆದರೆ ಬದುಕಿನ ಹೋರಾಟದ ಆದಿಯಲ್ಲಿ ನಾವು ಯಾರನ್ನು ತಾತ್ವಿಕವಾಗಿ ವಿರೋಧಿಸಿಕೊಂಡು ಬಂದೆವೋ ಅವರೇ ನಮ್ಮನ್ನು ಪ್ರೋತ್ಸಾಹಿಸಿ ಬೆಳೆಸಿದರು. ಇಷ್ಟಾದರೂ ಆ ಜನರಿಗಿರೋ ಗುಣಗ್ರಾಹಿತನ ನಮ್ಮವರಿಗೆಲ್ಲಿಂದಾ ಬಂದೀತು. ಕಾಲೆಳೆಯೋ ಏಡಿ ಜಾತಿಯವರು ಇವ್ರೆಲ್ಲಾ' ಎಂದು ತಮ್ಮ ನೋವನ್ನು ಹೇಳಿಕೊಳ್ಳುತ್ತಾರೆ.

ಮಾಸ್ತರರದು ನಿಜವಾದ ಅರ್ಥದಲ್ಲಿ ಕಂಚಿನ ಕಂಠ. ಹಾಡುಗಾರಿಕೆಯಲ್ಲಿ ಆ ಎತ್ತರದ ಆ ಬೀಸು ಅವರಿಗೆ ಮಾತ್ರ ಸಾಧ್ಯ. ಕಂಬಾರರ ಜನಪ್ರಿಯ ಲಾವಣಿ, 'ಮಾವುತ್ಸೆ ತುಂಗ' ಮತ್ತು ಅನಾಮಿಕ ಕವಿಯ 'ಗೋಕುಲಾಷ್ಟಮಿಯ ದಿನ'ಗಳನ್ನು ಮಾಸ್ತರರು ಹಾಡುತ್ತಿದ್ದರೆ ಅದನ್ನು ಕೇಳಿಯೇ ಅನುಭವಿಸಬೇಕು. ಅವರು ಭಾಗವಹಿಸುವ ಯಾವುದೇ ಸಭೆ ಸಮಾರಂಭವಾಗಿರಲಿ ಈ ಲಾವಣಿಗಳನ್ನು ಹಾಡಲೇಬೇಕೆಂಬ ಒತ್ತಾಯ ಬರುತ್ತದೆ. ಹಾಡಿನ ಮೊದಲು ಒಂದು ಪುಟ್ಟ ಪೀಠಿಕೆ. ಹಾಡಿನ ಕೊನೆಯ ವರೆಗೂ ಶ್ರೋತೃಗಳು ಮಂತ್ರಮುಗ್ಧ. ಕೊನೆಗೆ ಜನಮೆಚ್ಚುಗೆಯ ಸುದೀರ್ಘ ಚಪ್ಪಾಳೆ. ಮೂಲತಃ ಮಾಸ್ತರರು ತುಂಬು ಕಂಠಸಿರಿಯ ಜನಪದ ಹಾಡುಗಾರ. ಕೋಲಾಟದ ಹಾಡುಗಳೊಂದಿಗೆ ದೀವರ ಸಂಪ್ರದಾಯದ ಹಾಡುಗಳು, ತೋಂಡಿ ಸಂಪ್ರದಾಯದ ಹಾಡುಗಳನ್ನು ಅವರು ಮೂಲ ಮಟ್ಟುಗಳಿಗೆ ನಿಷ್ಠೂರಾಗಿ ಹಾಡಿದರು. ಜಾನಪದ ಹಿನ್ನೆಲೆಯ ಯಾವುದೇ ನಾಟಕವಿರಲಿ ಮಾಸ್ತರರೇ ಹಿಮ್ಮೇಳದಲ್ಲಿ ಮುಖ್ಯ ಹಾಡುಗಾರ. ಹಾಡುಗಳೇ ಜೀವಾಳವಾದ ಕಂಬಾರರ 'ಸಂಗ್ಯಾ-ಬಾಳ್ಯ' ನಾಟಕವು ಅವರು ರಂಗಕಲಾವಿದರಾಗಿ ಪ್ರಸಿದ್ಧರಾಗಲು ಕಾರಣವಾಯಿತು. ಸುಮಾರು ಎರಡು ಗಂಟೆಗಳ ಕಾಲ ನಿಂತು ನಿರಾಯಾಸವಾಗಿ

ಪಾತ್ರಗಳ ಮನೋಧರ್ಮ ಸನ್ನಿವೇಶಗಳನ್ನು ಅರ್ಥೈಸಿಕೊಂಡು ತಾಳ ಹಿಡಿದು ಕಣ್ಮುಚ್ಚಿ ಹಾಡಿನ ಪ್ರತಿ ಮಾತನ್ನು ಆಸ್ವಾದಿಸುತ್ತಾ ಭಾವಿಸಿ ಹಾಡುತ್ತಿದ್ದ ರೀತಿ ವಿಶೇಷವಾದುದು. ೧೬ ನೇ ವಯಸ್ಸಿನಲ್ಲಿಯೇ ತಮ್ಮ ಸ್ವಗ್ರಾಮದಲ್ಲಿ 'ಮೂಡಲಪಾಯ'ದ ಆಟಗಳಲ್ಲಿ ಪಾತ್ರ ನಿರ್ವಹಿಸಿದ್ದರು. ಇಂದ್ರಜಿತು ಕಾಳಗ, ಅಹಿರಾವಣ, ರತಿ ಕಲ್ಯಾಣಗಳಲ್ಲಿ ರಾವಣ ಕೌಂಡ್ಲಿಕ ಮೊದಲಾದ ರಾಕ್ಷಸ ಪಾತ್ರಗಳನ್ನು ಅವರು ಕಟ್ಟಿ ಹಾಡಿದ್ದಾರೆ. ಬುಡಕಟ್ಟು ಜನಾಂಗಗಳ ಸಾಂಸ್ಕೃತಿಕ ಪರಿಸರವನ್ನು ನಾಟಕಗಳ ಮೂಲಕ ಅವರು ಪರಿಚಯಿಸಿದ್ದಾರೆ. ಕಾಗೋಡು ಅಣ್ಣಪ್ಪ ಮೊದಲಾದ ಕಲಾವಿದರೊಂದಿಗೆ ಕೈಸೇರಿಸಿ ರಂಗಮಂಚ ಎಂಬ ಜಾನಪದ ರಂಗಭೂಮಿಗೆ ವೇದಿಕೆಯನ್ನು ಕಟ್ಟಿಕೊಂಡರು. ಅದರ ಅಧ್ಯಕ್ಷರಾಗಿ ಸಂಗೀತ ಸಂಯೋಜಕ ಹಾಡುಗಾರರಾಗಿ ಸೇವೆ ಸಲ್ಲಿಸಿದರು. ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ', 'ನಾಯಕತೆ', 'ಬೆತ್ತಲೆಸೇವೆ', 'ಆಲಿಬಾಬ ಮತ್ತು ನಲವತ್ತು ಕಳ್ಳರು' ಮೊದಲಾದ ರಂಗ ಪ್ರದರ್ಶನಗಳು ಮಾಸ್ತರರ ಸಂಗೀತದ ಸ್ಪರ್ಶ ಪಡೆದು ಯಶಸ್ವಿ ಪ್ರಯೋಗ ಕಂಡವು. ನಾಟಕ ನೋಡಿ ಪ್ರೇಕ್ಷಕರು ಅನೇಕ ದಿನಗಳ ವರೆಗೆ ಆ ಹಾಡುಗಳ ಮಟ್ಟುಗಳನ್ನು ಗುನುಗುನಿಸತೊಡಗಿದರು. ಕುಗ್ವೆಯಲ್ಲಿ ರಂಗಸಂಕುಲವನ್ನು ಕಟ್ಟಿದರು. ಬುಡಕಟ್ಟು ಸಮುದಾಯದ ಯುವಕರನ್ನು ಸಂಘಟಿಸಿ ಜನಪದದ ರಂಗಸಂಪ್ರದಾಯಗಳನ್ನು ಅದರ ಮೂಲ ಸತ್ವ ಕೆಡದಂತೆ ಆಧುನಿಕ ರಂಗಭೂಮಿಗೆ ಅಳವಡಿಸಿದರು. ತಾಳಗುಪ್ಪೆಯ ಮಲೆನಾಡು ಜಾನಪದ ಮತ್ತು ಯಕ್ಷಗಾನ ಪ್ರತಿಷ್ಠಾನ, ಸಾಗರದ ಮಲೆನಾಡು ಜಾನಪದ ಲೋಕ, ಬೆಂಗಳೂರಿನ ಕರ್ನಾಟಕ ಜಾನಪದ ಪರಿಷತ್ತು ಮೊದಲಾದ ಸಂಸ್ಥೆಗಳ ಮೂಲಕ ಕಲಾಸೇವೆಗೆ ತೊಡಗಿಕೊಂಡರು. ೧೯೭೪ ರಿಂದ ೧೯೭೮ ರ ವರೆಗೆ ಹೆಗ್ಗೋಡಿನ ನಿನಾಸಂನಲ್ಲಿ ಸಂಗೀತ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದರು. 'ಕಪ್ಪುಜನ ಕೆಂಪು ನೆರಳು' (ಕೆ.ವಿ.ಸುಬ್ಬಣ್ಣ), 'ದಂಗೆಯ ಮುಂಚಿನ ದಿನಗಳು' (ಪ್ರಸನ್ನ), 'ಸಂಗ್ಯಾ-ಬಾಳ್ಯ' (ಕಂಬಾರ) ರಂಗಕೃತಿಗಳಿಗೆ ಸಂಗೀತ ನಿರ್ದೇಶಿಸಿದರು. ಇವರು ಸಂಗೀತ ಸಂಯೋಜಿಸಿದ 'ಡಾಂಬಾರು ಬಂದುದು' ಮತ್ತು 'ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ್' ನಾಟಕಗಳು ಬೆಂಗಳೂರು ದೂರದರ್ಶನ ವಾಹಿನಿಯಲ್ಲಿ ಪ್ರಸಾರಗೊಂಡವು. ೧೯೯೦ ರಲ್ಲಿ ಪಾಂಡಿಚರಿಯ ದಕ್ಷಿಣವಲಯ ನಾಟಕೋತ್ಸವದಲ್ಲಿ 'ಸಂಗ್ಯಾ-ಬಾಳ್ಯ' ಶ್ರೇಷ್ಠ ನಾಟಕವೆಂದು ಆಯ್ಕೆಯಾಗಿದೆ. ಇದೇ ನಾಟಕ ದೆಹಲಿಯ 'ನಾಟ್ಯ ಸಮಾರೋಪ'ದಲ್ಲಿ ಪ್ರದರ್ಶನಗೊಂಡು ಅಪಾರ ಮೆಚ್ಚುಗೆ ಪಡೆದಿದೆ. ಗೌರಿಬಿದನೂರಿನ ಹೊಸೂರಿನಲ್ಲಿ ತೊಗಲುಗೊಂಬೆಯಾಟ, ಶಿರಸಿಯ ವಾನಳಿಯಲ್ಲಿ ಕರ್ನಾಟಕ ಯಕ್ಷಗಾನ ಸಂಗಮ, ಬಂಟ್ವಾಳದ ಮೇಡುಕಾಪುವಿನಲ್ಲಿ ಜಾನಪದ ಕುಣಿತ ಕುರಿತ ಪ್ರದರ್ಶನ, ಹಂಪಿ ವಿಶ್ವವಿದ್ಯಾಲಯದಲ್ಲಿ ಬಯಲಾಟ ಪ್ರದರ್ಶನ ಕುರಿತ ಪಾತ್ಯಕ್ಷಿಕೆ ಮತ್ತು ಕರ್ನಾಟಕ ಗ್ರಾಮ ದೇವತೆಗಳು ಮತ್ತು

ಜಾನಪದ ಕಲೆಗಳ ತರಬೇತಿ ಶಿಬಿರದ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ೧೯೯೪ ರಲ್ಲಿ ಪ್ರಸಾರವಾದ ಜನಪ್ರಿಯ ದಾರಾವಾಹಿ 'ಸಿರಿಗಂಧ'ಕ್ಕೆ ಕ್ಷೇತ್ರ ನೆರವು ಮತ್ತು ಸಾಹಿತ್ಯ ಒದಗಿಸಿದ್ದಾರೆ.

ಬುಡಕಟ್ಟು ಜನಾಂಗ ಮತ್ತು ಅವರ ಕಲೆಗಳನ್ನು ಕುರಿತಂತೆ ವಿಶೇಷ ಆಸಕ್ತಿ ಮತ್ತು ಶ್ರದ್ಧೆ ಬೆಳೆಸಿಕೊಂಡಿರುವ ಮಾಸ್ತರರು ಕರ್ನಾಟಕದ ವಿಶೇಷ ಬುಡಕಟ್ಟುಗಳಾದ ಹಾಲಕ್ಕಿ, ಹಸಲರು, ಕಬ್ಬೆಗೌಳಿ, ಗೊಂಡರು, ದೀವರು, ಕುಣಬಿಗಳು, ಸಿದ್ದಿಗಳ ಕುರಿತಂತೆ ಅಧ್ಯಯನ ಕೈಗೊಂಡರು 'ಹಸಲರು' ಅವರ ಸತತ ಕ್ಷೇತ್ರಕಾರ್ಯ ಮತ್ತು ಅಧ್ಯಯನದ ಫಲವಾಗಿ ಮೂಡಿಬಂದ ಕೃತಿ. ಹಸಲರ ನಂಬಿಕೆ, ಆಚರಣೆ, ಹಬ್ಬ, ಹಾಡು ಕುಣಿತಗಳ ಕುರಿತಂತೆ ಕೃತಿಯು ಪ್ರಾಮಾಣಿಕವಾದ ಚಿತ್ರಣ ನೀಡುತ್ತದೆ. ಚಂದ್ರಗುತ್ತಿ, ಶ್ರೀ ರೇಣುಕಾದೇವಿ ಜಾತ್ರೆ, ಗಿರಿಜನ ಸಂಸ್ಕೃತಿ ಅವರ ಪಾಂಡಿತ್ಯಕ್ಕೆ ಸಾಕ್ಷಿಯಾದ ಅಧ್ಯಯನಗಳು. ವಕ್ತೃಗಳ ಸಂದರ್ಶನ, ಕ್ಷೇತ್ರಕಾರ್ಯ ಮತ್ತು ಬರವಣಿಗೆಯಲ್ಲಿ ಶಿಸ್ತು ಅವರ ಬರಹಗಳಲ್ಲಿ ಎದ್ದುತೋರುವ ಅಂಶಗಳು. ಕಾಗೋಡು ಚಳುವಳಿ–೫೦ ವರ್ಷ ಮತ್ತು ಕಾಗೋಡು ಚಳುವಳಿ–ಸುವರ್ಣ ಸಂಪುಟ ಉದ್ಗ್ರಂಥಗಳನ್ನು ಹುಚ್ಚಪ್ಪ ಮಾಸ್ತರರು ಸಂಪಾದಿಸಿದ್ದಾರೆ. ಕರ್ನಾಟಕದ ಸಾಮಾಜಿಕ ಆಂದೋಲನದ ಚರಿತ್ರೆಯಲ್ಲಿ ಇವು ಶಾಶ್ವತವಾದ ಹೆಜ್ಜೆ ಗುರುತುಗಳನ್ನು ದಾಖಲಿಸುವ ಕೃತಿಗಳು. ಹಂಪಿ ವಿಶ್ವವಿದ್ಯಾಲಯದ ಜಾನಪದ ಕಲಾಕೋಶ, ಮೈಸೂರು ವಿಶ್ವವಿದ್ಯಾಲಯದ ವಿಶ್ವಕೋಶ ಹಾಗೂ ಅಕಾಡೆಮಿ ಪ್ರಕಟಣೆಗಳಿಗಾಗಿಯೂ ಅನೇಕ ಲೇಖನಗಳನ್ನು ಮಾಸ್ತರರು ಬರೆದಿದ್ದಾರೆ.

ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಶಿವಮೊಗ್ಗ ಜಿಲ್ಲೆಯ ಜನಪದ ಕಲೆಗಳು (೧೯೮೫) ಶಿವಮೊಗ್ಗೆಯ ಮೂರನೇ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಜನಪದ ರಂಗಭೂಮಿ (೧೯೯೨) ಯಲ್ಲಾಪುರದ ಜಾನಪದ ಕಲಾಮಹೋತ್ಸವದಲ್ಲಿ ಗೊಂಡರು (೧೯೯೨) ಶ್ರೀರಂಗಪಟ್ಟಣದಲ್ಲಿ ಆದಿವಾಸಿಗಳ ಮೇಳಗಳು ಮತ್ತು ಕುಟುಂಬ ಕಲ್ಯಾಣ (೧೯೯೩) ಮತ್ತು ನಾಡಿನ ಬೇರೆ ಬೇರೆ ಭಾಗಗಳ ಗಿರಿಜನ ಸಮುದಾಯದಲ್ಲಿ ಜನಪದ ಕಲೆಗಳು ಶಿವಮೊಗ್ಗ ಜಿಲ್ಲಾ ಜಾನಪದ ಸಾಹಿತ್ಯ ಸಮೀಕ್ಷೆ, ಜಾನಪದ ಸಾಹಿತ್ಯ ಮತ್ತು ಪದ್ಯಗಳು, ಜನಪದ ಸಂಗೀತ ಹೀಗೆ ಅನೇಕ ಮಹತ್ವದ ಪ್ರಬಂಧಗಳನ್ನು ಬರೆದು ಮಂಡಿಸಿದ್ದಾರೆ. ಮಾಸ್ತರರ ಆಸಕ್ತಿಯ ಮೂಲ ಜಾನಪದ. ಸ್ವತಃ ಕಲಾವಿದರಾಗಿ, ಬರಹಗಾರರಾಗಿರುವ ಇವರು ಬೇರೆ ಬೇರೆ ಕಲಾತಂಡಗಳನ್ನು ಕಟ್ಟಿದ್ದಾರೆ. ಇವರೊಂದಿಗೆ ಗೊಂಡರ ಕುಣಿತ, ಸಿದ್ದಿ ಜನಾಂಗದ ಪೊಗಡಿ ಮತ್ತು ದಮಾಮಿ ಕುಣಿತ, ಕುಣಬಿ ಕುಣಿತವಾದ ಹೋಳಿಸಿಗ್ಮೋ ಮೊದಲಾದ ಜನಪದ ನೃತ್ಯಗಳನ್ನು ಮೈಸೂರು, ಬೆಂಗಳೂರು, ದೆಹಲಿ, ಕೇರಳ ಮೊದಲಾದೆಡೆ ಪ್ರದರ್ಶನ ನೀಡಿದ್ದಾರೆ. ಜನಪದ ವಿದ್ವಾಂಸರಾದ

ಹುಚ್ಚಪ್ಪ ಮಾಸ್ತರರು ಅಂತರ್‌ಜಿಲ್ಲಾ ಜಾನಪದ ಸಾಹಿತ್ಯ ಕಲಾಮೇಳ (ತಾಳಗುಪ್ಪ), ಅಖಿಲ ಕರ್ನಾಟಕ ಗಿರಿಜನ ಜಾನಪದ ವಿಚಾರ ಸಂಕೀರ್ಣ (ಸಾಗರ)ಗಳನ್ನು ಯಶಸ್ವಿಯಾಗಿ ಸಂಘಟಿಸಿದ್ದಾರೆ. ಬಹುಮುಖ ಪ್ರತಿಭೆಯ ಹುಚ್ಚಪ್ಪ ಮಾಸ್ತರರು ಉತ್ತಮ ರಂಗನಟರೂ ಹೌದು. ಈ ಬದುಕು, ಯಾತನೆಗಳು ಮೊದಲಾದ ದಾರಾವಾಹಿ ಸರಣಿಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಇವರು ಹಾಡಿದ 'ಸಂಗ್ಯಾ-ಬಾಳ್ಯಾ' ಧ್ವನಿಸುರುಳಿ (೧೯೮೮) ಕರ್ನಾಟ ಜಾನಪದ ಟ್ರಸ್ಟ್‌ನಿಂದ ದೀವರ ಮೂರು ಹಬ್ಬಗಳ ಕುರಿತು ವೀಡಿಯೋ ಕೆಸೆಟ್‌ಗಳು ಬಿಡುಗಡೆಗೊಂಡಿವೆ. ಮಾಸ್ತರರು ಮಲೆನಾಡಿನ ಹಸೆಗೋಡೆ ಮತ್ತು ಭೂಮಿ ಹುಣ್ಣಿಮೆಯ ಬುಟ್ಟಿ ಚಿತ್ತಾರಗಳಲ್ಲಿಯೂ ವಿಶೇಷ ಪರಿಣಿತಿ ಪಡೆದಿದ್ದಾರೆ. ಬಾಳ ಸಂಗಾತಿ ಗೌರಮ್ಮ ಈ ಎರಡರಲ್ಲಿಯೂ ಕಲಾವಿದೆಯಾಗಿದ್ದಾರೆ. ಗೌರಮ್ಮ ಸಂಪ್ರದಾಯದ ಹಾಡುಗಳ ಉತ್ತಮ ಹಾಡುಗಾರರೂ ಹೌದು. ಅವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಗೌರವವೂ ಸಂದಿದೆ. ಮೂವರು ಗಂಡು ಮಕ್ಕಳ ತುಂಬು ಸಂಸಾರ ಅವರದ್ದು. ಇವರೆಲ್ಲರೂ ಒಂದೊಂದು ಸರ್ಕಾರಿ ಉದ್ಯೋಗದಲ್ಲಿ ನೆಲೆ ಕಂಡುಕೊಂಡಿದ್ದಾರೆ. ದೂರದ ಊರುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಇವರು ತಮ್ಮ ಮಕ್ಕಳೊಂದಿಗೆ ಅಪರೂಪಕ್ಕೆ ಮನೆಗೆ ಬಂದಾಗ ಸಂಭ್ರಮ ಪಡುವ ಮಾಸ್ತರ ದಂಪತಿಗಳು ಅವರೆಲ್ಲ ಹೊರಟುಹೋದ ಮೇಲೆ ಒಂಟಿತನ ಅನುಭವಿಸುತ್ತಾರೆ. ಮತ್ತೆ ಎಂದೋ ಬರಲಿರುವ ಮಕ್ಕಳು, ಮೊಮ್ಮಕ್ಕಳ ಮುಖ ಕಾಣುವ ಕಾತರ ನಿರೀಕ್ಷೆಗಳೊಂದಿಗೆ ದಿನ ಕಾಯುತ್ತಿದ್ದಾರೆ. ಮನೆಯ ತುಂಬ ರಾಶಿ ರಾಶಿ ಪುಸ್ತಕಗಳ ಒಟ್ಟಿಲು ಓದುವ ಗೀಳನ್ನು ಅಂಟಿಸಿಕೊಂಡ ಅವರಿಗೆ ಪುಸ್ತಕಗಳೇ ನಿಜವಾದ ಆಸ್ತಿ. ಆದರೆ ಇತ್ತೀಚೆಗೆ ಮಂದವಾಗುತ್ತಿರುವ ಕಣ್ಣಿನ ಬೆಳಕಿನಿಂದಾಗಿ ಓದುವುದು ಕಷ್ಟವಾಗಿ ತಳಮಳ, ನೋವು ಅನುಭವಿಸುತ್ತಿದ್ದಾರೆ. ದಿನನಿತ್ಯ ತಮ್ಮ ಭೇಟಿಗಾಗಿ ಬರುವ ಅಭಿಮಾನಿಗಳೊಂದಿಗೆ ಒಂದಿಷ್ಟು ತೆರೆದುಕೊಳ್ಳುತ್ತಾರೆ. ಒಳಗಣ್ಣಾಗಿ ಗತವೈಭವಕ್ಕೆ ಜಾರುತ್ತಾರೆ. ಜಾಗತೀಕರಣದ ಪ್ರಹಾರದಿಂದ ಹಿನ್ನೆಲೆಗೆ ಸರಿಯುತ್ತಿರುವ ಜನಪದ ಕಲೆ ಮತ್ತು ಸಂಸ್ಕೃತಿಗಳ ದುಃಸ್ಥಿತಿಯನ್ನು ನೆನೆದು ಆತಂಕಗೊಳ್ಳುತ್ತಾರೆ. ಎನ್.ಹುಚ್ಚಪ್ಪ ಮಾಸ್ತರ್ ಎಂಬುದು ಶೋಷಿತ ಸಮುದಾಯಗಳ ಸ್ವಾಭಿಮಾನದ ಪ್ರತೀಕವಾಗಿ ಮಾನವೀಯ ತುಡಿತ ಮಿಡಿತಗಳ ರೂಪಕವಾಗಿ ನೆನಪಾಗುವ ಹೆಸರು. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಜನಪದದ ಮೂಲ ದಾಖಲಾಗುವ ಚೇತನ. ನಾಡಿನಾದ್ಯಂತ ಸಾಹಿತಿಗಳು, ವಿದ್ವಾಂಸರುಗಳಿಗೆಲ್ಲ ಮಾಸ್ತರರು ಗೊತ್ತು. ವಿಶ್ವವಿದ್ಯಾಲಯಗಳು ಮತ್ತು ಅಕಾಡೆಮಿಗಳು ಅವರೊಂದಿಗೆ ಸಂಪರ್ಕ ಒಡನಾಟದಲ್ಲಿವೆ. ಜನಪದವನ್ನು ಕಟ್ಟುವ ಯಾವುದೇ ಸಂದರ್ಭದಲ್ಲಿ ಮಾಸ್ತರರ ಮಾರ್ಗದರ್ಶನ, ಸಲಹೆ ಸೂಚನೆಗಳನ್ನು ಪಡೆಯುತ್ತಾರೆ. ಜನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ

ಹಲವಾರು ವರ್ಷ ಕರ್ತವ್ಯ ನಿರ್ವಹಿಸಿರುವ ಮಾಸ್ತರರಿಗೆ ರಂಗಭೂಮಿ ಕ್ಷೇತ್ರದ ಸೇವೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೯೧), ಜಾನಪದ ಮತ್ತು ಗಿರಿಜನ ಸೇವೆಗಾಗಿ ಶ್ರೀ ಹೊಸಬಾಳೆ ಬಿ.ಅನಂತಪ್ಪ ಸೇವಾ ಪುರಸ್ಕಾರ (೨೦೦೧), ಜನಪದ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಉದಯ ವಾಹಿನಿ ಜನಮನ ಸ್ಪಂದನದ ಕನ್ನಡ ಮಾಸ ಪತ್ರಿಕೆಯ ಹೃದಯವಂತರು ಪ್ರಶಸ್ತಿ (೧೯೯೩) ಮತ್ತು ನಾಡಿನಾದ್ಯಂತ ಹತ್ತಾರು ವೇದಿಕೆಗಳು ಅವರನ್ನು ಗೌರವಿಸಿ ಸನ್ಮಾನಿಸಿವೆ. ರಂಗಚಟುವಟಿಕೆಯಲ್ಲಿ ಕ್ರಾಂತಿ ಮಾಡಿದ ಹೆಗ್ಗೋಡು, ಭೂಗೇಣಿದಾರರ ಪರ ನಿಂತು ಚಳುವಳಿ ರೂಪಸಿದ ಕಾಗೋಡು ಇವುಗಳ ನಡುವೆ ಜಾನಪದ ಶಕ್ತ ರೂಪಕವಾಗಿ ಬೆಳೆದುನಿಂತವರು ಹುಚ್ಚಪ್ಪ ಮಾಸ್ತರರು.

ಎನ್.ಹುಚ್ಚಪ್ಪ ಮಾಸ್ತರರವರ ಸಂಕ್ಷಿಪ್ತ ಜೀವನ ಪರಿಚಯ:

ಜನನ : ೧೮-೦೫-೧೯೩೮

ಜನ್ಮ ಸ್ಥಳ : ಸಾಗರ-ಹೊನ್ನಾವರ ರಸ್ತೆಯಲ್ಲಿ ಸಾಗರ ಪಟ್ಟಣದಿಂದ ಮೂರು ಕಿ.ಮೀ. ದೂರದಲ್ಲಿರುವ ಕುಗ್ವೆ ಎಂಬ ಹಳ್ಳಿ "ದೀವರು" ಜನಾಂಗದ ಬಡ ಗೇಣಿದಾರ ಕುಟುಂಬದಲ್ಲಿ ಜನನ.

ತಂದೆ : ನೆಲ್ಲೂರು ಹುಚ್ಚಪ್ಪ

ತಾಯಿ : ಪುಟ್ಟಮ್ಮ

ಪತ್ನಿ : ಶ್ರೀಮತಿ ಗೌರಮ್ಮ

ಮಕ್ಕಳು : ೧) ಕೆ.ಹೆಚ್.ಶಿವಕುಮಾರ್ (ಭಾರತೀಯ ವಾಯುದಾಳದ ಮಾಜಿ ಅಧಿಕಾರಿ)

೨) ಕೆ.ಎಚ್.ಜಯರಾಮ (ಭಾರತೀಯ ಜೀವವಿಮೆ ಅಭಿವೃದ್ಧಿ ಅಧಿಕಾರಿ)

೩) ಕೆ.ಎಚ್.ವಾಸುದೇವ (ಸರ್ಕಾರಿ ಪದವಿ ಪೂರ್ವ ಕಾಲೇಜಿನ ಗಣಿತ ಶಾಸ್ತ್ರ ಉಪನ್ಯಾಸಕರು)

ವಿದ್ಯಾಭ್ಯಾಸ : ಮೆಟ್ರಿಕ್ಯುಲೇಶನ್ (ಎಸ್.ಎಸ್.ಎಲ್.ಸಿ) (ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯವರು ನಡೆಸುತ್ತಿರುವ ವಿದ್ಯಾಪೀಠಗಳಲ್ಲೊಂದಾದ ಹಾಸನ ಜಿಲ್ಲೆಯ ಯಗಚಿ ವಿದ್ಯಾಪೀಠದಲ್ಲಿ ಎರಡು ವರ್ಷ ಶಿಕ್ಷಣ.

ಗಂಧಿ ತತ್ವಗಳು ಮತ್ತು ಗಾಂಧಿ ಅಧ್ಯಯನ, ಗುಡಿ ಕೈಗಾರಿಕೆಗಳಾದ ನೇಯ್ಗೆ, ಚಾಪೆ ನೇಯ್ಗೆ, ನೂಲುವುದು ಮುಂತಾದವುಗಳಲ್ಲಿ ತರಬೇತಿ.

ಉದ್ಯೋಗ : ಕನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಬುಡಕಟ್ಟು ಜನಾಂಗಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನಡೆಸಲ್ಪಡುವ ಆಶ್ರಮ ಶಾಲೆಗಳ ಮುಖ್ಯ ಶಿಕ್ಷಕನಾಗಿ ೧೯೫೯ ರಲ್ಲಿ ವೃತ್ತಿ ಪ್ರಾರಂಭ.

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಹಿರೇಮನೆ ಮಹಾತ್ಮಾಗಾಂಧಿ ಗಿರಿಜನ ಆಶ್ರಮ ಶಾಲೆಯ ಮುಖ್ಯ ಶಿಕ್ಷಕನಾಗಿ ೧೯೫೯ ರಿಂದ ೧೯೬೫ ವರೆಗೆ, ೧೯೭೨ ರಿಂದ ೧೯೭೭ ವರೆಗೆ, ೧೯೮೦ ರಿಂದ ೧೯೯೦ ವರೆಗೆ, ೧೯೯೨ ರಿಂದ ೧೯೯೬ ವರೆಗೆ ೨೫ ವರ್ಷ ಸೇವೆ. ದಾವಣಗೆರೆ ಜಿಲ್ಲೆ ಹೊನ್ನಳ್ಳಿ ತಾಲ್ಲೂಕು ಚೀಲೂರು **'ಕಡದಕಟ್ಟೆ'** ಎಂಬ ಗ್ರಾಮದಲ್ಲಿರುವ ಸಂಚಾರಿ ಅರೆಸಂಚಾರಿ ಹೆಳವ ಜನಾಂಗದ ಸ್ವಾಮಿ ವಿವೇಕಾನಂದ ಗಿರಿಜನ ಆಶ್ರಮ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ೧೯೬೬ ರಿಂದ ೧೯೬೭ ರ ವರೆಗೆ ಎರಡು ವರ್ಷ ಸೇವೆ. ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಗೋಪನಾಳ ಎಂಬ ಗ್ರಾಮದಲ್ಲಿರುವ ಹಕ್ಕಿಪಿಕ್ಕಿ ಜನಾಂಗದ 'ಬಾಪೂಜಿ ಗಿರಿಜನ ಆಶ್ರಮ ಶಾಲೆ'ಯಲ್ಲಿ ೫ ವರ್ಷ ಸೇವೆ. ಸೊರಬ ತಾಲ್ಲೂಕು ಸೊರಬ ಪಟ್ಟಣದಲ್ಲಿರುವ ಹಸಲರು ಜನಾಂಗದ ಸರ್ಕಾರಿ ಗಿರಿಜನ ಆಶ್ರಮ ಶಾಲೆಯಲ್ಲಿ ೧೯೬೯ ರಿಂದ ೧೯೭೨ ವರೆಗೆ ಮತ್ತು ೧೯೯೦ ರಿಂದ ೧೯೯೨ ವರೆಗೆ ನಾಲ್ಕು ವರ್ಷ ಮುಖ್ಯಶಿಕ್ಷಕನಾಗಿ ಕರ್ತವ್ಯ ನಿರ್ವಹಣೆ.

ಹೀಗೆ 1959 ಜುಲೈ 1 ರಿಂದ 1996 ಮೇ 31 ರ ವರೆಗೆ 37 ವರ್ಷ ಬುಡಕಟ್ಟು ಜನಾಂಗದ ಮಕ್ಕಳ ಆಶ್ರಮ ಶಾಲೆಗಳಲ್ಲಿ ಮುಖ್ಯ ಶಿಕ್ಷನಾಗಿ ಸೇವೆ ಸಲ್ಲಿಸಿ 1996 ಮೇ 31 ರಂದು ನಿವೃತ್ತಿ.

ರಂಗಭೂಮಿ

ಹದಿನಾರನೇ ವಯಸ್ಸಿನಿಂದ ಕುಗ್ವೆ ಗ್ರಾಮದಲ್ಲಿ ಮೂಡಲಪಾಯ ಬಯಲಾಟಗಳಾದ ಇಂದ್ರಜಿತ ಕಾಳಗ, ಅಹಿರಾವಣ, ಮಹಿರಾವಣ, ರತಿಕಲ್ಯಾಣ ಬಯಲಾಟಗಳಲ್ಲಿ ರಾವಣ, ಕೌಂಡ್ಲಿಕ ಮುಂತಾದ ರಾಕ್ಷಸ ಪಾತ್ರಗಳ ನಿರ್ವಹಣೆ ಮತ್ತು ಹಾಡುಗಾರಿಕೆ.

೧೯೭೪ ರಿಂದ ೧೯೭೮ ರ ವರೆಗೆ ನಿನಾಸಂ ಹೆಗ್ಗೋಡು ಇವರು ರಾಜ್ಯಾದ್ಯಂತ ಹಾಗೂ ರಾಜ್ಯದ ಹೊರಗೆ (ದೆಹಲಿ) ಪ್ರದರ್ಶಿಸಿದ ಹಾಡು ಕುಣಿತಗಳ ನೃತ್ಯ ನಾಟಕ 'ಸಂಗ್ಯಾಬಾಳ್ಯ' ದಲ್ಲಿ

ಮುಖ್ಯ ಗಾಯಕನಾಗಿ ಕಾರ್ಯನಿರ್ವಹಣೆ. ನಿನಾಸಂ ನಾಟಕಗಳಾದ ಸಿದ್ದಿರಂಗ ನಾಟಕ, **'ಕಪ್ಪು ಜನ ಕೆಂಪು ನೆರಳು'** (ನಿರ್ದೇಶನ: ಸಿ.ಆರ್.ಜಂಬೆ, ರಚನೆ: ಕೆ.ವಿ.ಸುಬ್ಬಣ್ಣ), ದಂಗೆಯ ಮುಂಚಿನ ದಿನಗಳು (ನಿರ್ದೇಶನ ಮತ್ತು ರಚನೆ: ಪ್ರಸನ್ನ) ಇವುಗಳಿಗೆ ಸಂಗೀತ ಸಂಯೋಜನೆ. **'ಬೆಪ್ಪುತಕ್ಕಡಿ ಬೋಳೆಶಂಕರ'** (ಡಾ॥ ಚಂದ್ರಶೇಖರ ಕಂಬಾರ), ಗಾಸಿರಾಮ್ ಕೊತ್ವಾಲ್ ಮುಂತಾದ ನಾಟಕಗಳಿಗೆ ಸಂಗೀತ ನಿರ್ವಹಣೆ. ಸಾಗರದಲ್ಲಿ ರಂಗಮಂಚ (ರಿ) ಕಾಗೋಡು ಎಂಬ ರಂಗಸಂಸ್ಥೆಯನ್ನು ಸ್ಥಾಪಿಸಿ ಅಧ್ಯಕ್ಷನಾಗಿ ಕಾರ್ಯನಿರ್ವಹಣೆ. ಈ ಸಂಸ್ಥೆಯಿಂದ ಪ್ರದರ್ಶಿಸಿದ ಡಾ॥ ಚಂದ್ರಶೇಖರ ಕಂಬಾರ ರವರ ಜೋಕುಮಾರಸ್ವಾಮಿ, ನಾಕಥೆ, ನಾ.ಡಿಸೋಜಾ ರವರ **'ಬೆತ್ತಲೆಸೇವೆ'** ಮುಂತಾದ ನಾಟಕಗಳಿಗೆ ಸಂಗೀತ ಸಂಯೋಜನೆ ಮತ್ತು ನಿರ್ವಹಣೆ.

ಜಾನಪದ ರಂಗಸಂಕುಲ (ರಿ) ಕುಗ್ವೆ ಎಂಬ ರಂಗಸಂಸ್ಥೆ ಯನ್ನು ೧೯೮೭ ರಲ್ಲಿ ಸ್ಥಾಪಿಸಿ ಈ ಸಂಸ್ಥೆಯಿಂದ ೧೯೮೮ ಫೆಬ್ರವರಿಯಲ್ಲಿ ಹಾಗೂ ೧೯೮೮ ಆಗಸ್ಟ್‌ನಲ್ಲಿ ೨ ರಂಗ ತರಬೇತಿ ಶಿಬಿರಗಳನ್ನು ನಡೆಸಿ ಶಿಬಿರಾರ್ಥಿಗಳಿಂದ **'ಕಡ್ಡಿಮಟ್ಟಿ ಸ್ಟೇಷನ್‌ಮಾಸ್ಟರ್'** ಎಂಬ ಜಾನಪದ ನಾಟಕವನ್ನು ಬುಡಕಟ್ಟು ಜನಾಂಗದವರಾದ ಹಸಲ ಯುವಕರುಗಳಿಂದ ದೇವನೂರು ಮಾದೇವ ಅವರ **'ಡಾಂಬರು ಬಂದುದು'** ಎಂಬ ಸಣ್ಣ ಕಥೆಯನ್ನು ನಾಟಕಕ್ಕೆ ರೂಪಾಂತರಿಸಿ ಪ್ರಯೋಗಿಸಲಾಯಿತು. **'ಕಡ್ಡಿಮಟ್ಟಿ ಸ್ಟೇಷನ್‌ಮಾಸ್ತರ್'** ನಾಟಕ ಬೆಂಗಳೂರು ದೂರದರ್ಶನದಲ್ಲಿಯೂ ಪ್ರಸಾರವಾಯಿತು.

ಕೇಂದ್ರ ಸಂಗೀತ ನಾಟಕ ಅಕಾಡೆಮಿಯು ೧೯೯೦ ಜನವರಿ ೧೨ ರಿಂದ ೧೬ ರ ವರೆಗೆ ಪಾಂಡಿಚರಿಯಲ್ಲಿ ಏರ್ಪಡಿಸಿದ್ದ ದಕ್ಷಿಣ ವಲಯ ನಾಟಕೋತ್ಸವದಲ್ಲಿ ಜಾನಪದ ರಂಗ ಸಂಕುಲ (ರಿ) ಕುಗ್ವೆ ಈ ಸಂಸ್ಥೆಯಿಂದ ಉತ್ತರ ಕರ್ನಾಟಕದ ಪ್ರಸಿದ್ಧ ಸಣ್ಣಾಟವಾದ **'ಸಂಗ್ಯಾಬಾಳ್ಯಾ'** ನಾಟಕವನ್ನು ಪ್ರದರ್ಶಿಸಿ ದಕ್ಷಿಣ ರಾಜ್ಯಗಳಲ್ಲಿಯೇ ಶ್ರೇಷ್ಠ ನಾಟಕವೆಂದು ಆಯ್ಕೆಯಾಗಿದ್ದು ೧೯೯೦ ರ ಮಾರ್ಚ್ ೨೬ ರಿಂದ ೩೦ ರ ವರೆಗೆ ದೆಹಲಿಯಲ್ಲಿ ನಡೆದ ನಾಟ್ಯ ಸಮಾರೋಹದಲ್ಲಿ ಭಾಗವಹಿಸಿ ಮೆಚ್ಚುಗೆ ಗಳಿಸಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರು ೧೯೯೦ ರ ನವೆಂಬರ್ ೨೦ ರಿಂದ ೨೪ ರ ವರೆಗೆ ಬಳ್ಳಾರಿ ಜಿಲ್ಲಾ ಹೂವಿನ ಹಡಗಲಿಯಲ್ಲಿ ನಡೆಸಿದ ಜಾನಪದ ನಾಟಕೋತ್ಸವದಲ್ಲಿ ಆಹ್ವಾನಿತ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ

ಜಾನಪದ ಕ್ಷೇತ್ರ

೧೯೮೭ ರಿಂದ ೧೯೯೧ ರ ವರೆಗೆ ಕರ್ನಾಟಕ ಸರ್ಕಾರದಿಂದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯನಾಗಿ ನೇಮಕ. ಶಿವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳಾದ ದೀವರು, ಹಸಲರು, ಗೊಂಡರು, ಕುಡುಬಿ, ಹಾಲಕ್ಕಿ ಒಕ್ಕಲಿಗರು, ಸಿದ್ದಿಗಳು, ಕಚ್ಚಗೌಳಿಗರು ಮುಂತಾದ ಜನಾಂಗಗಳು ಆಚರಿಸುವ ಹಬ್ಬ ಹರಿದಿನಗಳು ಅವರ ಜೀವನ ಜನಪದ ಕುಣಿತಗಳು, ಜನಪದ ಕಲೆಗಳು, ಆಚರಣೆ ನಂಬಿಕೆ, ಅವರ ಆಚಾರ ವಿಚಾರಗಳನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ವೀಡಿಯೋ ಚಿತ್ರೀಕರಣದ ಮೂಲಕ ದಾಖಲಿಸಿರುವುದು. ಬುಡಕಟ್ಟು ಜನಾಂಗದ ಕಲಾವಿದರಿಗೆ ಪ್ರತಿವರ್ಷ ಅಕಾಡೆಮಿ ಪ್ರಶಸ್ತಿ ನೀಡುವಂತೆ ಅಕಾಡೆಮಿ ಸಭೆಯಲ್ಲಿ ಪ್ರತಿಪಾದನೆ. ಅಕಾಡೆಮಿ ಸದಸ್ಯರ ಒಪ್ಪಿಗೆ. ಪ್ರಥಮ ವರ್ಷ ಭಟ್ಕಳ ತಾಲ್ಲೂಕು ಹಲ್ಯಾಣಿಯ ತಿಮ್ಮಪ್ಪ ಮಂಜುಗೊಂಡರಿಗೆ ಪ್ರಶಸ್ತಿ ನೀಡಿತು. ನಂತರ ಪ್ರತಿವರ್ಷ ಒಬ್ಬ ಬುಡಕಟ್ಟು ಕಲಾವಿದರಿಗೆ ಪ್ರಶಸ್ತಿ ನೀಡುವ ಕ್ರಮ ಮುಂದುವರಿಕೆ.

೧೯೮೯ ರಿಂದ ೧೯೯೮ ರ ವರೆಗೆ ಕರ್ನಾಟಕ ಜಾನಪದ ಮಹಾತಜ್ಞ ನಾಡೋಜ ಮತ್ತು ಪಂಪ ಪ್ರಶಸ್ತಿ ವಿಜೇತ ಎಚ್.ಎಲ್.ನಾಗೇಗೌಡರ ಕರ್ನಾಟಕ ಜಾನಪದ ಪರಿಷತ್ತಿನ ಆಡಳಿತ ಮಂಡಳಿಯ ಸದಸ್ಯನಾಗಿ ನಾಮಕರಣ. ೧೯೮೯ ರಿಂದ ೧೯೯೮ ರ ವರೆಗೆ ೯ ವರ್ಷಗಳ ಕಾಲ ಸೇವೆ. ಪರಿಷತ್ತಿನ ಮತ್ತು ಜಾನಪದ ಲೋಕದ ಅಭಿವೃದ್ಧಿಗೆ ನೆರವು.

ಮಲೆನಾಡು ಜಾನಪದ ಮತ್ತು ಯಕ್ಷಗಾನ ಕಲಾಪ್ರತಿಷ್ಠಾನ (ರಿ) ತಾಳಗುಪ್ಪ, ಈ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ೧೯೮೪ ಮೇ ೧೩-೧೪ ರಂದು ತಾಳಗುಪ್ಪದಲ್ಲಿ ಶಿವಮೊಗ್ಗ ಉತ್ತರಕನ್ನಡ ಜಿಲ್ಲೆಗಳ ಕಲಾವಿದರು, ವಿದ್ವಾಂಸರುಗಳನ್ನು ಸೇರಿಸಿ ಅಂತರ ಜಿಲ್ಲಾ ಜಾನಪದ ಸಾಹಿತ್ಯ ಮತ್ತು ಕಲಾಮೇಳದ ಸಂಘಟನೆ.

ಸಾಗರ ಪಟ್ಟಣದಲ್ಲಿ ೧೯೮೭ ಡಿಸೆಂಬರ್ ೫ ಮತ್ತು ೬ ರಂದು ಮಲೆನಾಡು ಜಾನಪದ ಮತ್ತು ಯಕ್ಷಗಾನ ಕಲಾಪ್ರತಿಷ್ಠಾನ (ರಿ) ತಾಳಗುಪ್ಪ ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವುಗಳ ಸಂಯುಕ್ತ ಆಶ್ರಯದಲ್ಲಿ ಅಖಿಲ ಕರ್ನಾಟಕ ಗಿರಿಜನ ಜಾನಪದ ವಿಚಾರ ಸಂಕೀರ್ಣಗಳ ಸಂಘಟನೆ. ಕರ್ನಾಟಕ ಬುಡಕಟ್ಟು ಜನಾಂಗಗಳನ್ನು ಕುರಿತು ವಿದ್ವಾಂಸರುಗಳು ಮತ್ತು ಅಧ್ಯಯನಪೂರ್ಣ ಪ್ರಬಂಧಗಳನ್ನು ಮಂಡಿಸಿದರು. ಪ್ರತಿದಿವಸ ಬುಡಕಟ್ಟು ಕಲಾಪ್ರಕಾರಗಳು ನಡೆದವು. ಬೆಂಗಳೂರು ದೂರದರ್ಶನದಲ್ಲಿ ೧೯೯೪ ರಿಂದ ಪ್ರತಿ

ಶುಕ್ರವಾರ ಪ್ರಸಾರವಾಗುತ್ತಿದ್ದ 'ಸಿರಿಗಂಧ' ಎಂಬ ಜಾನಪದ ಕಾರ್ಯಕ್ರಮದ ಚಿತ್ರೀಕರಣದಲ್ಲಿ ಸಾಹಿತ್ಯ ಮತ್ತು ಕ್ಷೇತ್ರ ನೆರವು ಹಾಗೂ ಸಂಘಟನೆ. ೧೯೯೮ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಮತ್ತು ಬೆಂಗಳೂರು ಇದರ ಸದಸ್ಯನಾಗಿ ೨ ನೇ ಬಾರಿಗೆ ನೇಮಕ ಹಾಗೂ ಸಮರ್ಥ ಕಾರ್ಯನಿರ್ವಹಣೆ

ಪ್ರಬಂಧ ಮಂಡನೆ

೧೯೮೫ ಡಿಸೆಂಬರ್ ೧೫ ರಿಂದ ೧೭ ರ ವರೆಗೆ ಮೈಸೂರಿನಲ್ಲಿ ನಡೆದ ಚರಿತ್ರಾರ್ಹ ವಿಶ್ವ ಕನ್ನಡ ಸಮ್ಮೇಳನದಲ್ಲಿ ಡಿಸೆಂಬರ್ ೧೬ ರಂದು ಕರ್ನಾಟಕ ಜಾನಪದ ಕಲೆಗಳು-ಜಿಲ್ಲಾ ಸಮೀಕ್ಷೆ ಎಂಬ ಗೋಷ್ಠಿಯಲ್ಲಿ ಶಿವಮೊಗ್ಗ ಜಿಲ್ಲೆಯ ಜಾನಪದ ಕಲೆಗಳು ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ. ಶಿವಮೊಗ್ಗ ಸಾಗರದಲ್ಲಿ ೧೯೯೨ ಸೆಪ್ಟೆಂಬರ್ ೧೩ ರಂದು ನಡೆದ ಮೂರನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಜಾನಪದ ಗೋಷ್ಠಿಯಲ್ಲಿ ಜಾನಪದ ರಂಗಭೂಮಿ ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ೧೯೯೨ ನವೆಂಬರ್ ೨೮, ೨೯ ರಂದು ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ನಡೆಸಿದ ಸಹ್ಯಾದ್ರಿ ಆದಿವಾಸಿ ಜನಪದ ಕಲಾಮಹೋತ್ಸವದಲ್ಲಿ ನಡೆದ ಮೂರನೇ ಗೋಷ್ಠಿಯಲ್ಲಿ ಗೊಂಡರು ಎಂಬ ಆದಿವಾಸಿ ಜನಾಂಗದ ಬಗ್ಗೆ ಪ್ರಬಂಧ ಮಂಡನೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಹೊಟೆಲ್ ಮಯೂರ ರಿವರವ್ಯೂನಲ್ಲಿ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಶನ್ ಆಫ್ ಇಂಡಿಯಾ ಮೈಸೂರು ಶಾಖೆಯವರು ೧೯೯೩ ಜನವರಿ ೨೭ ರಿಂದ ೩೦ ರ ವರೆಗೆ ನಡೆಸಿದ ಜನಸಂಖ್ಯೆ ಮತ್ತು ಕುಟುಂಬ ಕಲ್ಯಾಣ ಯೋಜನಾ ಶಿಕ್ಷಣ ಶಿಬಿರದಲ್ಲಿ ಜನಪದ ಕಲೆಗಳ ಬಳಕೆ ಕುರಿತು ಕಾರ್ಯಾಗಾರದಲ್ಲಿ ಆದಿವಾಸಿ ಮೇಳಗಳು ಮತ್ತು ಕುಟುಂಬ ಕಲ್ಯಾಣ ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶಿವಮೊಗ್ಗ ಇವರು ಏರ್ಪಡಿಸಿದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲಾಮೇಳದಲ್ಲಿ ನಡೆದ ಗೋಷ್ಠಿಯಲ್ಲಿ 'ಗಿರಿಜನ ಸಮುದಾಯದಲ್ಲಿ ಜನಪದ ಕಲೆಗಳು' ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ. ಶಿವಮೊಗ್ಗ ನಗರದಲ್ಲಿ ೧೯೯೪ ಏಪ್ರಿಲ್ ೮ ರಿಂದ ೧೭ ರ ವರೆಗೆ ನಡೆದ ಸಹ್ಯಾದ್ರಿ ಉತ್ಸವದಲ್ಲಿ ಹಮ್ಮಿಕೊಂಡ ಸಹ್ಯಾದ್ರಿ ಸಾಹಿತ್ಯೋತ್ಸವದಲ್ಲಿ ಜಿಲ್ಲೆಯ ಸಾಹಿತ್ಯ ಸಮೀಕ್ಷೆ ಗೋಷ್ಠಿಯಲ್ಲಿ ಜಿಲ್ಲೆಯ ಜನಪದ ಸಾಹಿತ್ಯ ಸಮೀಕ್ಷೆ ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ.

ವಿಶೇಷ ಉಪನ್ಯಾಸಗಳು ಮತ್ತು ಪ್ರಾತ್ಯಕ್ಷಿಕೆ

ಶಿವಮೊಗ್ಗ ನಗರದ ರೋಟರಿ ಕ್ಲಬ್‌ನಲ್ಲಿ ೧೯೮೬ ಮೇ ೭ ರಂದು ಜಾನಪದ ಸಾಹಿತ್ಯ ಮತ್ತು ಪದ್ಯಗಳು ಎಂಬ ವಿಷಯದಲ್ಲಿ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ೧೯೯೩ ನವೆಂಬ್ ೨ ರಿಂದ ೪ ರ ವರೆಗೆ ಬೆಂಗಳೂರು ಸಮೀಪದ ವಿದ್ಯಾನಗರದಲ್ಲಿ ನಡೆಸಿದ ಜಾನಪದ ಸಂಗೀತ ಶಿಬಿರದಲ್ಲಿ ಜನಪದ ಸಂಗೀತದ ಬಗ್ಗೆ ಉಪನ್ಯಾಸ.

ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ ವಿಚಾರ ಸಂಕೀರ್ಣಗಳು, ಸಮಾವೇಶಗಳು ಹಾಗೂ ಕಾರ್ಯಾಗಾರಗಳು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ರಾಯಚೂರಿನಲ್ಲಿ ೧೯೮೬ ಅಕ್ಟೋಬರ್ ೧೮, ೧೯ ರಂದು ನಡೆಸಿದ ಅಣಕು ಕರ್ನಾಟಕ ಜಾನಪದ ಸಮಾವೇಶದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ೧೯೮೬ ನವೆಂಬರ್ ೨೦ ರಿಂದ ೩೪ ರ ವರೆಗೆ ಬಳ್ಳಾರಿ ಜಿಲ್ಲಾ ಹೂವಿನ ಹಡಗಲಿಯಲ್ಲಿ ನಡೆಸಿದ ಜಾನಪದ ನಾಟಕೋತ್ಸವದಲ್ಲಿ ಪ್ರತಿನಿಧಿಯಾಗಿ ಭಾಗವಹಿಸುವಿಕೆ. ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು ಇವರು ೧೯೯೦ ಏಪ್ರಿಲ್ ೧೩ ರಿಂದ ೧೫ ರ ವರೆಗೆ ಬೆಂಗಳೂರಿನ ಸಮೀಪವಿರುವ ರಾಮನಗರ ಜಾನಪದ ಲೋಕದಲ್ಲಿ ಏರ್ಪಡಿಸಿದ್ದ ಜಾನಪದ ಸಂಗೀತ ಮತ್ತು ಯಕ್ಷಗಾನ ಸಂಗೀತ ಗೋಷ್ಠಿಯಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜಾವೂರು ಇವರ ಸಂಯುಕ್ತ ಆಶ್ರಯದಲ್ಲಿ ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ಹೊಸೂರಿನಲ್ಲಿ ೧೯೯೦ ಅಕ್ಟೋಬರ್ ೧೦ ರಿಂದ ೧೯ ರ ವರೆಗೆ ನಡೆಸಿದ ತೊಗಲುಗೊಂಬೆ ಕಾರ್ಯಾಗಾರ ಮತ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ೧೯೯೨ ಮಾರ್ಚ್ ೧ ಮತ್ತು ೨ ರಂದು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕು ವಾನಳ್ಳಿಯಲ್ಲಿ ನಡೆಸಿದ ಕರ್ನಾಟಕ ಯಕ್ಷಗಾನ ಸಂಗಮ ಕಾರ್ಯಕ್ರಮದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಉಡುಪಿ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದವರು ೧೯೯೩ ಮೇ ೧ ರಿಂದ ೩ ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕು ಮೊಡಂಕಾಪುವಿನಲ್ಲಿ ನಡೆದ ಜನಪದ ಕಲೆಗಳು ಎಂಬ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ. **'ಕನ್ನಡ ವಿಶ್ವವಿದ್ಯಾಲಯ ಹಂಪಿ'** ಇವರು ೧೯೯೩ ಡಿಸೆಂಬರ್ ೨೪ ರಿಂದ

೨೮ ರ ವರೆಗೆ ನಡೆಸಿದ ಬಯಲಾಟಗಳ ಪ್ರದರ್ಶನ ಪ್ರಾತ್ಯಕ್ಷಿಕೆ ಮತ್ತು ಸಂವಾದ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಕವಿ ಕಾವ್ಯ (ರಿ) ಹೆಗ್ಗೋಡ್ ಇವರು ೧೯೯೩ ಡಿಸೆಂಬರ್ ೨೨ ರಿಂದ ೨೫ ರ ವರೆಗೆ ಹೆಗ್ಗೋಡಿನಲ್ಲಿ ನಡೆಸಿದ ತೋಂಡಿ ಸಂಪ್ರದಾಯ ಹಾಗೂ ಹೊಸ ಕವಿತೆ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದಾರೆ. ಕವಿ ಕಾವ್ಯ (ರಿ) ಹೆಗ್ಗೋಡ್ ಮತ್ತು ಉದಯ ಕಲಾವಿದರು ಸಾಗರ ಇವರ ಸಂಯುಕ್ತ ಆಶ್ರಯದಲ್ಲಿ ೧೯೯೫ ಜುಲೈ ೨೯, ೩೦ ರಂದು ನಡೆಸಿದ ಚಿತ್ರ ಚಿತ್ರಣ ಚಿತ್ರಪ್ರಜ್ಞೆ ಬಹುಮಾಧ್ಯಮ ವಿಚಾರಸಂಕೀರ್ಣದಲ್ಲಿ ಭಾಗವಹಿಸಿದ್ದಾರೆ.

ಕಲಾವಿದರೊಂದಿಗೆ ಭಾಗವಹಿಸಿದ ಜನಪದ ಉತ್ಸವಗಳು

೧೯೮೭ ಅಕ್ಟೋಬರ್ ೨ ರಿಂದ ನವೆಂಬರ್ ೪ ರ ವರೆಗೆ ನಡೆದ ಮೈಸೂರು ದಸರಾ ಉತ್ಸವದಲ್ಲಿ ಅಕ್ಟೋಬರ್ ೨ ರಂದು ನಡೆದ ದಸರಾ ಮೆರವಣಿಗೆಯಲ್ಲಿ ಗೊಂಡರ ಕುಣಿತ ಕಲಾವಿದರೊಂದಿಗೆ ಭಾಗವಹಿಸಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯವರು ದೆಹಲಿಯಲ್ಲಿ ೧೯೮೭ ಅಕ್ಟೋಬರ್ ೨೭ ರಿಂದ ೩೧ ರ ವರೆಗೆ ನಡೆಸಿದ ಲೋಕೋತ್ಸವದಲ್ಲಿ ಸಿದ್ದಿ ಜನಾಂಗದ ಪುಗಡಿ ಮತ್ತು ದಮಾಯಿ ಕಲಾತಂಡದವರೊಂದಿಗೆ ಭಾಗವಹಿಸಿದ್ದಾರೆ. ಕೇರಳ ರಾಜ್ಯದ ಪಾಲ್ಘಾಟ್‌ನಲ್ಲಿ ೧೯೮೯ ಸೆಪ್ಟೆಂಬರ್ ೧೧ ರಿಂದ ೧೩ ರ ವರೆಗೆ ನಡೆಸಿದ ಓಣಂ ಉತ್ಸವದಲ್ಲಿ ಕುಣಬಿ ಜನಾಂಗದ ಹೋಳಿಸಿಗ್ಮೋ ಕುಣಬಿ ಜನಾಂಗದ ಹೋಳಿಸಿಗ್ಮೋ ಕಲಾತಂಡದವರೊಂದಿಗೆ ಭಾಗವಹಿಸಿದ್ದಾರೆ. ಕರ್ನಾಟಕ ಜಾನಪದ ಟ್ರಸ್ಟ್ ಬೆಂಗಳೂರು ಇವರು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಹಿಳಾ ವರ್ಷದ ಅಂಗವಾಗಿ ನಡೆಸಿದ ಅಪೂರ್ವ ಆದಿವಾಸಿ ಮಹಿಳಾ ಜಾನಪದ ಮೇಳದಲ್ಲಿ ದೀವರು ಜನಾಂಗದ ಮಹಿಳಾ ಕಲಾತಂಡದವರೊಂದಿಗೆ ಭಾಗವಹಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರು ಭಾಷಾನಿಕಾಯದ ಆಶ್ರಯದಲ್ಲಿ ೧೯೯೨ ನವೆಂಬರ್ ೨೭, ೨೮ ರಂದು ನಡೆಸಿದ ಕೃಷಿ ಪದಕೋಶ ನಿರ್ಮಾಣ ಪ್ರಜ್ಞ ಸಹಾಯಕರ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಜಾನಪದ ವಿಭಾಗದ ಆಶ್ರಯದಲ್ಲಿ ೧೯೯೨ ಡಿಸೆಂಬರ್ ೨೫ ರಿಂದ ೨೮ ರ ವರೆಗೆ ನಡೆಸಿದ ಕರ್ನಾಟಕ ಗ್ರಾಮದೇವತೆಗಳು ಮತ್ತು ಜನಪದ ಕಲೆಗಳ ಕುರಿತಾಗಿ ವಿಶ್ವಕೋಶ ನಿರ್ಮಾಣ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದಾರೆ.

ವಿಶೇಷ ಕ್ಷೇತ್ರ ಕಾರ್ಯಗಳು

ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಭಾಷಾ ನಿಖಾಯದ ಆಶ್ರಯದಲ್ಲಿ ನಿರ್ಮಾಣ ಮಾಡಿರುವ ಕೃಷಿ ಪದಕೋಶ ಯೋಜನೆಯಲ್ಲಿ ಶಿವಮೊಗ್ಗ ಜಿಲ್ಲೆಯ ತಜ್ಞ ಸಹಾಯಕನಾಗಿ ಕಾರ್ಯನಿರ್ವಹಣೆ ಹಾಗೂ ಇದೇ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಆಶ್ರಯದಲ್ಲಿ ಪ್ರಕಟಿಸುತ್ತಿರುವ ಕರ್ನಾಟಕ ದೇವತೆಗಳು ಮತ್ತು ಕಲೆಗಳು ವಿಶ್ವಕೋಶಗಳಿಗೆ ಶಿವಮೊಗ್ಗ ಜಿಲ್ಲೆಯ ಮಲೆನಾಡು ತಾಲ್ಲೂಕುಗಳಾದ ಸಾಗರ, ಸೊರಬ, ಹೊಸನಗರ, ಶಿಕಾರಿಪುರ ತಾಲ್ಲೂಕುಗಳ ಗ್ರಾಮದೇವತೆಗಳು ಮತ್ತು ಜನಾಪದ ಕಲೆಗಳ ಮಾಹಿತಿ ಸಂಗ್ರಹ ಕಾರ್ಯ ನಿರ್ವಹಣೆ.

ದೂರದರ್ಶನದಲ್ಲಿ

೧೯೯೨ ಅಕ್ಟೋಬರ್ ೨ ರಿಂದ ಪ್ರಸಾರವಾದ ಬೆಂಗಳೂರು ರಜಿನಿ ಕ್ರಿಯೇಶನ್ಸ್‌ನವರು ನಾಗತಿಹಳ್ಳಿ ಚಂದ್ರಶೇಖರ್‌ರವರ ೧೩ ಸಣ್ಣ ಕಥೆಗಳನ್ನು ಆಧರಿಸಿ ನಿರ್ಮಾಣ ಮಾಡಿರುವ ದೂರದರ್ಶನ ದಾರವಾಹಿ ಈ ಬದುಕುವಿನಲ್ಲಿ "ಯಾತನೆಗಳು" ಎಂಬ ಸರಣಿಯಲ್ಲಿ ಮುಖ್ಯ ಪಾತ್ರದಾರಿಯಾಗಿ ಅಭಿನಯ. ೧೯೯೫ ರಿಂದ ೩೦ ರಂದು ಬೆಂಗಳೂರು ದೂರದರ್ಶನದಲ್ಲಿ ಪ್ರಸಾರವಾದ ಸಿರಿಗಂಧ ಎಂಬ ಜಾನಪದ ದಾರವಾಹಿಯಲ್ಲಿ ಸಂದರ್ಶನ ಪ್ರಸಾರವಾಗಿರುವುದು. ಬೆಂಗಳೂರು ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರವಾದ 'ಮಕರಂದ' ಎಂಬ ದಾರವಾಹಿಯಲ್ಲಿ ಸಂದರ್ಶನ ಪ್ರಸಾರವಾಗಿದೆ.

ಹಸೆ ಚಿತ್ತಾರ ಕಲೆ ಪ್ರದರ್ಶನ

ಕರ್ನಾಟಕ ಕರಕುಶಲ ಮಂಡಳಿ ಮತ್ತು ಕೇಂದ್ರ ಕರಕುಶಲ ಮಂಡಳಿಯವರು ಸೇರಿ ೧೯೮೭ ರ ಮಾರ್ಚ್ ೬ ರಿಂದ ೧೦ ರ ವರೆಗೆ ಬೆಂಗಳೂರಿನಲ್ಲಿ ನಡೆಸಿದ ದಕ್ಷಿಣ ಭಾರತದ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಮಲೆನಾಡಿನ ಕರಕುಶಲ ವಸ್ತುಗಳು ಹಸೆ ಚಿತ್ತಾರ ಹಾಗೂ ಬುಟ್ಟಿ ಚಿತ್ತಾರಗಳನ್ನು ಪ್ರದರ್ಶನ ಮಾಡಿದ್ದಾರೆ. ೧೯೯೮ ಮಾರ್ಚ್ ೧೯ ರಿಂದ ೧೯೯೯ ಮಾರ್ಚ್ ೧೮ ರ ವರೆಗೆ ಭಾರತ ಸರ್ಕಾರದ ಜವಳಿ ಮಂತ್ರಾಲಯ ಕರಕುಶಲ ಆಯುಕ್ತರು ಸಾಗರ ತಾಲ್ಲೂಕು ಚೂರಿಕಟ್ಟೆಯಲ್ಲಿ ನಡೆಸಿದ ಕರಕುಶಲ ಯೋಜನೆಯಡಿಯಲ್ಲಿ ಹತ್ತು ಜನ ಹೆಣ್ಣುಮಕ್ಕಳಿಗೆ ಹಸೆಗೋಡೆ ಮತ್ತು ಬುಟ್ಟಿ ಚಿತ್ತಾರದ ಕಲಿಕಾ ತರಬೇತಿ ಕೇಂದ್ರದ ಸಂಘಟನೆ. ಭಾರತ ಸರ್ಕಾರದ ಜವಳಿ ಮಂತ್ರಾಲಯ ಅಭಿವೃದ್ಧಿ ಆಯುಕ್ತರು ಮತ್ತು ಕರಕುಶಲ ಮಾರಾಟ ಹಾಗೂ ಸೇವಾ ಕೇಂದ್ರ ಮೈಸೂರು ಇವರು ಸೇರಿ ೧೯೯೮ ಡಿಸೆಂಬರ್ ೧೫ ರಂದು

ಸಾಗರದ ಗಾಂಧಿ ಮಂದಿರದಲ್ಲಿ ನಡೆಸಿದ ಶಿವಮೊಗ್ಗ ಜಿಲ್ಲಾ ಕರಕುಶಲ ಕಲೆಗಳ ಕಾರ್ಯಾಗಾರದಲ್ಲಿ ಭಾಗವಹಿಸಿ ಹಸೆಚಿತ್ರ ಮತ್ತು ಬುಟ್ಟಿ ಚಿತ್ತಾರಗಳು ಹಾಗೂ ಭತ್ತ ಮತ್ತು ಇಟ್ಟೆಂಡೆ ಹುಲ್ಲಿನಿಂದ ತಯಾರಿಸಿದ ಕರಕುಶಲ ವಸ್ತುಗಳನ್ನು ಪ್ರದರ್ಶನ ಮಾಡಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯವರು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ೧೯೯೮ ಡಿಸೆಂಬರ್ ೨೧ ರಂದು ನಡೆಸಿದ ಕರ್ನಾಟಕ ಬುಡಕಟ್ಟು ಮಹಿಳೆ ಎಂಬ ವಿಚಾರ ಸಂಕೀರ್ಣದಲ್ಲಿ ಬುಡಕಟ್ಟು ಮಹಿಳೆಯರ ಹಸೆಚಿತ್ರಕಲೆ ಪ್ರದರ್ಶನ ಮಾಡಿದರು. ಕನ್ನಡ ವಿಶ್ವವಿದ್ಯಾಲಯ ಹಂಪಿ ಮತ್ತು ಮಲೆನಾಡು ಜಾನಪದ ಲೋಕ (ರಿ) ಸಾಗರ ಇವರ ಸಂಯುಕ್ತ ಆಶ್ರಯದಲ್ಲಿ ೨೦೦೨ ನವೆಂಬರ್ ೩೦ ರಂದು ಸಾಗರ ಶ್ರೀ ಮಹಾಗಣಪತಿ ಕಲ್ಯಾಣ ಮಂಟಪದಲ್ಲಿ ನಡೆದ ಬುಡಕಟ್ಟು ಅಭಿವೃದ್ಧಿ ಪರಿಕಲ್ಪನೆ ಮತ್ತು ಮೀಮಾಂಸೆ ಹಾಗೂ ಬುಡಕಟ್ಟು ಕಲಾಮೇಳ ಮತ್ತು ಚಿತ್ತಾರ ಪ್ರದರ್ಶನ ವಿಚಾರ ಸಂಕೀರ್ಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಸೆ ಮತ್ತು ಬುಟ್ಟಿ ಚಿತ್ತಾರಗಳು ಮಲೆನಾಡಿನ ಭತ್ತ ಮತ್ತು ಇಟ್ಟಂಡೆ ಹುಲ್ಲಿನಿಂದ ತಯಾರಿಸಿದ ಕರಕುಶಲ ವಸ್ತುಗಳನ್ನು ಪ್ರದರ್ಶನ ಮಾಡಿದರು. "ಚಿತ್ತಾರದಗಳ" ಗಡೆಮನೆ ಸಾಗರ ತಾಲ್ಲೂಕು ದಿ ಅಡ್ವೆಂಚರ್ಸ್ ಸಾಹಸ ಶಿಕ್ಷಣ ಶಾಲೆ ಬೆಂಗಳೂರು ಮತ್ತು ಅಶೋಕ ಇನ್ನೋವೇಚರ್ಸ್ ಫಾರ್ ದಿ ಪಬ್ಲಿಕ್ ಈ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನಲ್ಲಿ ೨೦೦೩ ಏಪ್ರಿಲ್ ೭ ರಂದು ನಡೆಸಿದ ಹಸೆ ಚಿತ್ರಕಲಾವಿದೆಯರ ಬೃಹತ್ ಮಹಿಳಾ ಸಮಾವೇಶ ಮತ್ತು ಕರಕುಶಲ ವಸ್ತುಗಳ ಬಿಡುಗಡೆ ಸಮಾರಂಭದಲ್ಲಿ ಆಹ್ವಾನಿತ ಅತಿಥಿಯಾಗಿ ಭಾಗವಹಿಸಿದ್ದಾರೆ. ಭಾರತ ಸರ್ಕಾರ ಜವಳಿ ಮಂತ್ರಾಲಯ ಅಭಿವೃದ್ಧಿ ಆಯುಕ್ತರು ಮತ್ತು ಕರಕುಶಲ ಮಾರುಕಟ್ಟೆ ಹಾಗೂ ಸೇವಾ ಕೇಂದ್ರ ಮೈಸೂರು ಇವರು ಸೇರಿ ೨೦೦೩ ಡಿಸೆಂಬರ್ ೧೦ ರಂದು ಶಿವಮೊಗ್ಗ ಮಥುರಾ ಪ್ಯಾರಡೇಸ್‌ನಲ್ಲಿ ನಡೆಸಿದ ಕಾರ್ಯಾಗಾರದಲ್ಲಿ ಹಸೆ ಚಿತ್ರ, ಬುಟ್ಟಿ ಚಿತ್ರ ಮತ್ತು ಕರಕುಶಲ ವಸ್ತುಗಳನ್ನು ಪ್ರದರ್ಶನ ಮಾಡಿದ್ದು ಹಾಗೂ ಹಸೆ ಚಿತ್ರಕಲೆಯ ಸಂಪನ್ಮೂಲ ವ್ಯಕ್ತಿಯಾಗಿ ಉಪನ್ಯಾಸ ಮಾಡಿದ್ದಾರೆ. ರಂಗಾಯಣ ಮತ್ತು ಜಿಲ್ಲಾ ಪಂಚಾಯತ್ ಮೈಸೂರು ಇವರು ಸೇರಿ ರಂಗಾಯಣದ ಆವರಣದಲ್ಲಿ ೨೦೦೪ ಮಾರ್ಚ್ ೧೨ ರಂದು ನಡೆಸಿದ ಕೈಮಗ್ಗ ಮತ್ತು ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಹಸೆ ಚಿತ್ರಕಲೆ ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಹಸೆ ಚಿತ್ರಗಳ ಪ್ರದರ್ಶನ ಮತ್ತು ಉಪನ್ಯಾಸ ನೀಡಿದ್ದಾರೆ.

ಪ್ರಶಸ್ತಿ ಪುರಸ್ಕಾರಗಳು ಹಾಗೂ ಸನ್ಮಾನಗಳು

೧೯೯೧ ನವೆಂಬರ್ ೧ ರಂದು ಕರ್ನಾಟಕ ಸರ್ಕಾರ ರಂಗಭೂಮಿ ಕ್ಷೇತ್ರದಲ್ಲಿ ಮಾಡಿದ ಅನುಪಮ ಸೇವೆಯನ್ನು ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ೨೦೦೧ ಫೆಬ್ರವರಿ ೧೧ ರಂದು ಸಾಗರದಲ್ಲಿ ಶ್ರೀ ಮಹಾಲಕ್ಷ್ಮಿ ಅನಂತ ಸೇವಾ ಟ್ರಸ್ಟ್ (ರಿ) ಹೊಸಬಾಳೆ ಸೊರಬಾ ತಾಲ್ಲೂಕು ಇವರು ಜಾನಪದ ಮತ್ತು ಗಿರಿಜನ ಸೇವೆಗೆ ಹೊಸಬಾಳೆ ಬಿ.ಅನಂತಪ್ಪ ಸೇವಾ ಪುರಸ್ಕಾರ ನೀಡಿ ಗೌರವಿಸಿದೆ. ೨೦೦೩ ಮೇ ೧೧ ರಂದು ಹೃದಯವಾಹಿನಿ ಜನಮನ ಸ್ಪಂಧನದ ಕನ್ನಡ ಮಾಸಪತ್ರಿಕೆಯ ನಾಲ್ಕನೇ ವಾರ್ಷಿಕೋತ್ಸವ ಹಾಗೂ ಪ್ರಥಮ ಸಹ್ಯಾದ್ರಿ ಸಾಹಿತ್ಯ ಸಮ್ಮೇಳನದಲ್ಲಿ ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಅನನ್ಯ ಕೊಡುಗೆಗಾಗಿ ಹೃದಯವಂತರು ಎಂಬ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

೧೯೮೯ ನವೆಂಬರ್ ೧ ರಂದು ಶಿವಮೊಗ್ಗ ನೆಹರೂ ಕ್ರೀಡಾಂಗಣದಲ್ಲಿ ೩೪ ನೇ ಗಣರಾಜ್ಯ ದಿನೋತ್ಸವದ ಅಂಗವಾಗಿ ಶಿವಮೊಗ್ಗ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಹಾಗೂ ಶಿವಮೊಗ್ಗ ಕರ್ನಾಟಕ ರಾಜ್ಯೋತ್ಸವ ಸಮಿತಿಯವರಿಂದ ಸನ್ಮಾನ. ೧೯೯೧ ಡಿಸೆಂಬರ್ ೩ ರಂದು ಸೊರಬ ತಾಲ್ಲೂಕು ಹಳೆ ಸೊರಬದ ಗ್ರಾಮಸ್ಥರು ಮತ್ತು ಶ್ರೀ ರಾಮೇಶ್ವರ ಯುವಕ ಸಂಘದ ಯುವಕರುಗಳಿಂದ ಸನ್ಮಾನ. ೧೯೯೧ ಡಿಸೆಂಬರ್ ೧೫ ರಂದು ಹೊಸನಗರ ತಾಲ್ಲೂಕು ಅಲಗೇರಿ ಮಂಡ್ರಿ ಯುವಕ ಸಂಘದವರಿಂದ ಸನ್ಮಾನ. ೧೯೯೧ ಡಿಸೆಂಬರ್ ೧೬ ರಂದು ಸಾಗರ ತಾಲ್ಲೂಕು ಕೆಳದಿ ಭಾರತಿ ಕಲಾವಿದರಿಂದ ಸನ್ಮಾನ. ೧೯೯೧ ಡಿಸೆಂಬರ್ ೨೨ ರಂದು ಸೊರಬ ಪಟ್ಟಣದ ಅಭಿರುಚಿ ಎಂಬ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯಿಂದ ಸನ್ಮಾನ. ೧೯೯೧ ಡಿಸೆಂಬರ್ ೨೨ ರಂದು (ರಾತ್ರಿ) ಸಾಗರ ತಾಲ್ಲೂಕು ಸಿರಿವಾಳ ಗ್ರಾಮದ ಶ್ರೀ ವೀರಭದ್ರೇಶ್ವರ ಯುವಕ ಸಂಘದವರಿಂದ ಸನ್ಮಾನ. ೧೯೯೧ ನವೆಂಬರ್ ೧೪ ರಂದು ಸೊರಬ ಪರಿವರ್ತಿತ ಮಂಡಲ ಪಂಚಾಯತಿ ಹಾಗೂ ರಾಜ್ಯೋತ್ಸವ ಸಮಿತಿ ಸೇರಿ ಸೊರಬ ಗುರುಭವನದಲ್ಲಿ ಸನ್ಮಾನ. ೧೯೯೨ ಜನವರಿ ೩ ರಂದು ಸೊರಬ ಮಂಡಲದ ಹಿರೇಶಕುನದ ಶ್ರೀ ಮಾರಿಕಾಂಬ ಯುವಕ ಸಂಘದ ಗೆಳೆಯರಿಂದ ಸನ್ಮಾನ. ೧೯೯೨ ಜನವರಿ ೧೨ ರಂದು ಸೊರಬ ತಾಲ್ಲೂಕು ಬಿದರಗೇರೆ ಯುವಕ ಸಂಘದವರಿಂದ ಸನ್ಮಾನ. ೧೯೯೨ ಜನವರಿ ೨೫ ರಂದು ಸಾಗರ ತಾಲ್ಲೂಕು ಅಭಿಮಾನಿ ಬಳಗ 'ಸ್ನೇಹಕೂಟ'ದವರಿಂದ ಸಾಗರ ಪಟ್ಟಣದ ಪುರಸಭೆಯ ಒಳ ಸಭಾಂಗಣದಲ್ಲಿ ಅದ್ದೂರಿಯಾದ ಸನ್ಮಾನ ಮತ್ತು ಅಭಿನಂದನೆ. ೧೯೯೨ ಫೆಬ್ರವರಿ ೨೪ ರಂದು ಸೊರಬ ತಾಲ್ಲೂಕು ಚಂದ್ರಗುತ್ತಿ

ಬೆನ್ನೂರು ಮಾರುತಿ ಯುವಕ ಸಂಘದ ಗೆಳೆಯರಿಂದ ಸನ್ಮಾನ, ೧೯೯೩ ಜನವರಿ ೩೧ ರಂದು ಕನ್ನಡ ಸಂಘ (ರಿ) ಕಾರ್ಗಲ್ (ಶರಾವತಿ ಯೋಜನಾ ಪ್ರದೇಶ) ಇವರಿಂದ ಸನ್ಮಾನ ಮತ್ತು ಅಭಿನಂದನೆ. ೨೦೦೩ ಏಪ್ರಿಲ್ ೭ ರಂದು 'ಚಿತ್ತಾರದಂಗಳ' ಗಡೇಮನೆ ಸಾಗರ ತಾಲ್ಲೂಕು ದಿ ಅಡ್ವೆಂಚರ್ಸ್ ಸಾಹಸ ಶಿಕ್ಷಣ ಶಾಲೆ ಬೆಂಗಳೂರು ಹಾಗೂ ಅಶೋಕ ಇನ್ನೋವೇಚರ್ಸ್ ಫಾರ್ ದಿ ಪಬ್ಲಿಕ್ ಈ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆದ ೫೦೦ ಹಸೆ ಚಿತ್ರ ಕಲಾವಿದೆಯರ ಸಮಾವೇಶದಲ್ಲಿ ದಂಪತಿಗಳಿಬ್ಬರಿಗೂ ಹಸೆ ಚಿತ್ರಕಲೆ ಉಳಿವಿಗಾಗಿ ಸೇವೆ ಸಲ್ಲಿಸುತ್ತಿರುವುದಕ್ಕೆ ಸನ್ಮಾನ. ೨೦೦೫ ಏಪ್ರಿಲ್ ೨೯ ರಂದು ಸಿಗಂದೂರು ಶ್ರೀ ಚೌಡೇಶ್ವರಿ ದೇವಿ ದೇವಾಲಯ ಸಿಗಂದೂರು ಕಳಸವಳ್ಳಿ ಗ್ರಾಮ (ತುಮರಿ) ಸಾಗರ ತಾಲ್ಲೂಕು ಇದರ ಧರ್ಮದರ್ಶಿಗಳು ಮತ್ತು ಪ್ರಧಾನ ಅರ್ಚಕರು ಸೇರಿ ಪರಮಪೂಜ್ಯ ಶ್ರೀ ಮದ್ವಗುರು ಶಂಕರಾಚಾರ್ಯ ಶ್ರೀಶ್ರೀಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳು ಶ್ರೀ ರಾಮಚಂದ್ರಪುರ ಮಠ ಹೊಸನಗರ ತಾಲ್ಲೂಕು ಇವರ ದಿವ್ಯ ಸಾನಿಧ್ಯದಲ್ಲಿ ಸಾಧನೆಯ ಬದುಕು ಸಾರ್ಥಕತೆಯ ಜನಸೇವೆಗಾಗಿ ಅಭಿನಂದನೆಗಳೊಂದಿಗೆ ಸನ್ಮಾನ. ೨೦೦೫ ಅಕ್ಟೋಬರ್ ೨ ರಂದು ದೀನಾ ಸೇವಾ ಟ್ರಸ್ಟ್ (ರಿ) ಬೆಂಗಳೂರು ಇವರಿಂದ ಸಾಗರ ತಾಲ್ಲೂಕು ಇಡುವಾಣಿಯಲ್ಲಿ ಬುಡಕಟ್ಟು ಜನಾಂಗಗಳ ಬಗ್ಗೆ ಕಾಳಜಿ ಮತ್ತು ಸಮರ್ಪಣಾ ಮನೋಭಾವದಿಂದ ಸಲ್ಲಿಸಿದ ಸೇವೆಗೆ ಅಭಿನಂದನೆ ಮತ್ತು ಸನ್ಮಾನ. ೨೦೦೬ ಫೆಬ್ರವರಿ ೪ ರಂದು ವನವಾಸಿ ಕಲ್ಯಾಣ (ರಿ) ಕರ್ನಾಟಕ ಇವರು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ನಡೆಸಿದ ವನವಾಸಿಗಳ ಪ್ರಥಮ ಸಮ್ಮೇಳನದಲ್ಲಿ ಸನ್ಮಾನ. ೨೦೦೬ ಏಪ್ರಿಲ್ ೨೭ ರಂದು ಡಾ॥ ಬಿ.ಆರ್.ಅಂಬೇಡ್ಕರ್ ಗಿರಿಜನ ಯುವಕ ಸಂಘ ಮತ್ತು ಮೇಟಿಕಟ್ಟೆ ಭೂತೇಶ್ವರ ಸೇವಾ ಸಮಿತಿ ಗಿರಿಜನ ಕಾಲೋನಿ ಹಿರೇಮನೆ ಸಾಗರ ತಾಲ್ಲೂಕು ಇವರು ಸೇರಿ ಕಳೆದ ೩೭ ವರ್ಷಗಳಿಂದ ಗಿರಿಜನರ ಅಭಿವೃದ್ಧಿಗೆ ಶ್ರಮಿಸಿ ಅಪಾರ ಸೇವೆ ಸಲ್ಲಿಸಿದ್ದಕ್ಕಾಗಿ ದಂಪತಿಗಳಿಬ್ಬರಿಗೂ ಸನ್ಮಾನ ಮತ್ತು ಅಭಿನಂದನೆ. ೨೦೦೬ ಸೆಪ್ಟೆಂಬರ್ ೧೦ ರಂದು ಶ್ರೀ ಕಾಗೋಡು ರಂಗಮಂಚ-೨೫, ಶ್ರೀ ಕಾಗೋಡು ತಿಮ್ಮಪ್ಪ-೭೫ ಸಮಾರಂಭದಲ್ಲಿ ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳು, ಕವಿಗಳು ಮತ್ತು ವಿಧಾನಪರಿಷತ್ತಿನ ಸದಸ್ಯರೂ ಆದ ಡಾ॥ಚಂದ್ರಶೇಖರ ಕಂಬಾರ ಇವರಿಂದ ಅಭಿನಂದನೆ ಮತ್ತು ಸನ್ಮಾನ. ಶಿವಮೊಗ್ಗ ಜಿಲ್ಲಾ ಯುವ ಆರ್ಯಈಡಿಗ ಸೇವಾ ಸಂಘ (ರಿ) ಇವರು ಶ್ರೀಶ್ರೀಶ್ರೀ ಬಸವ ಈಡಿಗ ಮಾರಯ್ಯಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ೨೦೦೬ ನವೆಂಬರ್ ೨೬ ರಂದು ಅಂಬೇಡ್ಕರ್ ಭವನ ಶಿವಮೊಗ್ಗದಲ್ಲಿ ಏರ್ಪಡಿಸಿದ್ದ ಸಂಸ್ಥೆಯ ೬ ನೇ ವರ್ಷ ಸ್ನೇಹಕೂಟ ಸಮಾರಂಭದಲ್ಲಿ ಸನ್ಮಾನ. ೨೦೦೬ ಡಿಸೆಂಬರ್ ೨೧, ೨೨, ೨೩ ರಂದು ಶಿವಮೊಗ್ಗದಲ್ಲಿ ಕನ್ನಡ ಹಿರಿಯ ಸಾಹಿತಿಗಳ ಖ್ಯಾತ

ಕವಿಗಳೂ ಆದ ಪ್ರೊ. ಕೆ.ಎಸ್.ನಿಸಾರ್ ಅಹ್ಮದ್ ಅಧ್ಯಕ್ಷತೆಯಲ್ಲಿ ನಡೆದ ೭೩ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಡಿಸೆಂಬರ್ ೨೩ ರಂದು ಬದುಕಿನ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗೈದು ಕನ್ನಡ ನಾಡು-ನುಡಿ ಸಂಸ್ಕೃತಿಗೆ ಸಲ್ಲಿಸಿರುವ ಅನನ್ಯ ಸೇವೆಯನ್ನು ಪರಿಗಣಿಸಿ ಈ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರಿಂದ ಆದರಪೂರ್ವಕ ಸನ್ಮಾನ. "ಸಂಕಲನ" ಬಚ್ಚಗಾರು ತಲವಾಟ ಗ್ರಾಮ ಈ ಸಾಂಸ್ಕೃತಿಕ ಸಂಸ್ಥೆಯು ಬಚ್ಚಗಾರು ಮತ್ತು ಸಾಗರ ವಿನೋಭ ಶಾಲಾ ಆವರಣದಲ್ಲಿ ೨೦೦೭ ರ ಮಾರ್ಚ್ ೧೦ ರಿಂದ ಏಪ್ರಿಲ್ ೧೬ ರ ವರೆಗೆ ನಡೆಸಿದ ದಶಮಾನೋತ್ಸವ ಕಾರ್ಯಕ್ರಮಗಳಲ್ಲಿ ೨೦೦೭ ಏಪ್ರಿಲ್ ೮ ರಂದು ಬಚ್ಚಗಾರು ಶ್ರೀ ಗಣಪತಿ ದೇವಸ್ಥಾನದ ಆವರಣದಲ್ಲಿ ನಡೆದ ಭರತನಾಟ್ಯ ಕಾರ್ಯಕ್ರಮದಲ್ಲಿ ವಿದ್ಯಾವಾಚಸ್ಪತಿ ಅರಳುಮಲ್ಲಿಗೆ ಪಾರ್ಥಸಾರಥಿ ಇವರಿಂದ ಸನ್ಮಾನ. ಸೊರಬ ತಾಲೂಕಿನ ಶ್ರೀ ರಾಮಕ್ಷೇತ್ರ ಶ್ರೀ ಗುರುದೇವ ಮಠ ಸೊರಬ, ತಾಲ್ಲೂಕು ಸೇವಾ ಸಮಿತಿ ಆರ್ಯಈಡಿಗ ಸಂಘ, ಆರ್ಯಈಡಿಗರ ನೌಕರರ ಸಂಘ ಹಾಗೂ ಬೆಂಗಳೂರು ಮತ್ತು ಶಿವಮೊಗ್ಗ ನಿವಾಸಿಗಳ ಸಮಿತಿ ಈ ಸಂಸ್ಥೆಗಳ ಸಹಭಾಗಿತ್ವ ಮತ್ತು ಸಹಕಾರದಿಂದ ೨೦೦೭ ಜುಲೈ ೧೫ ರಂದು ಪರಮಪೂಜ್ಯ ಶ್ರೀಶ್ರೀಶ್ರೀ ಆತ್ಮಾನಂದ ಸರಸ್ವತಿ ಸ್ವಾಮಿಗಳ ಸಾನಿಧ್ಯದಲ್ಲಿ ನಡೆದ ವಿಚಾರಸಂಕೀರ್ಣ ಪ್ರತಿಭಾ ಪುರಸ್ಕಾರ ೨೦೦೭ ರ ಸನ್ಮಾನ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಸಚಿವರಾದ ಸನ್ಮಾನ್ಯ ಶ್ರೀ ಶಿವಾನಂದನಾಯ್ಕ ಅವರಿಂದ ಸನ್ಮಾನ.

ಸನ್ಮಾನ ಪತ್ರಗಳು

ಮಾಸ್ತರರ ವ್ಯಕ್ತಿತ್ವ ಮತ್ತು ಶ್ರಮದ ಆಧಾರದ ಮೇಲೆ ಅವರಿಗೆ ಬಂದಿರುವ ಸನ್ಮಾನಗಳನ್ನು ಅವಲೋಕಿಸಿದಾಗ ಸನ್ಮಾನಗಳು, ಪ್ರಶಸ್ತಿಗಳು ರಾಶಿ ರಾಶಿಯಾಗಿ ಬಂದಿರುವುದು ಅವರು ಸಲ್ಲಿಸಿದ ಸೇವೆಗೆ ಸಂದ ಗೌರವವಾಗಿದೆಯಾದರೂ ಒಂದು ರಾಜ್ಯದ ನಾಡೋಜ ಪ್ರಶಸ್ತಿಯಂತಹ ಪುರಸ್ಕಾರಗಳು ಬರಬೇಕಾಗಿರುವುದು ಅವಶ್ಯವೆನಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮಾಸ್ತರರು ಹೇಳುವುದೇನೆಂದರೆ ಬುಡಕಟ್ಟುಗಳ ವೈಜ್ಞಾನಿಕ ಬೆಳವಣಿಗೆ ಮತ್ತು ಅವರ ಅಭಿವೃದ್ಧಿಯೇ ನನಗೆ ಬರುವ ಸನ್ಮಾನಗಳು ಎಂದಿದ್ದಾರೆ.

ದೀವ ಸೇವಾ ಟ್ರಸ್ಟ್ (ರಿ.) ಬೆಂಗಳೂರು, ಭಾನುವಾರ 2, ಅಕ್ಟೋಬರ್, 2005

ಸನ್ಮಾನ ಪತ್ರ

ದೀವ ಸೇವಾ ಟ್ರಸ್ಟ್ (ರಿ.) ಬೆಂಗಳೂರು ಇವರು
ಶ್ರೀ ಎನ್.ಹುಚ್ಚಪ್ಪಮಾಸ್ತರ್, ಹಿರೇಮನೆ ಇವರನ್ನು
ಸನ್ಮಾನಿಸಿ ಅರ್ಪಿಸಿದ ಸನ್ಮಾನ ಪತ್ರ

ಸನ್ಮಾನ್ಯರೇ,

ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕುಗ್ವೆಯಲ್ಲಿ ದೀವರ ಜನಾಂಗದ ಬಡ ಕುಟುಂಬದಲ್ಲಿ 1938ರಲ್ಲಿ ಜನಿಸಿ, ಆಕಾಲದಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿ ಗಿರಿಜನ ಆಶ್ರಮಶಾಲೆ ಹಿರೇಮನೆಯಲ್ಲಿ ಅಧ್ಯಾಪಕ ವೃತ್ತಿಯನ್ನು ಬಹಳ ಕಾಲ ನಿರ್ವಹಿಸಿ ಬದುಕುವಲ್ಲಿ ಅದ್ವಿತೀಯವಾದುದನ್ನು ಸಾಧಿಸಿದ್ದೀರಿ. ಬಾಲ್ಯದಿಂದ ಬುಡಕಟ್ಟು ಜನಾಂಗಗಳ ನಿರಂತರ ಸಂಪರ್ಕಹೊಂದಿದ್ದ ನೀವು ಆ ಜನಾಂಗದವರ ಜಾನಪದ ಸಂಪ್ರದಾಯ, ನಂಬಿಕೆಗಳು, ಆಚರಣೆಗಳು, ಹಬ್ಬಹರಿದಿನಗಳು, ಜಾನಪದ ಕುಣಿತಗಳು ಮುಂತಾದವನ್ನು ಹೊರಪ್ರಪಂಚಕ್ಕೆ ಪರಿಚಯಿಸುವಲ್ಲಿ ಬಹಳ ಶ್ರಮವಹಿಸಿದ್ದೀರಿ.

ಸ್ವತಃ ಗಾಯಕರು ಆಗಿರುವ ನೀವು ಜಾನಪದ ಹಾಡುಗಳು, ದೀವರ ಜನಾಂಗದ ಸಂಪ್ರದಾಯದ ಹಾಡುಗಳನ್ನು ಸಂಗ್ರಹಿಸಿ ಕೋಲಾಟದ ತಂಡಗಳನ್ನು ಕಟ್ಟಿ ನಾಡಿನುದ್ದಕ್ಕೂ ಪ್ರದರ್ಶನ, ವಿಚಾರಗೋಷ್ಠಿ, ಪ್ರಬಂಧ ಮಂಡನೆ ಮುಂತಾಗಿ ನಿರಂತರ ತೊಡಗಿಸಿಕೊಂಡಿರುತ್ತೀರಿ.

ನೀನಾಸಂ, ಕಾಗೋಡು ರಂಗಮಂಚ, ರಂಗಸಂಕುಲ ಕುಗ್ವೆ ಮುಂತಾದ ಸಾಂಸ್ಕೃತಿಕ ಸಂಘಟನೆಗಳ ನಿಕಟ ಸಂಪರ್ಕ ಹೊಂದಿದ್ದ ನೀವು ಗಾಯಕರವಾಗಿ ಸಂಗೀತ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುತ್ತೀರಿ.

ಬೆಂಗಳೂರು ದೂರದರ್ಶನದ "ಸಿರಿಗಂಧ" ಜಾನಪದ ಧಾರವಾಹಿಗೆ ಸಾಹಿತ್ಯ ನೆರವು ನೀಡಿರುತ್ತೀರಿ. ಗಿರಿಜನ ಸಂಸ್ಕೃತಿ, ಕಾಗೋಡು ಚಳುವಳಿ ಸುವರ್ಣ ಸಂಪುಟ ಎಂಬ ಗ್ರಂಥಗಳ ಹಾಗೂ ಕಾಗೋಡು ಚಳುವಳಿ 50 ವರ್ಷ ಎಂಬ ಸ್ಮರಣ ಸಂಚಿಕೆಯ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿ ಜಾನಪದ ವಿದ್ವಾಂಸರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದೀರಿ.

ನಿಮ್ಮ ಈ ಅನುಪಮ ಸಾಧನೆಗಳಿಂದಾಗಿ ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟಿರುತ್ತೀರಿ. ರಂಗಭೂಮಿ ಕ್ಷೇತ್ರದ ಸೇವೆಗಾಗಿ 1991ರಲ್ಲಿ "ರಾಜ್ಯೋತ್ಸವ" ಪ್ರಶಸ್ತಿ, ಜಾನಪದ ಹಾಗೂ ಗಿರಿಜನ ಸೇವೆಗಾಗಿ 2001ರಲ್ಲಿ "ಹೊಸಬಾಳೆ ಶ್ರೀ ಬಿ.ಅನಂತಪ್ಪ ಸೇವಾ ಪುರಸ್ಕಾರ"ಗಳನ್ನು ಪಡೆದಿರುತ್ತೀರಿ.

ಅನೇಕ ಜಾನಪದ ಸಂಘಟನೆಗಳೊಂದಿಗೆ ಕಾರ್ಯನಿರ್ವಹಿಸಿರುವ ನೀವು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಎರಡು ಬಾರಿ ನೇಮಕಗೊಂಡು ಸೇವೆ ಸಲ್ಲಿಸಿರುತ್ತೀರಿ.

ನಿಮ್ಮ ಈ ಬಹುಮುಖ ಪ್ರತಿಭೆ, ಬುಡಕಟ್ಟು ಜನಾಂಗಗಳ ಬಗ್ಗೆ ಇರುವ ಕಾಳಜಿ ಹಾಗೂ ಸಮರ್ಪಣಾಮನೋಭಾವದಿಂದ ಸಲ್ಲಿಸಿದ ಸೇವೆಯು ನಮಗೂ ಆದರ್ಶಪ್ರಾಯವಾಗಿದ್ದು, ಈ ಕ್ಷೇತ್ರದಲ್ಲಿ ಕಿಂಚಿತ್ ಸೇವೆ ಸಲ್ಲಿಸಲು ಸ್ಫೂರ್ತಿನೀಡಲಿ ಎಂದು ಆಶಿಸುತ್ತಾ ಈ ದಿನ ನಿಮ್ಮನ್ನು ಆತ್ಮೀಯವಾಗಿ ಸನ್ಮಾನಿಸುತ್ತಿದ್ದೇವೆ.

ಪದಾಧಿಕಾರಿಗಳು ಮತ್ತು
ಕಾರ್ಯಕರ್ತರು
ದೀವ ಸೇವಾ ಟ್ರಸ್ಟ್ (ರಿ.) ಬೆಂಗಳೂರು.

ಸ್ಥಳ : ಇಡುವಾಣಿ
ದಿನಾಂಕ : 2-10-2005, ಭಾನುವಾರ

ವನವಾಸಿ ಕಲ್ಯಾಣ (ರಿ.) ಕರ್ನಾಟಕ

ವನವಾಸಿ ಪ್ರಥಮ ರಾಜ್ಯ ಸಮ್ಮೇಳನ

ಶಿರಸಿ. 04-02-2006

ಸನ್ಮಾನ ಪತ್ರ

ಶ್ರೀ ಎನ್.ಹುಚ್ಚಪ್ಪಮಾಸ್ತರ್, ಹಿರೇಮನೆ, ಸಾಗರ ತಾ॥, ಶಿವಮೊಗ್ಗ ಜಿಲ್ಲೆ ಇವರಿಗೆ-ವನವಾಸಿ ಕಲ್ಯಾಣ (ರಿ.) ಕರ್ನಾಟಕದ ವತಿಯಿಂದ ವನವಾಸಿಗಳ ರಾಜ್ಯ ಸಮ್ಮೇಳನದ ವಿಶೇಷ ಅತಿಥಿಯಾಗಿ ಗಿರಿಜನ ಸೇವೆಯಲ್ಲಿ ನಾಲ್ಕು ದಶಕಗಳ ಕಾಲ ತಮ್ಮನ್ನು ಅರ್ಪಿಸಿದ ನಿಮ್ಮನ್ನು ಸನ್ಮಾನಿಸಲಾಗುತ್ತಿದೆ. 1938ರ ಮೇ.18 ರಂದು ಅತಿ ಹಿಂದುಳಿದ ಜನಾಂಗದಲ್ಲಿ ಹುಟ್ಟಿದರೂ ಸ್ವಯಂ ಸಾಧನೆಯಿಂದ ಹಲವು ಮುಖಗಳಲ್ಲಿ ಸಿದ್ಧಿಯನ್ನು ಪಡೆದಿದ್ದು ವಿಶೇಷ. ಜಾನಪದ ಕಲೆ, ನಾಟಕ, ರಂಗಭೂಮಿ, ಶಿಕ್ಷಣ, ಸಾಹಿತ್ಯಕ್ಷೇತ್ರದಲ್ಲಿ ಆಕಾಶದಷ್ಟು ಬೆಳೆದಿದ್ದು ಸ್ವಯಂಪ್ರತಿಭೆಯ ಆಧಾರದಲ್ಲಿ. ಗುಡ್ಡಗಾಡು ಕ್ಷೇತ್ರದಲ್ಲಿ ವಾಸಿಸುತ್ತಾ ಗಿರಿಜನ ಮಕ್ಕಳ ಬದುಕನ್ನು ಹಸನುಗೊಳಿಸಲು ತಮ್ಮನ್ನು ಶ್ರೀಗಂಧದಂತೆ ತೇಯ್ದು ಅವರ ಸುಧಾರಣೆಗಾಗಿ ಜೀವನವನ್ನೇ ಮುಡುಪಾಗಿಟ್ಟವರು. 1959ರಲ್ಲಿ ಸಾಗರ ತಾಲ್ಲೂಕಿನ ಹಿರೇಮನೆ ಗ್ರಾಮದಲ್ಲಿ ಹಸಲರ ಜನಾಂಗದವರಿಗಾಗಿ ರಾಜ್ಯದ ಮೊದಲನೇ ಆಶ್ರಮ ಶಾಲೆ ಪ್ರಾರಂಭಿಸಿದ ಕೀರ್ತಿ ನಿಮ್ಮದು. ಗಿರಿಜನ ಆಶ್ರಮ ಶಾಲೆಯಲ್ಲಿ ಶಿಕ್ಷಕ ವೃತ್ತಿಯ ಜೊತೆ ಮಲೆನಾಡು ಭಾಗದ ವಿಶಿಷ್ಟ ಗಿರಿಜನ ಪಂಗಡಗಳಾದ ಹಸಲರು, ಗೊಂಡರು, ಕುಣಬಿಯರು, ದೀವರು, ಸಿದ್ದಿಗಳು, ಹಾಲಕ್ಕಿಗಳ ಬಗ್ಗೆ ವಿಶೇಷ ಅಧ್ಯಯನ ಮತ್ತು ಲೇಖನ ರಚಿಸಿದ್ದು ಸಾಧನೆಗಳ ಮೈಲುಗಲ್ಲು.

ಸಂಪಾದಕರು ಹಾಗೂ ಲೇಖಕರಾಗಿ ನಿಮ್ಮ ಕೊಡುಗೆ ಅಪಾರ. ಗಿರಿಜನರಾದ ಹಸಲರ ಬಗ್ಗೆ ಹಸಲರು ಪುಸ್ತಕ ಬರೆದಿದ್ದು ಹಾಗೂ ಚಂದ್ರುಗುತ್ತಿ ರೇಣುಕಾಂಬ ಜಾತ್ರೆ ಪುಸ್ತಕಗಳನ್ನು ರಚಿಸಿದ್ದೀರಿ. ಕಾಗೋಡು ಚಳುವಳಿ ಸುವರ್ಣ ಸಂಪುಟ ಎಂಬ ಬೃಹತ್‌ಗ್ರಂಥದ ಸಂಪಾದಕರಾಗಿ ನಿಮ್ಮ ಅನುಭವವನ್ನು ಬರೆದಿದ್ದೀರಿ ಹಾಗೂ ಜಾನಪದ ಅಕಾಡೆಮಿ ಪ್ರಕಟಿಸಿರುವ ಗಿರಿಜನ ಸಂಸ್ಕೃತಿ ಎಂಬ ಗ್ರಂಥದ ಸಂಪಾದಕತ್ವ ವಹಿಸಿದ್ದು ನಿಮ್ಮ ಹಿರಿಮೆ. ಎರಡು ಅವಧಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾಗಿ ನೇಮಕಗೊಂಡು ಸೇವೆ ಸಲ್ಲಿಸಿದ್ದೀರಿ.

ಅಲೆಮಾರಿ ಜನಾಂಗದವರಾದ ಹಕ್ಕಿಪಿಕ್ಕಿ ಹಾಗೂ ಹೆಳವರಿಗಾಗಿಯೇ ನೀವು 8 ವರ್ಷಗಳ ಕಾಲ ಸೇವೆ ಸಲ್ಲಿಸಿ ಅವರಲ್ಲಿ ಜಾಗೃತಿ ಸಂಘಟನೆ ಮಾಡಿದ್ದು ಮತ್ತೊಂದು ಸಾಧನೆ.

ನಿಮ್ಮ ಈ ಎಲ್ಲಾ ಸಾಧನೆಗಳು ಎಲೆಮರೆಯ ಕಾಯಂತೆ ನಡೆದಿದ್ದವು. ಯಾವುದೇ ಪ್ರಚಾರವನ್ನು ಬಯಸದೆ ಜನಸೇವೆಯೇ ಜನಾರ್ಧನ ಸೇವೆ ಎಂಬ ಮಾತನ್ನು ಜೀವಮಾನದುದ್ದಕ್ಕೂ ನಡೆಸಿಕೊಂಡು ಬಂದಿದ್ದೀರಿ ವಿನಯದೊಂದಿಗೆ ನಿಸ್ವಾರ್ಥ ಸೇವೆಯೇ ನಿಮ್ಮ ಗುರಿಯಾಗಿದ್ದು ಅದನ್ನೇ ಇಲ್ಲಿಯವರೆಗೂ ಮುಂದುವರಿಸಿದ್ದು ಇಡೀ ಸಮಾಜಕ್ಕೆ ನೀವೊಂದು ಮಾದರಿಯಾಗಿದ್ದೀರಿ.

ನಿಮ್ಮ ಈ ಅನುಪಮ ಕಾರ್ಯದಿಂದಾಗಿ ವನಸುಮದಂತ್ತಿರುವ ವಿವಿಧ ವನವಾಸಿ ಜನಾಂಗಗಳ ತುಂಬಾ ಸಾಂಸ್ಕೃತಿಕ ಜೀವನದ ಪರಿಚಯ ಮಾಡಿಸಿದ್ದೀರಿ. ನಮ್ಮ ಆ ಮುಗ್ಧ ಆದರೆ ಸುಸಂಸ್ಕೃತ ಜೀವನದ ಬಗ್ಗೆ ದೇಶ ಹೆಮ್ಮೆಪಡುವಂತೆ ಮಾಡಿದ ನಿಮ್ಮ ಕಾರ್ಯದ ಬಗ್ಗೆ ಅಭಿನಂದಿಸುತ್ತಾ ಗೌರವಿಸಲು ವನವಾಸಿ ಕಲ್ಯಾಣ ಹೆಮ್ಮೆ ಪಡುತ್ತದೆ.

ದಿನಾಂಕ :

ಸ್ಥಳ :

ಆರ್.ಎ.ರಂಗಸ್ವಾಮಿ ಅಧ್ಯಕ್ಷರು

ವನವಾಸಿ ಕಲ್ಯಾಣ (ರಿ.)

ಕರ್ನಾಟಕ.

ಕನ್ನಡಸಂಘ (ನೊಂ) ಕಾರ್ಗಲ್,
(ಶರಾವತಿ ಯೋಜನಾ ಪ್ರದೇಶ)

ಸನ್ಮಾನ ಪತ್ರ

ದಿನಾಂಕ 31 ಜನವರಿ 1993

ಮಹನೀಯ ಶ್ರೀ ಹುಚ್ಚಪ್ಪಮಾಸ್ತರರಿಗೆ,

ಕಾರ್ಗಲ್‌ನ ಕನ್ನಡ ಸಂಘ ತನ್ನ 13ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ತಮ್ಮನ್ನು ಸನ್ಮಾನಿಸುತ್ತಿದ್ದೇವೆ. ನಮ್ಮ ತಾಲ್ಲೂಕಿನ ಕುಗ್ವೆ ಗ್ರಾಮದ ನೆಲ್ಲೂರು ಹುಚ್ಚಪ್ಪ ಮತ್ತು ಪುಟ್ಟಮ್ಮ ದಂಪತಿಗಳಿಗೆ ಮಗನಾಗಿ 56 ವರ್ಷಗಳ ಹಿಂದೆ ದೀವರ ಜನಾಂಗದಲ್ಲಿ ಜನ್ಮ ತಳೆದು ಪ್ರೌಢಶಿಕ್ಷಣ ನಂತರ ಉಪಾಧ್ಯಾಯ ವೃತ್ತಿ ಕೈಗೊಂಡು ಬುಡಕಟ್ಟು ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇರುವ ಹಿರೇಮನೆಯ ಸರ್ಕಾರಿ ಗಿರಿಜನ ಆಶ್ರಯ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಜನಪ್ರಿಯರಾದಿರಿ.

ಪ್ರೌಢಾವಸ್ಥೆಯಿಂದಲೂ ಸಮಾಜ ಸೇವಾ ಕಾರ್ಯವನ್ನು ಒಂದು ಮುಖ್ಯ ಅಂಗವಾಗಿ ಮಾಡುತ್ತಾ ಬಂದಿರುವಿರಿ.

ಪ್ರಮುಖ ರಂಗ ಸಂಸ್ಥೆಯಾದ ನೀನಾಸಂನೊಂದಿಗೆ ಸಂಗೀತ ಸಂಯೋಜನೆಯಲ್ಲಿ ನೆರವು ನೀಡಿ, ಸಂಗ್ಯಾ-ಬಾಳ್ಯ, ಕಪ್ಪುಜನ, ಕೆಂಪುನೆರಳು ಮುಂತಾದ ನಾಟಕಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲದೇ ಕಾಗೋಡು ರಂಗಮಂಚ ತಂಡದೊಂದಿಗೆ ಜೋಕುಮಾರಸ್ವಾಮಿ, ನಾಯಿಕತೆ, ಬೆತ್ತಲೆಸೇವೆ ಮುಂತಾದ ನಾಟಕ ನಿರ್ವಹಿಸಿರುತ್ತೀರಿ. ಅಲ್ಲದೇ, ರಂಗಸಂಕುಲ ಕುಗ್ವೆ, ಇಲ್ಲಿ ರಂಗತರಬೇತಿ ಶಿಬಿರ ಸಂಘಟಿಸಿ ಕಡ್ಲಿಮಟ್ಟೆ ಕಾಶೀಬಾಯಿ ಸಣ್ಣಾಟವನ್ನು ಹಲವಾರು ಕಡೆ ಪ್ರಯೋಗಿಸಿ ಬೆಂಗಳೂರು ದೂರದರ್ಶನದಲ್ಲಿಯೇ ಯಶಸ್ವಿಯಾಗಿ ಪ್ರಯೋಗಿಸಿದಿರಿ.

ಕೇಂದ್ರ ಸಂಗೀತ ನಾಟಕ ಅಕಾಡೆಮಿವತಿಯಿಂದ ಪಾಂಡಿಚೇರಿ ಮತ್ತು ದೆಹಲಿಯಲ್ಲಿ ನಾಟಕಗಳನ್ನು ಅಭಿನಯಿಸಿ ಕನ್ನಡ ರಂಗಭೂಮಿ ಕಹಳೆಮೊಳಗಿಸಿದ್ದೀರಿ. ನಿಮ್ಮ ರಂಗ ಜೀವನದ ಈ ಸಾರ್ಥಕತೆಗೆ 1991ರ ರಾಜ್ಯೋತ್ಸವ ಪ್ರಶಸ್ತಿಗಳಿಸಿದ್ದೇ ಅಲ್ಲದೆ ಸೊರಬ, ಹೊಸನಗರ ತೀರ್ಥಹಳ್ಳಿ ಮತ್ತು ಸಾಗರದಲ್ಲಿಯೂ ಸನ್ಮಾನಿತರಾಗಿರುವಿರಿ. ಈ ಹಿಂದೆ ಜಾನಪದ ಅಕಾಡೆಮಿ ಸದಸ್ಯರಾಗಿದಲ್ಲದೆ ಪ್ರಸ್ತುತ ತಾಳಗುಪ್ಪದ ಜಾನಪದ ಮತ್ತು ಯಕ್ಷಗಾನ ಕಲೆ ಪ್ರತಿಷ್ಠಾನ ಬೆಂಗಳೂರಿನ ಕರ್ನಾಟಕ ಜಾನಪದ ಟ್ರಸ್ಟ್ ಈ ಸಂಸ್ಥೆಯಲ್ಲಿ ದೊರೆತ ಗೌರವಹುದ್ದೆಗಳು ತಮ್ಮ ವ್ಯಕ್ತಿತ್ವಕ್ಕೆ ಸಂದ ಗೌರವವಾಗಿದೆ.

ಮೈಸೂರಿನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನಕ್ಕೆ ಶಿವಮೊಗ್ಗದ ಜಿಲ್ಲೆ ಸಾಹಿತ್ಯ ಸಮ್ಮೇಳನ ಮತ್ತು ರೋಟರಿ ಸಂಸ್ಥೆಗಳ ಜಾನಪದ ಮೇಳಗಳಲ್ಲಿ ಪ್ರಬಂಧ ಮಂಡಿಸಿದ್ದೀರಿ. ನಿಮ್ಮ ಕಲಾ ಕ್ಷೇತ್ರ ರಂಗಭೂಮಿ ಜಾನಪದ ರಂಗಕ್ಕೆ ಮಾತ್ರ ಸೀಮಿತಗೊಳ್ಳದೆ "ಹಸಲರು" ಎಂಬ ಪುಸ್ತಕ ಪ್ರಕಟಿಸಿದಿರಿ. ಅಲ್ಲದೇ, ಮಲೆನಾಡಿನ ಜಾನಪದ ಕಥನಗೀತೆಗಳು, ದೀವರ ಜಾನಪದಗೀತೆಗಳು, ಅಂಟಿಗೆ ಪಂಟಿಗೆ ಹಾಡುಗಳು ಪ್ರಕಟಣಾ ಹಂತದಲ್ಲಿವೆ.

ಬಹುಮುಖಿ ವ್ಯಕ್ತಿತ್ವ ಹೊಂದಿರುವ ನಿಮ್ಮಂತಹ ಸೃಜನಶೀಲ ವ್ಯಕ್ತಿಯನ್ನು ಸನ್ಮಾನಿಸುವುದು ನಮ್ಮ ಸಂಘಟನೆಗೆ ಹೆಮ್ಮೆಯ ಸಂಗತಿಯಾಗಿದೆ. ತಾವು ಮಾಡುತ್ತಿರುವ ಕಲೆ, ಸಾಹಿತ್ಯ ಮತ್ತು ಸಮಾಜಸೇವೆಯು ನಿರಂತರ ಮುಂದುವರಿದು ತಮಗೆ ತಮ್ಮ ಕುಟುಂಬಕ್ಕೆ ತಾಯಿ ಭುವನೇಶ್ವರಿಯು ಆಯುಶ್ಯ ಆರೋಗ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸಿ ಈ ಸನ್ಮಾನ ಪತ್ರವನ್ನು ಅರ್ಪಿಸುತ್ತೇವೆ.

ತಾರೀಖು : 31-1-1993
ಕಾರ್ಗಲ್.

ಅಧ್ಯಕ್ಷರು/ಸದಸ್ಯರು
ಕನ್ನಡ ಸಂಘ (ಮೇರಿ)

॥ ಶ್ರೀ ಮಹಾಗಣಪತಿ ಪ್ರಸೀದತು ॥

ಸಂಕಲನ – ಬಚ್ಚಗಾರು

ಇದರ

ದಶಮಾನೋತ್ಸವದ ಸದವಸರದಲ್ಲಿ

ಶ್ರೀ ಹುಚ್ಚಪ್ಪ ಮಾಸ್ತರ್

ಅವರಿಗೆ

ಪ್ರೀತ್ಯಾದರದಿಂದ ಸಮರ್ಪಿಸಿದ

ಸಂಮಾನ ಪತ್ರ

ಹುಚ್ಚರದ ಜನರಿಲ್ಲ , ಹುಚ್ಚಿರದ ಮನೆಯಿಲ್ಲ
ಹುಚ್ಚುಂಟು ನಾನಾ ಬಗೆಯಲ್ಲಿ – ಹುಚ್ಚನ್ನು
ಮೆಚ್ಚುವರುಂಟು ಊರಲ್ಲಿ ॥

ಹಾಡಿ ಕುಣಿಯುವ ಹುಚ್ಚು , ಕುಣಿದು ಹಾಡುವ ಹುಚ್ಚು
ನೋಡೆ – ಹೆಚ್ಚಿನ ಹುಚ್ಚು ನಾಡಲ್ಲಿ– ಈ ಹುಚ್ಚು
ಮೋಡಿಯ ಮಾಡಿ ತಣಿಸಲಿ ॥

ಇಂಥ ಹುಚ್ಚನು ನಮ್ಮ ಹುಚ್ಚಪ್ಪ ಮಾಸ್ತರ
ನಿಂತಲ್ಲಿ ಕುಂತಲ್ಲಿ ಹಾಡ್ಯಾನು – ಹಾಡುತ್ತ
ಕುಂತವರನ್ನು ಕುಣಿಸ್ಯಾನು ॥

ಬುಡಕಟ್ಟು ಜನರಲ್ಲಿ ಹುದುಗಿದ್ದ ಕಲೆಗಳ
ಬಿಡದೆತ್ತಿ ತೋರಿದನಿವ ಜಾಣ – ಮಲೆನಾಡ
ಗುಡಿಸಲ ಜನಕೆ ಇವ ಪ್ರಾಣ ॥

ತಂಡ ತಂಡವ ಕಟ್ಟಿ ಊರೆಲ್ಲ ತಿರುಗ್ಯಾನ
ಕಂಡವರೆಲ್ಲರ ತಣಿಸ್ಯಾನ – ನಮ್ಮೂರ
ಗಂಡು ಪುರಸ್ಕ್ರಿಯು ಪಡೆದಾನ ॥

ಬಗೆಯುಕ್ತಿ ಬರಲಿಲ್ಲೆ ಹಾಡ್ಯಾನ ಕುಣಿದಾನ
ನಗೆಯುಕ್ಕಿ ಬರುವಂತೆ ಮಾಡ್ಯಾನ – ಜನಪದ
ಸೊಗಪುಕ್ಕಿ ಹರಿವಾ ಹೊಳೆತಾನ ॥

ಸನ್ಮಾನ್ಯ ಹುಚ್ಚಪ್ಪ ಮಾಸ್ತರ ತಮಗಿದೊ
ನಮ್ಮ ಸಂಕಲನ ಸನ್ಮಾನ – ಗಣಪಣ್ಣ
ನಿಮ್ಮನು ಹರಸುತ ಕುಂತಾನ ॥

ಬಚ್ಚಗಾರು
೦೮ .೦೪.೨೦೦೭

ಸುಂಕಿ ಸತ್ಯನಾರಾಯಣ ಭಟ್ಟ
ಸಂಚಾಲಕ.

|| ಶ್ರೀ ||

ಡಾ. ಬಿ.ಆರ್. ಅಂಬೇಡ್ಕರ್ ಗಿರಿಜನ ಯುವಕ ಸಂಘ (ರಿ.)
ಮತ್ತು ಮೇಟಿಕಟ್ಟೆ ಭೂತೇಶ್ವರ ಸೇವಾ ಸಮಿತಿ, ಗಿರಿಜನ ಕಾಲೋನಿ, ಹಿರೇಮನೆ
ಸಾಗರ – ಶಿವಮೊಗ್ಗ

ಶ್ರೀ ಎನ್. ಹುಚ್ಚಪ್ಪ ಮಾಸ್ತರ್, ಹಿರೇಮನೆ ಇವರಿಗೆ

ಗೌರವಪೂರ್ವಕವಾಗಿ ಅರ್ಪಿಸುವ

ಸನ್ಮಾನ ಪತ್ರ

ಸನ್ಮಾನ್ಯರೇ,

ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು ಕುಗ್ವೆಯಲ್ಲಿ ದೀವರ ಜನಾಂಗದ ನೆಲ್ಲೂರು ಹುಚ್ಚಪ್ಪ ಮತ್ತು ಪುಟ್ಟಮ್ಮ ದಂಪತಿಗಳಿಗೆ ಹಿರಿಯ ಮಗನಾಗಿ 1938ರಲ್ಲಿ ಜನಿಸಿದಿರಿ. ಮೆಟ್ರಿಕ್ಯುಲೇಷನ್ ವಿದ್ಯಾಭ್ಯಾಸ ಮುಗಿಸಿ 1959, ಜುಲೈ ಒಂದರಂದು ಹಿರೇಮನೆ ಮಹಾತ್ಮಾ ಗಾಂಧಿ ಗಿರಿಜನ ಆಶ್ರಮ ಶಾಲೆಯ ಮುಖ್ಯ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಲು ಹಾಜರಾದಿರಿ.

ನಿಮ್ಮ ನಡೆ-ನುಡಿ, ಪ್ರಾಮಾಣಿಕತೆ, ಸೇವಾ ಮನೋಭಾವ, ನಿಃಸ್ವಾರ್ಥ ಸೇವೆಗಳಿಂದ ನಮ್ಮೆಲ್ಲರ ಅಚ್ಚುಮೆಚ್ಚಿನ ಶಿಕ್ಷಕರಾಗಿ, ಹಿತೈಷಿಯಾಗಿ ಮತ್ತು ಆತ್ಮೀಯ ಬಂಧುವಾಗಿ ಬೆಳೆದಿರಿ.

ಐವತ್ತು ವರ್ಷಗಳ ಹಿಂದೆ ನೀವು ಬಂದಾಗ ನಮ್ಮ ಜನಾಂಗ ತುಂಬಾ ಅಜ್ಞಾನದಲ್ಲಿತ್ತು. ನಾಗರೀಕ ಜನಗಳ ಎದುರು ನಿಂತು ಮಾತನಾಡುವ ಧೈರ್ಯವಿರಲಿಲ್ಲ. "ಹುಟ್ಟಾಳು" ಎಂಬ ಅನಿಷ್ಟ ಪದ್ಧತಿಯಿಂದ ಗುಲಾಮರಾಗಿ ಜೀವನ ನಡೆಸುತ್ತಿದ್ದೆವು. ಇಡೀ ಸಮಾಜ ಬೆನ್ನೆಲುಬಿಲ್ಲದಂತೆ ಬಾಗಿ ಬಗ್ಗಿ ಹೋಗಿತ್ತು. ನೀವು ನಮ್ಮ ಜನಾಂಗದ ಜನಗಳಿಗೆ ಆತ್ಮಸ್ಥೈರ್ಯ ತುಂಬಿ ಬಡಿದೆಬ್ಬಿಸಿದಿರಿ. ಸಾಮಾಜಿಕವಾಗಿ ಕುಗ್ಗಿ ಹೋಗಿದ್ದ ಜನಾಂಗವನ್ನು ಧೈರ್ಯದಿಂದ ಸೆಟೆದು ನಿಲ್ಲುವಂತೆ ಮಾಡಿದಿರಿ.

ನಮ್ಮ ಜನಾಂಗದ ಕಾಲೋನಿಯ ಜನರಿಗೆ ಸರ್ವೆ ನಂಬರ್ 132ರ ಹೆಬ್ಬಯಲು ಗುಡ್ಡೆ ಮೈದಾನವನ್ನು ಕೃಷಿ ಮಾಡಲು ಹೋರಾಟ ಮಾಡಿದಿರಿ. ಇದಕ್ಕಾಗಿ ಬೆಂಗಳೂರು ಅಪಿಲಿಯೇಟ್ ಟ್ರಿಬ್ಯೂನಲ್‌ವರೆಗೆ ವ್ಯಾಜ್ಯ ನಡೆದರೂ ಛಲ ಬಿಡದೇ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರ ಸಂಪೂರ್ಣ ಸಹಕಾರದಿಂದ ತಲಾ ಒಂದು ಎಕರೆಯಂತೆ, ಹತ್ತೊಂಬತ್ತು ಎಕರೆ ಭೂಮಿ ಮಂಜೂರು ಮಾಡಿಸಿ ದಿನಾಂಕ 14.04.1982ರ ಅಂಬೇಡ್ಕರ್ ಜಯಂತಿಯಂದು ಸಾಗರ ಪ್ರಾಂತ್ಯಾಧಿಕಾರಿಗಳಾಗಿದ್ದ ದಿ|| ಪಿ.ಐ. ಕುಮಾರ್ ಇವರಿಂದ ಹಕ್ಕುಪತ್ರ ಕೊಡಿಸಿದಿರಿ.

1984ನೇ ಸಾಲಿನಲ್ಲಿ ನಮ್ಮ ಕಾಲೋನಿಯ ಜನರಿಗೆ ಸರ್ಕಾರದ ವಿಶೇಷ ಘಟಕ ಯೋಜನೆಯಿಂದ ನಿವೇಶನ, ವಸತಿ, ಎಮ್ಮೆಗಳು, ಉಳುಮೆಗಾಗಿ ಎತ್ತುಗಳು, ವ್ಯವಸಾಯೋಪಕರಣಗಳು ಮುಂತಾದ ಸೌಲಭ್ಯವನ್ನು ಒದಗಿಸಿದ್ದಲ್ಲದೆ ಹೊಸದಾಗಿ ಒಂದು ಕಾಲೋನಿಯೇ ನಿರ್ಮಾಣವಾಗುವಂತೆ ಮಾಡಿದಿರಿ.

ಇದೇ ವರ್ಷ ಸನ್ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರ ಸಹಾಯದಿಂದ ನಮಗೆ ಮಂಜೂರಾದ ಒಟ್ಟು 41 ಎಕರೆ ಜಮೀನಿಗೆ ನೀರಾವರಿಗಾಗಿ ಸರ್ಕಾರದ ಗಂಗಾ ಕಲ್ಯಾಣ ಯೋಜನೆಯಿಂದ ಬಾವಿಗಳು ಹಾಗೂ ಪಂಪ್‌ಸೆಟ್ ಜೋಡಿಸಿ ಅನುಕೂಲವಾಗಲು ತೀವ್ರ ಶ್ರಮ ವಹಿಸಿದಿರಿ. ಈವರೆಗೆ ಗಿರಿಜನರಿಗಾಗೇ ಇರುವ ಸರ್ಕಾರದ ಎಲ್ಲಾ ಯೋಜನೆಗಳನ್ನು ನಮ್ಮ ಕಾಲೋನಿಯಲ್ಲಿ ಕಾರ್ಯರೂಪಕ್ಕೆ ತಂದಿದ್ದೀರಿ. 1959ರಲ್ಲಿ 25 ಮಕ್ಕಳಿಂದ ಪ್ರಾರಂಭವಾದ ನಮ್ಮ ಆಶ್ರಮ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯನ್ನು 100ಕ್ಕೆ ಏರಿಸಲು ಶ್ರಮ ವಹಿಸಿದಿರಿ.

ಸಾಗರ ತಾಲ್ಲೂಕಿನ ಮೂಲೆ ಮೂಲೆಯಲ್ಲಿ ವಾಸಿಸುವ ಹಸಲರು ಜನಾಂಗದ ಎಲ್ಲಾ ಹಳ್ಳಿಗಳಿಗೆ ಹೋಗಿ ನಮ್ಮ ಜನರಿಗೆ ತಿಳಿಹೇಳಿ ಮನವೊಲಿಸಿ ಮಕ್ಕಳನ್ನು ಕರೆದುಕೊಂಡು ಬಂದು ಶಾಲೆಗೆ ಸೇರಿಸಿಕೊಳ್ಳುತ್ತಿದ್ದೀರಿ. ಕಟ್ಟಡವೇ ಇಲ್ಲದೆ ಪ್ರಾರಂಭವಾದ ಶಾಲೆಗೆ ಸಕಲ ಸೌಲಭ್ಯ ಇರುವಂತೆ ಸುಸಜ್ಜಿತವಾದ ಕಟ್ಟಡವನ್ನು ಸನ್ಮಾನ್ಯ ಕಾಗೋಡು ತಿಮ್ಮಪ್ಪನವರ ಸಹಾಯದಿಂದ ಮಾಡಿಸಿದಿರಿ. ನಮ್ಮ ಜನರ ಕಷ್ಟ-ಸುಖ, ದುಃಖ-ದುಮ್ಮಾನಗಳಿಗೆ ಸ್ಪಂದಿಸಿ, ಬದುಕಲು ಮಾರ್ಗದರ್ಶನ ನೀಡಿ ನಮ್ಮವರ ಕಣ್ಣೀರು ಒರೆಸಿದ್ದೀರಿ.

ನಿಮ್ಮ ಈ ಅನುಪಮ ಸಾಧನೆಗಳಿಂದಾಗಿ ಹಾಗೂ ಬಹುಮುಖ ಪ್ರತಿಭೆಯಿಂದಾಗಿ ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದೀರಿ. ರಂಗಭೂಮಿ ಕ್ಷೇತ್ರದ ಸೇವೆಗೆ ಕರ್ನಾಟಕ ಸರ್ಕಾರದ "ರಾಜ್ಯೋತ್ಸವ ಪ್ರಶಸ್ತಿ", ಜಾನಪದ ಮತ್ತು ಗಿರಿಜನ ಸೇವೆಗಾಗಿ "ಹೊಸಬಾಳೆ ಶ್ರೀ ಬಿ.ಅನಂತಪ್ಪ ಸೇವಾ ಪುರಸ್ಕಾರ"ವನ್ನು ಪಡೆದಿರುತ್ತೀರಿ. ಅನೇಕ ಜಾನಪದ ಸಂಘಟನೆಗಳಲ್ಲಿ ಕಾರ್ಯನಿರ್ವಹಿಸಿರುವ ನೀವು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಎರಡು ಬಾರಿ ನೇಮಕಗೊಂಡು ಸೇವೆ ಸಲ್ಲಿಸಿದ್ದೀರಿ.

ನಿಮ್ಮ ಈ ಬಹುಮುಖ ಪ್ರತಿಭೆ, ಬುಡಕಟ್ಟು ಜನಾಂಗಗಳ ಬಗ್ಗೆ ಇರುವ ಕಾಳಜಿ ಹಾಗೂ ಸಮರ್ಪಣಾ ಮನೋಭಾವದಿಂದ ಸಲ್ಲಿಸಿದ ಸೇವೆಗಾಗಿ ಈ ದಿನ ನಾವು ನಿಮ್ಮನ್ನು ಆತ್ಮೀಯವಾಗಿ ಸನ್ಮಾನಿಸುತ್ತಿದ್ದೇವೆ. ಪರಮಾತ್ಮನು ತಮಗೂ, ತಮ್ಮ ಕುಟುಂಬವರ್ಗದವರಿಗೂ ಆಯುರಾರೋಗ್ಯ ಐಶ್ವರ್ಯ ಭಾಗ್ಯವನ್ನು ಕರುಣಿಸಿ ಕಾಪಾಡಲಿ ಎಂದು ಪ್ರಾರ್ಥಿಸಿ ಈ **ಸನ್ಮಾನಪತ್ರ** ವನ್ನು ಸಮರ್ಪಿಸುತ್ತಿದ್ದೇವೆ.

ಅಧ್ಯಕ್ಷರು ಮತ್ತು ಸದಸ್ಯರು

ಅಧ್ಯಕ್ಷರು ಮತ್ತು ಸದಸ್ಯರು

ದಿನಾಂಕ : 27 ಏಪ್ರಿಲ್ 2006, ಸ್ಥಳ : ಹಿರೇಮನೆ

ಮಾಸ್ತರರು ಹಾಡುವ ವಿಶೇಷವಾದ ಜನಪದ ಹಾಡುಗಳು :

ಪ್ರಾರ್ಥನೆ

ವಕ್ರತುಂಡ ಮಹಾಕಾಯ
ಸೂರ್ಯಕೋಟಿ ಸಮಪ್ರಭ
ನಿರ್ವಿಘ್ನಂ ಕುರುಮೇ ದೇವ
ಸರ್ವಕಾರ್ಯೇಶು ಸರ್ವದಾ

ಗಣಪತಿ ಹಾಡು

ಶರಣು ಶರಣಯ್ಯ ಗಣನಾಯಕ
ನಮ್ಮ ಕರುಣೆಯಿಂದಲಿ ಕಾಯೋ ಗಣನಾಯಕ
ಎಳ್ಳುಂಡೆ, ಜೇನುತಪ್ಪ ಗಣನಾಯಕ
ನಮಗೆ ವಿದ್ಯವ ಕಲಿಸಯ್ಯ ಗಣನಾಯಕ
ಉದ್ದು ಹೋಳಿಗೆ ತುಪ್ಪ ಗಣನಾಯಕ
ನಿನಗೆ ತಪ್ಪದೆ ಒಪ್ಪಿಸುವೆ ಗಣನಾಯಕ
ಕರ್ಪೂರ ಸಾಮ್ರಾಣಿ ಗಣನಾಯಕ
ನಿನಗೆ ಮುರುಗ ಮಲ್ಲಿಗೆ ಜಾಜಿ ಗಣನಾಯಕ
ಹಸುರಂಗಿ, ಕಾಲ್ಗಡಗ, ಕಾಲ್ಗೆಜ್ಜೆ ನಿನಗೆ
ಕುಶಲದ ಮೇಲ್ಕಟ್ಟು ಗಣನಾಯಕ
ಗೊನೆ ಮುರಿದ ಬಾಳೆಹಣ್ಣು ಗಣನಾಯಕ
ನಿನಗೆ ಕಳೆ ಅಡಿಕೆ, ಚಿಗುರೆಲೆ ಗಣನಾಯಕ
ಕೊಂಬೆ ಮೇಲಿನ ನಿಂಬೆ ಹಣ್ಣು ಗಣನಾಯಕ
ನಿನಗೆ ಹೊಡೆಗಾಯಿ ಹಿಡಿಗಾಯಿ ಗಣನಾಯಕ
ಶರಣು ಶರಣಯ್ಯ ಗಣನಾಯಕ
ನಮ್ಮ ಕರುಣೆಯಿಂದಲಿ ಕಾಯೋ ಗಣನಾಯಕ

ಕೋಲಾಟ ಪದ

ಕೋಲು ಕೋಲಯ್ಯ ಎನ್ನಿರೋ
ಸದ್ಗುರುವಿನ ಕೋಲು ಮೇಲೆನ್ನಿರೋ
ಹತ್ತಿ ಭಿತ್ತಿ ಭತ್ತಿ ಕಾಣೇ
ಜೋಳ ಭಿತ್ತಿ ಅನ್ನ ಕಾಣೆ
ಮನೆ ತುಂಬಾ ಮಕ್ಕಳ ಹಡೆದು
ಗಂಡನ ಪುಣ್ಯ ಒಂದಿನ ಕಾಣೆ ॥
ಕೋಲು ಕೋಲೆನ್ನಿರೋ
ಸದ್ಗುರುವಿನ ಕೋಲು ಮೇಲೆನ್ನಿರೋ
ಕಾಶಿಗೆ ಹೋಗೊ ಅಪ್ಪಗಳಿರಾ
ಕಾಶಿಗೆ ಹೋಗೊ ಅಕ್ಕಗಳಿರಾ
ಕಾಶಿಯಾಗೆ ನನ್ನ ಗಂಡ ಕಂಡರೆ
ದಾಸನ ತೊಗೊಂಡು ಹೋದಳೆನಿರಿ॥
ಕೋಲು ಕೋಲೆನ್ನಿರೋ
ಸದ್ಗುರುವಿನ ಕೋಲು ಮೇಲೆನ್ನಿರೋ
ದಂಡಿಗೆ ಹೋಗೊ ಅಪ್ಪಗಳಿರಾ
ದಂಡಿಗೆ ಹೋಗೊ ಅಣ್ಣಗಳಿರಾ
ದಂಡಿನಾಗೆ ನನ ಗಂಡ ಕಂಡರೆ
ಮಿಂಡನ್ನ ತಗೊಂಡು ಹೋದಳೆನಿರಿ ॥
ಕೋಲು ಕೋಲೆನ್ನಿರೋ
ಸದ್ಗುರುವಿನ ಕೋಲು ಮೇಲೆನ್ನಿರೋ
ಅತ್ತೆ ಕಾಟ ತಾಳಲಾರೆ
ಮಾವನ ಕೈಲಿ ಉರಿಯಲಾರೆ
ಬಾವಿಯ ಕಡೆ ಮನೆಯ ಕಟ್ಟಿ
ಬಾಳಲಾರೆ ಗಂಡನೊಡನೆ
ಕೋಲು ಕೋಲೆನ್ನಿರೋ
ಸದ್ಗುರುವಿನ ಕೋಲು ಮೇಲೆನ್ನಿರೋ

ಕೋಲಾಟದ ಪದ

ಕೋಲು ಮಾತಾಡುತಾವೆ
ಬೆಳ್ಳಿಯ ಗೆಜ್ಜೆ ಮಾತಾಡುತಾವೆ
ಹೂವು ಬಂದಾವಲ್ಲ ಸ್ವಾಮಿ ಮಲ್ಲಯ್ಯಾಗೆ
ಹೂವು ಎಂಜಲಾಗಿ ಗಿರಿಮ್ಯಾಲೆ
ಕೋಲು ಮಾತಾಡುತಾವೆ
ಬೆಳ್ಳಿಯ ಗೆಜ್ಜೆ ಮಾತಾಡುತಾವೆ
ಕಾಯಿ ಬಂದವಲ್ಲಾ ಸ್ವಾಮಿ ಮಲ್ಲಯ್ಯಾಗೆ
ಕಾಯಿ ಎಂಜಲಾಗಿ ಗಿರಿಮ್ಯಾಲೆ
ಕೋಲು ಮಾತಾಡುತಾವೆ
ಬೆಳ್ಳಿಯ ಗೆಜ್ಜೆ ಮಾತಾಡುತಾವೆ
ಹಣ್ಣು ಬಂದವಲ್ಲಾ ಸ್ವಾಮಿ ಮಲ್ಲಯ್ಯಾಗೆ
ಹಣ್ಣು ಎಂಜಲಾಗಿ ಗಿರಿಮ್ಯಾಲೆ
ಕೋಲು ಮಾತಾಡುತಾವೆ
ಬೆಳ್ಳಿಯ ಗೆಜ್ಜೆ ಮಾತಾಡುತಾವೆ

ಗಜಾನನ ಭಕ್ತಿಹಾಡು

ಶಿವನ ಕುಮಾರನಯ್ಯ ಗಣನಾಯಕ
ನಿನಗೆ ಹೆಂಡರಿಲ್ಲ ಮಕ್ಕಳಿಲ್ಲ ಗಣನಾಯಕ
ನೀ ಎದ್ದು ಬಾರೋ ಗಣನಾಯಕ
ನಮ್ಮ ಸಿದ್ದಿ ವಿನಾಯಕ ಗಣನಾಯಕ

ನಾರಾಯಣಸ್ವಾಮಿ ಹಾಡು

ಬೆಳಿಗ್ಗೆ ಎದ್ದು ನಾ ಯಾರ್ಯಾರ ನೆನಯಲಿ
ಎಳ್ಳು ಜೀರಿಗೆ ಬೆಳೆಯೊಳ ಭೂತಾಯಿಯ
ಎಳ್ಳು ಜೀರಿಗೆ ಬೆಳೆಯೊಳ ಭೂತಾಯಿಯ
ಎದ್ದೊಂದು ಬಾರಿ ನೆನೆಯೋಣ
ಬೆಳಿಗ್ಗೆ ಎದ್ದು ನಾ ಯಾರ್ಯಾರ ನೆನಯಲಿ
ಮೊದಲೆಲ್ಲ ನೆನೆವೆನು ಮದನ ಗೋವಿಂದನ
ಮದನ ಗೋವಿಂದ ಹದಿನೆಂಟನಾಮದೊಡೆಯನ ನೆನದರೆ
ಹೊತ್ತಿದ ಪಾಪ ಪರಿಹಾರ
ಬೆಳಿಗ್ಗೆ ಎದ್ದು ನಾ ಯಾರ್ಯಾರ ನೆನಯಲಿ
ಏಳುತಲೆ ನೆನೆವೆನು ಬಾಳ ಲೋಚನದವನ
ಬಾಳ ಲೋಚನದವ ಜೋಳಿಗೆ ಹೊನ್ನ ಮಳೆಗರೆವ
ಬೆಟ್ಟದ ಸ್ವಾಮಿ ಮಲ್ಲಯ್ಯನ ನೆನೆವೆನು.
ಮುಂಗೊಳ್ಳಿ ಕೂಗ್ಯಾವೋ
ಮೂಡಲ ಕೆಂಪಾದಾವೋ
ನಾರಾಯಣಸ್ವಾಮಿ ರಥವೇರಿ ಬರುವಾಗ
ನಾವೆದ್ದು ಕೈಯ್ಯ ಮುಗಿದೇವೋ

ಕಿನ್ನುಡಿ ಕಿರುಗೆಜ್ಜೆ

ಕಿನ್ನುಡಿ ಕಿರುಗೆಜ್ಜೆ ಕಿರುನಾಗರ ಸುತ್ತು
ಕಿನ್ನರಿ ತಾನುಲಿತಾನ
ಕುಂತಿ ಕೊಟ್ಟ ಕುಟ್ಟಿ ಭೀಮ ಭಿಕ್ಷೆಯ ಬೇಡಿ
ಎಂಥವರಿಗೆ ಎಂತ ವನವಾಸ ತಂದ ನಲಿತಾನ
ಎಂಥವರಿಗೆ ಎಂತ ವನವಾಸ ತಂದ ನಲಿತಾನ
ಕುಂತೆಮ್ಮ ನಿಮಗೆ ವನವಾಸ ತಂದ ನಲಿತಾನ
ಕುಂತೆಮ್ಮ ನಿಮಗೆ ವನವಾಸ ಬರುವಾಗ
ಅಲ್ಲೊಬ್ಬ ಹರಿಯು ದೊರಕಿ ತಂದೊಲಿತಾನ
ಅಲ್ಲೊಬ್ಬ ಹರಿಯು ದೊರಕಿ ಎನವಾನೇ
ತಂಗಿ ದ್ರೌಪದಿ ಕರೆಸಿ ಒಲಿತಾನ
ತಂಗಿ ದ್ರೌಪದಿ ಕರೆಸಿ ನೆನೆದಾಗ
ಅಕ್ಷಯ ಪಾತ್ರೆಯ ತಲೆಯ ಮೇಲೆ ತಂದ ಅಲಿತಾನ
ಅಕ್ಷಯ ಪಾತ್ರೆಯ ತಲಿಮ್ಯಾಲೆ ಇಟಕೊಂಡು ಅಲಿತಾನ
ಭಾವಕ್ಷಿ ಹೊರಗೆ ಉಣಲಿಕ್ಕ ತಂದೊಲಿಯತಾನ
ಸತ್ಯುಳ್ಳ ಪಾಂಡವರು ಸತ್ತಾರ ಎನ್ನದಿರಿ
ಸತ್ತಾರೆ ಲೋಕ ಉಳಿವುದೇ ಎಂದಲಿತಾನ
ಹತ್ತಿಯ ಮರದಡಿಯ ಅಟ್ಟುಂಡೋರಿವರ್‍ಯಾರೋ
ಹತ್ತಿಯ ಕಾಯ ಹೊಲೆಯೂಡಿ ತಂದಲಿತಾನ
ಹತ್ತಿಯ ಕಾಯನೇ ಹೊಲೆಯೂಡಿ ಪಾಂಡವರು
ಅಟ್ಟುಂಡು ಹೋಗ್ಯಾರೋ ವನವಾಸ ತಂದಲಿತಾನ
ಮಾವಿನ ಮರದಡಿಯ ಮಾಡುಂಡೋರಿವರ್‍ಯಾರೋ
ಮಾವಿನ ಕಾಯಿಯ ಹುಂಡಿ ತಂದಲಿತಾನ
ಮಾವಿನ ಕಾಯನೇ ಹೊಲೆ ಹೂಡಿ ಪಾಂಡವರು
ಮಾಡುಂಡಿ ಹೋಗ್ಯಾರೇ ವನವಾಸ ತಂದಲಿತಾನ

ಸಾಹಿತ್ಯ ಕೃತಿಗಳು

೧) ಹಸಲರು

ಲೇಖಕರು/ಸಂಪಾದಕರು : ಎನ್.ಹುಚ್ಚಪ್ಪ ಮಾಸ್ತರರು

ಪ್ರಕಾಶಕರು : ರಾಜ್ಯ ಸಂಪನ್ಮೂಲ ಕೇಂದ್ರ, ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿ ಮೈಸೂರು

ಮುದ್ರಣ : ೧೯೮೯

ಪುಟಗಳು : ೨೮

೨) ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ

ಲೇಖಕರು/ಸಂಪಾದಕರು : ಎನ್.ಹುಚ್ಚಪ್ಪ ಮಾಸ್ತರರು

ಪ್ರಕಾಶಕರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

ಮುದ್ರಣ : ೧೯೯೭

ಪುಟಗಳು : ೫೦

೩) ಗಿರಿಜನ ಸಂಸ್ಕೃತಿ

ಲೇಖಕರು/ಸಂಪಾದಕರು : ಕಾಳೇಗೌಡ ನಾಗಾವರ
ಎನ್.ಹುಚ್ಚಪ್ಪ ಮಾಸ್ತರರು

ಪ್ರಕಾಶಕರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

ಮುದ್ರಣ : ೨೦೦೦

ಪುಟಗಳು : ೨೭೬

೪) ಕಾಗೋಡು ಚಳುವಳಿ ಸುವರ್ಣ ಸಂಪುಟ

ಲೇಖಕರು/ಸಂಪಾದಕರು : ಡಾ॥ ಹಿ.ಚಿ.ಬೋರಲಿಂಗಯ್ಯ
ಎನ್.ಹುಚ್ಚಪ್ಪ ಮಾಸ್ತರರು

ಪ್ರಕಾಶಕರು : ಮಲೆನಾಡು ಜಾನಪದ ಲೋಕ (ರಿ),
ಗಾಂಧಿ ಮಂದಿರ, ಸಾಗರ.

ಮುದ್ರಣ : ೨೦೦೨

ಪುಟಗಳು : ೭೭೧

೫) ಕಾಗೋಡು ಚಳುವಳಿ–೫೦ ವರ್ಷ (ಸ್ಮರಣ ಸಂಚಿಕೆ)

ಲೇಖಕರು/ಸಂಪಾದಕರು	:	ಎನ್.ಹುಚ್ಚಪ್ಪ ಮಾಸ್ತರ್
ಪ್ರಕಾಶಕರು	:	ಕಾಗೋಡು ಚಳುವಳಿ ಸುವರ್ಣ ಮಹೋತ್ಸವ ಸ್ವಾಗತ ಸಮಿತಿ, ಗಾಂಧಿ ಮಂದಿರ, ಸಾಗರ.
ಮುದ್ರಣ	:	೨೦೦೨
ಪುಟಗಳು	:	೧೦೬

೬) ಸಾಧನೆಯ ಹರಿಕಾರ–ಶ್ರೀ ಕಾಗೋಡು ತಿಮ್ಮಪ್ಪ

ಲೇಖಕರು/ಸಂಪಾದಕರು	:	ಡಾ॥ ಹಿ.ಚಿ.ಬೋರಲಿಂಗಯ್ಯ ಎನ್.ಹುಚ್ಚಪ್ಪ ಮಾಸ್ತರರು ಕಾಗೋಡು ಅಣ್ಣಪ್ಪ
ಪ್ರಕಾಶಕರು	:	ಶ್ರೀ ಕಾಗೋಡು ತಿಮ್ಮಪ್ಪ ಅಭಿನಂದನಾ ಸಮಿತಿ ಗಾಂಧಿ ಮಂದಿರ, ಸಾಗರ.
ಮುದ್ರಣ	:	೨೦೦೪
ಪುಟಗಳು	:	೬೩೨

ಲೇಖನಗಳು

೧) ಹಸಲರು

ಗ್ರಂಥ	:	ಕರ್ನಾಟಕ ಬುಡಕಟ್ಟುಗಳು ಭಾಗ–೧
ಪ್ರಕಾಶಕರು	:	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
ಮುದ್ರಣ	:	೧೯೯೮
ಪುಟಗಳು	:	೮೪೪

೨) ಬಿದಿರು ಬೆತ್ತ ಕರಕುಶಲ ಕಲೆಗಳು

ಗ್ರಂಥ	:	ಕರಕುಶಲ ಕಲೆಗಳು ವಿಶ್ವಕೋಶ–೨
ಪ್ರಕಾಶಕರು	:	ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಮುದ್ರಣ	:	೨೦೦೦
ಪುಟಗಳು	:	೩೯೪

೩) ಕಳ್ಳು ಜಾನಪದ   ೪) ಸಿದ್ದಿಗಳು   ೫) ಈಡಿಗರು

ಗ್ರಂಥ : ಕನ್ನಡ ಜಾನಪದ ವಿಶ್ವಕೋಶ
ಪ್ರಕಾಶಕರು : ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಮುದ್ರಣ : ೨೦೦೬

೬) ಕಾಗೋಡು ಸತ್ಯಾಗ್ರಹ   ೭) ಜಾನಪದ ಲೋಕ

ಗ್ರಂಥ : ಕರ್ನಾಟಕ ವಿಷಯ ವಿಶ್ವಕೋಶ
ಪ್ರಕಾಶಕರು : ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಮುದ್ರಣ : ೨೦೦೬

ಹುಚ್ಚಪ್ಪ ಮಾಸ್ತರರ ಸಾಧನೆ, ಸನ್ಮಾನ, ಪ್ರಬಂಧ ಮಂಡನೆ, ರಂಗಭೂಮಿ, ವಿಶೇಷಕಾರ್ಯಕ್ಷೇತ್ರಗಳು, ಹಸೆಚಿತ್ತಾರ, ಕಲಾಪ್ರದರ್ಶನ, ಬುಡಕಟ್ಟುಗಳ ಕೋಲಾಟ ತಂಡಗಳ ರಚನೆ, ಸಾಮಾಜಿಕ ಸೇವೆ ಮುಂತಾದ ಕ್ಷೇತ್ರಗಳಲ್ಲಿ ಯಶಸ್ವಿಯ ವ್ಯಕ್ತಿಯಾಗಿ ಸಮಾಜ ಗುರುತಿಸುವ ಜಾನಪದ ವಿದ್ವಾಂಸನಾಗಿ ಹೊರಹೊಮ್ಮಲು ಅವರ ಶ್ರೀಮತಿಯಾದ ಗೌರಮ್ಮರ ಪಾತ್ರ ತುಂಬಾ ಅಮೋಘವಾದುದು ಗೌರಮ್ಮ ಅವರು ಸ್ವತಃ ಹಸೆ ಚಿತ್ತಾರ ಬಿಡಿಸುವ ಕಲೆಯನ್ನು ಬಾಲ್ಯದಿಂದಲೂ ಕರಗತ ಮಾಡಿಕೊಂಡು ಬದುಕಿನ ಉದ್ದಕ್ಕೂ ತೊಡಗಿಸಿಕೊಂಡು ಕ್ರಿಯಾಶೀಲತೆಯ ಜೊತೆಗೆ ಮಾಸ್ತರರ ಪ್ರತಿಯೊಂದು ಕೆಲಸಗಳಲ್ಲಿ ತಾವು ಕೈಜೋಡಿಸಿ ಪ್ರತಿಯೊಂದು ಪುರುಷನ ಹಿಂದೆ ಯಶಸ್ವಿಗೆ ಪೂರಕವಾಗಿ ಹೆಣ್ಣು ಇರುತ್ತಾಳೆ ಎಂಬುದನ್ನು ಸಾಬೀತು ಪಡಿಸುವಂತೆ ತಮ್ಮ ಪತಿಯ ಜೊತೆಗೆ ಈಗಲೂ ಮುಂದುವರೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯವಾಗಿದೆ.

ಮಾಸ್ತರರಿಗೆ ರಾಜ್ಯ ಪ್ರಶಸ್ತಿಯಿಂದ ಹಿಡಿದು ಅಕಾಡೆಮಿ, ಸಂಸ್ಕೃತಿ ಇಲಾಖೆ, ನಿನಾಸಂ, ತಾಲ್ಲೂಕು ಸಂಘಟನೆಗಳು, ಆರ್ಯ ಈಡಿಗ ಸಂಘ, ಉತ್ತರ ಕನ್ನಡ, ವನವಾಸಿ ಸಮ್ಮೇಳನದಲ್ಲಿ ಸನ್ಮಾನ, ಸಹ್ಯಾದ್ರಿ ಸಾಹಿತ್ಯ ಸಮ್ಮೇಳನ ಮುಂತಾದವುಗಳು ಮಾಸ್ತರರನ್ನು ಸನ್ಮಾನಿಸಿ ಗೌರವಿಸಿದೆ. ಅಲ್ಲದೇ ಮಾಸ್ತರರು ಸಾಹಿತ್ಯ ಲೋಕಕ್ಕೆ ಅಮೋಘವಾದ ಕೊಡುಗೆಯನ್ನು ಕೊಟ್ಟಿದ್ದಾರೆ ಇದಕ್ಕೆ ಪೂರಕವಾಗಿ ಅವರು ಸಂಪಾದಕರಾಗಿ, ಲೇಖಕರಾಗಿ ಹಲಸರು, ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ, ಗಿರಿಜನ ಸಂಸ್ಕೃತಿ, ಕಾಗೋಡು ಚಳುಳಿಕೆಯ ಸುವರ್ಣ ಸಂಪುಟ, ಕಾಗೋಡು ಚಳುವಳಿ ೫೦ ವರ್ಷ (ಸ್ಮರಣ ಸಂಚಿಕೆ), ಸಾಧನೆಯ ಹರಿಕಾರ, ಶ್ರೀ ಕಾಗೋಡು ತಿಮ್ಮಪ್ಪ, ಇದಿಷ್ಟಲ್ಲದೇ ಅನೇಕ ಲೇಖನಗಳನ್ನು ಬರೆದಿದ್ದಾರೆ. ಅದರಲ್ಲಿ ಹಲಸರು ಕರ್ನಾಟಕ ಬುಡಕಟ್ಟು ಭಾಗ –೧, ಬಿದುರು

ಮತ್ತು ಬೆತ್ತ ಕರಕುಶಲ ಕಲೆಗಳು, ಕಳ್ಳು ಜಾನಪದ, ಸಿದ್ಧಿಗಳು, ಈಡಿಗರು, ಕಾಗೋಡು ಸತ್ಯಾಗ್ರಹ, ಜಾನಪದ ಲೋಕ ಮುಂತಾದ ಲೇಖನಗಳನ್ನು ಬರೆದಿರುವುದಲ್ಲದೇ ಈಗಲೂ ಬಿಡುವಿಲ್ಲದೇ ತಮ್ಮನ್ನು ತಾವು ಬರವಣಿಗೆ, ಓದು, ವಿಮರ್ಶೆಯಲ್ಲಿ ತೊಡಗಿಸಿಕೊಂಡಿರುವುದು ಗಮನಿಸಿದರೆ ಕಿರಿಯ ವಯಸ್ಸಿನ ಸಾಹಿತ್ಯಕಾರರಿಗೆ ವಿದ್ಯಾವಂತರಿಗೆ ಮಾದರಿಯಾಗುವಂತೆ ತಮ್ಮ ಬದುಕನ್ನು ರೂಪಿಸಿಕೊಂಡಿರುವುದು ತಿಳಿಯಲಾಗಿದೆ.

ಮಾಸ್ತರರ ಬದುಕು ಮತ್ತು ವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ಅವರ ಶ್ರೀಮತಿಯವರು ಪ್ರೋತ್ಸಾಹ ಕೊಟ್ಟಿರುವುದಲ್ಲದೇ ಅವರೇ ಸ್ವತಃ ಹಸೆ ಚಿತ್ತಾರದ ಕಲೆಯನ್ನು ತಮ್ಮ ಬದುಕಿನಲ್ಲಿ ರೂಪಿಸಿಕೊಂಡು ಪತಿಗೆ ತಕ್ಕ ಸತಿಯಾಗಿ ವಿವಿಧ ಸ್ಥಳಗಳಿಗೆ ಹೋಗಿ ಕಲಾಪ್ರದರ್ಶನವನ್ನು ಮಾಡಿರುವುದರಿಂದ ಹುಚ್ಚಪ್ಪ ಮಾಸ್ತರರ ಬದುಕಿನ ಮಜಲುಗಳನ್ನು ಅರಿತು ಅವರು ನಡೆದ ದಾರಿಯಲ್ಲಿ ತಾವು ಸಪ್ತಪದಿಯ ಹೆಜ್ಜೆಯನ್ನು ಬದುಕಿನ ಉದ್ದಕ್ಕೂ ಉಳಿಸಿಕೊಂಡ ಶ್ರೀಮಂತ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿದ್ದರಿಂದ ಶ್ರೀಮತಿ ಗೌರಮ್ಮ ಎನ್.ಹುಚ್ಚಪ್ಪ ಮಾಸ್ತರ್‌ರವರು ಅನೇಕ ಸನ್ಮಾನಗಳನ್ನು ಪಡೆದಿದ್ದಾರೆ. ಈ ಹಿನ್ನೆಲೆಯನ್ನು ಗಮನಿಸಿದರೆ ಒಬ್ಬ ಯಶಸ್ವಿ ವ್ಯಕ್ತಿಯ ಬದುಕಿನ ಹಿಂದೆ ಒಂದು ಹೆಣ್ಣು ಇರುತ್ತದೆ ಎಬುದಕ್ಕೆ ಇಲ್ಲಿ ಇವರು ಉದಾಹರಣೆಯಾಗಿದ್ದಾರೆ. ಇವನನ್ನು ಅನೇಕ ವೇದಿಕೆಗಳು ಆಹ್ವಾನಿಸಿ ಸನ್ಮಾನಗಳನ್ನು ಮಾಡಿರುವುದನ್ನು ಇಲ್ಲಿ ಪ್ರಸ್ತಾಪಿಸುವುದು ಅಧ್ಯಯನಕ್ಕೆ ಉಪಯುಕ್ತವಾಗಿದೆ. ಶ್ರೀಮತಿ ಗೌರಮ್ಮನವರು ೧೯೪೩ ರಲ್ಲಿ ಸಾಗರ ತಾಲೂಕಿನ ಕಾನ್ಲೆ ಗ್ರಾಮಕ್ಕೆ ಸೇರಿದ ಪಡವಗೋಡು ಎಂಬ ಹಳ್ಳಿಯಲ್ಲಿ ಜನಿಸಿದರು. ಓದು ಬರಹ ತಿಳಿದಿರದ ಇವರು ೧೯೬೨ ರಲ್ಲಿ ಕುಗ್ವೆಯ ಎನ್.ಹುಚ್ಚಪ್ಪ ಮಾಸ್ತರರನ್ನು ವಿವಾಹವಾದರು. ಇವರು ಜಾನಜಪದ ಚಿತ್ರಕಲಾವಿದೆಯಾಗಿದ್ದು, ಮಲೆನಾಡಿನ ಗ್ರಾಮೀಣ ಹಾಗೂ ಸಾಗರ ಪರಿಸರದ ದೀವರ ನಡುವೆ ಬದುಕಿ ಉಳಿದಿರುವ **"ಗೋಡೆ ಹಾಗೂ ಬುಟ್ಟಿ ಚಿತ್ತಾರ"** ಕಲೆಯಲ್ಲಿ ಪ್ರಾವೀಣ್ಯತೆ ಪಡೆದಿದ್ದಾರೆ. **ದೀವರ ಸಂಪ್ರದಾಯ, ದುವೆ ಹಾಡುಗಳು, ಸಾಂಪ್ರದಾಯಿಕ ಹಾಡುಗಳ ಹಾಡುಗಾರಿಕೆ** ಇವರಲ್ಲಿರುವ ವೈಶಿಷ್ಟ್ಯತೆಯಾಗಿದೆ.

ಭಾಗವಹಿಸಿದ ಮೇಳಗಳು ಹಾಗೂ ವಸ್ತುಪ್ರದರ್ಶನಗಳು:

ಕರ್ನಾಟಕ ಕರಕುಶಲ ಮಂಡಳಿ ಮತ್ತು ಕೇಂದ್ರ ಕರಕುಶಲ ಮಂಡಳಿಯವರು ಸೇರಿ ೧೯೮೨ ಮಾರ್ಚ್ ೯ ರಿಂದ ೧೦ ರ ವರೆಗೆ ಬೆಂಗಳೂರಿನಲ್ಲಿ ನಡೆಸಿದ ಜನಪದ ಕರಕುಶಲ ವಸ್ತುಗಳ ಪ್ರದರ್ಶನದಲ್ಲಿ ಭಾಗವಹಿಸಿ ಮಲೆನಾಡಿನ ಕರಕುಶಲ ವಸ್ತುಗಳು, ಗೋಡೆ ಚಿತ್ತಾರ, ಬುಟ್ಟಿ ಚಿತ್ತಾರಗಳ ಪ್ರದರ್ಶನ. ೧೯೮೬ ಸೆಪ್ಟೆಂಬರ್ ೧೧ ರಿಂದ ೧೩ ರ ವರೆಗೆ ಬೆಂಗಳೂರಿನಲ್ಲಿ

ಕರ್ನಾಟಕ ಜಾನಪದ ಪರಿಷತ್ ಇವರು ಅಂತರರಾಷ್ಟ್ರೀಯ ಮಹಿಳಾ ವರ್ಷದ ಅಂಗವಾಗಿ ನಡೆಸಿದ ಅಪೂರ್ವ ಆದಿವಾಸಿ ಮಹಿಳಾ ಜಾನಪದ ಮೇಳದಲ್ಲಿ ದೀವರು ಮಹಿಳಾ ಕಲಾ ತಂಡದೊಂದಿಗೆ ಮುಖ್ಯ ಹಾಡುಗಾರ್ತಿಯಾಗಿ ಭಾಗವಹಿಸಿದ್ದಾರೆ. ೧೯೯೭ ಡಿಸೆಂಬರ್ ೨೪ ರಿಂದ ೧೯೯೮ ಜನವರಿ ೨ ರ ವರೆಗೆ ೧೦ ದಿವಸಗಳ ಕಾಲ ಕಲ್ಕತ್ತಾ ಕ್ರಾಫ್ಟ್ ಬಝಾರ್‌ನಲ್ಲಿ ನಡೆದ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಹಸೆ ಮತ್ತು ಬುಟ್ಟಿ ಚಿತ್ತಾರಗಳ ಪ್ರದರ್ಶನ. ೧೯೯೮ ಫೆಬ್ರವರಿ ೨ ರಿಂದ ೬ ರ ವರೆಗೆ ದೆಹಲಿಯಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರವರ ಸ್ಮರಣಾರ್ಥವಾಗಿ ನಡೆಸಿದ "ಕಮಲಾ-೬೮" ರ ವಸ್ತು ಪ್ರದರ್ಶನದಲ್ಲಿ ಹಸೆ ಕಲೆಯ ಪ್ರದರ್ಶನ. ೧೯೯೮ ಡಿಸೆಂಬರ್ ೨೧ ರಂದು ಶಿರಸಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರು ನಡೆಸಿದ ಕರ್ನಾಟಕ ಬುಡಕಟ್ಟು ಮಹಿಳೆ ಎಂಬ ವಿಚಾರ ಸಂಕೀರ್ಣದಲ್ಲಿ ಬುಡಕಟ್ಟು ಮಹಿಳೆಯರ ಹಸೆಕಲೆ ಪ್ರದರ್ಶನ. ೧೯೯೮ ಡಿಸೆಂಬರ್ ೧೫ ರಂದು ಸಾಗರದ ಗಾಂಧಿ ಮಂದಿರದಲ್ಲಿ ಭಾರತ ಸರ್ಕಾರ ಜವಳಿ ಮಂತ್ರಾಲಯ ಅಭಿವೃದ್ಧಿ ಆಯುಕ್ತರು ಮತ್ತು ಕರಕುಶಲ ಮಾರಾಟ ಹಾಗೂ ಸೇವಾ ಕೇಂದ್ರ ಮೈಸೂರು ಇವರು ನಡೆಸಿದ ಶಿವಮೊಗ್ಗ ಜಿಲ್ಲಾ ಕರಕುಶಲ ಕಲೆಗಳ ಕಾರ್ಯಾಗಾರದಲ್ಲಿ ಭಾಗವಹಿಸಿ ಹಸೆಚಿತ್ರ ಮತ್ತು ಬುಟ್ಟಿಚಿತ್ರಗಳು ಹಾಗೂ ಭತ್ತ ಮತ್ತು ಹಿಟ್ಟಂಡೆ ಹುಲ್ಲಿನಿಂದ ತಯಾರಿಸಿದ ವಸ್ತುಗಳನ್ನು ಪ್ರದರ್ಶನ ಮಾಡಲಾಗಿದೆ. ಕನ್ನಡ ವಿಶ್ವವಿದ್ಯಾಲಯ ಹಂಪಿ ಮತ್ತು ಮಲೆನಾಡು ಜಾನಪದ ಲೋಕ ಸಾಗರ ಇವರ ಸಂಯುಕ್ತ ಆಶ್ರಯಲ್ಲಿ ೨೦೦೨ ನವೆಂಬರ್ ೩೦ ರಂದು ಸಾಗರದ ಶ್ರೀ ಮಹಾಗಣಪತಿ ಕಲ್ಯಾಣ ಮಂಟಪದಲ್ಲಿ ನಡೆದ ಬುಡಕಟ್ಟು ಅಭಿವೃದ್ಧಿ ಪರಿಕಲ್ಪನೆ ಮತ್ತು ಮೀಮಾಂಸೆ ಮತ್ತು ಬುಡಕಟ್ಟು ಕಲಾಮೇಳ ಹಾಗೂ ಚಿತ್ತಾರ ಪ್ರದರ್ಶನ ವಿಚಾರ ಸಂಕೀರ್ಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಸೆ ಮತ್ತು ಬುಟ್ಟಿ ಚಿತ್ರಗಳು ಮತ್ತು ಮಲೆನಾಡಿನ ಕರಕುಶಲ ವಸ್ತುಗಳನ್ನು ಪ್ರದರ್ಶನ ಮಾಡಿದ್ದಾರೆ. ೨೦೦೩ ಡಿಸೆಂಬರ್ ೧೦ ರಂದು ಮಥುರಾ ಪ್ಯಾರಡೇಸ್‌ನಲ್ಲಿ ನಡೆಸಿದ ಕಾರ್ಯಾಗಾರದಲ್ಲಿ ಕರಕುಶಲ ವಸ್ತುಗಳನ್ನು ಪ್ರದರ್ಶಿಸಿದ್ದಾರೆ. ೨೦೦೪ ಮಾರ್ಚ್ ೧೨ ರಂದು ರಂಗಾಯಣ ಹಾಗೂ ಜಿಲ್ಲಾ ಪಂಚಾಯತ್ ಮೈಸೂರು ಇಲ್ಲಿ ಏರ್ಪಡಿಸಿದ್ದ ಕೈಮಗ್ಗ ಮತ್ತು ಕರಕುಶಲ ವಸ್ತುಗಳ ಕುರಿತಂತೆ ಮಾತುಕತೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಸೆ ಚಿತ್ತಾರಗಳನ್ನು ಪ್ರದರ್ಶನ ಮಾಡಿದ್ದಾರೆ. ೨೦೦೩ ಎಪ್ರಿಲ್ ೬ ರಂದು ಬೆಂಗಳೂರಿನಲ್ಲಿ ನಡೆಸಿದ ಹಸೆ ಚಿತ್ರ ಕಲಾವಿದೆಯರ ಬೃಹತ್ ಮಹಿಳಾ ಸಮಾವೇಶ ಮತ್ತು ಕರಕುಶಲ ವಸ್ತುಗಳ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿದ್ದಾರೆ.

ಕರಕುಶಲ ತರಬೇತಿ ಯೋಜನೆ:

೧೯೯೮ ಮಾರ್ಚ್ ೧೯ ರಿಂದ ೧೯೯೯ ಮಾರ್ಚ್ ೧೮ ರ ವರೆಗೆ ಭಾರತ ಸರ್ಕಾರದ ಜವಳಿ ಮಂತ್ರಾಲಯ ಕರಕುಶಲ ಆಯುಕ್ತರು ಸಾಗರ ತಾಲ್ಲೂಕು ಚೂರಿಕಟ್ಟೆಯಲ್ಲಿ ನಡೆಸಿದ ಕರಕುಶಲ ತರಬೇತಿ ಯೋಜನೆಯಡಿಯಲ್ಲಿ ೧೦ ಜನ ಹೆಣ್ಣುಮಕ್ಕಳಿಗೆ ಹಸೆಗೋಡೆ ಬುಟ್ಟಿ ಚಿತ್ತಾರಗಳ ಕಲಿಕಾ ತರಬೇತಿಯಲ್ಲಿ ಮುಖ್ಯ ಶಿಕ್ಷಕಿಯಾಗಿ ಕಾರ್ಯನಿರ್ವಹಣೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದೊಂದಿಗೆ ಮಾರ್ಚ್ ೧೬ ರಿಂದ ೧೮ ರ ವರೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಸಿದ ಮಹಿಳೆ ಮತ್ತು ಸಂಸ್ಕೃತಿ ಕಾರ್ಯಕ್ರಮದ ರಂಗವಲ್ಲಿ ಮತ್ತು ದಾಖಲಾತಿ ಶಿಬಿರದ ಉದ್ಘಾಟಕರಾಗಿ ಭಾಗವಹಿಸಿದ್ದಾರೆ. ಈ ಪರಿಣಾಮವಾಗಿ ಶ್ರೀಮತಿ ಗೌರಮ್ಮ ಎನ್.ಹುಚ್ಚಪ್ಪ ಮಾಸ್ತರ್‌ರವರು ಅನೇಕ ಪ್ರಶಸ್ತಿ ಮತ್ತು ಸನ್ಮಾನಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಪ್ರತಿವರ್ಷ ಕಲಾವಿದರಿಗೆ ಕೊಡಲ್ಪಡುವ ೨೦೦೫ ರ ಅಕಾಡೆಮಿ ಪ್ರಶಸ್ತಿ ಇವರದ್ದಾಗಿದೆ. ೨೦೦೬ ಏಪ್ರಿಲ್ ೩ ರಂದು ಮೂಡಬಿದರೆ, ವಿದ್ಯಾಗಿರಿ, ಆಳ್ವಾಸ್ ಕ್ಯಾಂಪಸ್ ಕೆ.ವಿ.ಸುಬ್ಬಣ್ಣ ಬಯಲು ರಂಗಮಂಟಪದಲ್ಲಿ ಹಸೆಚಿತ್ತಾರ ಕಲೆ ಕ್ಷೇತ್ರದಲ್ಲಿ ಸಲ್ಲಿಸಿರುವ ಸುದೀರ್ಘ ಸೇವೆಗೆ ಗೌರವಪೂರ್ವಕವಾಗಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೨೦೦೬ ಫೆಬ್ರವರಿ ೨೫ ರಂದು ಸಾಗರ ನಗರಸಭೆ ಕಛೇರಿಯ ಆವರಣದಲ್ಲಿ ಸಾಗರ ಪತ್ರಕರ್ತರು ಮತ್ತು ಸಹೃದಯರು ಸೇರಿ ಅಭಿನಂದಿಸಿದ್ದಾರೆ. ೨೦೦೬ ಫೆಬ್ರವರಿ ೨೮ ರಂದು ಶಾರದಾ ಮಹಿಳಾ ಸಮಾಜ (ರಿ) ಕಾರ್ಗಲ್ ಇವರು ತಮ್ಮ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಿದ್ದಾರೆ. ಕರ್ನಾಟಕ ರಾಜ್ಯ ಜನಪರ ಹೋರಾಟ ವೇದಿಕೆ, ಸಾಗರ ಇವರು ಎಪ್ರಿಲ್ ೧೯ ರಂದು ಸಾಗರದ ಶ್ರೀಶ್ರೀಶ್ರೀ ಬಸವ ಈಡಿಗ ಮಾರಯ್ಯ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ಏರ್ಪಡಿಸಿದ ಸಾಮೂಹಿಕ ವಿವಾಹ ಮತ್ತು ಸನ್ಮಾನ ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಲಾಗಿದೆ.

ಅಡಿಟಿಪ್ಪಣಿ

೮. ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ಭಗವತ್ ಶರಣು ಉಪಾಧ್ಯಾಯ (ಪು.೧೨೫).

೯. ಕಾಗೋಡು ಚಳುವಳಿ ೫೦ ವರ್ಷ, ಸ್ಮರಣ ಸಂಚಿಕೆ.

೧೦. ಕರ್ನಾಟಕ ಬುಡಕಟ್ಟುಗಳು ಸಂಪುಟ ೧, ಹಸಲರು, ಎನ್.ಹುಚ್ಚಪ್ಪ ಮಾಸ್ತರ್ (ಪುಟ ೪ ರಿಂದ ೫).

೧೧. ದಲಿತರು ಮತ್ತು ಜಾಗತೀಕರಣ ಡಾ. ಮೊಗಳ್ಳಿ ಗಣೇಶ (ಪುಟ ೧೦೮–೧೦೯).

೧೨. ಕಲೆ ಮತ್ತು ಬದುಕು ಕಟ್ಟಿಂಗೇರಿ ಕೃಷ್ಣ ಹೆಬ್ಬಾರ, ಡಾ. ಕು.ಶಿ.ಹರಿದಾಸಭಟ್ಟ (ಪು.೩೧–೩೨).

ಅಧ್ಯಾಯ ೪.೧

ಹಸಲರ ಪ್ರಗತಿಯಲ್ಲಿ ಎಸ್.ಹುಚ್ಚಪ್ಪ ಮಾಸ್ತರ್‌ರ ಪಾತ್ರ

ಭಾರತೀಯ ಸಂಸ್ಕೃತಿ ಹಲವಾರು ಸಮುದಾಯಗಳ ಮತ್ತು ಸಂಸ್ಕೃತಿಗಳ ಸಾಮೂಹಿಕ ಕೊಡುಗೆ. ನಾವು ಇಂದು ಯಾವುದನ್ನು ಭಾರತೀಯ ಸಂಸ್ಕೃತಿ ಎಂದು ಹೆಸರಿಸುತ್ತಿದ್ದೇವೆಯೋ ಅದು ವಾಸ್ತವವಾಗಿ ವಿವಿಧ ಸಮುದಾಯಗಳ ಕೊಡುಗೆಗಳಿಂದ ರೂಪುಗೊಂಡು ಅರಳಿ ನಿಂತಿರುವಂತಹದು. ಭಾರತವು ವಿವಿಧ ಜನಸಮುದಾಯಗಳ ಹಾಗೂ ಅವರ ಆಚಾರ ವಿಚಾರಗಳ ಸಂಗ್ರಹ ಹಾಗೂ ಭಾರತೀಯ ಸಂಸ್ಕೃತಿ ಅನೇಕ ಸಂಸ್ಕೃತಿಗಳ, ಅನೇಕ ಸಮುದಾಯಗಳ ಸಾಮಾಜಿಕ ವೈಶಿಷ್ಟ್ಯಗಳ ಸಮ್ಮಿಶ್ರಣವಾಗಿದೆ.

ಭಾರತೀಯ ಸಂಸ್ಕೃತಿಯ ಸಂಘರ್ಷ ಇತಿಹಾಸದ ಕೊನೆಯ ಅಂಶ ತಲೆ ಎತ್ತಿದ್ದು ಐರೋಪ್ಯ ಸಮುದಾಯಗಳೊಡನೆ ಸಂಪರ್ಕ ಏರ್ಪಟ್ಟಿದ್ದರಿಂದ. ಎರಡು ಶತಮಾನಗಳ ಕಾಲ ಸಾಗಿ ಬಂದ ಬ್ರಿಟೀಷರ ಆಡಳಿತದ ಪರಿಣಾಮವಾಗಿ ಭಾರತೀಯ ಸಂಸ್ಕೃತಿ ಮತ್ತು ಐರೋಪ್ಯ ಸಂಸ್ಕೃತಿಗಳು ಪರಸ್ಪರ ಹತ್ತಿರಕ್ಕೆ ಬಂದವು. ಸಾಮಾಜಿಕ ದೃಷ್ಠಿಯಿಂದ ಈ ಸಂಪರ್ಕ ಅಷ್ಟೇನೂ ಫಲಪ್ರದವಾಗದೇ ಹೋದರೂ ಇದರಿಂದ ಭಾರತದ ಬೌದ್ಧಿಕ ಮತ್ತು ರಾಜಕೀಯ ವಿಕಾಸ ಅಗಾಧ ಪ್ರಮಾಣದಲ್ಲಿ ಸಾಧ್ಯವಾಯಿತು. ಭಾರತೀಯ ಸಾಹಿತ್ಯದಲ್ಲಿ ಒಂದು ಹೊಸ ಶಕ್ತಿ ಕಾಣಿಸಿಕೊಂಡಿತು. ಹೊಸ ರೂಪ ಸಮಾಜದ ವ್ಯವಸ್ಥೆಯೊಳಗಡೆ ಮೂಡಿಬಂದು ನವೀನ ಶೈಲಿಯೊಂದು ಹುಟ್ಟಿಕೊಂಡ ಬಗೆಯನ್ನು ತಿಳಿಯಲಾಗುವುದು. ಭಾರತದ ರಾಜಕೀಯ ಭಾವನೆಗಳ ಉದಯ ಬ್ರಿಟೀಷ್ ಮತ್ತು ಭಾರತ ಸಂಪರ್ಕದ ಕೆಲವು ಸ್ಪಷ್ಟ ಮತ್ತು ಅಭಿವೃದ್ಧಿಯ ಪರಿಣಾಮಗಳು ಸೃಷ್ಠಿಯಾಗಲಿಕ್ಕೆ ಪ್ರೇರಕ ಶಕ್ತಿಯಾಗಿವೆ. ಭಾರತೀಯರ ಉಡುಗೆ ತೊಡುಗೆ ಹಾಗೂ ಸಾಮಾಜಿಕ ದೃಷ್ಠಿಕೋನದಲ್ಲಿ ಈ ಸಂಪರ್ಕ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವ ಬೀರಿವೆ. ಈ ಎಲ್ಲಾ ಅಂಶಗಳಿಂದ ಭಾರತದ ಸಂಸ್ಕೃತಿಯು ರೂಪಾಂತರಗೊಳ್ಳುತ್ತಾ ಬಂದಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹೀಗಾಗಿ ಮಾನವ ಸಮಾಜದ ಚರಿತ್ರೆಯಲ್ಲಿ ಭಾರತದ ಶ್ರೇಣೀಕರಣಕ್ಕೆ ಒಂದು ವಿಶಿಷ್ಟ ಸ್ಥಾನಮಾನ ಪ್ರಾಪ್ತವಾಗಿದೆ. ಕಾಲ ಬದಲಾದರೂ ಜಾಗತಿಕ ಮಟ್ಟದ ಉತ್ಪಾದನಾ ವ್ಯವಸ್ಥೆಯಲ್ಲಿ ಕ್ರಾಂತಿಗಳು ನಡೆದುಹೋದರೂ ಭಾರತದ ಜಾತಿಗಳು ನಮ್ಮ ಪಾರಂಪರಿಕ, ಆರ್ಥಿಕ ಅವಲಂಬನೆಯನ್ನು ಕಾಯ್ದುಕೊಂಡೇ ಬಂದಿವೆ. ಇದಕ್ಕೆ ಬುಡಕಟ್ಟುಗಳು ಹೊರತಾಗೇನೂ ಇಲ್ಲ. ಇಡೀ ಜಗತ್ತಿನಲ್ಲಿ ಕೃಷಿಕರನ್ನು ಬಿಟ್ಟರೆ ತಮ್ಮ ಸಾಂಪ್ರದಾಯಿಕ ಆರ್ಥಿಕ ಮೂಲಗಳನ್ನು ಉಳಿಸಿಕೊಂಡು ಬಂದವರೆಂದರೆ ಅಲೆಮಾರಿಗಳು

ಮಾತ್ರ. ತಮ್ಮ ತಮ್ಮ ಆರ್ಥಿಕ ಮೂಲಗಳನ್ನು ಚಾರಿತ್ರಿಕವಾಗಿ ಅವಶೇಷಗಳ ಮಾದರಿಯಲ್ಲಿ ಅಲೆಮಾರಿಗಳು ಉಳಿಸಿಕೊಳ್ಳುವ ಕಾರಣ ಭಾರತವೆಂಬ ಸಂಪ್ರದಾಯಶೀಲ ಸಮಾಜದಲ್ಲಿ ಯಾವತ್ತೂ ಬಹುದೊಡ್ಡ ಆರ್ಥಿಕ ಉತ್ಕ್ರಾಂತಿ ಸಂಭವಿಸದೇ ಹೋದುದು ಈ ಕಾರಣದಿಂದಾಗಿ. ಸಾಮಾಜಿಕ ಅಸಮಾನತೆಯೂ ತನ್ನ ಅತ್ಯಂತ ಹೇಯ ಆಯಾಮಗಳನ್ನು ವಿಕಸಿಸಿಕೊಳ್ಳುತ್ತಲೇ ಹೋಯಿತು. ಹೀಗಾಗಿ ಯಾವುದೇ ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯು ಬುಡಕಟ್ಟುಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಈ ಹಿನ್ನೆಲೆಯಿಂದ ಗಿರಿಜನ ಆಶ್ರಮ ಶಾಲೆಯ ಮುಖ್ಯ ಶಿಕ್ಷಕರಾಗಿ ತಮ್ಮ ಕಾರ್ಯವನ್ನು ಬುಡಕಟ್ಟು ಸಮುದಾಯಗಳ ಮಧ್ಯೆ ವಹಿಸಿದ ಪಾತ್ರದ ಬಗ್ಗೆ ಚರ್ಚಿಸುವುದು ಇಲ್ಲಿ ಉಪಯುಕ್ತಕರವಾಗಿದೆ. ಇಲ್ಲಿ ಹಸಲರ ಅಭಿವೃದ್ಧಿಗೆ ಪೂರಕವಾಗಿ ತಮ್ಮ ತನು ಮನಗಳನ್ನು ಅರ್ಪಿಸಿದ ಕೀರ್ತಿ ಇವರದ್ದಾಗಿದೆ. ಹಸಲರಿಗೂ ಮತ್ತು ಮಾಸ್ತರರಿಗೂ ತಾಯಿ ಮಗುವಿನ ಸಂಬಂಧ ಏರ್ಪಟ್ಟಿರುವುದು ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ ಸಾಕ್ಷಿಯಾಗಿದೆ. ಒಂದು ಕಾಲದಲ್ಲಿ ಸಂಪೂರ್ಣವಾಗಿ ಬುಡಕಟ್ಟಿನ ಗುಣವನ್ನು ಮೈಗೂಡಿಸಿಕೊಂಡು ಕಾಡುವಾಸಿಗಳಾಗಿ ಕಾಡಿನ ಉತ್ಪನ್ನಗಳನ್ನು ಸಂಗ್ರಹಣೆ ಮಾಡುತ್ತಾ ಆಹಾರದ ಪರಿಕರಗಳಾಗಿ ಕಾಡಿನಲ್ಲಿ ಸಿಗುವ ಗೆಡ್ಡೆ-ಗೆಣಸು, ಹಣ್ಣು-ಹಂಪಲುಗಳನ್ನು ಸಂಗ್ರಹಿಸುವುದು ಹಾಗೂ ಪ್ರಾಣಿಗಳು, ಮೀನುಗಳನ್ನು ಭೇಟೆಯಾಡಿ ಬದುಕನ್ನು ಸಾಗಿಸುವ ಪರಿಪಾಟ ಹಸಲರದ್ದಾಗಿತ್ತು. ಇವರು ಮೂಲತಃ ಬುಡಕಟ್ಟಾಗಿದ್ದು ಸರ್ಕಾರದ ಬುಡಕಟ್ಟು ಪಟ್ಟಿಯಲ್ಲಿ ಹಸಲರು, ಹಲಸುವಾರರು ಎಂದು ನಾಮಾಂಕಿತಗೊಂಡಿರುವುದು ತಿಳಿಯುತ್ತದೆ. ಇವರು ಸಾಂಪ್ರದಾಯಿಕವಾಗಿ ಭೇಟೆಗಾರರಾಗಿದ್ದು ಅಡಿಕೆ ತೋಟಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಇನ್ನೂ ಉಳಿದವರು ಜೀತದಾಳುಗಳಾಗಿ ಭೂಮಾಲಿಕರ ಗದ್ದೆ ತೋಟಗಳಲ್ಲಿ ದುಡಿಯುತ್ತಿರುವುದಲ್ಲದೇ ದಿನದಲ್ಲಿ ಹೆಚ್ಚುವರಿ ಕೆಲಸವನ್ನು ಮಾಡಿದರೂ ಸರಿಯಾದ ಸಂಭಾವನೆ ಸಿಗದೆ ಆಧುನಿಕ ಸಂಪರ್ಕದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ಬಡಕಟ್ಟನ್ನು ಕುರಿತು ೧೯೭೭ ರಲ್ಲಿ ಎಂ.ಎ.ಪ್ರೇರಿಂಗ್‌ರವರು ತಮ್ಮ ಒಂದು ಗ್ರಂಥದಲ್ಲಿ ಹಸಲರ ಬಗ್ಗೆ ಮಾಹಿತಿ ನೀಡಿದ್ದಾರೆ. ೧೯೨೨ ರಲ್ಲಿ ಆರ್.ಇ.ಎಂಥೋವನ್‌ರವರು ತಮ್ಮ ಗ್ರಂಥದಲ್ಲಿ ಹಸಲರ ಬಗ್ಗೆ ಉಲ್ಲೇಖಿಸಿದ್ದಾರೆ. ೧೯೩೦ ರಲ್ಲಿ ಎಚ್.ವಿ.ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ರವರು ಹಸಲರ ಬಗ್ಗೆ ಉಲ್ಲೇಖಿಸಿರುವುದನ್ನು ಆಧಾರವಾಗಿಟ್ಟುಕೊಂಡು ಎನ್.ಹುಚ್ಚಪ್ಪ ಮಾಸ್ತರರು ಗಿರಿಜನ ಶಾಲೆಯ ಮುಖ್ಯ ಶಿಕ್ಷಕರಾಗಿ ಹಸಲರನ್ನು ಕುರಿತು ಪುಸ್ತಕವನ್ನು ಹೊರತಂದಿರುವುದು ಗಮನಾರ್ಹವಾದುದು. ಕನ್ನಡ ವಿಶ್ವವಿದ್ಯಾಲಯದ ಈಗಿನ ಬುಡಕಟ್ಟು ಅಧ್ಯಯನ ವಿಭಾಗದ

ಪ್ರಾಧ್ಯಾಪಕರಾಗಿರುವ ಪ್ರೊ.ಹಿ.ಚಿ.ಬೋರಲಿಂಗಯ್ಯನವರು ತಮ್ಮ ಗಿರಿಜನ ನಾಡಿಗೆ ಪಯಣ ಎಂಬ ಪುಸ್ತಕದಲ್ಲಿ ಕುಡುಗುಂಜಿ ಹಸಲರ ಜೀವನವನ್ನು ಚಿತ್ರಿಸಿರುವುದು ವಿಶೇಷವಾಗಿದೆ.

ಪ್ರೊ. ಹಿ.ಚಿ.ಬೋರಲಿಂಗಯ್ಯನವರು ತಮ್ಮ ಗ್ರಂಥವಾದ ಕಾಡು ಕಾಂಕ್ರೀಟ್ ಮತ್ತು ಜಾನಪದದಲ್ಲಿ ಪಶ್ಚಿಮ ಘಟ್ಟದ ಹಸಲರು, ಸಿದ್ದಿಯರು, ಗೌಳಿಗರು, ಹಾಲಕ್ಕಿ ಒಕ್ಕಲಿಗರು, ಗೊಂಡರು, ಕುಣುಬಿಯರನ್ನು ಕುರಿತು ತಮ್ಮ ಗ್ರಂಥದಲ್ಲಿ ಸುದೀರ್ಘವಾದ ಚರ್ಚೆ, ವಿಮರ್ಶೆ ಮತ್ತು ಪ್ರಸ್ತುತತೆಯನ್ನು ಸಾಬೀತು ಪಡಿಸಿದ್ದಾರೆ. ಈ ಹಿನ್ನೆಲೆಯಿಂದ ಜಾನಪದ ವಿದ್ವಾಂಸರೂ ಆಗಿರುವ ಪ್ರೊ. ಹಿ.ಚಿ.ಬೋರಲಿಂಗಯ್ಯನವರು ಮಾಸ್ತರರ ಜೊತೆಗೂಡಿ ಹಸಲರ ಸಮಸ್ಯೆಗಳು, ಸವಾಲುಗಳು ಮತ್ತು ಪರಿಹಾರೋಪಾಯಗಳನ್ನು ಕುರಿತು ಚರ್ಚಿಸಿದ್ದಾರೆ. ಹಸಲರ ಭಾಷೆ ಕನ್ನಡವಾಗಿದ್ದು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇವರು ಕನ್ನಡ ಮಾತನಾಡಿದರೆ ಚಿಕ್ಕಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಹಸಲರು ಕನ್ನಡ ಭಾಷೆಯ ಜೊತೆಗೆ ತುಳು ಭಾಷೆಯನ್ನು ಸೇರಿಸಿ ಮಾತನಾಡುತ್ತಾರೆ. ಇಷ್ಟೆಲ್ಲಾ ಲಕ್ಷಣಗಳನ್ನು ಇಟ್ಟುಕೊಂಡಿರುವ ಹಸಲರು ತಮಗೆ ಹೆಸರು ಬರಲು ಪೌರಾಣಿಕ ಕಥೆಯೊಂದನ್ನು ಬಿಚ್ಚಿಡುತ್ತಾರೆ. ಆ ಕಥೆಯನ್ನು ಆಧಾರವಾಗಿಟ್ಟುಕೊಂಡು ಅವರು ಹೇಳಿದಂತೆಯೇ ಇಲ್ಲಿ ಚಿತ್ರಿಸಲಾಗಿದೆ. ಅಗಸನ ಅಪವಾದಕ್ಕೊಳಗಾದ ಸೀತೆಯನ್ನು ಕಾಡಿನಲ್ಲಿ ಬಿಟ್ಟುಬರುವಂತೆ ರಾಮ ತಮ್ಮನಾದ ಲಕ್ಷ್ಮಣನಿಗೆ ಹೇಳುತ್ತಾನೆ. ಲಕ್ಷ್ಮಣ ತುಂಬು ಗರ್ಭಿಣಿಯಾದ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ. ಸೀತೆ ವಾಲ್ಮೀಕಿ ಆಶ್ರಮವನ್ನು ಸೇರಿ ಆಶ್ರಯ ಪಡೆಯುತ್ತಾಳೆ. ಸ್ವಲ್ಪ ದಿನಗಳ ನಂತರ ಲವ ಜನಿಸುತ್ತಾನೆ. ಒಮ್ಮೆ ಮಗುವನ್ನು ತೊಟ್ಟಿಲಲ್ಲಿ ಹಾಕಿ ಬಟ್ಟೆ ತೊಳೆಯಲು ನದಿಗೆ ಹೋಗುತ್ತಾಳೆ. ನದಿಯಲ್ಲಿ ಮಂಗಗಳು ನೀರು ಕುಡಿಯುವುದನ್ನು ನೋಡಿ ಮಗುವಿಗೆ ಏನಾಯಿತೋ ಏನೋ ಎಂದು ಅನುಮಾನಿಸಿ ತಿರುಗಿ ಆಶ್ರಮಕ್ಕೆ ಬಂದು ಲವನನ್ನು ಎತ್ತಿಕೊಂಡು ಬಟ್ಟೆ ಮಡಿ ಮಾಡಲು ಹೋಗುತ್ತಾಳೆ. ಇಲ್ಲಿ ವಾಲ್ಮೀಕಿ ಸ್ವಲ್ಪ ಹೊತ್ತಿನ ನಂತರ ಆಶ್ರಮಕ್ಕೆ ಬಂದು ನೋಡಿದಾಗ ಲವ ಇರದಿರುವುದನ್ನು ನೋಡಿ ಕಂಗಾಲಾಗುತ್ತಾನೆ. ಸೀತೆ ಬಂದ ಮೇಲೆ ಹೇಗೆ ಮುಖ ತೋರಿಸುವುದೆಂದು ದರ್ಬೆಯನ್ನು ಮಂತ್ರಿಸಿ ಶಿಶು ಮಾಡಿ ತೊಟ್ಟಿಲಲ್ಲಿ ಮಲಗಿಸುತ್ತಾನೆ. ಸ್ವಲ್ಪ ಹೊತ್ತಿನಲ್ಲಿ ಸೀತೆ ಮಗುವಿನೊಂದಿಗೆ ನದಿಯಿಂದ ವಾಪಾಸಾಗುತ್ತಾಳೆ. ತೊಟ್ಟಿಲಲ್ಲಿ ಮಗುವನ್ನು ನೋಡಿ ಆಶ್ಚರ್ಯಪಡುತ್ತಾಳೆ. ಆವಾಗ ವಾಲ್ಮೀಕಿ ಇದೆಲ್ಲಾ ನಿನ್ನಿಂದಲೇ ಆದುದು. ಈ ಮಗುವನ್ನು ನೀನೇ ಸಾಕು ಎನ್ನುತ್ತಾನೆ. ಈ ಮಗುವಿಗೆ ಕುಶ ಎಂದು ನಾಮಕರಣ ಮಾಡುತ್ತಾನೆ. ರಾಮ ಲವಕುಶರಿಗೆ ಯುದ್ಧ ನಡೆದಾಗ ಕಾಡಿನಲ್ಲಿ ತಯಾರಿಸಿದ ತಮ್ಮದೇ ಬಿಲ್ಲು ಬಾಣಗಳಿಂದ

ಲವಕುಶರು ಹೋರಾಡುತ್ತಾರೆ. ಹಸಲರು ಈ ಕಥೆಯನ್ನು ಆಧಾರವಾಗಿಟ್ಟುಕೊಂಡು ತಾವು ಕುಶನ ಸಂತತಿಯವರು ಎಂದು ಭಾವಿಸುತ್ತಾರೆ. ಹಸ್ತದಿಂದ ಜನಿಸಿದ್ದರಿಂದ ತಾವು ಹಸ್ತರು ಎಂದುಕೊಳ್ಳುತ್ತಾರೆ. ಬಿಲ್ಲು ಬಾಣದ ಗುರಿಯಲ್ಲಿ ನುರಿತವರಾದ್ದರಿಂದ ನಾವು ಬಿಲ್ಲುಕ್ಷತ್ರಿಯರಾದೆವೆಂದು ಹೇಳುತ್ತಾರೆ. ರಾಮರಾಜ್ಯದಲ್ಲಿ ಸಮಸ್ತ ಅಧಿಕಾರವೂ ತಮ್ಮ ಕೈಯಲ್ಲಿತ್ತು ಆದರೆ ಪ್ರಭುತ್ವವು ಎಲ್ಲಾ ಅಧಿಕಾರವನ್ನು ಕಿತ್ತುಕೊಂಡಿತು ಎನ್ನುತ್ತಾರೆ. ಇದರಿಂದಾಗಿ ಹಸಲರಂತೆಯೇ ಅವರೊಡನಿದ್ದು ಹಸಲರೆಂದರೆ ಮಾಸ್ತರರು, ಮಾಸ್ತರರೆಂದರೆ ಹಸಲರೆಂಬ ರೂಢಿನಾಮಕ್ಕೆ ಸರಿಸಮನಾದ ಶೈಕ್ಷಣಿಕ ಮತ್ತು ಸಾಮಾಜಿಕ ಸುಧಾರಣೆಯ ಕ್ರಾಂತಿಗೆ ಮುನ್ನುಡಿ ಬರೆದ ಧೀಮಂತ ವ್ಯಕ್ತಿತ್ವ ಇವರದ್ದಾಗಿದೆ. ಮಾಸ್ತರರು ೦೧-೦೭-೧೯೫೫ ರಲ್ಲಿ ಹಿರೇಮನೆಯ ಮಹತ್ಮಾ ಗಾಂಧಿ ಗಿರಿಜನ ಆಶ್ರಮ ಶಾಲೆಯ ಶಿಕ್ಷಕರಾದರೂ ಹಸಲರ ಹಾಡಿಗೆ ಬಂದು ವೃತ್ತಿಯಲ್ಲಿ ಶಿಕ್ಷರಾಗಿ ಹಸಲ ಬುಡಕಟ್ಟಿನ ಹರಿಕಾರರಾದರು. ಆದರೆ ಹಿರೇಮನೆಯಲ್ಲಿ ಹಸಲರು ಇದ್ದರೆ ಎಂಬಂತಹ ಕಲ್ಪನೆಯೂ ಮಾಸ್ತರರಿಗೆ ಇರಲಿಲ್ಲ. ಹಿರೇಮನೆಗೆ ಹೋದ ನಂತರವೇ ಅಲ್ಲಿ ಹಸಲರಿದ್ದಾರೆ ಎಂಬುದು ಮನವರಿಕೆಯಾಗಿದ್ದು. ಆಗ ಅಲ್ಲಿ ಒಟ್ಟು ೨೧ ಹಸಲರ ಕುಟುಂಬಗಳು ವಾಸ ಮಾಡುತ್ತಿದ್ದವು. ಈ ಕುಟುಂಬಗಳಿಂದ ಮಕ್ಕಳು ಸಮಾಜ ಕಲ್ಯಾಣ ಇಲಾಖೆಯ ಗಿರಿಜನ ವಸತಿ ಶಾಲೆಯಲ್ಲಿ ೨೫ ಮಕ್ಕಳು ದಾಖಲಾಗಿದ್ದರಲ್ಲಿ ಅದರಲ್ಲಿ ೧೪ ಗಂಡು ಮಕ್ಕಳು ಮತ್ತು ೧೧ ಹೆಣ್ಣು ಮಕ್ಕಳು ಇದ್ದರು. ಆದರೆ ಹಸಲ ಸಮುದಾಯಕ್ಕಾಗಲೀ ಹಾಗೂ ಅವರ ಮಕ್ಕಳಿಗಾಗಲೀ ಶುಚಿತ್ವದ ಕಲ್ಪನೆ ಇಲ್ಲದಿರುವುದನ್ನು ಗ್ರಹಿಸಿದ ಮಾಸ್ತರರು ಮೊದಲು ಶಾಲೆಗೆ ಹೋಗಿ ಅನಂತರ ಊರಿನ ಸಮುದಾಯ ಭವನದಲ್ಲಿ ವಾಸಿಸಲು ಪ್ರಾರಂಭಿಸಿದರು.

ಇಲ್ಲಿ ಮಾಸ್ತರರ ಆಸಕ್ತಿ ಹಿಮ್ಮಡಿಗೊಂಡು ಹಸಲರ ಅಭಿವೃದ್ಧಿಯ ಕಡೆ ಗಮನವೆತ್ತರು. ಸ್ಕೂಲಿಗೆ ಬಂದ ಮಕ್ಕಳ ಸ್ಥಿತಿಯನ್ನು ಗಮನಿಸಿದರೆ ಉದ್ದ ಉದ್ದನೆಯ ಮತ್ತು ಗಂಟು ಗಂಟಾದ ಕೂದಲು ಗಂಡು ಮಕ್ಕಳಲ್ಲಿ ಇದ್ದುದು ಕಂಡುಬಂತು. ಅಲ್ಲದೆ ಶಾಲೆಯಲ್ಲಿರುವ ಮಕ್ಕಳ ನಾಮಾಂಕಿತವೂ ಮುನ್ನಾ, ದ್ಯಾಮ, ಹಾಲಪ್ಪ, ಮಂಜಮ್ಮ, ಚಾದ್ರಿ ಇನ್ನಿತರ ಹೆಸರುಗಳು ಮಕ್ಕಳಿಗೆ ಇದ್ದುದು ಕಂಡುಬಂದು ಅನಂತರ ಆ ಹೆಸರುಗಳ ಬದಲಿಗೆ ರಾಮಕೃಷ್ಣ, ಶಿವಾನಂದ, ಗುರುಮೂರ್ತಿ, ಉಮಾದೇವಿ, ಮಂಜುಳ ಎಂದು ನಾಮಕರಣ ಮಾಡಿ ದಾಖಲಾತಿ ಪುಸ್ತಕದಲ್ಲಿ ಹೊಸ ಹೆಸರುಗಳಿಂದ ನೊಂದಣಿ ಮಾಡಿ ಮಾಸ್ತರರ ತಿಳುವಳಿಕೆಯ ಪ್ರಕಾರವೇ ಮಕ್ಕಳ ಜನ್ಮ ದಿನಾಂಕವನ್ನು ದಾಖಲೆಗಳಲ್ಲಿ ದಾಖಲಿಸಿದರು. ಇಲ್ಲಿಂದ ಮಕ್ಕಳ ಹೆಸರನ್ನು ಬದಲಾಯಿಸುವ ಹಂತದಿಂದಲೇ ಪ್ರಾಥಮಿಕ ಸಮಾಜದ ಸೇವೆ ಪ್ರಾರಂಭವಾಯಿತೆಂದು ತಿಳಿಯಲಾಗುವುದು.

ಅಲ್ಲದೆ ಹಸಲರ ಅಭಿವೃದ್ಧಿ ಅಥವಾ ಪರಿವರ್ತನೆಗೆ ಮೊದಲ ಹೆಜ್ಜೆಯಾಗಿ ಗುರುತಿಸಲ್ಪಟ್ಟಿತು. ನಂತರ ಹಸಲ ಮಕ್ಕಳ ಗಂಟುಗಂಟಾದ ತಲೆಕೂದಲನ್ನು ಕತ್ತಿರಿಸುವಂತೆ ಅವರ ಪೋಷಕರನ್ನು ಕರೆದು ಮಾತಾಡಿದಾಗ ಪೋಷಕರು ನಾವು ನಮ್ಮ ಮನೆದೇವರುಗಳಿಗೆ ಜವಳಿ ಮಾಡಿಸಬೇಕೆಂದು ಬಿಟ್ಟಿದ್ದೇವೆ ನಮಗೆ ಸಧ್ಯದ ಪರಿಸ್ಥಿತಿಯಲ್ಲಿ ಜವಳಿ ತಗಿಸುವುದಕ್ಕೆ ದೇವಸ್ಥಾನಕ್ಕೆ ಹೋಗಲು ಹಣದ ಕೊರತೆ ಇರುವುದರಿಂದಲೂ ಹಾಗೂ ಹೆಗಡೆ ಪುರೋಹಿತ ಒಡೆಯರ ಹತ್ತಿರ ಹಣವನ್ನು ಕೇಳಿ ತೆಗೆದುಕೊಂಡು ಬರಬೇಕು. ಅಲ್ಲದೆ ಅವರು ಕೊಟ್ಟ ಹಣಕ್ಕೆ ಜೀತ ಮಾಡಬೇಕಾಗುತ್ತದೆ. ಆದ್ದರಿಂದ ನಮ್ಮ ಹತ್ತಿರ ಹಣ ಸಂಗ್ರಹವಾಗುವ ವರೆಗೆ ಕೇಶಮುಂಡನೆಯನ್ನು ಮಾಡಿಸುವುದು ಸಾಧ್ಯವಿಲ್ಲವೆಂದು ಮಾಸ್ತರರ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು. ಆದರೆ ಹಸಲರ ಸಾಮಾಜಿಕ ಕಾಳಜಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡ ಕ್ರಿಯಾಶೀಲ, ಸೃಜನಶೀಲ ಮನಸ್ಸು ಸುಮ್ಮನಿರದೇ ಹಸಲರ ಮಕ್ಕಳ ಹತ್ತಿರ ಹೋಗಿ ತಾವೇ ಸ್ವತಃ ಕತ್ತರಿ ಹಿಡಿದು ಕ್ಷೌರ ಮಾಡಿದರು. ಅಲ್ಲದೆ ಮಕ್ಕಳಿಗೆ ಸ್ನಾನ ಮಾಡಿಸಿ ಹಸಲರ ಬದಲಾವಣೆಗೆ ನಾಂದಿ ಹಾಡಿದರು. ಈ ಪರಿಣಾಮವಾಗಿ ಹಸಲ ಬುಡಕಟ್ಟಿನ ಜನರು ಮಾಸ್ತರರನ್ನು ಮೀನಾಮೇಷ ಎಣಿಸದೇ ನಿಂದಿಸಿದರು. ನೀವು ಮಾಡಿದ ಕೆಲಸದಿಂದ ನಮ್ಮ ಕುಟುಂಬಕ್ಕೆ ಮತ್ತು ನಮ್ಮ ಮಕ್ಕಳಿಗೆ ದೇವರಿಂದ ಒಳಿತಾಗುವುದಿಲ್ಲವೆಂದು ಪ್ರತಿಭಟಿಸಿದರು. ಈ ಪ್ರತಿಭಟನೆಗೆ ಹೆದರದೇ ಮಾಸ್ತರರು ಧೈರ್ಯ ತೆಗೆದುಕೊಂಡು ಹಸಲರ ಮೌಢ್ಯತೆ ಮತ್ತು ಸಾಂಪ್ರದಾಯಿಕತೆಯನ್ನು ಅರಿತು ಹಸಲರ ಕೋಪವನ್ನು ಸಂತೋಷದಿಂದ ಸ್ವೀಕರಿಸಿ ಹಸಲರ ಅಭಿವೃದ್ಧಿಯ ಕಡೆ ಹೆಚ್ಚು ಆಸಕ್ತಿಯನ್ನು ಇಟ್ಟುಕೊಂಡರು. ನಂತರ ದೇವರು ಶಾಪ ಹಾಕಬೇಕಾದರೆ ನನಗೆ ಹಾಕಲಿ ಏಕೆಂದರೆ ಮಕ್ಕಳ ತಲೆಕೂದಲನ್ನು ಕತ್ತಿರಿಸಿದುದು ನಾನಲ್ಲವೇ ಎಂದು ಪ್ರತ್ಯುತ್ತರವನ್ನು ನೀಡಿ ಹಸಲರನ್ನು ಸಮಾಧಾನ ಪಡಿಸಿ ಕಳುಹಿಸಿದರು. ಆ ನಂತರ ಮಾಸ್ತರರು ಶಾಲೆಯ ಸುತ್ತಮುತ್ತಲಿನ ವಾತಾವರಣವನ್ನು ಮೊದಲು ಶುಚಿಗೊಳಿಸಿದರು. ಅಲ್ಲದೆ ಮಕ್ಕಳ ವಿದ್ಯಾಭ್ಯಾಸದ ಮನೋಭಾವನೆಯನ್ನು ಉತ್ತೇಜಿಸುವಂತಹ ಸುಭಾಷಿತ ನುಡಿಗಳನ್ನು ಶಾಲೆಯ ಕೊಠಡಿಯ ಒಳಗಡೆ ಗೋಡೆಯ ಮೇಲೆ ಬರೆಸಿ ಮಕ್ಕಳಿಗೆ ಕಲಿಕೆಯ ಸಾಮರ್ಥ್ಯವನ್ನು ಹೆಚ್ಚಿಸಿದರು. ನಂತರ ವಸತಿ ನಿಲಯದಲ್ಲಿ ಧರ್ಮ, ಸಾಹಿತ್ಯ, ರಾಷ್ಟ್ರೀಯ ಭಾವೈಕ್ಯತೆ, ಅಹಿಂಸೆ, ಕೋಲಾಟ ಪದಗಳು ಮುಂತಾದ ರಾಷ್ಟ್ರೀಯ ಜಾಗೃತಿಯನ್ನು ಮೂಡಿಸುವ ಸಾಮೂಹಿಕ ಪ್ರಾರ್ಥನೆ ಮತ್ತು ಗೀತೆಗಳನ್ನು ತಾವು ಮಕ್ಕಳಿಗೆ ಹೇಳಿಕೊಡುವುದಲ್ಲದೇ ಹೇಳಿಕೊಟ್ಟ ಗೀತೆಗಳನ್ನು ಮಕ್ಕಳು ತಮ್ಮ ಮುಂದೆ ಹೇಳುವಂತಹ ಪರಂಪರೆಯನ್ನು ಹುಟ್ಟುಹಾಕಿ ಶಾಲೆಯ ಸುತ್ತಮುತ್ತ ಹೂವಿನ ಗಿಡಗಳನ್ನು ನೆಡುವುದರ ಮೂಲಕ ಸುಂದರವಾದ ಉದ್ಯಾನವನವನ್ನು ಶಾಲೆಯ ಮುಂದೆ

ನೋಡುಗರಿಗೆ ಮನಸೆಳೆಯುವಂತೆ ಅಚ್ಚುಕಟ್ಟಾಗಿ ಸುಂದರ ಪರಿಸರವನ್ನು ನಿರ್ಮಾಣ ಮಾಡಿದರು. ಇದರ ಅರ್ಥ "As a Teacher as well as a student" ಎಂಬ ಸೂಕ್ತಿಯಂತೆ ಶಿಕ್ಷಕನ ದಾರಿಯಲ್ಲಿಯೇ ಮಕ್ಕಳು ಬೆಳೆಯಲು ಪ್ರಾರಂಭಿಸಿ ಹಿರೇಮನೆಯ ಹಸಲ ಹಾಡಿಯ ಮನಸ್ಸುಗಳನ್ನು ಶಿಕ್ಷಣ ಮತ್ತು ಉಳಿತಾಯದ ಕಡೆ ಮುಖಮಾಡಿಸಿದರು. ಅಲ್ಲದೆ ಶಾಲೆಯಲ್ಲಿರುವ ಮಕ್ಕಳಿಗೆ ಪಠ್ಯ ಚಟುವಟಿಕೆಯ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದ್ದಲ್ಲದೇ ತರಬೇತಿಯನ್ನು ಉಣಬಡಿಸಿದರು. ಈ ಪರಿಣಾಮವಾಗಿ ಮಕ್ಕಳು ದಿನದಿಂದ ದಿನಕ್ಕೆ ಮಾಸ್ತರರು ಹೇಳಿಕೊಟ್ಟ ಪಾಠ, ಪ್ರವಚನ ಜೊತೆಗೆ ಕೋಲಾಟದ ಗೀತೆಗಳು, ಲಾವಣಿಗಳು, ಜಾನಪದ ಗೀತೆಗಳು, ಕರ್ನಾಟಕ ಯಕ್ಷಗಾನದ ಕುಣಿತ ಮುಂತಾದವುಗಳಲ್ಲಿ ಬಲಿಷ್ಠಗೊಳ್ಳತೊಡಗಿದರು. ಈ ಹಿನ್ನೆಲೆಯಿಂದ ಹಸಲ ಮಕ್ಕಳು ಯಾವುದೇ ವೇದಿಕೆಯಲ್ಲಿ ನಿರ್ಭಯವಾಗಿ ಹಾಡು, ಕುಣಿತ, ಕೋಲಾಟ ಮುಂತಾದವುಗಳಲ್ಲಿ ಯಶಸ್ವಿಯ ಮಕ್ಕಳಾಗಿ ಹೊರಹೊಮ್ಮಿದರು. ಇಂತಹ ಸಂದರ್ಭದಲ್ಲಿ ಅಂದರೆ ೧೯೬೦ ಸಮಾಜ ಕಲ್ಯಾಣ ಇಲಾಖೆಯ ಅಂದಿನ ಸಚಿವರಾಗಿದ್ದ ಯಶೋಧರಮ್ಮ ದಾಸಪ್ಪ ಎಂಬುವವರು ಹಿರೇಮನೆಯ ಗಿರಿಜನ ಶಾಲೆಗೆ ಭೇಟಿಯನ್ನು ಇತ್ತರು. ಇವರು ಅಪ್ಪಟ ಗಾಂಧಿಯ ತತ್ವಗಳನ್ನು ಮೈಗೂಡಿಸಿಕೊಂಡ ಅಂದಿನ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಎಸ್.ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿದ್ದರು. ಶಾಲೆಗೆ ಭೇಟಿನೀಡಿದ ಯಶೋಧರಮ್ಮ ಅವರು ಶಾಲೆಯ ಸುತ್ತಮುತ್ತ ಪರಿಸರವನ್ನು ವೀಕ್ಷಿಸಿ ಮತ್ತು ಮಕ್ಕಳ ಆಟ ಮತ್ತು ಪಾಟಗಳನ್ನು ಗಮನಿಸಿ ಮಾಸ್ತರರ ಆದರ್ಶವನ್ನು ಮೆಚ್ಚಿಕೊಂಡು ಸಂದರ್ಶಕರ ಪುಸ್ತಕದಲ್ಲಿ ಸುವ್ಯವಸ್ಥಿತವಾದ ಶಾಲೆ ಮಾಸ್ತರರ ಶಿಸ್ತು, ಮಕ್ಕಳ ಶುಚಿತ್ವ, ಸುಂದರವಾದ ಉದ್ಯಾನವನವನ್ನು ಕುರಿತು ಪುಸ್ತಕದಲ್ಲಿ ಬರೆದು ಹೋದ ಬಗ್ಗೆ ಮಾಸ್ತರರು ಮುಕ್ತಕಂಠದಿಂದ ಈಗಲೂ ನೆನಪಿಸಿಕೊಳ್ಳುತ್ತಾರೆ. ಇಲ್ಲಿ ಗಿರಿಜನ ಶಾಲೆಗೆ ಅಂದಿನ ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಎನ್.ಸಿದ್ದಯ್ಯನವರು ಭೇಟಿ ನೀಡುತ್ತಾರೆ. ಆ ಸಂದರ್ಭದಲ್ಲಿ ಹಸಲರೆಲ್ಲರೂ ಸೇರಿ ಡಿ.ಸಿ.ಯವರಿಗೆ ಮಾಸ್ತರರ ವಿರುದ್ಧ ದೂರು ನೀಡುತ್ತಾರೆ. ಗಿರಿಜನ ವಸತಿ ನಿಲಯಕ್ಕೆ ಪ್ರತಿಯೊಂದು ಹಸಲ ಮನೆಯಿಂದ ಒಂದೊಂದು ಕಟ್ಟಿಗೆ ಹೊರೆಯನ್ನು ತರುವುದನ್ನು ಕುರಿತು ಆದ ಸಂಘರ್ಷದ ಬಗ್ಗೆ ದೂರು ನೀಡುತ್ತಾರೆ. ಆದರೆ ಡಿ.ಸಿ.ಯವರು ಮಾಸ್ತರರ ಶಿಸ್ತು, ಸಮಯಪಾಲನೆ, ಕಲಿಸುವ ಶ್ರದ್ಧೆ, ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯ, ಮಕ್ಕಳಲ್ಲಿ ಆದ ಶೈಕ್ಷಣಿಕ ಬೆಳವಣಿಗೆಯನ್ನು ಗಮನಿಸಿ ದೂರು ನೀಡಿದವರಿಗೆ ಹುಚ್ಚಪ್ಪ ಮಾಸ್ತರರ ಗುಣಗಳನ್ನು ಎತ್ತಿ ಹಿಡಿದು ಮಾಸ್ತರರ ಬಗ್ಗೆ

ಹಸಲರಿಗೆ ಗೌರವದ ಮನೋಭಾವನೆ ಬರುವಂತೆ ವಾತಾವರಣವನ್ನು ಸೃಷ್ಟಿಮಾಡಿ ಅಧಿಕಾರಿಗಳು ನಿರ್ಗಮಿಸುತ್ತಾರೆ.

ಮಾಸ್ತರರು ಹಸಲರು ಮತ್ತು ಸರ್ಕಾರಿ ಅಧಿಕಾರಿಗಳ ಮಧ್ಯೆ ಸಾಮಾಜಿಕ ಅಭಿವೃದ್ಧಿಯ ಸೇತುವೆಯಾಗಿ ಕಾಣಿಸಿಕೊಳ್ಳುತ್ತಾರೆ. ಏಕೆಂದರೆ ೧೯೬೦ ರಲ್ಲಿ ಮಲೆನಾಡಿನ ಪುರೋಹಿತ ಶಾಹಿಯ ವರ್ಗಕ್ಕೆ ಮಾತ್ರ ಸೀಮಿತವಾಗಿದ್ದ ಪೂಜಾ ವಿಧಿ ವಿಧಾನಗಳನ್ನು ಅರಿತುದಲ್ಲದೇ ಆ ಭಾಗದ ಭೂ ಮಾಲಿಕರ ದರ್ಪದ ಪ್ರಭುತ್ವವನ್ನು ಅರಿತು ಸಮತಾವಾದದ ಹಾಗೂ ಸಮಾನತೆಯಿಂದ ಸಮಾಜವನ್ನು ನೋಡುವ ತವಕದಲ್ಲಿ ಮನಸ್ಸನ್ನು ಕೇಂದ್ರೀಕರಿಸಿಕೊಂಡು ಅಸ್ಪೃಶ್ಯತೆಯನ್ನು ನಿರ್ಮೂಲನೆಗೊಳಿಸುವ ಸದಬಿರುಚಿಯನ್ನು ಮೈಗೂಡಿಸಿಕೊಂಡ ಮಸ್ತರರು ಹಸಲರ ಹಾಡಿಯಲ್ಲಿ ಗಣಪತಿಯನ್ನು ಕೂಡಿಸಿ ಹಸಲರೇ ಪೂಜೆ ಮಾಡುವ ಮನೋಸ್ಥೈರ್ಯವನ್ನು ಗಳಿಸುವುದಕ್ಕೆ ತಾವೇ ಸ್ವತಃ ಮುಂದೆ ನಿಂತು ಮೊದಲ ಬಾರಿಗೆ ಹಿರೇಮನೆಯಲ್ಲಿ ಮಕ್ಕಳೆಲ್ಲರನ್ನೂ ಒಟ್ಟುಗೂಡಿಸಿ ಗಣಪತಿ ಪೂಜೆಯನ್ನು ನೆರವೇರಿಸಿದ್ದಾರೆ. ಇದು ಹಸಲ ಬುಡಕಟ್ಟಿನ ಜನರಲ್ಲಿ ಮನಸ್ಥೈರ್ಯ ಬಲಿಷ್ಠಗೊಂಡು ನಾವು ಏಕೆ ದೇವರುಗಳನ್ನು ಪೂಜಿಸಬಾರದು ಎಂಬ ವಿಮರ್ಷೆಯ ಮನೋಭಾವನೆ ಗಣಪತಿ ಹಬ್ಬದಿಂದ ಹಂತ ಹಂತವಾಗಿ ಬೆಳೆದುಬಂದಿದುದನ್ನು ನೋಡಲಾಗುವುದು. ಅಲ್ಲದೆ ಈ ಹಬ್ಬದಲ್ಲಿ ಹಸಲ ಮಕ್ಕಳು ಹಾಡುವ, ಕುಣಿಯುವ ನಾಟಕ ಪ್ರದರ್ಶನ ಮಾಡುವ ಹಾಗೂ ಹಾಡಿಯ ಸುತ್ತಮುತ್ತ ಇರುವ ಜನರೆಲ್ಲರೂ ಸೇರಿ ಈ ವೇದಿಕೆಯಲ್ಲಿ ಮನೋರಂಜನೆಯನ್ನು ಸವಿಯುವ ಸದುಪಯೋಗ ಅವಕಾಶ ದೊರೆತುದನ್ನು ಹಾಗೂ ಕಲ್ಪಿಸಿದ ವ್ಯಕ್ತಿಯ ಮನಸ್ಸಿನ ಅಂತರಾಳದಲ್ಲಿರುವ ಗುಣಗಳನ್ನು ಅರಿತ ಹಸಲರು ಮಾಸ್ತರರಿಗೆ ಗೌರವ ಕೊಡುವುದಕ್ಕೆ ಪ್ರಾರಂಭಿಸಿದರು. ಈ ಪರಿಣಾಮವಾಗಿ ಮಾಸ್ತರರು ಹೇಳಿದಾಗ ಪೂಜೆ ಮಾಡುವುದಿಲ್ಲವೆಂದು ಹೇಳಿದ ಹಸಲರು ಮರುವರ್ಷ ದ್ಯಾವಪ್ಪ ಎಂಬ ವ್ಯಕ್ತಿಯು ಗಣಪತಿ ಪೂಜೆಯನ್ನು ನಾನೇ ನೆರವೇರಿಸುತ್ತೇನೆ ಎಂದು ಮುಂದೆ ಬಂದನು. ಆ ಕಾರಣದಿಂದ ಪ್ರತಿ ವರ್ಷ ಗಣಪತಿಯ ಪೂಜೆ ಬ್ರಾಹ್ಮಣರ ಬದಲಿಗೆ ಹಸಲರಿಂದಲೇ ನೆರವೇರುವ ಪರಿಪಾಠ ಸೃಷ್ಟಿಯಾಯಿತು. ಅಲ್ಲದೆ ಮಲೆನಾಡಿನ ಬುಡಕಟ್ಟುಗಳಿಗೆ ಹಾಗೂ ಇತರ ಸಮುದಾಯಗಳಿಗೆ ಮಾಸ್ತರರು ಶಿಕ್ಷಕರಾಗಿ ಕಾಣದೆ ಸಮಾಜದ ಒಳಿತನ್ನು ಬಯಸುವ ಮತ್ತು ಸಮಾಜದ ಶೋಷಿತ ಸಮುದಾಯಗಳಿಗೆ ನ್ಯಾಯವನ್ನು ದೊರಕಿಸಿಕೊಡುವ ಪರಿಪೂರ್ಣ ವ್ಯಕ್ತಿತ್ವದ ನಿಪುಣರಾಗಿ ಎಲ್ಲರ ಮನಸ್ಸಿನಲ್ಲಿ ಅಚ್ಚ ಹಸುರಿನಂತೆ ಉಳಿದರು. ಈ ಹಿನ್ನೆಲೆಯಿಂದ ೧೯೫೫ ರಲ್ಲಿ ಸಾಗರದ ಕಾಗೋಡು ತಿಮ್ಮಪ್ಪ ಹಾಗೂ ಸಮಾಜವಾದಿಯಾಗಿ ಸಮಾಜವಾದದ

ಪಕ್ಷವನ್ನು ಹುಟ್ಟುಹಾಕಿದ ಶಾಂತವೇರಿ ಗೋಪಾಲಗೌಡರ ಪರಿಚಯವಾಗಿದ್ದು ಮುಂದೆ ಈ ಪಕ್ಷಕ್ಕೆ ಶಿಕ್ಷಕ ವೃತ್ತಿಯ ಜೊತೆಗೆ ಬೆಂಬಲವನ್ನು ಸೂಚಿಸುವ ಸದವಕಾಶ ಮಾಸ್ತರರಿಗೆ ದೊರೆಯಿತು. ಈ ಪರಿಣಾಮವಾಗಿ ಸಾಗರ ತಾಲೂಕಿನ ಕಾಡಿನ ಮಧ್ಯೆ ಜೀವಿಸುವ ಬುಡಕಟ್ಟುಗಳು ಮತ್ತು ಇತರ ಸಮುದಾಯಗಳ ಶ್ರೇಯೋಭಿವೃದ್ಧಿ ನಾಯಕನಾಗಿದ್ದ ಮಾಸ್ತರರು ಕಾಗೋಡು ತಿಮ್ಮಪ್ಪರ ಚುನಾವಣೆಗೆ ಬುಡಕಟ್ಟುಗಳ ಹಿತದೃಷ್ಟಿಯಿಂದ ಬೆಂಬಲವನ್ನು ಕೊಟ್ಟಿರುವುದಲ್ಲದೇ ಪ್ರತಿಯೊಂದು ಬುಡಕಟ್ಟಿಗೂ ಅಭಿವೃದ್ಧಿಯ ಯೋಜನೆಗಳನ್ನು ಪ್ರತಿಯೊಂದು ಮನೆಗೂ ತಲುಪಿಸುವ ಕಾರ್ಯವನ್ನು ಕಾರ್ಯಗತಗೊಳಿಸಿದರು. ಆದ್ದರಿಂದ ಸರ್ಕಾರ ಮತ್ತು ಬುಡಕಟ್ಟುಗಳ ಮಧ್ಯೆ ಅಭಿವೃದ್ಧಿಯ ಅಧಿಕಾರಿಯಂತೆ ಕೆಲಸವನ್ನು ನಿರ್ವಹಿಸಿದ ಜವಾಬ್ದಾರಿ ವ್ಯಕ್ತಿ ಇವರಾಗಿದ್ದಾರೆ.

ಮಾಸ್ತರರು ಹಿರೇಮನೆಯಲ್ಲಿ ಹಸಲರ ಬದುಕಿನ ವಿಕಾಸಕ್ಕೆ ನಾಂದಿ ಹಾಡಿರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ಇಲ್ಲಿ ಹಸಲರಿಗೆ ಹನ್ನೆರಡು ಮನೆಗಳನ್ನು ಸರ್ಕಾರದ ವಿಶೇಷ ಯೋಜನೆಯಡಿಯಲ್ಲಿ ಮಂಜೂರಾತಿ ಮಾಡಿಸಿದ್ದಲ್ಲದೇ ಸುವ್ಯವಸ್ಥಿತವಾದ ಪ್ರಾಥಮಿಕ ಸೌಲಭ್ಯಗಳ ಜೊತೆಗೆ ಸೂರನ್ನೂ ಒದಗಿಸಿಕೊಟ್ಟ ನೇತಾರರಾಗಿದ್ದಾರೆ. ಅಲ್ಲದೆ ಮಾಸ್ತರರು ಹಸಲರಿಗೆ ಗಂಗಾಕಲ್ಯಾಣ ಯೋಜನೆಯ ಅಡಿಯಲ್ಲಿ ಪ್ರತಿಯೊಂದು ಮನೆಗೂ ವಿದ್ಯುತ್ ಸಂಪರ್ಕದ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು ಹಸಲರ ಮನಸ್ಸು ಮತ್ತು ಮನೆಗಳನ್ನು ಬೆಳಗಿಸಿದ ಆದರ್ಶ ನಂದಾದೀಪವಾಗಿದ್ದಾರೆ. ಏಕೆಂದರೆ ಹಸಲರ ಪ್ರತಿಯೊಂದು ಹಾಡಿಗೆ ರಸ್ತೆಯ ಸಂಪರ್ಕ, ಪ್ರಾಥಮಿಕ ಶಿಕ್ಷಣ, ಅರಣ್ಯದ ಶ್ರೇಷ್ಠತೆ, ನೀರಿನ ಸಂಪನ್ಮೂಲತೆ ಸದುಪಯೋಗ, ವ್ಯವಹಾರಿಕ ಜ್ಞಾನ, ಸಮಯ ಪಾಲನೆ, ಉಡುಪಿನ ಕಲ್ಪನೆ, ಶುಚಿತ್ವಗಳೆಲ್ಲವನ್ನೂ ಕುರಿತು ಜಾಗೃತಿಯನ್ನು ಹಸಲರಲ್ಲಿ ಮೂಡಿಸಿದ್ದರಿಂದ ಹಸಲರ ಸಾಮಾಜಿಕ ರೂಪಾಂತರದ ಪ್ರತಿಬಿಂಬವಾಗಿ ಇರುವುದು ಕ್ಷೇತ್ರಕಾರ್ಯದಲ್ಲಿ ಹಸಲರ ಬುಡಕಟ್ಟಿನ ಮಾಹಿತಿದಾರರಿಂದ ತಿಳಿಯಲಾಗಿದೆ. ಮಾಸ್ತರರು ಹಸಲರ ಅಭಿವೃದ್ಧಿಗಾಗಿ ಮಾಡಿದ ಕೆಲಸ ಕಾರ್ಯಗಳು ಬೆರಳೆಣಿಕೆಯಷ್ಟು ಆಗಿರದೆ ವಿವಿಧ ಮುಖಗಳನ್ನು ಹೊಂದಿರುವ ಕಾರ್ಯಗಳಾಗಿವೆ. ಹಸಲರ ಬದುಕು ರೂಪುಗೊಳ್ಳುವುದಕ್ಕೋಸ್ಕರವಾಗಿ ಸರ್ಕಾರದ ಬಗರುಕ್ಕುಂ ಭೂಮಿಯನ್ನು ಒಟ್ಟು ೨೪ ಎಕರೆ ಹಸಲರಿಗೆ ಸರ್ಕಾರದಿಂದ ಮಂಜೂರು ಮಾಡಿಸಿದ್ದಲ್ಲದೇ ಸಮಾನ ಹಂಚಿಕೆಯನ್ನು ಮಾಡಿಸಿ ಹಸಲರು ಭೂಮಾಲಿಕರ ತೋಟ ಮತ್ತು ಗದ್ದೆಗಳಿಗೆ ಜೀತದಾಳುಗಳಾಗಿ ದುಡಿಯಲು ಹೋಗದೆ ತಮ್ಮ ತಮ್ಮ ಭೂಮಿಯಲ್ಲಿಯೇ ಸ್ವಾವಲಂಬಿಗಳಾಗಿ ಬದುಕನ್ನು ಸಬಲೀಕರಣಗೊಳಿಸುವಂತಹ ಅವಕಾಶವನ್ನು ಒದಗಿಸಿಕೊಟ್ಟಿದ್ದಾರೆ. ಅಲ್ಲದೆ ಗಂಗಾಕಲ್ಯಾಣ ಯೋಜನೆಯಡಿ ಭೂಮಿಯ

ಸಾಗುವಳಿಯ ಉಪಯೋಗಕ್ಕಾಗಿ ವಿದ್ಯುತ್ ಮೋಟಾರ್ (ನೀರೆತ್ತುವ ಯಂತ್ರ) ಗಳ ಮೂಲಕ ನೀರಿನ ಸೌಲಭ್ಯವನ್ನು ಒದಗಿಸಿದ್ದಲ್ಲದೇ ಸರ್ಕಾರದಿಂದ ನೇಗಿಲು, ೨೦ ಎತ್ತುಗಳು, ಹಸುಗಳು, ಎಮ್ಮೆಗಳು, ಬಿತ್ತನೆಯ ಬೀಜ, ರಾಸಾಯನಿಕ ಗೊಬ್ಬರ ಹಾಗೂ ಬಕೆಟ್‌ಗಳು ಮುಂತಾದ ಸಾಧನಗಳನ್ನು ಸರ್ಕಾರದಿಂದ ಹಸಲರಿಗೆ ಕೊಡಿಸಿ ಅವರ ಬದುಕು ಸುಧಾರಣೆ ಹೊಂದಲು ಶ್ರಮಿಸಿದ್ದಾರೆ. ಇವರು ಸರ್ಕಾರದ ಯಾವುದೇ ಸೌಲಭ್ಯಗಳನ್ನು ಬುಡಕಟ್ಟುಗಳಿಗೆ ತಲುಪಿಸುವಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಮಧ್ಯೆ ಹೋರಾಟ ಮಾಡಬೇಕಾದ ಸನ್ನಿವೇಶವು ಬಂದು ಒದಗಿದ್ದ ಸಂಗತಿಯನ್ನು ಮಾಸ್ತರರು ಈಗಲೂ ಮೆಲುಕುಹಾಕುತ್ತಾರೆ. ಅಲ್ಲದೆ ವ್ಯವಸಾಯದ ದೃಷ್ಠಿಯಿಂದ ಕ್ಷೇತ್ರ ಅಭಿವೃದ್ಧಿ ಅಧಿಕಾರಿಗಳನ್ನು ಹಿರೇಮನೆಯ ಹಾಡಿಗೆ ಕರೆಸಿ ಕೃಷಿಗೆ ಸಂಬಂಧಿಸಿದ ಸರ್ಕಾರವೇ ಬಿಡುಗಡೆ ಮಾಡಿದ ವ್ಯವಸಾಯದ ಮಾಹಿತಿ ಪುಸ್ತಕವಾದ ವಿಕಾಸ ಪತ್ರಿಕೆಗಳನ್ನು ಬಿಡುಗಡೆ ಮಾಡಿಸಿ ಹಸಲರಿಗೆ ವಿತರಿಸಿದ್ದಾರೆ. ಅಲ್ಲದೆ ಹಸಲರ ೨೨ ಕುಟುಂಬಕ್ಕೆ ಜಮೀನನ್ನು ವಿತರಿಸುವುದಕ್ಕೆ ಮಾಸ್ತರರು ಮಾಡಿದ ಹೋರಾಟ ಅಸಮಾನ್ಯವಾದುದಾಗಿದೆ. ಏಕೆಂದರೆ ಆ ಭಾಗದ ಬ್ರಾಹ್ಮಣರು ಹಾಗೂ ಭೂಮಾಲಿಕ ಪ್ರಭುತ್ವವು ಮಾಸ್ತರರು ಹಸಲರಿಗೆ ಭೂಮಿಯನ್ನು ಕೊಡಿಸದಂತೆ ಮನವೊಲಿಸುವ ಪ್ರಯತ್ನ ಮಾಡಿ ದುಡ್ಡಿನ ಆಮಿಶವನ್ನು ತೋರಿಸಿದರೂ ಗಿರಿಜನ ಕಾಳಜಿಯನ್ನಿಟ್ಟುಕೊಂಡ ಮಾಸ್ತರರ ಮನಸ್ಸು ಮಣಿಯಲಿಲ್ಲ. ಇದನ್ನು ಗಮನಿಸಿದ ಬ್ರಾಹ್ಮಣಶಾಹಿ ವ್ಯವಸ್ಥೆಯು ಬಗರುಕ್ಕುಂ ಭೂಮಿಯ ಪರವಾಗಿ ಹಸಲರಿಗೆ ಕೊಡಿಸಬಾರದೆಂಬ ನಿಯಮಾವಳಿಯನ್ನು ರೂಪಿಸಿಕೊಂಡು ಕೋರ್ಟಿಗೆ ಅಪೀಲು ಒಯ್ದು ತಡೆಯನ್ನು ತಂದರು. ಆದರೆ ಸರ್ಕಾರದ ನಿಯಮಾವಳಿ ನಿರಾಶ್ರಿತರಿಗೆ ಕೊಡಬೇಕೆಂದು ಇದ್ದುದರಿಂದ ಇಲ್ಲಿ ಮಾಸ್ತರರ ಹೋರಾಟದ ಫಲವಾಗಿ ಹಾಗೂ ಕಾಗೋಡು ತಿಮ್ಮಪ್ಪರವರ ಆತ್ಮೀಯ ಸ್ನೇಹತ್ವದ ಸಂಬಂಧದಿಂದ ಯಾವುದೇ ತೊಂದರೆ ಆಗದೇ ೧೪-೦೪-೧೯೮೨ ರಂದು ಅಂಬೇಡ್ಕರ್ ಜಯಂತಿಯ ದಿವಸ ಅಂದಿನ ಶಿವಮೊಗ್ಗದ ಅಸಿಸ್ಟೆಂಟ್ ಕಮಿಷನರ್ ಆಗಿದ್ದ ಪಿ.ಐ.ಕುಮಾರ್ ಅವರಿಂದ ಭೂಮಿಯ ಹಕ್ಕುಪತ್ರಗಳನ್ನು ವಿತರಿಸಿದರು. ಮುಂದೆ ಇದೇ ಭೂಮಿಯನ್ನು ಸರ್ಕಾರದ ಯೋಜನೆಯಡಿಯಲ್ಲಿ ಸಮತಟ್ಟುಗೊಳಿಸುವ ಕಾರ್ಯವು ಕೈಗೂಡಿ ಹಸಲರ ಪ್ರಗತಿಗೆ ದಾರಿ ಮಾಡಿಕೊಟ್ಟಿತು. ಅಲ್ಲದೆ ಹಸಲರ ಮಕ್ಕಳಲ್ಲಿ ಸಾಹಿತ್ಯಾಸಕ್ತಿಯನ್ನು ಶಿಕ್ಷಣದ ಮೂಲಕ ಸ್ವಯಂಪ್ರತಿಭೆಯನ್ನು ಆಕಾಶದಷ್ಟು ಬೆಳೆಸಿದ್ದರಿಂದ ಗುಡ್ಡಗಾಡು ಕ್ಷೇತ್ರದಲ್ಲಿ ಹಸಲರನ್ನು ಸಮಾಜದ ಮುಖ್ಯವಾಹಿನಿಗೆ ಮುಖಮಾಡಿಸುವ ಪ್ರಾರಂಭದ ಕೆಲಸ ಇವರಿಂದಲೇ ಆಗಿದೆ. ಅಲ್ಲದೆ ಇವರ ಹತ್ತಿರ ಕಲಿತ ಹಸಲ ಮಕ್ಕಳು ಇಂದು ಆಯಾ ಶಾಲೆಗಳಲ್ಲಿಯೇ ಮಾಸ್ತರರಾಗಿ ಕಾರ್ಯನಿರ್ವಹಿಸುತ್ತಿರುವುದು ಕ್ಷೇತ್ರ ಕಾರ್ಯದಲ್ಲಿ ದೊರೆತ ಮಾಹಿತಿ ಆಧಾರವಾಗಿದೆ. ಇಲ್ಲಿ

ಮಾಸ್ತರರು ಕೋಲು ಪದಗಳನ್ನು ಹಾಡುತ್ತಾ ಹಸಲರಲ್ಲದೇ ಇತರೆ ಮಕ್ಕಳಿಗೂ ಕೋಲಾಟದ ಪದವನ್ನು ಕಲಿಸಿ ಕೋಲು ಮೇಳವನ್ನೇ ಆರಂಭಿಸಿದರು ಹಾಗೂ ಹಸಲರಿಗೆ ವಿದ್ಯೆಯ ಜ್ಞಾನವನ್ನು ವಯಸ್ಕರರಲ್ಲಿ ಬೆಳೆಸಲು ರಾತ್ರಿಯ ಶಾಲೆಯನ್ನು ಆರಂಭಿಸಿದರು ಈ ಪರಿಣಾಮವಾಗಿ ಇಡೀ ದೀವರ ಸಮುದಾಯವು ಇವರನ್ನು ಅಸ್ಪೃಶ್ಯವಾಗಿ ಕಂಡಿತಲ್ಲದೇ ಯಾರೂ ಇವರಿಗೆ ಹೆಣ್ಣು ಕೊಡಬಾರದೆಂದು ಕಟ್ಟೆಚ್ಚರಿಕೆ ನೀಡಿತು. ಆದರೆ ಸ್ವತಃ ಸಂಬಂಧದ ಒಳಗಡೆ ಹೆಣ್ಣು ಕೊಡಬೇಕೆಂದು ಪೂರ್ವ ನಿರ್ಧರಿತವಾಗಿದ್ದರೂ ಕೂಡ ಅದೇ ಸಂಬಂಧಿಕರು ಹೆಣ್ಣು ಕೊಡಲು ಬಾರದಾದರು. ಆದರೆ ೧೯೬೨ ರಲ್ಲಿ ಮಾಸ್ತರರಿಗೆ ಮೊದಲೇ ನಿರ್ಧಾರವಾಗಿದ್ದ ಗೌರಮ್ಮ ಎಂಬ ಯುವತಿಯನ್ನು ಮದುವೆ ಮಾಡಿಕೊಂಡ ಘಟನೆಯನ್ನು ನೆನಪಿಸಿಕೊಳ್ಳಬಹುದು. ಇವರು ಕೋಲಾಟ ಕಲಿಯಲು ಹಸಲ ಮಕ್ಕಳ ತಂಡವನ್ನು ರಚಿಸಿದ್ದಲ್ಲದೆ ಕೋಲಾಟ ಕಲಿಸಿ ಹಸಲ ಮಕ್ಕಳು ಮತ್ತು ಹಸಲ ಯುವಕರನ್ನು ಒಟ್ಟುಗೂಡಿಸಿ ಬುಡಕಟ್ಟು ಮತ್ತು ಜಾನಪದ ಗೀತೆಗಳನ್ನು ಕೋಲಾಟದ ತಂಡದೊಳಗೆ ಸೇರಿಸಿಕೊಂಡು ಹಲವಾರು ಕಡೆಗಳಲ್ಲಿ ಪ್ರದರ್ಶನವನ್ನು ಕೊಟ್ಟರು. ಕೋಲು ಹಿಡಿದು ನಿಂತರೆಂದರೆ ಹಸಲ ಜನಾಂಗದಲ್ಲಿ ಬದಲಾವಣೆಯ ಗಾಳಿ ಬೀಸಿದಂತೆಯೇ. ಮಾಸ್ತರರ ಒಂದೊಂದು ಕಂಚಿನ ಧ್ವನಿಗೆ ಹಸಲರ ಕೋಲುಗಳು ಶಬ್ಧ ಮಾಡಿ ಹಸಲರಲ್ಲಿದ್ದ ಅಂಧತ್ವ ಮಾಯವಾಗುತ್ತಿತ್ತು. ಈ ಪರಿಣಾಮವಾಗಿ ಮಾಸ್ತರರು ಹಸಲರ ಪ್ರತಿಯೊಂದು ಆಚಾರ, ವಿಚಾರ, ಸಂಪ್ರದಾಯ, ಹಬ್ಬ, ಸಾಂಸ್ಕೃತಿಕ ವೇದಿಕೆಗಳು, ನ್ಯಾಯ ಪಂಚಾಯತಿ ಮುಂತಾದ ಕ್ಷೇತ್ರಗಳಲ್ಲಿ ಪ್ರಮುಖ ವ್ಯಕ್ತಿಯಾಗಿ ರೂಪುಗೊಂಡರು.

ಅಲ್ಲದೆ ಹಸಲರ ಮುಖ್ಯ ಸಾಂಪ್ರದಾಯಿಕ ಹಬ್ಬವಾದ ಹಾಗೂ ಪಾರಂಪರಾಗತವಾಗಿ ಮಲೆನಾಡಿನ ವೈಶಿಷ್ಟ್ಯದ ಸಂಕೇತದ ಹಬ್ಬವಾದ ಅಂಟಿಗೆ-ಪೆಂಟಿಗೆಯಲ್ಲಿ ಹುಚ್ಚಪ್ಪ ಮಾಸ್ತರರ ಪಾತ್ರ ಅಗಾದವಾಗಿದೆ. ಈ ಹಿನ್ನೆಲೆಯಿಂದ ಹಸಲರ ಬದುಕಿನ ಒಂದೊಂದು ತುಣುಕಿನಲ್ಲಿಯೂ ಮಾಸ್ತರರ ಸಾಂಸ್ಕೃತಿಕತೆ ಜೀವಂತಿಕೆಯನ್ನು ಇಟ್ಟುಕೊಂಡಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಆಧುನಿಕರಣ, ಜಾಗತೀಕರಣ ಎಂದು ಇಡೀ ಭಾರತದ ಸಾಮಾಜಿಕ ವ್ಯವಸ್ಥೆ ತನ್ನ ಬದುಕಿನ ಪಲ್ಲಟಕ್ಕೆ ಎಡೆಮಾಡಿಕೊಂಡಿರುವಾಗ ಪಶ್ಚಿಮ ಘಟ್ಟದ ಜೋಗ ಜಾಲಪಾತ ಉಕ್ಕಿ ಹರಿಯುವಂತೆ ಮಾಸ್ತರರ ಹೆಸರು ಮತ್ತು ಅವರ ಸಾಂಸ್ಕೃತಿಕ ಶ್ರೀಮಂತಿಕೆ ಪ್ರತಿಯೊಂದು ಗಿಡ ಮರಗಳಿಗೂ ತಿಳಿದಿದೆ. ಸಾಗರದ ಸುತ್ತಮುತ್ತ ಇರುವ ಪ್ರತಿಯೊಂದು ಬಡಕಟ್ಟು ಮನಸ್ಸುಗಳಿಗೆ ಮಾಸ್ತರರು ಚಿರಪರಿಚಿತರಾಗಿದ್ದಾರೆ.

ಅಂಟಿಗೆ – ಪೆಂಟಿಗೆ:

ಹಸಲರ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಗತಿಯಲ್ಲಿ ಮಾಸ್ತರರ ಪಾತ್ರ ಹೆಮ್ಮರವಾಗಿರುವಂತೆಯೇ ಹಸಲರ ಅಂಟಿಗೆ–ಪೆಂಟಿಗೆ ಕಲೆಯ ಅಭಿವೃದ್ಧಿಯಲ್ಲಿಯೂ ಮಾಸ್ತರರ ಪಾತ್ರವಿದ್ದು ಈ ಹಬ್ಬದ ಆಚರಣೆಯ ಉದ್ದಕ್ಕೂ ವೈವಿಧ್ಯತೆಯ ಆಚರಣೆ ಎಂದು ಸಾಬೀತುಪಡಿಸುವಲ್ಲಿ ಮಾಸ್ತರರ ಪಾತ್ರ ಅಮರವಾದುದು. ಆ ಕಾರಣದಿಂದ ಅಂಟಿಗೆ–ಪೆಂಟಿಗೆ ಇಲ್ಲಿಯವರೆಗೂ ತನ್ನ ಸ್ಥನವನ್ನು ಇಟ್ಟುಕೊಂಡಿದೆ.

ಅಂಟಿಗೆ ಪೆಂಟಿಗೆ ಹಿನ್ನೆಲೆ

ದೀಪ ಭಾರತೀಯರ ಕಲ್ಪನೆಯಲ್ಲಿ ಮಹತ್ವದ್ದು. ಅದು ಸಾರ್ಥಕ ಬದುಕಿನ ಜೀವಂತಿಕೆಯ ಸಂಕೇತ. ಆದ್ದರಿಂದ ಮಲೆನಾಡಿಗರಿಗೆ ದೀಪಾವಳಿ ಬೆಳಕಿನ ಹಬ್ಬ ಇದನ್ನು ಐದು ದಿವಸಗಳು ಬಹು ವಿಜೃಂಬಣೆಯಿಂದ ಆಚರಿಸುತ್ತಾರೆ. ಪ್ರಕೃತಿಯ ಆಯಾಸ ಕಳೆದು ಹಗುರಾಗಿ ಹರೆಯ ಚಿಗುರಿರಲು ನೆಲ ಹೊಲಗಳು ಹಸಿರಾಗಿರಲು ಆನಂದದ ಮಾಯಕಾರ ಕಾರ್ತಿಕ ಮೇಲು ಹೆಜ್ಜೆಗಳನ್ನಿಡುತ್ತಾ ನೆಲಕ್ಕಿಳಿಯೋವಾಗಿನ ಗೆಜ್ಜೆಯ ಮೃದು ಕಂಕಣಿಯ ಲಹರಿಯಂತೆ ಬರುತ್ತದೆ ಈ ಹಬ್ಬ. ದೀಪಾವಳಿ ಬಂದಿತೆಂದರೆ ಇಡೀ ಮಲೆನಾಡೇ ನಲಿಯುತ್ತದೆ. ಮಲೆನಾಡಿನ ಹಳ್ಳಿಗಳಲ್ಲಿ ಇದಕ್ಕಿಂತ ಮಿಗಿಲಾದ ಹಬ್ಬವೇ ಇಲ್ಲ. ಹಾಗಾಗಿ ಇದಕ್ಕೆ ದೊಡ್ಡ ಹಬ್ಬವೆಂದು ಕರೆಯುವುದೇ ವಾಡಿಕೆ. ಹತ್ತಾರು ಹಣತೆಗಳನ್ನು ಹಚ್ಚಲು ಎಣ್ಣೆ ಇಲ್ಲದಾತನ ಮನೆಯಲ್ಲಿಯೂ ಸಡಗರ ಸಂಭ್ರಮಣೆ. ನರಕ ಚತುರ್ದಶಿಯಂದು ಈ ಹಬ್ಬದ ನಾಂದಿ. ಆ ದಿನ ಯಾರೇ ಎಂದು ಆಚರಿಸುತ್ತಾರೆ. ಫಸಲು ಕೊಯ್ಯುವ ಮುನ್ನ ಊರಿನ ಹೆಣ್ಣುಮಕ್ಕಳು ಭೂಮಿಯಲ್ಲಿ ಬೋರೆಯ ಕೊಡದಲ್ಲಿ ಹೊಸ ನೀರನ್ನು ತುಂಬಿ ಬಲೀಂದ್ರನನ್ನು ಮನೆಗೆ ಬರಮಾಡಿಸಿಕೊಳ್ಳುತ್ತಾರೆ. ಬಲೀಂದ್ರ ಕಾರ್ಮಲದ ಜಡ ದಿನಗಳನ್ನು ನರಕದ ಕತ್ತಲಿರುವವನಲ್ಲಿ ಕಾರ್ತಿಕದ ಎದುರಿನ ಹಿತವಾದ ಸುಂದರ ರಾತ್ರಿಯಲ್ಲಿ ಮೇಲೇರಿ ಮರ್ತ್ಯಕ್ಕೆ ಬರುತ್ತಾನೆ. ಮಲೆನಾಡಿನ ಹಳ್ಳಿಗಳಲ್ಲಿ ದೀಪಾವಳಿ ಕಾರ್ಯಕ್ರಮಗಳಲ್ಲಿಯೇ ಅತ್ಯಂತ ವರ್ಣರಂಜಿತವಾದುದು ಪಾಡ್ಯದ ದಿವಸದ ಗೋಪೂಜೆ. ಮನೆಯಲ್ಲಿರುವ ಜಾನುವಾರುಗಳನ್ನು ಮೈತೊಳೆಸಿ ಸಿಂಗರಿಸಿ ಕೊರಳಿಗೆ ಕೋವಿನ ಕೊಳಲು, ಹಿಂಗಾರ, ಚಂಡುವು, ಹರಿಅಡಿಕೆ, ಅಂಬಾಡೆ ಎಲೆ, ಪಚ್ಚೆ ತೆನೆಗಳನ್ನು ಸೇರಿಸಿ ಕೊರು ಮಾಡಿ ಜಾನುವಾರುಗಳ ಕೊರಳಿಗೆ ಕಟ್ಟುತ್ತಾರೆ. ಮೈಮೇಲೆಲ್ಲಾ ಕೆಮ್ಮಣ್ಣು, ಜೇಡಿಯಿಂದ ಕಾರದ ಸಿದ್ದಿಯಿಂದ ದಾಕುಗಳನ್ನು ಹಾಕಿ ಹಣೆಗೆ ಬಪ್ಪರೆ ರೊಟ್ಟಿಪರಗಳನ್ನು ಕಟ್ಟಿ ಕೋಡುಗಳಿಗೆ ಉರಿ ಮಂಜುಗಣ್ಣ ಬಳಿದು ಬಂಡಿ ಎತ್ತುಗಳ ಕೋಡುಗಳನ್ನು ಬರೆದು ಕೋಡುಗೆಣಸು ಹಾಕಿ

ಕೋಡುಗಳಿಗೆ ಬಣ್ಣ ಹಚ್ಚಿ ಚೆಂಡುವುಗಳಿಂದ ಅಲಂಕಾರದ ಬಾಸಿಂಗಗಳನ್ನು ಹಾಕಿ ಮೆರೆಸುವುದನ್ನು ನೋಡಲು ಎರಡು ಕಣ್ಣುಗಳು ಸಾಲದಾಗುತ್ತವೆ.

ದೀಪಾವಳಿಯ ಪಾಡ್ಯದಿಂದ ಪ್ರಾರಂಭಿಸಿ ವರ್ಷ ತೊಡಕಿನ ವರೆಗೆ ಮೂರು ದಿವಸಗಳ ರಾತ್ರಿ ನಡೆಯುವ ಜನಪದ ಗೀತೆ, ಸಂಪ್ರದಾಯವೇ ಅಂಟಿಗೆ-ಪೆಂಟಿಗೆ. ಇದು ಮಲೆನಾಡಿನ ಅತ್ಯಂತ ಪ್ರಮುಖವಾದ ಜಾನಪದ ಕಲಾಪ್ರಕಾರ. ದೀಪಾವಳಿಯ ರಾತ್ರಿಗಳಲ್ಲಿ ಮನೆ-ಮನೆಗೆ ಹೋಗಿ ದೀಪ ನೀಡಿ ಹಾಡುವ ಈ ಸಂಪ್ರದಾಯ ಚಿತ್ರದುರ್ಗ, ಶಿವಮೊಗ್ಗ, ಉತ್ತರಕನ್ನಡ, ಚಿಕ್ಕಮಂಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಪ್ರಚಲಿತದಲ್ಲಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಲ್ಲಿ ಹಬ್ಬ ಹಾಡುವುದು, ದೀಪ ಬಿಡುವುದು, ಜ್ಯೋತಿ ನೀಡುವುದು ಎಂದು ತೀರ್ಥಲ್ಲಿ ಮತ್ತು ಚಿಕ್ಕಮಂಗಳೂರು ಜಿಲ್ಲಯ ಕೆಲವು ಭಾಗಗಳಲ್ಲಿ ಅಂಟಿಗೆ ಪೆಂಟಿಗೆ ಎಂದು ಕರೆಯುತ್ತಾರೆ. ಗ್ರಾಮೀಣ ಶ್ರಮಜೀವಿಗಳಿಗೆ ಬಿಡುವುದೆಂದರೆ ತಮ್ಮ ಆನಂದ ಉತ್ಸಾಹಗಳಿಗೆ ರೂಪ ಕೊಟ್ಟ ರಸಿಕತೆಯನ್ನು ಮೆರೆಸುವ ಕಲಾವಿದರು ಗ್ರಾಮೀಣರಲ್ಲಿ ಬಹಳವಾಗಿ ದೊರಕುತ್ತಾರೆ. ಆ ಕಲೆ ಅವರ ಬಡತನಕ್ಕೆ ದುಡಿಮೆಯಿಂದ ದಣಿದ ದೇಹಕ್ಕೆ ಉತ್ಸಾಹದ ವಸ್ತುವಾಗುತ್ತದೆ. ಅವರ ಬದುಕಿಗೆ ಬೇಕಿರುವ ಸಂಘಟನೆ ಉಳಿಯುತ್ತದೆ ಬೆಳೆಯುತ್ತದೆ. ಅವುಗಳಲ್ಲಿ ಮಲೆನಾಡಿನ ಅಂಟಿಗೆ ಪೆಂಟಿಗೆ ಜನಪದ ಗೀತಾ ಸಂಪ್ರದಾಯದ ಕಲಾಪ್ರಕಾರವೂ ಒಂದು. ದೀಪಾವಳಿಯ ಪಾಡ್ಯ, ಕರಿ, ವರ್ಷ ತೊಡಕು ಈ ಮೂರು ದಿವಸಗಳು ಮಲೆನಾಡಿನ ಜನಕ್ಕೆ ಮಹತ್ತರವಾದ ದಿವಸಗಳು. ಬಲಿಪಾಡ್ಯಮಿ ದಿವಸದಿಂದ ಮೂರು ರಾತ್ರಿಗಳಲ್ಲಿ ಊರಿನ ಉತ್ಸಾಹಿ ತರುಣರು ಹಿರಿಯರೊಂದಿಗೆ ಊರಿನ ಗ್ರಾಮದೊಟ್ಟಿಗೆ ಸಂಪ್ರದಾಯ ಮಾಡಿ ಪೂಜೆ ಮಾಡಿ ಹಚ್ಚಿಕೊಂಡು ಜ್ಯೋತಿಯನ್ನು ಮನೆಯಿಂದ ಮನೆಗೆ ಒಯ್ದು ಅಂಟಿಸಿ ಹಾಡುವ ಪದ್ಧತಿಯೇ ಅಂಟಿಗೆ ಪೆಂಟಿಗೆ. ಇದೊಂದು ಮಲೆನಾಡು ಪ್ರದೇಶದ ಕೆಲವು ಕಡೆ ಪ್ರಚಲಿತವಿರುವ ವಿಶಿಷ್ಟ ದೀಪ ಸಂಪ್ರದಾಯ. ಈ ಜನಪದ ಹಾಡುಗಾರ ತಂಡದವರನ್ನು ಹಬ್ಬ ಹಾಡುವವರು, ಜ್ಯೋತಿ ನೀಡುವವರು, ಅಂಟಿಗೆ ಪೆಂಟಿಗೆಯವರು ಎನ್ನುತ್ತಾರೆ. ಅಂಟಿಗೆ ಪೆಂಟಿಗೆ ಪದಗಳು ನಮ್ಮ ಜನಪದ ಸಾಹಿತ್ಯದ ಶ್ರೀಮಂತ ಭಂಡಾರ. ಇವು ಕಂಠಸ್ತ ಸಂಪ್ರದಾಯದಲ್ಲಿ ಉಳಿದುಬಂದಿವೆ. ಈ ಹಾಡುಗಳನ್ನು ಸಾಗರದ ಭಾಗಗಳಲ್ಲಿ ಹಬ್ಬ ಹಾಡುತ ಹಾಡುಗಳು ಎಂದರೆ ಸೊರಬದ ಕಡೆ ಬಲ್ಲಾಳಿ ಪದಗಳೆಂದು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ಶಿರಸಿ ಭಾಗಗಳಲ್ಲಿ ಬಿಂಗಿ ಪದ್ಯಗಳು ಹಾಗೂ ತೀರ್ಥಹಳ್ಳಿ ಮತ್ತು ಚಿಕ್ಕಮಂಗಳೂರು ಜಿಲ್ಲೆಯ ಕೆಲವು ಕಡೆ ಅಂಟಿಗೆ ಪೆಂಟಿಗೆ ಪದಗಳು ಎಂದು ಕರೆಯುವರು.

ಅಂಟಿಗೆ ಪೆಂಟಿಗೆ ಕಲಾವಿದರು ಹಾಡುಗಳನ್ನು ಹೇಳುವಾಗ ಮುಮ್ಮೇಳದ ಇಬ್ಬರು, ಹಿಮ್ಮೇಳದ ಇಬ್ಬರು ಹಾಡುಗಾರರು ತೀರಾ ಹತ್ತಿರದಲ್ಲಿ ಕುಳಿತು ಅಂಟಿಕೊಂಡು ದನಿಗೂಡಿಸಿ ಹಾಡುವುದರಿಂದ ಅಂಟಿಗೆ ಎಂಬ ಮೊದಲ ಪದ ಬಂದಿರಬಹುದು ಎಂದು ಊಹಿಸಬಹುದಾದರೆ ಪೆಂಟಿಗೆ ಎಂಬ ಪದದ ಅರ್ಥ ಸಮಸ್ಯೆಯಾಗಿಯೇ ಉಳಿಯುತ್ತದೆ. ಅಂಟಿಗೆ ಎಂಬ ಮಾತಿಗೆ ಒತ್ತಾಗಿ ಪೆಂಟಿಗೆ ಎಂಬ ಪದ ಬಂದಿರಬಹುದೆಂದು ಊಹಿಸಬಹುದಾದರೂ ಇದು ಊಹೆ ಮಾತ್ರ. ಮೇಳದವರು ಹೊತ್ತು ತಂದ ದೀಪವನ್ನು ಮನೆಯವರು ತಮ್ಮ ದೀಪಕ್ಕೆ ಅಂಟಿಸಿ ಒತ್ತಿಸಿಕೊಳ್ಳುವುದರಿಂದ ಈ ಪದ ಬಳಕೆಯಲ್ಲಿ ಬಂದಿರಬಹುದೆಂದು ಊಹಿಸಿವುದು ಹೆಚ್ಚು ಸಾಧಕವಾದದು. ದೀಪಾವಳಿಗೆ ಇರುಳಿನಲ್ಲಿ ದೀಪ ಹಿಡಿದು ಬರುವ ಆ ಜಾನಪದ ದೀಪದಾರಿಗಳ ಕಾಯಕದ ಜೋಳಿಗೆಯಲ್ಲಿ ಅದೆಷ್ಟು ಚಿತ್ರ ವಿಚಿತ್ರವಾದ ಫರಕುಗಳಿರುತ್ತವೋ ಒಂದು ಸೊಲ್ಲು ಎತ್ತಿ ಆ ಜೋಳಿಗೆಯ ಎಳೆದರಾಯಿತು. ಬಣ್ಣ ಬಣ್ಣದ ಯಕ್ಷ ಲೋಕವೇ ಕಣ್ಣೆದುರು ನಲಿಯತೊಡಗುತ್ತವೆ. ಬಯಲು ನಾಡಿನ ಕೆಲವು ಭಾಗಗಳಲ್ಲಿ ಮಲೆನಾಡಿನ ಅಂಟಿಗೆ ಪೆಂಟಿಗೆಯನ್ನು ಹೋಲುವ ಅನೇಕ ಸಂಪ್ರದಾಯಗಳಿವೆ. ಬಾಗವಂತಿಗೆ ಮೇಳ ದೀಪಾವಳಿಯಲ್ಲಿ ಬಯಲುಸೀಮೆಯಲ್ಲಿ ಕಾಣಬರುವ ಒಂದು ವಿಶಿಷ್ಟ ಸಂಪ್ರದಾಯ. ವೈಷ್ಣವ ಸಂಪ್ರದಾಯಗಳು ಹೆಚ್ಚಾಗಿರುವ ಭಾಗಗಳಲ್ಲಿ ಈ ಮೇಳ ನಡೆಯುತ್ತದೆ. ಊರಿನ ದೈವತರೊಡನೆ ಬಾಗವಂತಿಕೆಯ ಪದಗಳನ್ನು ಹೇಳಿಕೊಂಡು ಊರೂರ ಮೇಲೆ ಹೊರಡುವ ತಂಡವನ್ನು ದೀಪಾವಳಿಯ ಹಾಡು ಎಂದು ಕರೆಯಲಾಗುತ್ತದೆ. ಇದಲ್ಲದೆ ಊರಿನ ಗೋವಾಳರು ದೀಪಾವಳಿ ರಾತ್ರಿಯಲ್ಲಿ ದೀವಿಗೆ ಹಿಡಿದು ಮನೆಮನೆಗೂ ಹೋಗಿ ದೀವಿಗೆಗೆ ಎಣ್ಣೆ ಹರಸಿಕೊಂಡು ಬರುವ ಸಂಪ್ರದಾಯವೃಂದವನ್ನು ಡಾ॥ ಜಿ.ಸಂಪು.ಪರಮಶಿವಯ್ಯನವರು ಜನಪದ ಜೀವನದಲ್ಲಿ ದೀವಳಿಗೆ ಎಂಬ ಲೇಖನದಲ್ಲಿ ವಿವರಿಸಿದ್ದಾರೆ. ದೀವಳಿಗೆಗೆ ಐದಾರು ದಿನ ಮುಂಚೆಯೇ ಊರಿನ ಗೋವಾಳರೆಲ್ಲ ಕಲೆತು ದೊಡ್ಡದೊಂದು ದೀವಿಗೆಯನ್ನು ಹೊಂದಿಸಿಕೊಂಡು ಕಾಡು ಮೇಡುಗಳನ್ನೆಲ್ಲಾ ಶೋಧಿಸಿ ಒಂದು ದೊಡ್ಡ ವಸ್ತ್ರದಲ್ಲಿ ಕಣಗಿಲೆ ಮುಂತಾದವುಗಳನ್ನು ಸಂಗ್ರಹಿಸಿಕೊಂಡು ರಾತ್ರಿಯಲ್ಲಿ ಊರನ್ನು ಮುಸುಕಿದಾಗ ಗುಂಪು ಕಟ್ಟಿಕೊಂಡು ಹೊರಡುತ್ತಾರೆ. ಬೆಳಗಾಗುವವರೆಗೆ ದೊಡ್ಡ ಹಣತೆಯನ್ನು ಹಿಡಿದವನು ಮುಂದೆ ಸಾಗುತ್ತಾನೆ. ಅವನ ಹಿಂದೆ ಇತರರು ನಡೆದು ಹಾಡುತ್ತಾ ಮನೆಮನೆಯ ಬಾಗಿಲಿಗೂ ಬರುತ್ತಾರೆ. ಇಬ್ಬರ ಸೊಲ್ಲಿಗೆ ಮತ್ತಿಬ್ಬರು ಸೊಲ್ಲನ್ನು ಕೊಡುತ್ತಾ ಉಳಿದವರು ಪಲ್ಲವಿಯನ್ನು ಹಾಡುತ್ತಾರೆ. ಮನೆಯವರು ಇವರ ದೀಪಕ್ಕೆ ಎಣ್ಣೆಯನ್ನು ಎರೆದು ಕಾಣಿಕೆಯನ್ನು ನೀಡುತ್ತಾರೆ. ಈ ಸಂಪ್ರದಾಯ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಮಲೆನಾಡಿನ ಅಂಟಿಗೆ ಪೆಂಟಿಗೆಯನ್ನು ಹೋಲುತ್ತದೆ.

ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ದೀಪಾವಳಿಯ ಆಚರಣೆಯೊಂದನ್ನು ಶ್ರೀ ಬೆಟಗೇರಿ ಕೃಷ್ಣಶರ್ಮರು ವಿವರಿಸಿದ್ದಾರೆ. ಹಳ್ಳಿಯ ಅನೇಕ ಜನ ಒಕ್ಕಲು ಮಕ್ಕಳು ಬೆಳೆದ ಜೋಳದ ದಂಟು ಗರಿಗಳಿಂದ ಅಂದವಾದ ಹಾಡುಗಳನ್ನು ನಿರ್ಮಿಸಿ ಅದರಲ್ಲಿ ದೀಪವನ್ನು ಇರಿಸಿಕೊಂಡು ಸಂಜೆಯ ವೇಳೆಯಲ್ಲಿ ಒಕ್ಕಲಿಗರ ಮನೆಯ ಮುಂದೆ ನಿಂತು ಹಿಡಿಪಿಡಿ ಕಾಣಿಕೆಗೊ ಎಂದು ಕೂಗಿ ದನಗಳ ಕ್ಷೇಮವನ್ನು ಹಾರೈಸಿ ದನಗಳ ಯಜಮಾನರಿಂದ ಉಡುಗೊರೆ ಕಾಣಿಕೆಗಳನ್ನು ಪಡೆದುಕೊಳ್ಳುವರು. ಆ ಕಾಲದಲ್ಲಿ ಅವರು ದನಗಳ ಯೋಗಕ್ಷೇಮವನ್ನು ಕುರಿತು ತಂದ ವಿಶಿಷ್ಟ ಜಾನಪದ ಕಂದಪದ್ಯಗಳನ್ನು ಹೇಳುತ್ತಿರುವ ಈ ಪದ್ಧತಿಗೆ ಅಂಟಿಗೆ ಪೆಂಟಿಗೆ ಎನ್ನಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿಂಪಾಲ್ ಎಂಬ ಪದ ರೂಢಿಯಲ್ಲಿದೆ. ಅದನ್ನು ಕಾಮನಹಬ್ಬದ ರಾತ್ರಿಗಳಲ್ಲಿ ಹಾಡುತ್ತಾರೆ. ಕಾಮನ ಹಬ್ಬದಂದು ಹೋಳಿ ಸುಡುವ ಸಂಪ್ರದಾಯ ನಮ್ಮ ಹಳ್ಳಿಗಳಲ್ಲಿ ಕಂಡುಬರುತ್ತದೆ. ಹೆಚ್ಚಾಗಿ ತರುಣರು ಗುಂಪು ಗುಂಪಾಗಿ ಸೇರಿ ರಾತ್ರಿ ಹೊತ್ತು ಊರಿನವರನ್ನು ನಿದ್ದೆ ಮಾಡಲು ಬಿಡದೆ ದಿಂಪಾಲ್ ಎಂದು ಕೂಗಯುತ್ತ ಪದಗಳನ್ನು ಹಾಡುತ್ತಾ ಹಕ್ಕಿ, ತೆಂಗಿನಕಾಯಿ, ದುಡ್ಡುಗಳನ್ನು ಬೇಡುವ ಪದ್ಧತಿ ಇದೆ. ಈ ಎಲ್ಲಾ ಪ್ರದೇಶದ ಭಿನ್ನ ಆಚರಣೆಗಳನ್ನು ಗಮನಿಸಿದಾಗ ಅಂಟಿಗೆ ಪೆಂಟಿಗೆ ಸಂಪ್ರದಾಯ ಒಂದು ಕಾಲದಲ್ಲಿ ಕರ್ನಾಟಕದ ಜನರ ಬಳಕೆಯಲ್ಲಿರಬೇಕು ಎಂಬುದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ನಮ್ಮ ಜನಪದರಿಗೆ ದೇವರು, ಭೂಮಿ, ದೀಪ, ಗೋವು ಇತ್ಯಾದಿಗಳ ಬಗೆಗಿದ್ದ ಶ್ರದ್ಧೆ ಆಚರಣೆ ಸಾಮಾಜಿಕ ಜೀವನ ಪದ್ಧತಿಗೆ ಕೈಪಿಡಿಯಾಗುತ್ತಿದೆ. ಈ ಸಂಪ್ರದಾಯವನ್ನು ಪಾಡ್ಯದ ದಿವಸ ಪ್ರಾರಂಭಿಸಿ ವರ್ಷ ತೊಡಕಿನವರೆಗೆ ಆಚರಿಸುತ್ತಾರೆ. ಮಣ್ಣಿನ ಹಣತೆ ಅಥವಾ ಪಂಜಿನ ಹಣತೆಯನ್ನು ಗ್ರಾಮದ ಗ್ರಾಮದೇವರ ಭಕ್ತರಾಗಿರುವವರ ಅಥವಾ ಆ ಊರಿನ ಮುಖ್ಯಸ್ಥರಾಗಿರುವವರ ಮನೆಯಲ್ಲಿ ಇಟ್ಟಿರುತ್ತಾರೆ. ಹಬ್ಬದ ಊಟವಾದ ನಂತರ ಮುಖ್ಯಸ್ಥನ ಮನೆಗೆ ಹೋಗಿ ಈ ದೀಪದಾರಿಗಳು ದೀಪವನ್ನು ತೆಗೆದುಕೊಂಡು ಆ ಊರಿನ ದೇವಸ್ಥಾನಕ್ಕೆ ಹೋಗಿ ದೇವರ ಸನ್ನಿಧಿಯಲ್ಲಿ ಸೇರಿಕೊಂಡು ದೇವರಿಗೆ ಪೂಜೆ ಸಲ್ಲಿಸುತ್ತಾರೆ.

ಕರ್ಪೂರದಿಂದ ಬೆಳಗುವ ಮಂಗಳಾರತಿಯ ಜ್ಯೋತಿಯಿಂದ ದೀಪ ಹಚ್ಚಿಕೊಂಡು ತಂಡದ ನಾಯಕ

ದುಪ್ಪಡು ದುಪ್ಪಡು ಒಳಗೋಗೊ
ಕಾಲಕ್ಕೆ ಬರುವ ದೀವಳಿಗೊ
ಹಬ್ಬಕ್ಕೊಂದು ಹೋಳಿಗೊ

ಎಂದು ಕೂಗಿದಾಗ ಹಿಮ್ಮೇಳದವರು "ದುಮ್ಯಾಲೋ" ಎಂದು ಹೇಳುತ್ತಾರೆ.

ದಿಮ್ಮಲ್ಹೊಡೆಯುವರ ದನಿಯೆದ್ದು ಬರಲೊ
ದಿಮ್ಯಾಲ್ಹೊಡಿರಣ್ಣ ಈ ಊರ ದೇವರಿಗೆ
ಈ ರೂರ ಭೂತಪ್ಪ ಬಲು ಸತ್ಯವಂತ
ಸತ್ಯವಂತನಾದರೆ ಸಭೆ ಮುಂದೆ ಬರಲಿ
ಈ ಊರ ಭೂತಪ್ಪಗೆ ಏನೇನು ಕೂಜೊ
ಹೆಡಿಗೇಲಿ ಹಣ್ಣು ಹೇರೀಲಿ ಕಾಯೊ
ಆಚೆಯ ದಿಂಬದಾಗೆ ಯಾರ ತರದ ಬೆಳಕೊ
ದಾಸಾರ್ಹುಡುಗನ ನಾಮಾನ ಬೆಳಕೋ ॥

ಎಂದು ಹಾಡುತ್ತಾ ಮನೆ ಮನೆಗೂ ಹೋಗುತ್ತಾರೆ. ಮನೆಯ ಬಾಗಿಲಿಗೆ ಹೋಗಿ ನಿಂತು ಮನೆಯವರನ್ನು ಎಚ್ಚರಿಸಲು ಏಕ ಕಂಠದಿಂದ ದುಮ್ಯಾಲೇ ಹೊಡೆಯುತ್ತಾರೆ. ತಾವು ದೂರದಿಂದ ನಡೆದುಬಂದ ಸ್ಥಿತಿಯನ್ನು ಹಾಡಿನ ಮೂಲಕ ಹೇಳುತ್ತಾರೆ.

ಹೋ ಹೋ ದಲ್ಲಾರೆ ಎಂದು ಆಚರಿಸಿ
ಗೋರೆಂಬ ಕತ್ತೆಲೆಯೊಳಗೆ ನಾವು ಬಂದೇವಯ್ಯೋ
ಬಂದಾರೆ ನಾಮಚಾಜು ಬರಬೇಕಯ್ಯೋ
ಕಲ್ಲು ಮುಳ್ಳನೆ ತುಳಿದು ನಾಬು ಬಂದೇವರಯ್ಯ
ಬಂದರೆ ನರುಚಾಜು ಬರಬೇಕಯ್ಯ

ಹೀಗೆ ಹೇಳುತ್ತಾ ಬಾಗಿಲು ತೆರೆಸುತ್ತಾರೆ.

ಬಾಗಿಲು ಬಾಗಿಲು ಚೆಂದ
ಈ ಮನೆ ಬಾಗಿಲು ಚೆಂದ
ಬಾಗಿಲ ಮ್ಯಾಲೇನೊ ಬರದಾರೆ
ಬಾಗಿಲ ಮ್ಯಾಲೆ ಏನೇನೊ ಬರದೈದಾರೆ
ಕುಚ್ಚು ಪಾರಿವಾಳದ ನಿವಲ್ಹಿಂಡು.

ಎಂದು ಹಾಡಿದಾಗ ಮನೆಯವರು ಬಾಗಿಲು ತೆರೆಯುತ್ತಾರೆ. ಮನೆಯವರು ಬಾಗಿಲು ತೆರೆದ ನಂತರ ದೀಪವಿಡುವ ಸ್ಥಳದಲ್ಲಿ ಮನೆಯ ಒಡತಿ ನೆಲವನ್ನು ಸಗಣಿಯಿಂದ ಸಾರಿಸಿ ಮಣೆಯಿಡುತ್ತಾಳೆ. ದೀಪವನ್ನು ಮಣೆಮೇಲಿಟ್ಟು ತಂಡದ ಯಜಮಾನ ಮಾತ್ರ ಕುಳಿತುಕೊಳ್ಳುತ್ತಾನೆ. ಉಳಿದವರು ನಿಂತುಕೊಂಡೇ ಹಾಡುತ್ತಾರೆ. ದೀಪಕ್ಕೆ ಪೂಜೆ ಮಾಡಿ ತೆಂಗಿನ ಕಾಯಿ ಹೊಡೆದ ನಂತರ ಮನೆಯ ಒಡತಿ ದೀಪಕ್ಕೆ ಎಣ್ಣೆ ಎರೆದು ಜ್ಯೋತಿಯನ್ನು ಮನೆಯ ಹಣತೆಗೆ ಅಂಟಿಸಿಕೊಂಡು ಬಲೀಂದ್ರನ ಹತ್ತಿರ ಇಡುತ್ತಾರೆ. ನಂತರ ಬಲೀಂದ್ರನ ಹಾಡು ಹೇಳುತ್ತಾರೆ.

ಬಲ್ಲೇಳೋ ಬಲೀಂದ್ರನೆ ಮರ್ತ್ಯಕ್ಕೆ
ಎಲ್ಲೋರ ಸಲಗಂತವನೆ
ಬಲೀಂದ್ರ ರಾಯತಾನೆದ್ದು ಬರುವಾಗ
ಜಡ್ಡು ಜಬರೆಲ್ಲಾ ಚಿಗುರ್‍ಯಾವೋ ॥
ಬತ್ತಾ ಬರಡೆಲಲಾ ಹಯವಾದೊ

ಇನ್ನೂ ಅನೇಕ ಕಥನ ಗೀತೆಗಳನ್ನು ಈ ದೀಪದಾರಿಗಳು ಹೇಳುತ್ತಾ ಮುಂದೆ ಸಾಗುತ್ತಾರೆ. ಹೀಗೆ ಮೂರು ದಿವಸಗಳವರೆಗೆ ಹಬ್ಬಹಾಡುವ ಸಂಪ್ರದಾಯ ನಡೆಯುತ್ತದೆ. ಮನೆಯಿಂದ ಮನೆಗೆ ಹಳ್ಳಿಯಿಂದ ಹಳ್ಳಿಗೆ ಹೋಗುವಾಗ "ದೀಪ" ಗಾಳಿಗೆ ಆರದಂತೆ ಅಡಿಕೆ ಹಾಳೆಯಿಂದ ಮಾಡಿದ ತಡಿಕೆಯನ್ನು ಮರೆ ಮಾಡಿಕೊಳ್ಳುತ್ತಾರೆ. ಅಕಸ್ಮಾತ್ ಗಾಳಿಗೆ ದೀಪ ಆರಿಹೋದರೆ ಪುಂಡಿ ಅಥವಾ ಕಾಲು ನಾರಿನಿಂದ ಮಾಡಿದ ಹಗ್ಗಕ್ಕೆ (ದಪ್ಪ ಹುರಿ) ಬೆಂಕಿ ಹಚ್ಚಿಕೊಂಡಿರುತ್ತಾರೆ. ಹುರಿಯ ಬೆಂಕಯಿಂದ ದೀಪವನ್ನು ಹಚ್ಚುತ್ತಾರೆ. ಬೆಳಗಾದ ನಂತರ ಮನೆಗೆ ವಾಪಾಸಾಗುವಾಗ ದಈಪದ ನೆನೆಬತ್ತಿಯನ್ನು ಹಾಲುಮರಕ್ಕಿಟ್ಟು ಹಗ್ಗಕ್ಕೆ ಬೆಂಕಿಯನ್ನು ಹಚ್ಚಿಕೊಂಡು ಊರು ಸೇರುತ್ತಾರೆ. ಊರಿಗೆ ಸೇರಿದ ನಂತರ ದೀಪದ ಯಜಮಾನರ ಮನೆಗೆ ಅಡಿಗೆ ಮಾಡುವ ಒಲೆಯ ಅಗ್ನಿಗೆ ಜ್ಞಾಂಗೆ ಅಥವಾ ಜೋಂಗೆ ಬತ್ತಿಯ ಬತ್ತಿಯನ್ನು ತಲಿಸಿ ಆರಿಸಿ ಇಟ್ಟುಕೊಳ್ಳುತ್ತಾರೆ. ಒಲೆಯಲ್ಲಿರುವ ಬೆಂಕಿ ಆರದಂತೆ ಮನೆಯವರು ನೋಡಿಕೊಳ್ಳಬೇಕು. ದೀಪದಾರಿಗಳು ತೆಗೆದುಕೊಂಡು ಹೋಗುವ ಜ್ಯೋತಿ ಮಧ್ಯದಲ್ಲಿ ಆರಬಾರದೆಂಬ ನಿಯಮವಿದೆ. ಅಕಸ್ಮಾತ್ ದೀಪ ಆರಿದರೆ ಆ ತಂಡದವರಿಗೆ ಮತ್ತು ಊರಿನವರಿಗೆ ಕೆಡುಕಾಗುತ್ತದೆ ಎಂಬ ನಂಬಿಕೆಯಿದೆ.

ಹಬ್ಬ ಹಾಡುವ ಸಂಪ್ರದಾಯ ಮುಗಿದ ನಂತರ ನಾಲ್ಕನೆಯ ದಿವಸ ಸಂಜೆ ತಂಡದವರೆಲ್ಲಾ ಸೇರಿ ಪುನಃ ದೀಪ ಹಚ್ಚಿಕೊಂಡು ಹಾಡು ಹೇಳುತ್ತಾ ದೀಪ ಆರಿಸುವ ಹಾಲುಮರದ ಹತ್ತಿರ ಹೋಗಿ ಮರ ಮತ್ತು ಜ್ಯೋತಿಯನ್ನು ಪೂಜೆ ಮಾಡಿ ನೆನೆಬತ್ತಿಯನ್ನು ಹಾಲುಮರದ ಕೊಂಬೆ ಕೊಂಬೆಗೆ ಇಡುವುದರ ಮೂಲಕ ಮುಕ್ತಾಯ ಮಾಡುತ್ತಾರೆ.

ಹಬ್ಬ ಹಾಡುವವರು ಮನೆ ಮನೆಗೆ ಹೋದಾಗ ಮನೆಯ ಯಜಮಾನರು ಮತ್ತು ಮನೆಯೊಡತಿಯರು ಹಣ್ಣು ಕಾಯಿಕಡಿ ಕೊಟ್ಟೇ ಕಡಬು, ಹೋಳಿಗೆ, ಹಣ ಕೊಡುತ್ತಾರೆ. ಆಯಾ ದಿವಸ ಕೊಟ್ಟ ತಿಂಡಿ, ತೆಂಗಿನಕಾಯಿ ಕಡಿಗಳನ್ನು ವಾಪಾಸು ಮನೆಗೆ ಬರುವಾಗ ಹಂಚಿಕೊಂಡು ಎನ್ನುತ್ತಾರೆ. ಸಂಗ್ರಹವಾದ ಹಣವನ್ನು ಹಬ್ಬವಾದ ಒಂದು ತಿಂಗಳ ನಂತರ ಒಣಮೀನು ಅಥವಾ

ಕುರಿ ಕಡಿದು ಸಾಮೂಹಿಕ ಅಡಿಗೆ ತಯಾರಿಸಿ ಆ ಊರಿನವರೆಲ್ಲ ಸೇರಿ ಸಾಮೂಹಿಕ ಭೋಜನ ಮಾಡುತ್ತಾರೆ. ಭೋಜನಕ್ಕೆ ಬಾರದಿರುವ ಮಹಿಳೆಯರಿಗೆ ಪ್ರತಿಯೊಂದು ಮನೆಗೂ ಎಡೆ ಕೊಡುತ್ತಾರೆ. ಕೆಲವು ಕಡೆ ಸಾಮೂಹಿಕ ಭೋಜನ ಪದ್ಧತಿಯನ್ನು ರದ್ದುಮಾಡಿ ಗ್ರಾಮದ ಅಭಿವೃದ್ಧಿ ಕಾರ್ಯಕ್ಕೆ ಹಣವನ್ನು ಉಪಯೋಗಿಸುತ್ತಿದ್ದಾರೆ. ಈ ಸಂಪ್ರದಾಯವನ್ನು ಶಿವಮೊಗ್ಗ, ಚಿಕ್ಕಮಂಗಳೂರು, ಉತ್ತರಕನ್ನಡ ಜಿಲ್ಲೆಯ ಒಕ್ಕಲಿಗರು, ದೀವರು, ಹಸಲರು, ಕುಡಬಿ ಜನಾಂಗದವರು ಉಳಿಸಿಕೊಂಡು ಬರುತ್ತದೆ.

ಈ ರೀತಿಯಲ್ಲಿ ಮಾಸ್ತರರು ಹಲಸರ ಅಭಿವೃದ್ಧಿಗೆ ಶಿಕ್ಷಣ, ದಿನನಿತ್ಯದ ಬದುಕು, ಶುಚಿತ್ವ, ಸಮಾಜದ ಮುಖ್ಯವಾಹಿನಿಯ ಜ್ಞಾನ ಹಲಸರ ಶ್ರೇಯೋಭಿವೃದ್ಧಿಗಾಗಿ ವಿವಿಧ ಉಪನ್ಯಾಸಗಳು ದೊಡ್ಡ ದೊಡ್ಡ ಅಧಿಕಾರಿಗಳ ಮುಖಭೇಟಿ, ಹಸಲರ ಅಭಿವೃದ್ಧಿಗಾಗಿಯೇ ಇರುವ ವಿವಿಧ ಕಛೇರಿಗಳ ಮಾಹಿತಿ ಹಸಲರಿಗಾಗಿ ಇರುವ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿ ಕೊಡುವ ಸಾಹಸ ಹಾಗೂ ಹಸಲರ ಪ್ರತಿಯೊಂದು ಸಾಂಸ್ಕೃತಿಕ ಕಲೆಯನ್ನು ನಾಡಿನ ಜನರಿಗೆ ಪರಿಚಯಿಸಿದ್ದಾರೆ. ಅದರಲ್ಲಿ ಅಂಟಿಗೆ ಪೆಂಟಿಗೆ ಆಚರಣೆಯ ಕುರಿತು ಆಧುನಿಕ ಜನತೆಗೆ ಹೇಳುವುದಲ್ಲದೇ ಅವರ ಮನಸ್ಸನ್ನು ಹಸಲರ ಕಡೆಗೆ ಸೆರೆ ಎಳೆಯುವ ಕೆಲಸವನ್ನು ಮಾಡಿರುವುದು ಇಂದು ಗಮನಾರ್ಹವಾದ ಸಂಗತಿಯಾಗಿದೆ.

ಅಧ್ಯಾಯ ೪.೨

ಇತರೆ ಬುಡಕಟ್ಟುಗಳ ಸಾಂಸ್ಕೃತಿಕ ಪ್ರಗತಿಯಲ್ಲಿ ಮಾಸ್ತರ್‌ರ ಪಾತ್ರ

ಹುಚ್ಚಪ್ಪ ಮಾಸ್ತರ್‌ರು ಶಿಕ್ಷಕರಾಗಿದ್ದುದು ಅಷ್ಟೇ ಅಲ್ಲದೇ ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ಮೈಗೂಡಿಸಿಕೊಂಡ ವ್ಯಕ್ತಿ. ಇದಕ್ಕೆ ಸಾಕ್ಷಿಯಾಗಿ ಅವರು ಒಬ್ಬ ಜಾನಪದ ಕಲಾವಿದ, ರಂಗ ಕಲಾವಿದ, ಒಳ್ಳೆಯ ಹಾಡುಗಾರರು ಹಾಗೂ ನಾಟಕಕಾರರು ಕೂಡ ಆಗಿದ್ದರು. ಈ ಪರಿಣಾಮವಾಗಿ ಈ ಭಾಗದ ಬುಡಕಟ್ಟುಗಳ ಸಾಂಸ್ಕೃತಿಕ ಪ್ರಗತಿಗೆ ಪ್ರೇರಕ ಶಕ್ತಿಯಾಗಿ ಇರುವುದನ್ನು ತಿಳಿಯಲಾಗಿದೆ. ಮಾಸ್ತರ್‌ರು ಬುಡಕಟ್ಟುಗಳ ಶ್ರೇಯೋಭಿವೃದ್ಧಿಗೆ ಸಾಕ್ಷಿಯಾಗಿ ಹಸಲರ ಹಬ್ಬ ಹಾಡುವುದು ಅಥವಾ ಅಂಟಿಗೆ-ಪಂಟಿಗೆಯ ಹಬ್ಬವನ್ನು ಆ ಸಮುದಾಯದ ಯುವಕರನ್ನು ಒಟ್ಟು ಗೂಡಿಸಿ ಜಾನಪದ ಕಲಾತಂಡವಾಗಿ ನಿರ್ಮಾಣ ಮಾಡಿ ರಾಜ್ಯದ ಮೂಲೆ-ಮೂಲೆಗೆ ಕೊಂಡೊಯ್ಯುವ ಕೆಲಸವನ್ನು ಮಾಡಿ ಬುಡಕಟ್ಟುಗಳ ಸಾಂಸ್ಕೃತಿಕ ಪ್ರಗತಿಗೆ ಸ್ಥಿರವಾದ ನೆಲೆಯನ್ನು ಒದಗಿಸಿಕೊಟ್ಟರು. ಬುಡಕಟ್ಟುಗಳ ಪಾರಂಪರಿಕ ಸಂಸ್ಕೃತಿಯನ್ನು ಗುರುತಿಸಿ ಅವರವರ ಪದ್ಧತಿಯಲ್ಲಿಯೇ ಸಮಾಜದಲ್ಲಿ ಅನೇಕ ವೇದಿಕೆಗಳಲ್ಲಿ ಬುಡಕಟ್ಟುಗಳಿಂದಲೇ ಕಾರ್ಯಕ್ರಮಗಳನ್ನು ಮಾಡಿಸಿ ಆ ಸಾಂಸ್ಕೃತಿಕ ಅಂಶಗಳೆಲ್ಲವೂ ಆಡಳಿತಗಾರರ ಮನಸ್ಸನ್ನು ಸೆರೆ ಎಳೆಯುವಂತ ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ಸಾಗರ, ಶಿಕಾರಿಪುರ, ಶಿವಮೊಗ್ಗ, ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು, ಮೈಸೂರು, ದೆಹಲಿ, ಕೇರಳ ಮುಂತಾದ ಸ್ಥಳಗಳಿಗೆ ಬುಡಕಟ್ಟುಗಳ ಸಾಂಸ್ಕೃತಿಕ ತಂಡಗಳನ್ನು ಕರೆದುಕೊಂಡು ಹೋಗಿರುವುದಲ್ಲದೇ ಪ್ರಶಸ್ತಿಯನ್ನು ಗಳಿಸಿಕೊಂಡು ಬಂದ ಕೀರ್ತಿಯು ಮಾಸ್ತರ್‌ರಿಗೆ ಸಲ್ಲುತ್ತದೆ.

ಮಾಸ್ತರರು ಮಲೆನಾಡಿನ ಬುಡಕಟ್ಟುಗಳ ಶಾಲೆಯಲ್ಲಿ ಅಷ್ಟೇ ಕೆಲಸ ಮಾಡದೇ ಅರೆಮಲೆನಾಡು ಪ್ರದೇಶಗಳಾದ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕು ಚಿಲೂರು, ಕಡದಕಟ್ಟೆ, ಚನ್ನಗಿರಿ ತಾಲ್ಲೂಕು ಗೋಪನಾಳ್‌ನಲ್ಲಿರುವ ಬುಡಕಟ್ಟು ಗಿರಿಜನ ಆಶ್ರಮ ಶಾಲೆಯಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ. ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕುಡುಬಿಯರ ಸಾಂಸ್ಕೃತಿಕ ಪ್ರಗತಿಯಲ್ಲಿ ಹುಚ್ಚಪ್ಪ ಮಾಸ್ತರರ ಪಾತ್ರ ಎದ್ದು ಕಾಣುತ್ತದೆ. ಯಾವುದೇ ಬುಡಕಟ್ಟಿನ ಸಂಸ್ಕೃತಿಯು ಭೌತಿಕ ಮತ್ತು ಅಭೌತಿಕವಾದ ಅಂಶಗಳನ್ನು ಒಳಗೊಂಡಿರುತ್ತದೆ. ಹಾಗೂ ಸಮಾಜದಿಂದ ಅಸ್ತಿತ್ವಕ್ಕೆ ಬಂದಂತ ಒಂದು ವ್ಯವಸ್ಥೆಯಾಗಿರುತ್ತದೆ. ಬುಡಕಟ್ಟುಗಳ ಸಂಸ್ಕೃತಿ ಮತ್ತು ಸಮಾಜದ ನಡುವೆ ಇರುವ ಸಂಬಂಧದ ಸ್ವರೂಪ ಬಹುಮುಖವಾದುದ್ದು. ಇದು ಸಮಾಜದ ರೀತಿ ನೀತಿಗಳನ್ನು, ಜನ ಜೀವನವನ್ನು ಪ್ರಭಾವಿಸುತ್ತವೆ.

ಒಟ್ಟಾರೆಯಾಗಿ ನೋಡಿದಾಗ ಯಾವುದೇ ಸಮಾಜವು ತಾನು ಆದರ್ಶ ಪ್ರಾಯವೆಂದು ಎತ್ತಿಹಿಡಿಯುವ ಮೌಲ್ಯಗಳು ಹಾಗೂ ಆಚರಣೆಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾವಣೆಗೊಳ್ಳುತವೆ. ನಮ್ಮ ಬುಡಕಟ್ಟು ಸಮುದಾಯಗಳಲ್ಲಿರುವ ಸಾಂಸ್ಕೃತಿಕ ಅಭಿರುಚಿಯೇ ಇದಕ್ಕೆ ನಿಜವಾದ ಸಾಕ್ಷಿ. ಬುಡಕಟ್ಟುಗಳು ಹೆಚ್ಚು ಕಡಿಮೆ ಸ್ವಾವಲಂಬಿ ಘಟಕಗಳಾಗಿರುತ್ತವೆ. ಇದರರ್ಥ ತಮ್ಮ ದುಡಿಮೆ, ಜೀವನ, ಚಿಂತನೆ, ಕಲೆ ಮತ್ತು ಸಾಹಿತ್ಯವನ್ನು ಸಾಮೂಹಿಕ ನೆಲೆಗಟ್ಟಿನಲ್ಲೇ ರೂಢಿಸಿಕೊಂಡು ಬದುಕುತ್ತಿರುತ್ತವೆ. ಬುಡಕಟ್ಟು ಸಮುದಾಯಗಳಲ್ಲಿ ಪ್ರತಿಯೊಬ್ಬರ ಸಮಸ್ಯೆಯು ಇಡೀ ಬುಡಕಟ್ಟಿನ ಸಮಸ್ಯೆಯಾಗಿದ್ದರಿಂದ ಸಾಮೂಹಿಕವಾಗಿ ಮನೆಕಟ್ಟುವುದು, ಮದುವೆ ಮಾಡುವುದು, ಪ್ರತಿಯೊಬ್ಬ ವ್ಯಕ್ತಿಯ ಸಾಮೂಹಿಕ ಜವಾಬ್ದಾರಿಯಾಗಿದೆ. ಆದ್ದರಿಂದ ಸಾಮೂಹಿಕವಾಗಿಯೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾರೆ. ಈ ಸಮುದಾಯಗಳು ಒಂದು ರೀತಿಯಲ್ಲಿ ಶ್ರೀಮಂತ ಸಂಸ್ಕೃತಿಯನ್ನು ಹೊಂದಿದವರಾಗಿರುತ್ತಾರೆ. ಇದನ್ನೇ ತಮ್ಮ ಅಸ್ತ್ರವನ್ನಾಗಿ ಬಳಸಿಕೊಂಡ ಹುಚ್ಚಪ್ಪ ಮಾಸ್ತರರು ಬುಡಕಟ್ಟುಗಳನ್ನು ಒಟ್ಟುಗೂಡಿಸಿ ಸಾಮೂಹಿಕ ಸಾಧನೆಗೆ ಕಾರಣರಾದರು.

ದೀವರು:

ಇತರ ಬುಡಕಟ್ಟುಗಳ ಸಾಂಸ್ಕೃತಿಕ ಪ್ರಗತಿಯಲ್ಲಿ ಮಾಸ್ತರರ ಪಾತ್ರ ಎಷ್ಟರ ಮಟ್ಟಿಗೆ ತನ್ನ ಅಸ್ತಿತ್ವವನ್ನು ಇಟ್ಟುಕೊಂಡಿತ್ತು ಎಂಬುದನ್ನು ಚರ್ಚಿಸುವುದು ಇಲ್ಲಿ ಮುಖ್ಯವಾಗಿದೆ. ಮಲೆನಾಡಿನ ಸೊಬಗನ್ನು ಮೈಗೂಡಿಸಿಕೊಂಡ ದೀವರು ಕೃಷಿ ಕೆಲಸದಲ್ಲಿ ನಿಪುಣರು. ಅಲ್ಲದೇ ಹಂದಿ ಶಿಕಾರಿ, ಮೀನು ಭೇಟೆ, ಹಕ್ಕಿ ಶಿಕಾರಿ ಇವುಗಳಲ್ಲಿಯೂ ಪಳಗಿದವರಾಗಿದ್ದಾರೆ. ಪರಿವರ್ತನೆಯ ದಾರಿಗೆ ಬರುವುದಕ್ಕಿಂತ ಪೂರ್ವದಲ್ಲಿ ದೀವರು ಮೂಲ ಬುಡಕಟ್ಟಿನ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದ ಸಮುದಾಯವಾಗಿದೆ. ದೀವರು ಡೊಳ್ಳುಕುಣಿತದಲ್ಲಿ ಎತ್ತಿದ ಕೈ ಎಂದೇ ಹೇಳಲಾಗುವುದು. ಮೂಡಲಪಾಯ, ಬಯಲಾಟ, ಕೋಲಾಟ, ಕಬಡ್ಡಿ, ಅಂಟಿಗೆ–ಪೆಂಟಿಗೆ ಮುಂತಾದ ಸಾಂಸ್ಕೃತಿಕ ರಂಗಗಳಲ್ಲಿ ತೊಡಗಿಸಿಕೊಂಡ ಸಮುದಾಯವಾಗಿದ್ದಾಗ್ಯೂ ಯಾವುದೇ ಆಚರಣೆಗಳನ್ನು ಮಲೆನಾಡಿನ ಪರಿಸರಕ್ಕೆ ಹೊಂದಾಣಿಕೆಯಾಗಿಯೇ ರೂಪಿಸಿಕೊಂಡಿದ್ದರು. ಇಂಥ ಸಮುದಾಯದಲ್ಲಿ ಮಾಸ್ತರರು ಹುಟ್ಟಿ ಬೆಳೆದು ಈ ಸಮುದಾಯಕ್ಕೆ ತನ್ನ ಋಣವನ್ನು ತೀರಿಸಿರುವುದು ತಿಳಿಯುತ್ತದೆ.

ಹೆಳವರು:

ಭಾರತೀಯ ಸಮಾಜ ವ್ಯವಸ್ಥೆಯ ವರ್ಗೀಕೃತ ಶ್ರೇಣಿಯ ಪರದಿಯ ಆಚೆ ಉಳಿದುಕೊಂಡಿರುವ ಅನೇಕ ಬುಡಕಟ್ಟುಗಳಲ್ಲಿ ಹೆಳವರು ವಿಶಿಷ್ಟ ಸಮೂಹ. ಸಮಾಜದ ಬದುಕಿನಲ್ಲಿ ತಮ್ಮದೇ ಆದ ಸ್ಥಾನ-ಮಾನವನ್ನು ಗಿಟ್ಟಿಸಿಕೊಂಡು ಬಂದಿರುವ ಹೆಮ್ಮೆ ಹೆಳವರದ್ದಾಗಿದೆ. ಇಂದಿನ ಯಾಂತ್ರಿಕ ಬದುಕಿನ ಪ್ರವಾಹಕ್ಕೆ ಕೊಚ್ಚಿ ಹೋಗುವ ಪೂರ್ವದಲ್ಲಿ ಇಂಥ ಅಲೆಮಾರಿ ಗುಂಪಿನ ವಿಲಕ್ಷಣ ಅಂಶಗಳನ್ನು ಪಳೆಯುಳಿಕೆಯ ರೂಪದಲ್ಲಿ ಹಿಡಿದಿಡುವ ಕಾರ್ಯ ಆಗಬೇಕಾಗಿದೆ. ಹೆಳವರು ಒಂದು ಊರಿನಲ್ಲಿ ಸ್ಥಿರವಾಗಿ ನಿಲ್ಲದೇ ಮನೆ ಮಾರು ಗೊತ್ತು ಗುರಿ ಇಲ್ಲದೇ ಸುರಿಯುವ ಮಳೆ, ಕೊರೆಯುವ ಚಳಿ, ಸುಡು ಬಿಸಿಲಿನಲ್ಲೇ ತಮ್ಮ ನೆಚ್ಚಿನ ಪ್ರಾಣಿಗಳಾದ ಕತ್ತೆ, ಕುದುರೆಗಳ ಮೇಲೆ ಗಂಟು ಮೂಟೆಗಳನ್ನು ಏರಿಕೊಂಡು ತಮ್ಮ ಹೊಟ್ಟೆ ಪಾಡಿಗಾಗಿ ಕಸರತ್ತಿನ ಪ್ರದರ್ಶನವನ್ನು ಮಾಡುತ್ತಾ ಊರಿಂದ ಊರಿಗೆ ಅಲೆಯುತ್ತಾರೆ. ಎನ್.ಹುಚ್ಚಪ್ಪ ಮಾಸ್ತರರು ಮಲೆನಾಡಿನ ಬುಡಕಟ್ಟುಗಳ ಶಿಕ್ಷಕರಾಗಿದ್ದುದಲ್ಲದೇ ಅರೆ ಮಲೆನಾಡಿನ ಗಿರಿಜನ ಶಾಲೆಯಲ್ಲಿಯೂ ಕೆಲಸ ಮಾಡಿರುವುದು ಗಮನಾರ್ಹ. ಈ ಹಿನ್ನೆಲೆಯಿಂದ ಹೊನ್ನಾಳಿ ತಾಲ್ಲೂಕಿನ ಚೀಲೂರು ಹತ್ತಿರ 'ಕಡದಕಟ್ಟೆ' ಗ್ರಾಮದ ಗಿರಿಜನ ಆಶ್ರಮ ಶಾಲೆಯ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಇಲ್ಲಿ ಹೆಳವ ಅಲೆಮಾರಿ ಜನಾಂಗವು ಒಂದು ವಿಶಿಷ್ಟ ಅಲೆಮಾರಿ ಬುಡಕಟ್ಟಾಗಿದ್ದು ಆಧುನಿಕ ಸಂಪರ್ಕದ ಮಧ್ಯೆ ಇರದ ಅತ್ಯಂತ ಹಿಂದುಳಿದ ಸಮುದಾಯವಾಗಿತ್ತು. ಈ ಸಮುದಾಯ ತನ್ನನ್ನು ತಾನೇ ಸಾಮಾಜಿಕ ವ್ಯವಸ್ಥೆ ಒಳಗಡೆ ಜಾತಿಯಿಂದ ಮೇಲ್ವರ್ಗಕ್ಕೆ ಸೇರಿದವರು ಎಂಬ ಮೇಲ್‌ಹಿರಿಮೆಯ ಮನೋಭಾವನೆಯಿಂದ ಬುದುಕುವ ಗುಣ ಇವರದ್ದಾಗಿತ್ತು. ಅಲ್ಲದೇ ಈ ಸಮುದಾಯವನ್ನು ಆ ಭಾಗದ ಮೇಲ್ವರ್ಗದ ಸಮುದಾಯದವರು ಮನೆಯ ಒಳಗಡೆ ಬಿಟ್ಟುಕೊಳ್ಳದೇ ಅಸ್ಪೃಶ್ಯರೆಂದು ಪರಿಭಾವಿಸಿಕೊಂಡಿದ್ದರು. ಇಂತಹ ಸನ್ನಿವೇಶದಲ್ಲಿ ಸಾಮೂಹಿಕ ಕಾಳಜಿಯನ್ನು ಇಟ್ಟುಕೊಂಡ ಮಾಸ್ತರರು ಈ ಶಾಲೆಗೆ ಬಂದುದು ಹೆಳವರ ಪಾಲಿಗೆ ವರವಾಗಿ ಪರಿಣಮಿಸಿತು. ಇಲ್ಲಿರುವ ಸ್ಥಿತಿಗತಿಯನ್ನು ಅರಿತ ಮಾಸ್ತರರು ಸ್ವಾಮಿ ವಿವೇಕಾನಂದ ಗಿರಿಜನ ಆಶ್ರಮ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಪ್ರಯತ್ನ ಮಾಡಿದ್ದಲ್ಲದೆ ಅಲೆಮಾರಿ ಜನಾಂಗದವರನ್ನು ತಮ್ಮ ಮನೆಗೆ ಕರೆಸಿ ಅಡುಗೆ ಕೋಣೆಯಲ್ಲಿ ತಮಗೆ ಸರಿಸಮನಾಗಿ ಊಟವನ್ನು ಉಣಬಡಿಸಿದರು. ಇಲ್ಲಿ ಒಟ್ಟು ಇಪ್ಪತ್ತೈದು ಕುಟುಂಬಗಳನ್ನು ಎಸ್.ಸಿ. ಪಟ್ಟಿಯಲ್ಲಿ ಸೇರಿಸುವುದಕ್ಕೆ ಅಧಿಕಾರಿಗಳ ಜೊತೆಗೂಡಿ ಮಾಸ್ತರರು ಮಾಡಿದ ಹೋರಾಟ ಸ್ಮರಣೀಯ. ಇದಲ್ಲದೇ ಅಲ್ಲಿಯ ಮೇಲ್ವರ್ಗದ ಜನರು ಮಾಸ್ತರರನ್ನು ಕುರಿತು ಹೆಳವರಿಗೆ ಏಕೆ ನಿಮ್ಮ ಮನೆಯಲ್ಲಿ ಕರೆಸಿ ಊಟ ಹಾಕಿದಿರಿ ಹಾಗೂ ಅವರ ಬಗ್ಗೆ ಏಕೆ

ನಿಮಗೆ ವಿಶೇಷವಾದ ಕಾಳಜಿ ಎಂದು ಕೇಳಿದಾಗ ನಾನು ಊಟ ಹಾಕಿದ್ದು ನನಗೆ ಅವರ ಮೇಲಿರುವ ಪ್ರೀತಿಯಿಂದ, ಆದರೆ ಅವರನ್ನು ಎಸ್.ಸಿ. ಪಟ್ಟಿಗೆ ಸೇರಿಸಿದ್ದನ್ನು ಉನ್ನತ ಅಧಿಕಾರಿಗಳನ್ನು ಹೋಗಿ ಕೇಳಿ ಎಂದು ಯಾವುದೇ ಅಂಜಿಕೆ ಇಲ್ಲದೇ ಹೇಳಿದ್ದು ಅವರ ದೊಡ್ಡ ಗುಣವಾಗಿದೆ. ಅಲ್ಲದೇ ಹೆಳವ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಾಮೂಹಿಕ ಪ್ರಾರ್ಥನೆ, ಸಾಂಸ್ಕೃತಿಕ ಕಲೆಗಳಾದ ಕೋಲಾಟ, ಜಾನಪದ ಗೀತೆ, ಲಾವಣಿ, ಕ್ರಾಂತಿಗೀತೆ, ರಾಷ್ಟ್ರೀಯ ಭಾವೈಕ್ಯತೆಯ ಗೀತೆ ಮುಂತಾದವುಗಳನ್ನು ಮಕ್ಕಳಿಗೆ ಹೇಳಿಕೊಡುವುದರ ಮೂಲಕ ಶೈಕ್ಷಣಿಕ ಮತ್ತು ಸಾಮಾಜಿಕ ಮನಸ್ಥೈರ್ಯವನ್ನು ಬಲಿಷ್ಠಗೊಳಿಸಿದರು. ಅಲ್ಲದೇ ಹೆಳವ ಬುಡಕಟ್ಟುಗಳ ಜನರನ್ನು ಸಾಮೂಹಿಕ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಆಸಕ್ತಿ ಹುಟ್ಟಿಸುವ ಅಂಶಗಳನ್ನು ಶಾಲೆ ಅವಧಿ ಮುಗಿದ ನಂತರ ಬೋಧಿಸುತ್ತಿದ್ದರು. ಹಾಗೂ ರಾತ್ರಿಯ ವೇಳೆ ಆಶ್ರಮ ಶಾಲೆಯಲ್ಲಿ ಊಟವನ್ನು ಮುಗಿಸಿ ಅವರವರ ಮನೆಗೆ ಹೋಗುವ ಅಭ್ಯಾಸವನ್ನು ತಪ್ಪಿಸಿ ಅಲ್ಲೇ ಇರುವಂತೆ ಸುವ್ಯವಸ್ಥಿತವಾದ ಪರಿಸರವನ್ನು ನಿರ್ಮಾಣ ಮಾಡಿದರು.

ಹಕ್ಕಿ–ಪಿಕ್ಕಿ:

ಹಕ್ಕಿ–ಪಿಕ್ಕಿ ಅಲೆಮಾರಿ ಸಮುದಾಯವಾಗಿದ್ದು ಇಲ್ಲಿ ಅಲೆಮಾರಿಗಳ ಬದುಕಲ್ಲಿ ಸಂಭವಿಸಿರುವ ಆರ್ಥಿಕ ರೂಪಾಂತರಗಳನ್ನು ಭಾರತದ ಶ್ರೇಣೀಕೃತ ವ್ಯವಸ್ಥೆಯೊಳಗಡೆ ಇಟ್ಟು ನೋಡಬೇಕಾಗಿದೆ. ಈ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಅಲೆಮಾರಿಗಳೆಂದು ಕರೆಸಿಕೊಳ್ಳುವ ಬಹುತೇಕ ಸಮುದಾಯಗಳಿಗೆ ಚರಿತ್ರೆಯಲ್ಲಿ ನಿಶ್ಚಿತ ಆದಾಯವನ್ನು ತಂದುಕೊಡುವ ಸ್ಥಿರ ಆಸ್ತಿಗಳಿರಲಿಲ್ಲ. ಆರ್ಥಿಕವಾಗಿ ಅಲೆಮಾರಿಗಳು ಉತ್ಪಾದಕ ಸಮುದಾಯಗಳನ್ನು ಅವಲಂಭಿಸಬೇಕಿತ್ತು. ಹೀಗಾಗಿ ಅಲೆಮಾರಿಗಳು ಚರಿತ್ರೆಯ ಉದ್ದಕ್ಕೂ ಅತ್ಯಂತ ಅನಿಶ್ಚಿತ ಆರ್ಥಿಕ ಮೂಲಗಳನ್ನೇ ನಂಬಿಕೊಂಡು ಬಂದಿದ್ದಾರೆ. ಈ ಕಾರಣದಿಂದಾಗಿ ಹಕ್ಕಿ–ಪಿಕ್ಕಿಯರು ಒಂದೆಡೆ ನೆಲೆನಿಲ್ಲದೇ ಆರ್ಥಿಕ ಮೂಲಗಳನ್ನು ಹುಡುಕುತ್ತ ಅಲೆಮಾರಿತನವನ್ನು ತಮ್ಮದಾಗಿಸಿಕೊಂಡು ವಿವಿಧ ವೃತ್ತಿಗಳನ್ನು ಅವಲಂಭಿಸಿರುವುದು ಅನಿವಾರ್ಯವಾಗಿತ್ತು. ಈ ಹಿನ್ನೆಲೆಯಿಂದ ಚನ್ನಗಿರಿ ತಾಲ್ಲೂಕಿನ 'ಗೋಪನಾಳ್' ನಲ್ಲಿರುವ ಹಕ್ಕಿಪಿಕ್ಕಿಯರು ಆರ್ಥಿಕ ಬವಣೆಯನ್ನು ನೀಗಿಸಿಕೊಳ್ಳುವುದಕ್ಕಾಗಿ ದಾರ, ಡಬ್ಬಣ, ಕೂದಲು, ಪೀಪಿ, ಗುಂಡಿನ ಸರ, ಹುಲಿಯ ಉಗುರು, ಗಿಡಮೂಲಿಕೆಯ ಔಷಧಗಳನ್ನು ಮಾರಾಟ ಮಾಡುವುದಕ್ಕೆ ಊರಿಂದ ಊರಿಗೆ, ಜಿಲ್ಲೆಯಿಂದ ಜಿಲ್ಲೆಗೆ ಹೋಗುತ್ತಿದ್ದರು. ಇಂತಹ ಸಂದರ್ಭದಲ್ಲಿ ೧೯೬೮ ರಿಂದ ೧೯೭೭ ರ ಅವಧಿಯಲ್ಲಿ

ಹಿರೇಮನೆಯ ಹುಚ್ಚಪ್ಪ ಮಾಸ್ತರರೆಂದೆ ಹೆಸರಾಗಿದ್ದ ಶಿಕ್ಷಕರು ಬಾಪೂಜಿ ಗಿರಿಜನ ಆಶ್ರಮ ಶಾಲೆಗೆ ಬಂದರು. ಆಗ ಮಾಸ್ತರರ ಜವಾಬ್ದಾರಿ ಇನ್ನೂ ಹೆಚ್ಚಾಯಿತು.

ಗೋಪನಾಳ್‌ನಲ್ಲಿರುವ ಹಕ್ಕಿಪಿಕ್ಕಿಯರು ಜನ ಸಂಪರ್ಕದ ಮಧ್ಯೆ ಇದ್ದರೂ ಸುವ್ಯವಸ್ಥಿತವಾದ ಸಾಮಾಜಿಕ ಪರಿಸರವನ್ನು ಆರೋಗ್ಯಕರವಾಗಿ ಇಟ್ಟುಕೊಳ್ಳದೇ ಅನಾರೋಗ್ಯಕರ ಪೀಡಿತವಾದ ಪ್ರದೇಶವಾಗಿತ್ತು. ಈ ಆಶ್ರಮಶಾಲೆ ಯಾವುದೇ ಸರ್ಕಾರಿ ಕಟ್ಟಡ ಇಲ್ಲದೇ ಶಾಲೆ ಮಾತ್ರ ದಾಖಲಾತಿಯಲ್ಲಿ ಇತ್ತು. ಆದ್ದರಿಂದ ಮಾಸ್ತರರು ಹಕ್ಕಿ-ಪಿಕ್ಕಿಯರ ಮನೆಯೊಂದರಲ್ಲಿ ಮಕ್ಕಳನ್ನು ಕೂಡಿಸಿ ಪಾಠ ಹೇಳಿಕೊಡುವ ಅನಿವಾರ್ಯತೆ ಇತ್ತು. ಇಲ್ಲಿ ಒಟ್ಟು ನಲವತ್ತು ಜನ ಹಕ್ಕಿಪಿಕ್ಕಿ ಮಕ್ಕಳಿದ್ದರು. ಈ ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ಕಲ್ಪನೆ ಇರಲಿಲ್ಲ. ಅಲ್ಲದೆ ಕಕ್ಕಸಕ್ಕೆ ಹೋದರೆ ತೊಳದುಕೊಳ್ಳುವ ಗೋಜಿಗೆ ಹೋಗುತ್ತಿರಲಿಲ್ಲ. ಇದನ್ನು ಅರಿತ ಮಾಸ್ತರರು ಮಕ್ಕಳ ಸ್ವಚ್ಛತೆ ಮತ್ತು ಸ್ನಾನದ ವ್ಯವಸ್ಥೆಯನ್ನು ಮಾಡಲು ಮುಂದಾದರು. ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವಂಥ ಮನೋಭಾವನೆಯನ್ನು ಹುಟ್ಟುಹಾಕಿದರು. ಅಲ್ಲದೇ ಈ ಮಕ್ಕಳು ತಮ್ಮ ತಂದೆ-ತಾಯಿಗಳಿಗೂ ಸ್ವಚ್ಛತೆಯ ಜಾಣತನದ ಪಾಠವನ್ನು ಹೇಳಿಕೊಡುವಂತೆ ಮಕ್ಕಳನ್ನು ಬೆಳೆಸಿದ ಕೀರ್ತಿ ಮಾಸ್ತರರದ್ದಾಗಿದೆ. ಮುಂದೆ ಅಲೆಮಾರಿಗಳ ಸುಧಾರಣೆ ಮಾಸ್ತರರ ಮನಸ್ಸಿಗೆ ಬಂದು ಆಶ್ರಮ ಶಾಲೆಯಲ್ಲಿ ಹಕ್ಕಿಪಿಕ್ಕಿಯ ವೃದ್ಧರನ್ನು ಕರೆದುತಂದು ಅವರಿಗೆ ಊಟವನ್ನು ಕೂಡ ಕೊಡುತ್ತಿದ್ದುದು ಗಮನಾರ್ಹವಾಗಿದೆ. ಏಕೆಂದರೆ ಅಲೆಮಾರಿಗಳಾದ ಇವರು ವೃದ್ಧರನ್ನು ಮನೆಯಲ್ಲಿ ಬಿಟ್ಟು ವ್ಯಾಪಾರಕ್ಕಾಗಿ ಬೇರೆ ಬೇರೆ ಊರುಗಳಿಗೆ ಹೋಗುತ್ತಿದ್ದರು. ಮಕ್ಕಳ ತಂದೆ-ತಾಯಿಗಳ ಸ್ಥಿತಿಯನ್ನು ಗಮನಿಸಿದ ಮಾಸ್ತರರು ಅವರ ತಲೆಕೂದಲನ್ನು ಗಮನಿಸಿ ಎಲ್ಲಾ ಪುರುಷ ಹಕ್ಕಿ-ಪಿಕ್ಕಿಯರನ್ನು ಕರೆಸಿ ತಾವೇ ತಮ್ಮ ಜೇಬಿನಿಂದ ಹಣವನ್ನು ಕೊಟ್ಟು ಕೇಶಮಂಡನೆಯನ್ನು ಮಾಡಿಸಿದರು. ಊಟ ಆದ ನಂತರ ತಿಂದು ಬಿಟ್ಟ ಮಾಂಸದ ಎಲುಬುಗಳನ್ನು ಮನೆಯ ಹಿತ್ತಲಿನಲ್ಲಿ ಹಾಕುತ್ತಿದ್ದರು. ಹಕ್ಕಿಪಿಕ್ಕಿಯ ಮಗು ಎಸೆದ ಎಲುಬನ್ನು ತಿನ್ನುತ್ತಿರುವ ದೃಶ್ಯ ಮಾಸ್ತರರ ಕಣ್ಣಿಗೆ ಬಿದ್ದು ಮಾಸ್ತರರು ಹೋಗಿನೋಡಿದಾಗ ಹಕ್ಕಿಪಿಕ್ಕಿಯ ಮಗು ಎಲುಬನ್ನು ತಿನ್ನುತ್ತಿರುವುದನ್ನು ಗಮನಿಸಿ ಅವರ ಮನಸ್ಸಿಗೆ ನೋವಾಗಿ ಆಶ್ರಮ ಶಾಲೆಯಲ್ಲಿ ತಿಂಗಳಲ್ಲಿ ಎರಡು ಬಾರಿ ಮಾಂಸಾಹಾರ ಕೊಡುವ ವ್ಯವಸ್ಥೆ ಮಾಡಿದರು. ಈ ರೀತಿಯ ಸುಧಾರಣೆಯ ಕೆಲಸವನ್ನು ಮಾಸ್ತರು ಹಕ್ಕಿಪಿಕ್ಕಿಯರ ಸಾಮಾಜಿಕ ಮತ್ತು ಶೈಕ್ಷಣಿಕ ಬದಲಾವಣೆಗೆ ಪೂರಕವಾದ ಕೆಲಸಕಾರ್ಯಗಳನ್ನು ಮಾಡಿದರು.

ಸಿದ್ಧಿಯರು:

ಸಿದ್ಧಿಗಳು ನಿಗ್ರೋ ಮೂಲದವರಾಗಿದ್ದು ಇವರು ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ವಿವಿಧ ಪ್ರದೇಶಗಳಲ್ಲಿ ಹೆಚ್ಚು ಕಂಡುಬರುತ್ತಾರೆ. ಇವರು ಮೂಲತಃ ಸಂಪ್ರದಾಯಿಕವಾಗಿ ಮಾಂಸಹಾರಿಗಳು ಸಿದ್ಧಿಯು ಕರ್ನಾಟಕದ ಇತರೆ ಬುಡಕಟ್ಟುಗಳಿಗಿಂತ ವೈಶಿಷ್ಟ್ಯತೆಯಿಂದ ಕೂಡಿದ ಜನಾಂಗವಾಗಿದ್ದು ೨೦೦೩ ರಲ್ಲಿ ಬುಡಕಟ್ಟು ಎಂಬ ಹಣೆಪಟ್ಟಿ ಸಿಕ್ಕಿತು. ಅದಕ್ಕಿಂತ ಪೂರ್ವದಲ್ಲಿ ಒ.ಬಿ.ಸಿ.ಯ ಪಟ್ಟಿಯಲ್ಲಿದ್ದು ಎಲ್ಲ ಸೌಲಭ್ಯಗಳಿಂದ ವಂಚಿತರಾಗಿದ್ದರು. ಸಿದ್ಧಿಯರು ಬುದಕಿನ ನಿರ್ವಹಣೆಗಾಗಿ ದಿನಕೂಲಿಗಾರರಾಗಿ ಭೂಮಾಲಿಕರು ಮತ್ತು ಪುರೋಹಿತಷಾಹಿಯ ಗದ್ದೆ ಮತ್ತು ತೋಟಗಳಲ್ಲಿ ಜೀತದಾಳುಗಳಾಗಿ ತಮ್ಮ ಬದುಕನ್ನು ಸಾಗಿಸುತ್ತಿರುವುದು ತಿಳಿದುಬರುತ್ತದೆ. ಆದ್ದರಿಂದ ನಮಗೆ ತಿಳಿಯುವುದೇನೆಂದರೆ ಶೋಷಣೆಯ ಪ್ರಕ್ರಿಯೆಯಿಂದ ಉಂಟಾದ ಹಾನಿ ಅಪಾರವಾಗಿರುತ್ತದೆ. ವ್ಯಕ್ತಿಯ ಬೆಳವಣಿಗೆಗೆ ಇದು ಮಾರಕವಾದುದಷ್ಟೇ ಅಲ್ಲ ಸಮಾಜದ ಅಭಿವೃದ್ಧಿಗೂ ಇದು ಅತ್ಯಂತ ಹಾನಿಕರವಾಗಿ ಪರಿಣಮಿಸುವುದೆನ್ನುವುದು ಚರಿತ್ರೆಯು ನಮಗೆ ಕಲಿಸಿದ ಪಾಠವಾಗಿರುತ್ತದೆ. ಈ ರೀತಿಯ ಪಾಠಕ್ಕೆ ಸಿದ್ಧಿಯರ ಬದುಕು ಹತ್ತಿರವಾಗಿ ಕಾಣುತ್ತದೆ. ಸಿದ್ಧಿಯರು ಇಂದಿಗೂ ಸಮಾಜದ ಮುಖ್ಯವಾಹಿನಿಯಲ್ಲಿ ಸೇರದಿರುವುದಕ್ಕೆ ಅವರಿಗೆ ಯಾವುದೇ ಆರ್ಥಿಕ ಮೂಲಗಳು ಇಲ್ಲದಿರುವುದೇ ಮುಖ್ಯವಾಗುತ್ತದೆ. ಸಿದ್ಧಿಯರು ಕಾಡಿನಲ್ಲಿ ದೊರೆಯುವ ವಸ್ತುಗಳಿಗೆ ಸಂಬಂಧಿಸಿದಂತೆ ನಾಟಿ ಔಷಧಿಯನ್ನು ಚನ್ನಾಗಿ ಬಲ್ಲವರಾಗಿದ್ದಾರೆ. ನಾಗರಿಕ ಬದುಕಿನಿಂದ ದೂರವಿದ್ದು ದೇವರು, ಧರ್ಮ, ನೀತಿ, ಬ್ರಾಹ್ಮಣ, ಮೌಲ್ಯ, ಪುಣ್ಯ, ಪಾಪ ಮತ್ತು ನ್ಯಾಯಗಳ ಪರಿಕಲ್ಪನೆಗಳು ಅವರು ನೂರಾರು ವರ್ಷಗಳಿಂದ ಬೀಡುಬಿಟ್ಟ ಕಾಡಿನ ಪರಿಸರದಿಂದಲೇ ರೂಪುಗೊಂಡಿವೆ. ಇವರು ಹಿಂದೂ, ಮುಸ್ಲಿಂ, ಕ್ರೈಸ್ತ, ಧರ್ಮಗಳಲ್ಲಿ ಹಂಚಿ ಹೋಗಿದ್ದಾರೆ.

ಸಿದ್ಧಿಯರ ವಿವಾಹ ಪದ್ಧತಿಯು ಸುತ್ತಲಿನ ಸಮಾಜದ ಪ್ರಭಾವದಿಂದ ಕೂಡಿದೆ. ಸಿದ್ಧಿ ಉಪಸಂಸ್ಕೃತಿಯಲ್ಲಿ ಎಲ್ಲೂ ಕಂಡುಬರದಿರುವ ಅಂಶವೆಂದರೆ ವರದಕ್ಷಿಣೆ ಪದ್ದತಿ. ಸಾಮಾನ್ಯವಾಗಿ ದಿನವಿಡೀ ದುಡಿದು ಬಂದ ಸಿದ್ಧಿಗಳು ಗಂಡಸರು, ಹೆಂಗಸರು ಮತ್ತು ಮಕ್ಕಳು ಎಲ್ಲರೂ ಸೇರಿ ಗುಮ್ಮಟಿತಾಳ ಹಾಗೂ ಕೆಲವೊಮ್ಮೆ ಕೊಳಲನ್ನು ಬಾರಿಸುತ್ತಾ ಹಾಡು ಹೇಳುತ್ತಾರೆ. ಸಿದ್ದಿಯರೂ ಕೂಡ ಮಲೆನಾಡಿನ ಪ್ರದೇಶಗಳಲ್ಲಿ ಜೀವಿಸುವವರಾಗಿರುವುದರಿಂದ ಸಾಗರದ ಪಕ್ಕದ ಜಿಲ್ಲೆ ಉತ್ತರಕನ್ನಡದ ಶಿರಸಿ, ಸಿದ್ದಾಪುರ, ಭಟ್ಕಳ ಈ ಭಾಗದಲ್ಲಿರುವ ಇವರ ಪರಿಚಯ ಮಾಸ್ತರರಿಗೆ ಚಿರಪರಿಚಿತವಾಗಿರುವುದರಿಂದ ಸಾಗರದ ನೀನಾಸಂಗೆ ಕರೆಸಿ 'ಕಪ್ಪುಜನರ ಕೆಂಪು ನೆರಳು' ಎಂಬ

ನಾಟಕವನ್ನು ಮಾಡಿಸಿದ್ದಾರೆ. ಅಲ್ಲದೆ ಹಾಡು, ಕುಣಿತಗಳ ನೃತ್ಯಗಳನ್ನು ಸಿದ್ದಿಯವರಿಂದ ವಿವಿಧ ಸ್ಥಳಗಳಲ್ಲಿ ಮಾಡಿಸಿರುವುದು ಕಂಡುಬರುತ್ತದೆ. ಈ ಪರಿಣಾಮವಾಗಿ ಸಿದ್ದಿಯರು ತಮ್ಮ ಸಾಂಸ್ಕೃತಿಕ ಬೆಳವಣಿಗೆಯನ್ನು ತಮ್ಮ ಎಲ್ಲಾ ರಂಗಗಳಲ್ಲಿ ರೂಢಿಗತ ಮಾಡಿಕೊಂಡಿದ್ದಾರೆ.

೧೯೮೭ ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯವರು ದೆಹಲಿಯಲ್ಲಿ ಏರ್ಪಡಿಸಿದ್ದ ಲೋಕೋತ್ಸವದಲ್ಲಿ ಸಿದ್ದಿ ಕಲಾತಂಡವನ್ನು ಕರೆದುಕೊಂಡು ಹೋಗಿ ದಮಾಮಿ ಕಲಾಪ್ರದರ್ಶನ ಮಾಡಿರುವುದಲ್ಲದೇ ಸಿದ್ದಿಯರಿಗೆ ಪ್ರೋತ್ಸಾಹದಾಯಕರಾಗಿದ್ದುದು ಕಂಡುಬರುತ್ತದೆ. ಈ ಹಿನ್ನೆಲೆಯಿಂದ ಮಾಸ್ತರರು ಸಿದ್ದಿಯರ ಸಾಂಸ್ಕೃತಿಕ ಮತ್ತು ಸಾಮಾಜಿಕ ಸುಧಾರಣೆಯಲ್ಲಿ ತಮ್ಮ ಪ್ರಭಾವವನ್ನು ಬೀರಿರುವುದು ಗೋಚರಿಸುತ್ತದೆ.

ಉತ್ತರ ಕನ್ನಡ ಜಿಲ್ಲೆಯ ನಿವಾಸಿಗಳಾಗಿರುವ ಸಿದ್ದಿಯರು ಈ ರಾಜ್ಯದ ನಿಜವಾದ ಬುಡಕಟುಗಳು. ಅವರ ನೃತ್ಯ, ಗುಮ್ಮಟಿಯಪದ, ಸೋಬಾನೆಪದಗಳು, ದೇವರನ್ನು ಆರಾಧಿಸುವ ಪದಗಳು, ವರುಣನನ್ನು ಕರೆಯುವ ಹಾಡುಗಳು ಅವರ ಅನನ್ಯತೆಯನ್ನು ಎತ್ತಿ ಹಿಡಿಯುತ್ತವೆ. ಕ್ರಿಯಾಶೀಲ ಶಿಕ್ಷಕರಾಗಿದ್ದ ಹುಚ್ಚಪ್ಪ ಮಾಸ್ತರರು ಸಿದ್ದಿಯರ ಹಾಡಿಗೆ ಹೋಗಿ ಸುತ್ತಮುತ್ತ ಇರುವ ಬುಡಕಟ್ಟುಗಳ ಸಾಂಸ್ಕೃತಿಕ ಪ್ರಗತಿಯಲ್ಲಿ ತಮ್ಮ ತನು, ಮನ, ಧನ ಅರ್ಪಿಸಿರುವುದನ್ನು ಕಾಣಲಾಗಿದೆ. ಈ ಪರಿಣಾಮವಾಗಿ ಸಿದ್ದಿಯರು ತಮ್ಮ ಕಲಾತಂಡಗಳನ್ನು ನಿರ್ಮಾಣ ಮಾಡಿಕೊಂಡು ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆದ ಜಾನಪದೀಯ ಸಾಂಸ್ಕೃತಿಕ ವೇದಿಕೆಗಳಲ್ಲಿ ತಮ್ಮ ಕಲಾಪ್ರದರ್ಶನ ಮತ್ತು ತಮ್ಮ ಬದುಕನ್ನು ಗುರುತಿಸುವ ಕುರಿತು ಇರುವ ಹಾಡುಗಳನ್ನು ಹಾಡುವ ಮುಖಾಂತರವಾಗಿ ಅನೇಕ ಪ್ರಶಸ್ತಿಗಳನ್ನು ತೆಗೆದುಕೊಂಡು ಬಂದಿರುವುದಲ್ಲದೇ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಬುಡಕಟ್ಟುಗಳ ತರಬೇತಿ ಕೇಂದ್ರದಲ್ಲಿ ನಾಡಿನ ಸಂಗೀತಗಾರರಾದ ಹಂಸಲೇಖ ಅವರು ಸಿದ್ದೇರ ಕುಣಿತ ಮತ್ತು ತಬಲವಾದ್ಯ ಹಾಗೂ ಹಾಡುಗಳ ಕುರಿತು ಧ್ವನಿಸುರುಳಿ ಬಿಡುಗಡೆ ಮಾಡುವುದಕ್ಕೆ ಮನಸ್ಪೂರ್ವಕವಾಗಿ ಒಪ್ಪಿಕೊಂಡಿರುವುದು ಹುಚ್ಚಪ್ಪ ಮಾಸ್ತರರ ಸಿದ್ದಿಯರ ಬಗೆಗಿನ ಕಾರ್ಯಚಟುವಟಿಕೆಯನ್ನು ತೋರಿಸುತ್ತದೆ.

ಮಾಸ್ತರರು ಸಿದ್ದಿಯರ ಸಾಮಾಜಿಕ ಮತ್ತು ಆರ್ಥಿಕ ಬದುಕು ಹಾಗೂ ಸಾಂಸ್ಕೃತಿಕ ಬದುಕುಗಳಲ್ಲಿ ಉತ್ಪಾದನೆ ಮಾಡಲು ಇರುವಂತಹ ಸಾಮರ್ಥ್ಯವನ್ನು ರೂಪಿಸಿಕೊಟ್ಟಿದ್ದಾರೆ. ಈ ಪರಿಣಾಮವಾಗಿ ಸಿದ್ದಿಯರ ಸಾಮಾಜಿಕ ಸಂಬಂಧವನ್ನು ಹೇಗೆ ಇತರ ಸಮುದಾಯಗಳೊಂದಿಗೆ ಬೆಸೆದುಕೊಳ್ಳಲು ಕಾರಣವಾಗಿದೆ ಎಂಬುದನ್ನು ತಿಳಿಯಬಹುದಾಗಿದೆ. ಅವರ ಸಾಮಾಜಿಕ

ವೈಪರೀತ್ಯವೆಂದರೆ ಒಂದು ಸಮುದಾಯದ ಬುಡಕಟ್ಟಿನ ಜನ ಮೂರು ಧರ್ಮಗಳಲ್ಲಿ ಹಂಚಿಹೋಗಿರುವುದಾಗಿದೆ. ಆ ನಡುವೆಯೂ ಸಿದ್ದಿಯರು ವೈಶಿಷ್ಯತೆನ್ನು ಕಾಪಾಡಿಕೊಂಡು ಸಾಂಸ್ಕೃತಿಕವಾದ ಅಸ್ಮಿತೆಯನ್ನು ಕಟ್ಟಿಕೊಂಡಿದ್ದಾರೆ. ಈ ಎಲ್ಲಾ ವಿಷಯಗಳನ್ನು ಅವರ ಕಥೆಗಳು, ಒಗಟುಗಳು, ಹಾಡುಗಳ ಮೂಲಕ ಗ್ರಹಿಸಲಾಗಿದೆ. ಮಾಸ್ತರರು ಸಿದ್ದಿಯರ ಸಾಂಸ್ಕೃತಿಕ ಪ್ರಗತಿಗೆ ಶ್ರಮಿಸಿರುವುದಕ್ಕೆ ಇಂದಿನ ಸಿದ್ಧಿಯರ ಶಿಸ್ತುಬದ್ಧ ಕಲಾಪ್ರದರ್ಶನಗಳೇ ಸಾಕ್ಷಿಯಾಗಿವೆ.

ಗೊಂಡರು:

ಗೊಂಡರು ಮೂಲತಃ ಕೃಷಿ ಬುಡಕಟ್ಟಾಗಿದ್ದು, ಉತ್ತರಕನ್ನಡ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಭಾರತದ ಬುಡಕಟ್ಟುಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವವರೇ ಗೊಂಡರು. ವಿಂಧ್ಯ ಸಾತ್ಪುರ ಪರ್ವತ ಶ್ರೇಣಿಯಿಂದ ಗೋದಾವರಿ ಜಲಾನಯನ ಭೂಪ್ರದೇಶದ ವರೆಗೆ, ಉತ್ತರ ಪ್ರದೇಶ ಮತ್ತು ಬಿಹಾರದಿಂದ ಆಂದ್ರಪ್ರದೇಶ ಕರ್ನಾಟಕದ ವರೆಗೆ ಮತ್ತು ಮಹಾರಾಷ್ಟ್ರದಿಂದ ಒರಿಸ್ಸಾದ ವರೆಗೆ ಇವರು ಪಸರಿಸಿಕೊಂಡಿದ್ದಾರೆ. ಇವರು ಪಶುಪಾಲಕರಾಗಿದ್ದು ಕುರಿ ಹಾಗೂ ದನಗಳ ಪಾಲನೆಯಿಂದಾಗಿ ಇವರನ್ನು ಕುರುಬ ಮತ್ತು ದನಗರ ಎಂತಲೂ ಕರೆಯುವುದುಂಟು. ಇವರು ಸಾಂಪ್ರದಾಯಿಕವಾಗಿ ಅಲೆಮಾರಿ ಪಶುಪಾಲನೆಯಿಂದ ವಿಮುಕ್ತರಾಗುತ್ತಾ ಕೃಷಿ ಕೂಲಿಗಳಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಬೃಹತ್ ಕೈಗಾರಿಕೆಗಳಿಂದಾಗಿ ಗೊಂಡರ ಗೃಹಕೈಗಾರಿಕೆಗಳಾದ ಕಂಬಳಿ ನೇಯ್ಗೆ ನೆಲಕಚ್ಚಿದೆ. ಆದರೆ ಉತ್ತರ ಕನ್ನಡದ ಗೊಂಡರ ಮುಖ್ಯ ಕಸುಬು ಕೃಷಿಯಾಗಿದ್ದು ಇವರು ಗುಡ್ಡಗಾಡುಗಳಲ್ಲಿ ಸಂಪತ್ಭರಿತವಾದ ತೋಟ–ಗದ್ದೆಗಳನ್ನು ಹೊಂದಿದ್ದಾರೆ. ಇಲ್ಲಿ ತೆಂಗು, ಅಡಿಕೆ, ಭತ್ತ, ಕಬ್ಬು ಇತ್ಯಾದಿಗಳನ್ನು ಬೆಳೆಯುತ್ತಾರೆ. ಗದ್ದೆಯ ಕೆಲಸಕ್ಕೆ ಉಪಯೋಗಿಸುವ ದನ–ಕರು ಸಾಕುವುದು ರೂಢಿಯಲ್ಲಿದೆ. ಹೈನುಗಾರಿಕೆ ಮತ್ತು ನಾಟಿಕೋಳಿ ಸಾಕಾಣಿಕೆ ಕಂಡುಬರುತ್ತದೆ. ಅಲ್ಲದೆ ಕೃಷಿ ಕೂಲಿಗಳಾಗಿಯೂ ಕಾಡುಗಳಿಂದ ಕಟ್ಟಿಗೆ ಮತ್ತು ಸೊಪ್ಪು ಸಂಗ್ರಹಿಸಿ ಮಾರುವವರು ಇವರಲ್ಲಿ ಸಿಗುತ್ತಾರೆ. ಕಾಡುಕೋಳಿ, ಮೊಲದಂತಹ ಪ್ರಾಣಿಗಳನ್ನು ಭೇಟೆಯಾಡುಡುವುದು, ಮೀನು ಹಿಡಿಯುವುದು ರೂಢಿಗತವಾಗಿದೆ. ಆದರೆ ಇವುಗಳೆಲ್ಲವೂ ಇಂದು ಕಷ್ಟಸಾಧ್ಯತೆಯಿಂದ ಕೂಡಿವೆ. ಇವರ ಭಾಷೆ ಅಚ್ಚ ಕನ್ನಡವಾಗಿದೆ.

ಗೊಂಡರು ಬಾರದೇವ ಅಥವ ಬೀರದೇವ, ಭೀಮಲಪೇನ, ಮಹಾಕಾಳಿ, ಮರಿಯಮ್ಮ ಹಾಗೂ ಕೋಗ್ತಿ ಇತ್ಯಾದಿ ದೆವ್ವಗಳನ್ನು ಆರಾಧಿಸುವ ಬುಡಕಟ್ಟಾಗಿದೆ. ಇಂತಹ ಬುಡಕಟ್ಟಿನ ಕಲಾ ತಂಡವನ್ನು ರಚನೆ ಮಾಡಿದ ಮಾಸ್ತರರು ೧೯೮೭ ರಲ್ಲಿ ಮೈಸೂರು ದಸರಾ ಉತ್ಸವದಲ್ಲಿ ಗೊಂಡರ ಕುಣಿತ (ದಸರಾ ಹೋಳಿ)ದ ಕಲಾವಿದರೊಂದಿಗೆ ಮಾಸ್ತರರು ಭಾಗವಹಿಸಿದ್ದು ಒಂದು

ವಿಶಿಷ್ಟವೇ ಆಗಿದೆ. ಉತ್ತರ ಕನ್ನಡ ಜಿಲ್ಲೆಯ ಗೊಂಡರು ನೆಲೆ ನಿಂತ ಬುಡಕಟ್ಟಾಗಿದ್ದು, ಇತರ ಸಮುದಾಯಗಳಿಗಿಂತ ವೃತ್ತಿಯ ಬದುಕನ್ನು ಕೈಯಲ್ಲಿಟ್ಟುಕೊಂಡು ಜೀವನವನ್ನು ರೂಪಿಸಿಕೊಂಡವರಾಗಿದ್ದಾರೆ. ಈ ಹಿನ್ನೆಲೆಯನ್ನು ಅರಿತ ಶಿಕ್ಷಕರು ಸಾಗರದಿಂದ ಭಟ್ಕಳಕ್ಕೆ ಹೋಗುವ ಮಾರ್ಗದ ಮಧ್ಯದಲ್ಲಿರುವ ಗೊಂಡರ ಬಗ್ಗೆ ವಿಶೇಷವಾದ ಕಾಳಜಿಯನ್ನು ಇಟ್ಟುಕೊಂಡಿದ್ದಾರೆ. ಅಲ್ಲದೆ ಅವರ ಸಾಂಸ್ಕೃತಿಕ ಮತ್ತು ಸಾಮಾಜಿಕ ಸುಧಾರಣೆಯಲ್ಲಿ ಮಾಸ್ತರರು ಮುಕ್ತ ಮನಸ್ಸಿನಿಂದ ಕೆಲಸ ಮಾಡಿರುವುದನ್ನು ಕಾಣಬಹುದು.

ಕುಣಬಿ (ಕುಡುಬಿ):

ಭಾರತದಲ್ಲಿ ಯಾವುದೇ ಬುಡಕಟ್ಟು ಸಮುದಾಯ ತನ್ನ ಸಮುದಾಯದ ಕೆಲವು ನಿಯಮಗಳನ್ನು ಯಾವಾಗಲೂ ಕಟ್ಟುನಿಟ್ಟಿನಿಂದ ಪಾಲಿಸುತ್ತದೆ. ಇಂದು ಆದಿವಾಸಿ ಸಮುದಾಯಗಳು ಆಧುನಿಕರಣವನ್ನು ಹೊಂದುತ್ತಲೇ ವಂಶಪಾರಂಪರೆಯಾಗಿ ಬಂದ ಕೆಲವು ನಿಲುವುಗಳನ್ನು ಉಳಿಸಿಕೊಂಡಿವೆ. ಅಲ್ಲದೆ ಕೆಲವು ಮೌಲ್ಯಗಳನ್ನು ತಮ್ಮಲ್ಲಿಯೇ ಇರಬೇಕೆಂಬ ಛಲವನ್ನು ಹೊಂದಿರುತ್ತವೆ. ಕಾಡಿನಲ್ಲಿರುವ ಬುಡಕಟ್ಟು ಆದಿವಾಸಿ ಸಮುದಾಯಗಳು ಹಾಗೂ ಕೆಳಜಾತಿಗಳನ್ನು ಪುರೋಹಿತಶಾಹಿಗಳು ತಮ್ಮ ಅಧೀನದಲ್ಲಿಟ್ಟುಕೊಂಡು ಬೇಕಾದ ಸಮಯದಲ್ಲಿ ಬಳಸಿಕೊಳ್ಳುತ್ತಿದ್ದರು. ಹಾಗೂ ಆದಿವಾಸಿ ಮತ್ತು ಕೆಳಜಾತಿಗಳನ್ನು ಮಾನವೀಯತೆಯ ದೃಷ್ಠಿಯಿಂದ ನೋಡದೇ ಮೃಗಗಳಂತೆ ನೋಡುತ್ತಿದ್ದರು. ಇದನ್ನು ವಿಮರ್ಶೆಗೆ ಒಳಪಡಿಸಿದಾಗ ಪ್ರಸ್ತುತ ಸಮಾಜದಲ್ಲಿ ದೇಶೀಯ ಸಂಸ್ಕೃತಿ ಏನಾದರೂ ಉಳಿದಿದೆ ಎಂದರೆ ಕೆಳಜಾತಿ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಮಾತ್ರ ಎಂಬುದು ನಿಜವಾದ ಸಂಗತಿಯಾಗಿದೆ.

ಈ ಸಮುದಾಯದಲ್ಲಿ ಅನೇಕ ಒಳಪಂಗಡಗಳಿದ್ದು ಎಲ್ಲ ಪಂಗಡಗಳ ಮೂಲ ಅಥವಾ ಹಿನ್ನೆಲೆ ಒಂದೇ ಆಗಿರುವುದನ್ನು ಕಾಣಬಹುದು. ಈ ಸಮುದಾಯ ಆರ್ಥಿಕವಾಗಿ ಕೆಲವೊಂದು ಜಿಲ್ಲೆಗಳಲ್ಲಿ ಉತ್ತಮವಾದ ಸ್ಥಿತಿಯಲ್ಲಿದೆ. ದಕ್ಷಿಣಕನ್ನಡ, ಉತ್ತರಕನ್ನಡ, ಮಂಗಳೂರಿನಲ್ಲಿ ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿದೆ. ಕರ್ನಾಟಕದಲ್ಲಿ ಸಮುದಾಯಗಳ ಚರಿತ್ರೆ ರೂಪುಗೊಂಡ ಹಿನ್ನೆಲೆಯನ್ನು ಅವಲೋಕಿಸಿದಾಗ ಇದರ ಹಿಂದೆ ಅನೇಕ ರಾಜಕೀಯ ಹುನ್ನಾರಗಳ ಕೈವಾಡವಿದೆ ಎಂದು ತಿಳಿಯಬಹುದಾಗಿದೆ. ಇದರ ಪರಿಣಾಮವಾಗಿ ಭಾರತದಲ್ಲಿ ಮೇಲ್ಜಾತಿಗಳು ಭಾರತೀಯ ಸಂಸ್ಕೃತಿಯನ್ನು ನಿರ್ಮಿಸಿದವರಾಗಿದ್ದಾರೆ. ದೇಶಿಯ ಮತ್ತು ವಸಾಹತುಶಾಹಿ ದೃಷ್ಠಿಕೋನದ ಮತೀಯ ಪೂರ್ವಾಗ್ರಹಗಳು ಭಾರತದ ಆದಿವಾಸಿಗಳ ಬದುಕನ್ನು ವಿರೂಪುಗೊಳಿಸಿವೆ. ಶ್ರಮಿಕ

ವರ್ಗ ಹಾಗೂ ಆದಿವಾಸಿ ಸಮುದಾಯಗಳ ಕುರಿತು ವಸಾಹತುಶಾಹಿ ವ್ಯವಸ್ಥೆ ಅನೇಕ ಅಪಕಲ್ಪನೆಗಳನ್ನು ಮೈಗೂಡಿಸಿಕೊಂಡಿದೆ.

ಯಾವುದೇ ಬುಡಕಟ್ಟು ಸಮುದಾಯಗಳು ಸಂಸ್ಕೃತಿಯನ್ನು ಬಿಟ್ಟಿರಲು ಸಾಧ್ಯವಿಲ್ಲ. ಆದ್ದರಿಂದಾಗಿ ಸಂಸ್ಕೃತಿ ಇಲ್ಲದೆ ಯಾವುದೇ ಸಮುದಾಯಗಳು ಉನ್ನತ ಸ್ಥಾನಮಾನವನ್ನು ಪಡೆಯಲಾರವು ಎಂಬ ಮಾತು ಸಾಧ್ಯ. ಸಮುದಾಯಗಳಲ್ಲಿ ಸಂಸ್ಕೃತಿ ಬೇಕು, ಸಂಸ್ಕೃತಿಯಿಂದಲೇ ವ್ಯಕ್ತಿ ಉತ್ತಮನಾಗಬಹುದು ಹಾಗೂ ತನ್ನ ಬದುಕನ್ನು ರೂಪಿಸಿಕೊಳ್ಳಬಹುದು. ಸಂಸ್ಕೃತಿಯು ಇಲ್ಲದಿದ್ದರೆ ವ್ಯಕ್ತಿ ಕ್ರೂರ ಮೃಗಗಳಂತೆ ವರ್ತಿಸಬಹುದು. ಆದ್ದರಿಂದ ಸಂಸ್ಕೃತಿ ಎಂಬುದು ಒಂದು ನಿರಂತರವಾದ ಕ್ರಿಯೆಯಾಗಿದೆ. ಇದರಿಂದ ತಿಳಿಯುವುದೇನೆಂದರೆ ಸಂಸ್ಕೃತಿ ನಿಂತ ನೀರಲ್ಲ, ಅದೊಂದು ನಿರಂತರವಾಗಿ ಹರಿಯುವ ಪ್ರವಾಹವಾಗಿದೆ. ಈ ಹಿನ್ನೆಲೆಯಲ್ಲಿ ಗಾಂಧೀಜಿ, ಅಬ್ರಾಹಂ ಲಿಂಕನ್, ಕಾರ್ಲ್‌ಮಾರ್ಕ್ಸ್, ಕೆನಡಿ ಮುಂತಾದ ಮಹನೀಯರು ಸಮಾಜದ ಮತ್ತು ಸಂಸ್ಕೃತಿಗಳ ಬಗ್ಗೆ ಕಾಳಜಿಯನ್ನು ಹೊಂದಿ ತಮ್ಮದೇ ಆದ ರೀತಿಯಲ್ಲಿ ಉಲ್ಲೇಖಿಸಿದ್ದಾರೆ. ಬುಡಕಟ್ಟು ಸಮುದಾಯಗಳು ತನ್ನದೇ ಆಗಿರುವಂತಹ ವಿಶಿಷ್ಟ ಸಂಸ್ಕೃತಿಯನ್ನು ತನ್ನ ಬದುಕಿನ ಉದ್ದಕ್ಕೂ ಪಾಲಿಸಿಕೊಂಡು ಬಂದಿವೆ. ಈ ಎಲ್ಲಾ ಅಂಶಗಳಿಂದ ಮಾಸ್ತರರು ಸಿದ್ದಿಯರು, ದೀವರು, ಅಕ್ಕಿಪಿಕ್ಕಿ, ಕುಣಬಿ, ಗೊಂಡರ ಸಾಂಸ್ಕೃತಿಕ ಪ್ರಗತಿಗೆ ಶ್ರಮಿಸಿರುವುದಲ್ಲದೇ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಕುಣಬಿಯವರು ಆಚರಿಸುವ ಹಬ್ಬಗಳಲ್ಲಿ ಹೋಳಿ ಹಬ್ಬ ಶ್ರೇಷ್ಠವಾದ ಹಬ್ಬವಾಗಿದೆ. ಇಂತಹ ಹಬ್ಬಗಳಲ್ಲಿ ನೃತ್ಯಗಳನ್ನು ಮಾಡುವಂತಹ ಕಲಾತಂಡವನ್ನು ಸೃಷ್ಟಿ ಮಾಡಿದ ಕೀರ್ತಿ ಮಾಸ್ತರರಿಗೆ ಸಲ್ಲುತ್ತದೆ. ಕುಣಬಿಯರು ಹೋಳಿ ಹಬ್ಬದಲ್ಲಿ ನೃತ್ಯಕ್ಕೆ ಬಳಸುವ ಗುಮ್ಮಟೆಯು ಅವರ ಕಲೆಗೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿದೆ. ಮಾಸ್ತರರು ಸಾಗರ ತಾಲೂಕಿನ ಮೆಘಾನೆ ಕುಣಬಿಯರನ್ನು ನಾಡಿನ ಜನತೆಗೆ ಪರಿಚಯಿಸಿಕೊಟ್ಟಿದ್ದಾರೆ. ಒಂದು ಕಾಲದಲ್ಲಿ ಯಾವುದೇ ಜನರ ಸಂಪರ್ಕವಿಲ್ಲದೇ ಕಾಡಿನ ಮಧ್ಯೆ ಬದುಕುತಿದ್ದ ಈ ಸಮುದಾಯದವರಿಗೆ ಮಾಸ್ತರರ ಪ್ರೇರಣೆಯಿಂದ ಬುಡಕಟ್ಟುಗಳ ಕಲೆಗೆ ಪ್ರೋತ್ಸಾಹ ಸಿಕ್ಕು ಕನ್ನಡ ವಿಶ್ವವಿದ್ಯಾಲಯದಲ್ಲಿ ಹೋಳಿ ನೃತ್ಯವನ್ನು ಮಾಡಿ ಪ್ರಶಂಸೆ ಗಳಿಸಿದ ಬಗೆಯನ್ನು ನೆನಪಿಸಬಹುದಾಗಿದೆ. ಮಾಸ್ತರರು ಶಿಕ್ಷಕ ವೃತ್ತಿಗೆ ಬಂದ ನಂತರ ಪಶ್ಚಿಮ ಘಟ್ಟದಲ್ಲಿರುವ ಹಸಲರು, ದೀವರು, ಗೊಂಡರು, ಹೆಳವ, ಹಕ್ಕಿಪಿಕ್ಕಿ ಮತ್ತು ಕುಣಬಿಯವರ ಸ್ಥಳಗಳಿಗೆ ಗುಡ್ಡಗಾಡು ಎನ್ನದೇ ಖುದ್ದಾಗಿ ನಡೆದುಹೋಗಿ ಬುಡಕಟ್ಟುಗಳನ್ನು ಮುಖಾಮುಖಿಯಾಗಿ ಸಂದರ್ಶಿಸಿ ಬುಡಕಟ್ಟುಗಳ ಬದುಕು, ಅವರ ಸಾಂಸ್ಕೃತಿಕ ಕಲೆ ಹಾಗೂ ಅವರ ಸಾಮ್ಯತೆ, ಕಾಡಿನ ಮತ್ತು ಬುಡಕಟ್ಟುಗಳ ಸಂಬಂಧ, ಕಾಡುಪ್ರಾಣಿಗಳು

ಮತ್ತು ಇವರ ಮಧ್ಯೆ ಇರುವ ಅನ್ಯೋನ್ಯತೆಯ ಬದುಕು ಅಲ್ಲದೆ ದೈವಾರಾಧನೆ ಮತ್ತು ಭೂತಾರಾಧನೆಯಲ್ಲಿ ಬುಡಕಟ್ಟುಗಳ ಜ್ಞಾನ ಮತ್ತು ಆಧುನಿಕತೆಯ ಬದುಕಿನ ಸಂಬಂಧಗಳು ಕಾಡುತ್ಪನ್ನಗಳ ಬಗ್ಗೆ ಅವರಿಗಿರುವ ಅರಿವುಗಳೆಲ್ಲವನ್ನೂ ಮಾಸ್ತರರು ಗ್ರಹಿಸಿರುವುದರಿಂದ ಸಾಗರ ತಾಲೂಕಿನ ಕಾಡಿನಲ್ಲಿರುವ ಯಾವುದೇ ಹಳ್ಳಿಗಳಲ್ಲಿರುವ ಸಮುದಾಯಗಳ ಚಿತ್ರಣ ಅವರಿಗೆ ತಿಳಿದ ಸಂಗತಿಯಾಗಿದೆ. **"ಮನುಷ್ಯ ಕುಲಂ ತಾನೊಂದೇ ವಲಂ"** ಎಂದು ಪಂಪ ಮಹಾಕವಿ ಹೇಳಿದ ಸೂಕ್ತಿಯಂತೆ ಮಾಸ್ತರರು ಕೇವಲ ಶಿಕ್ಷಕರಾಗಿ ಅಷ್ಟೇ ಇರದೇ ಬುಡಕಟ್ಟುಗಳ ಪ್ರತಿಬಿಂಬವಾಗಿ ಈ ತಾಲೂಕಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಈ ಎಲ್ಲಾ ಬುಡಕಟ್ಟುಗಳಲ್ಲಿ ಒಂದೊಂದು ಕಲಾತಂಡಗಳನ್ನು ಕಟ್ಟಿದ ಹೆಗ್ಗಳಿಕೆ ಇವರದ್ದಾಗಿದೆ. ಯಾವುದೇ ಬುಡಕಟ್ಟಿನ ಹಾಡಿಯಲ್ಲಿ ಕುಳಿತರೆಂದರೆ ಅಲ್ಲೊಂದು ಲಾವಣಿ, ಜಾನಪದ ಗೀತೆ, ಡೊಳ್ಳುಕುಣಿತ, ಹೋಳಿಕುಣಿತ, ಗುಮ್ಮಟೆಯ ಬಡಿತ, ನೃತ್ಯಗಳು ನಡೆಯಿತೆಂದೇ ಅರ್ಥ. ಆದ್ದರಿಂದ ಮಾಸ್ತರರ ಬಗ್ಗೆ ಆಲೋಚಿಸುತ್ತಾ ಹೊರಟರೆ ಅವರು ಒಬ್ಬ ದಮನಿತ ಧ್ವನಿಗಳ ಚಿಂತಕರಾಗಿ, ಹೋರಾಟಗಾರರಾಗಿ, ರೂವಾರಿಗಳಾಗಿ ನಮಗೆ ಗೋಚರಿಸುತ್ತಾರೆ.

ಮಾಸ್ತರರು ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕಿಂತ ಹೆಚ್ಚಾಗಿ ಇಡೀ ಶಿವಮೊಗ್ಗ ಜಿಲ್ಲೆಯ ಬುಡಕಟ್ಟು ಸಮುದಾಯಗಳ ಮನಸ್ಸುಗಳಿಗೆ ಶಿಕ್ಷಣ ಕೊಟ್ಟಿರುವುದು ಅವರ ತೀವ್ರ ಕಾಳಜಿಯ ಮನೋಭಾವನೆಯನ್ನು ತೋರಿಸುತ್ತದೆ.

ಯಾವುದೇ ಬುಡಕಟ್ಟಿನ ಬದುಕು ಪ್ರಾರಂಭವಾಗಿರುವುದು ಬೆಂಕಿಯ ಬಳಕೆಯಿಂದ ಮತ್ತು ಪ್ರಾಣಿಗಳನ್ನು ಪಳಗಿಸಲು ಕಲಿತಿದ್ದರಿಂದ. ಹೀಗಾಗಿ ಬುಡಕಟ್ಟುಗಳು ಪ್ರಕೃತಿಯ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಪ್ರತಿದಿನವೂ ನಾಶವಾಗುವ ಭಯದಿಂದ ಬದುಕುತ್ತಿದ್ದಾರೆ. ಅಲ್ಲದೆ ಉತ್ಪಾದನಾ ಶಕ್ತಿಗಳು ಇನ್ನೂ ಅವೈಜ್ಞಾನಿಕ ಹಂತದಲೇ ಇರುವುದರಿಂದ ಅವರ ಜೀವನ ಅಷ್ಟಾಗಿ ಭದ್ರತೆಯನ್ನು ಕಾಣಲಿಕ್ಕೆ ಸಾಧ್ಯವಾಗಿಲ್ಲ. ಬುಡಕಟ್ಟುಗಳ ಜೀವನ ಕಠಿಣ ದುಡಿಮೆಯಿಂದ ಕೂಡಿದ ಜೀವನವಾಗಿರುವುದರಿಂದ ಯಾವುದೇ ದೊರೆತ ಫಲವು ಅವರ ತತ್‌ಕ್ಷಣದ ಅಗತ್ಯಗಳನ್ನು ಪೂರೈಸುತ್ತಿತ್ತೇ ವಿನಃ ಭವಿಷ್ಯದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲವಾಗಿದೆ. ಈ ರೀತಿಯ ಎಲ್ಲಾ ಕಷ್ಟ-ಸುಖಗಳನ್ನು ಬುಡಕಟ್ಟುಗಳಿಂದ ಗ್ರಹಿಸಿದ ಮಾಸ್ತರರು ಬುಡಕಟ್ಟುಗಳ ಬದುಕಿನಲ್ಲಿಯೇ ಸೇರಿಕೊಂಡುಬಿಟ್ಟರು. ಪರಿಣಾಮವಾಗಿ ಬುಡಕಟ್ಟು ಹುಚ್ಚಪ್ಪ ಮಾಸ್ತರರಾಗಿಯೇ ಕರ್ನಾಟಕದಲ್ಲಿ ನಾಮಾಂಕಿತರಾದರು. ಈ ರೀತಿಯಾಗಿ ಬುಡಕಟ್ಟುಗಳ ಎಲ್ಲಾ ಮಕ್ಕಳನ್ನು ನಮ್ಮ ಮಕ್ಕಳು ಎಂಬ ಮನೋಭಾವನೆಯ ಶಿಕ್ಷಕ ಸಿಗುವುದು ಇಂದಿನ ದಿನಮಾನಗಳಲ್ಲಿ ಅಷ್ಟು ಸುಲಭದ ಮಾತಲ್ಲ.

ಆದ್ದರಿಂದ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗಿರುವುದೇನೆಂದರೆ "ಗುರು ಬ್ರಹ್ಮ, ಗುರು ವಿಷ್ಣು, ಗುರುದೇವೋ ಮಹೇಶ್ವರ" ಎಂಬ ನುಡಿಮುತ್ತು ಎನ್.ಹುಚ್ಚಪ್ಪ ಮಾಸ್ತರರವರಿಗೆ ಸೂಕ್ತವಾದುದಾಗಿದೆ ಎಂಬುದೇ ಕ್ಷೇತ್ರಕಾರ್ಯದಿಂದ ತಿಳಿದ ಗ್ರಹಿಕೆಯಾಗಿದೆ.

ಅಡಿಟಿಪ್ಪಣಿ

೧೩. ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ಭಗವತ್ ಶರಣ ಉಪಾಧ್ಯಾಯ (ಪು.೫೨).

೧೪. ಬುಡಕಟ್ಟು ಅಧ್ಯಯನ ಪತ್ರಿಕೆ ೨, ಹಿ.ಚಿ.ಬೋರಲಿಂಗಯ್ಯ ಮತ್ತು ಎ.ಎಸ್.ಪ್ರಭಾಕರ (ಪು.೨೧–೨೪).

೧೫. ಬುಡಕಟ್ಟು ಕುಲಕಸುಬುಳು ಕೆ.ಎಂ.ಮೇತ್ರಿ (ಪು.೧೦–೧೨).

೧೬. ಜಾತ್ರೆಗಳು ಹಿರೇಮಠ ಎಸ್.ಎಸ್. (ಪು.೮).

೧೭. ಕರ್ನಾಟಕ ಬುಡಕಟ್ಟುಗಳು ಎಚ್.ಜಿ.ಲಕ್ಕಪ್ಪಗೌಡ (ಪು.೧೦–೧೧).

ಅಧ್ಯಾಯ ೫

ಸಮಾರೋಪ

ಭಾರತದ ಸಮಾಜವನ್ನು ಅದರ ಚರಿತ್ರೆಯ ಚಲನೆಗಳಲ್ಲಿ ಇಟ್ಟು ಅತ್ಯಂತ ಸೂಕ್ಷ್ಮವಾಗಿ ಮತ್ತು ಸೈದ್ಧಾಂತಿಕವಾಗಿ ವಿವರಿಸಬೇಕಾದ ಸನ್ನಿವೇಶ ಇಂದು ಪ್ರಸ್ತುತವಾಗಿದೆ. ಭಾರತದಲ್ಲಿ ಹಿಂದೂ ಧರ್ಮ ತನ್ನೆಲ್ಲಾ ಪಾರಂಪರಿಕ ಸಮರ್ಥನೆಗಳ ಮೂಲಕ ಪೋಷಿಸಿಕೊಂಡು ಬಂದ ಶ್ರೇಣೀಕೃತ ಸಮಾಜದ ಅಂಚಲ್ಲಿ ಆದಿಮ ಜನಾಂಗಗಳು ಬದುಕುತ್ತಿವೆ. ಕಾಡೊಳಗಿರುವ ಈ ಜನಾಂಗಗಳು ಸಮಾಜದ ನಾಗರಿಕತೆಯ ಆಚೆಗೆ ಇರುವ ಸಮುದಾಯಗಳು ಯಾವ ಸಮಾಜದ ನಾಗರಿಕತೆಯನ್ನು ಹೊಂದಿಲ್ಲದೇ ಕಾಡಿನೊಳಗೆ ಎಲೆಮರೆ ಕಾಯಿಯ ಜೀವನ ನಡೆಸುತ್ತಿರುವುದು ಇತಿಹಾಸದುದ್ದಕ್ಕು ನಡೆದುಕೊಂಡು ಬಂದಿದೆ. ಬುಡಕಟ್ಟು ಸಮುದಾಯಗಳನ್ನು ಯಾವುದೇ ಸರಕಾರ ಅಭಿವೃದ್ಧಿಯ ಕಡೆ ಮುಖ ಮಾಡಿಸದೇ ಇರುವುದು ಎಲ್ಲರಿಗೂ ತಿಳಿದ ಸಂಗತಿ. ಆದ್ದರಿಂದ ಕಾಡಿನ ಬಗ್ಗೆ ತಾಯಿಯ ಪ್ರೀತಿಯನ್ನು ಇಟ್ಟುಕೊಂಡು ಅವರದೇ ಆದ ಪರಂಪರೆಯ ಬದುಕಿನಲ್ಲಿ ನ್ಯಾಯ, ಸಮಾನತೆ ಮತ್ತು ಸಹಬಾಳ್ವೆಯ ಬದುಕು ರೂಢಿಗತವಾಗಿ ಬುಡಕಟ್ಟು ಸಮುದಾಯಗಳಲ್ಲಿರುವುದು ಕಂಡುಬರುತ್ತದೆ. ಬುಡಕಟ್ಟುಗಳ ಬದುಕು ಆಧುನಿಕ ಬದುಕಿನಲ್ಲಿರುವ ಜನರಿಗೆ ವಿಲಕ್ಷಣವಾಗಿ ಸುಂದರವಾಗಿ ಕಾಣಬಹುದು. ಆದರೆ ಅವರು ನಿತ್ಯದ ಬದುಕಲ್ಲಿ ಹೆದರಿಸುವ ಕಷ್ಟಗಳಿಗೆ ಪರಿಹಾರಗಳಿಲ್ಲ.

ಪಶ್ಚಿಮ ಘಟ್ಟದಲ್ಲಿರುವ ಬುಡಕಟ್ಟುಗಳು ಬದುಕಿನ ಹೋರಾಟದಲ್ಲಿ ಅನೇಕ ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಂಡು ಬಿಡಿಸಿಕೊಳ್ಳಲಾಗದೆ ಇರುವುದು ತಿಳಿಯುತ್ತದೆ. ಈ ರೀತಿಯ ಸಮಸ್ಯೆಗಳು ಬುಡಕಟ್ಟುಗಳಿಗೆ ಹೊಸದೇನೂ ಅಲ್ಲ. ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಸಾಗರವು ವಿವಿಧ ಕಾರಣಕ್ಕಾಗಿ ವಿಶಿಷ್ಟತೆಗಳು ಇರುವ ಪರಂಪರೆಯನ್ನು ಇಟ್ಟುಕೊಂಡಿದೆ. ಸಾಗರವು ಭೌಗೋಳಿಕವಾಗಿ ಸುಂದರ ತಾಣವಾಗಿದ್ದು ಇಲ್ಲಿ ವಿಚಾರವಂತರು, ಬುದ್ದಿಜೀವಿಗಳು, ಹೋರಾಟಗಾರರು, ಸಮಾಜ ಸುಧಾರಕರು, ಹಾಡುಗಾರರು, ನಾಟಕಕಾರರು, ರಂಗಕಲಾವಿದರು ಮುಂತಾದವರಿಂದ ಕೂಡಿದ ಶ್ರೀಮಂತ ಸ್ಥಳವಾಗಿದೆ. ಇಲ್ಲಿ ಸಮಾಜವಾದಿ ಹೋರಾಟಗಳು, ಕಾಗೋಡು ಚಳುವಳಿ, ಪರಿಸರ ಚಳುವಳಿ ನಡೆದಿರುವ ಬಗ್ಗೆ ತಿಳಿಯಲಾಗಿದೆ. ಈ ರೀತಿಯ ಸಾಮಾಜಿಕ ಪರಿಸರವು ಯಾವುದೇ ಒಂದು ಸ್ಥಳಕ್ಕೆ ಬೆಳವಣಿಗೆ ಆಗಲಿಕ್ಕೆ ಮುಖ್ಯವಾಗಿರುತ್ತದೆ. ಆದ್ದರಿಂದ ಯಾವುದೇ ಒಬ್ಬ ವ್ಯಕ್ತಿ ತಾನು ಬದುಕಿನಲ್ಲಿ ಬೆಳವಣಿಗೆಯನ್ನು ಮತ್ತು ಸಾಧನೆಯನ್ನು ಮಾಡಬೇಕಾದರೆ ತಾನು ಹುಟ್ಟಿದ ಊರಿನ ಪರಿಸರ ಕೆಲವು ಸಾರಿ ಮುಖ್ಯವಾಗಿರುತ್ತದೆ

ಎನ್ನುವುದು ಮಲೆನಾಡಿನ ಸಾಮಾಜಿಕ ಪರಿಸರವನ್ನು ನೋಡಿಯೇ ಹಿರಿಯರು ಹೇಳಿದ್ದಾರೆ ಎನ್ನಲಾಗುತ್ತದೆ. ಇಲ್ಲಿ ಮಾನವಶಾಸ್ತ್ರದ ಸಿದ್ಧಾಂತಗಳು ಸಮಾಜವನ್ನು ಪ್ರಕೃತಿಯ ಹಿನ್ನೆಲೆಯನ್ನು ಇಟ್ಟುಕೊಂಡು ನೋಡಿರುವ ಬಗೆಯನ್ನು ನೆನಪಿಸಿಕೊಂಡರೆ ಕಾಡಿನೊಳಗೆ ಇರುವ ಬುಡಕಟ್ಟು ಸಮುದಾಯಗಳ ಬದುಕು ಮತ್ತು ನಾಡಿನ ಜನರ ಬದುಕು ಒಂದು ರೀತಿಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕತೆಗೆ ಯಾವ ರೂಪದಲ್ಲಿ ಭಿನ್ನತೆಯನ್ನು ನೋಡುತ್ತೇವೋ ಅದೇ ರೀತಿಯಲ್ಲಿ ಮಾನವ ಶಾಸ್ತ್ರದ ಸಿದ್ಧಾಂತಗಳನ್ನು ನೋಡಿರುವುದರಿಂದ ಇಂದು ಬುಡಕಟ್ಟುಗಳ ಬದುಕು ಯಾವುದೇ ನಿರ್ಧಿಷ್ಠ ಆರ್ಥಿಕ ಮೂಲಗಳೂ ಇರದೆ ಕಾಡಿನಲ್ಲಿ ಇದ್ದರೂ ಭವಿಷ್ಯತ್ತಿನ ಆತಂಕದ ಬದುಕಿನಲ್ಲಿ ಜೀವಿಸುವ ಸಮುದಾಯಗಳಾಗಿವೆ.

ಭಾರತವು ಬಹುಸಂಸ್ಕೃತಿಯ ನೆಲೆಗಳ ಬೀಡು. ಆದ್ದರಿಂದ ವೈವಿಧ್ಯತೆಯನ್ನು ರೂಢಿಸಿಕೊಂಡು ಏಣಿ-ಶ್ರೇಣಿಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯಾಗಿದೆ. ಈ ಹಿನ್ನೆಲೆಯಲ್ಲಿ ಅನೇಕ ಜಾತಿಗಳು ಸಮುದಾಯಗಳು ಅದರಲ್ಲೂ ಆದಿವಾಸಿಗಳು ತಮ್ಮದೇ ಆದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬದುಕನ್ನು ಸಾಗಿಸುತ್ತಾ ಬಂದಿವೆ. ಆದರೆ ಆಧುನಿಕ ಪ್ರಪಂಚದ ಲೌಕಿಕ ಸೌಲತ್ತುಗಳಿಂದ ವಂಚಿಸಲ್ಪಟ್ಟಿದ್ದರೂ ಸಹ ನಮ್ಮ ಬುಡಕಟ್ಟುಗಳು ತಮ್ಮ ಜಾಣತನದಿಂದ ಕಲೆ ಹಾಗೂ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರುವಲ್ಲಿ ಯಶಸ್ವಿಯಾಗಿವೆ. ಇತಿಹಾಸವನ್ನು ತೆರೆದು ನೋಡಿದಾಗ ಪುರಾತನ ಕಾಲದಿಂದ ಅನೇಕ ಕಾನೂನುಗಳು ರೂಪಿತವಾಗಿರುವುದು ಧರ್ಮಶಾಸ್ತ್ರಗಳ ಮುಖಾಂತರವೇ ಎಂಬುದನ್ನು ಮರೆಯುವಂತಿಲ್ಲ. ಈ ರೀತಿಯಾಗಿ ರೂಪಿತವಾದ ಕಾನೂನುಗಳು ತಮ್ಮ ಜಮೀನ್ದಾರಿಕೆಯಲ್ಲಿ ದುಡಿಸಿಕೊಂಡು ಬಂದಿರುವುದನ್ನು ಅವಲೋಕಿಸಲಾಗುವುದು. ಅಂದರೆ ಯಾರು ಓದಬೇಕು. ಯಾರು ಹೋರಾಡಬೇಕು? ಯಾರು ವ್ಯಾಪಾರವನ್ನು ಮಾಡಬೇಕು? ಎಂದು ಇತಿಹಾಸದ ಪೂರ್ವನಿರ್ಧರಿತ ನಿಯಮಗಳು ಸಮಾಜದಲ್ಲಿ ತಾಂಡವವಾಡುತ್ತಿವೆ ಎಂಬ ವಿಷಯವು ಶಿವಮೊಗ್ಗ ಜಿಲ್ಲೆಯ ಇಕ್ಕೇರಿ, ಕೆಳದಿ ಸಾಮ್ರಾಜ್ಯದಲ್ಲಿ ಇದ್ದ ಎಡಮುರಿ ಹಾಗೂ ಬಲಮುರಿಗಳ ಚರಿತ್ರೆಯನ್ನು ತಿರುವಿ ಹಾಕಿದಾಗ ತಿಳಿಯುತ್ತದೆ. ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾದ ಅನೇಕ ರೂಪಾಂತರಗಳು ದೇಶದ ಬುಡಕಟ್ಟುಗಳಿಗೆ ಯಾವತ್ತೂ ಪೂರಕವಾಗಿರದೇ ವಿರೋಧಾತ್ಮಕವಾಗಿರುವುದನ್ನು ಇಂದು ೨೧ ನೇ ಶತಮಾನದ ಕಾಲದವರೆಗೂ ನೋಡಬಹುದಾಗಿದೆ. ಕರ್ನಾಟಕದ ಸಾಮ್ರಾಜ್ಯಶಾಹಿಗಳು ಬುಡಕಟ್ಟುಗಳನ್ನು ನೋಡಿಕೊಂಡು ಬಂದ ರೀತಿ ಭಾರತದ ಭೂಮಿಯ ಒಡೆತನ, ಬಂಡವಾಳ ಶಾಹಿಗಳ ಆಳ್ವಿಕೆಗೆ ಒಳಪಟ್ಟ ಮೇಲೆ ಶ್ರಮಿಕರಾಗಿದ್ದ ಬುಡಕಟ್ಟುಗಳ ಬದುಕು ಎರಡು ಕಣ್ಣುಗಳನ್ನು

ಕಳೆದುಕೊಂಡ ಕುರುಡನಂತೆ ಆಗಿದೆ. ಭಾರತದ ವಸಾಹತುಶಾಹಿ ವ್ಯವಸ್ಥೆ ಹಾಗೂ ಪಾಶ್ಚಿಮಾತ್ಯ ಪ್ರಭಾವದಿಂದ ಇಲ್ಲಿದ್ದ ಗೃಹ ಕೈಗಾರಿಕೆಗಳು ನಾಶ ಹೊಂದಿವೆ. ಈ ದೃಷ್ಟಿಯಿಂದ ಅಲಕ್ಷಿತ ಸಮುದಾಯಗಳ ಅಧ್ಯಯನವು ಯಾವುದೇ ಕಾಲಘಟ್ಟದಲ್ಲಿ ಮುಖ್ಯವಾಗಿರುತ್ತದೆ. ಈ ಅಧ್ಯಯನಗಳು ಚಾರಿತ್ರಿಕ ಆಸ್ಫೋಟದ ಕ್ಷಣವೊಂದನ್ನು ಆಯ್ದುಕೊಂಡು, ಸಂದರ್ಭಕ್ಕೆ ಅನುಗುಣವಾಗಿ ಬುಡಕಟ್ಟುಗಳು ಹೇಗೆ ತಮ್ಮ ಚರಿತ್ರೆಯನ್ನು ತಾವೇ ನಿರ್ಮಿಸುವ ಜೀವಂತಿಕೆಯನ್ನು ಉಳಿಸಿಕೊಂಡು ಅವರದೇ ಆದ ಚರಿತ್ರೆಗಳು ಇಂದು ಇರುವುದು ಕಂಡುಬರುತ್ತದೆ. ಭಾರತೀಯ ಸಮಾಜದ ಬದುಕಿನಲ್ಲಿ ಸ್ಥಾಪಿತವಾದ ವ್ಯವಸ್ಥೆಯು ಹೊಸದಾಗಿ ಸೃಷ್ಟಿಯಾಗುತ್ತಿರುವ ವ್ಯವಸ್ಥೆಯೊಂದಿಗೆ ಘರ್ಜಿಸುವ ಕ್ಷಣಗಳು ಇದ್ದೇ ಇವೆ.

ಭಾರತದ ಸಮಾಜದಲ್ಲಿ ಹಿಂದಿನಿಂದಲೂ ಇರುವ ಜಾತಿ ಮತದ ಭೇದಗಳು ಅನ್ಯ ಸಮುದಾಯವನ್ನು ಕೀಳಾಗಿ, ಅನುಮಾನದಿಂದ, ತಿರಸ್ಕಾರದಿಂದ ನೋಡುವಂತಹ ನಿಲುವನ್ನು ಬೆಳೆಸಿವೆ. ಈ ರೀತಿಯ ಸಾಮಾಜಿಕ, ಧಾರ್ಮಿಕ ತಾರತಮ್ಯಗಳು ಅಥವಾ ಬಹುಸಂಸ್ಕೃತಿಗಳ ವೈವಿಧ್ಯವು ಒಬ್ಬರ ಲೋಕ ಮತ್ತೊಬ್ಬರಿಗೆ ತಿಳಿಯದೇ ಬದುಕುವಂತಹ ಅಪಾರದರ್ಶಕ ಗೋಡೆಯನ್ನು ಕಟ್ಟಿವೆ.

ಸಾಗರವು ಅನೇಕ ಬುಡಕಟ್ಟುಗಳ ತಾಣವಾಗಿದೆ. ಈ ತಾಲೂಕಿನ ಕುಗ್ವೆಯಲ್ಲಿ ಜನಿಸಿದ ಹುಚ್ಚಪ್ಪ ಮಾಸ್ತರರು ಗಿರಿಜನ ಶಾಲೆಯ ಶಿಕ್ಷಕರಾದರೂ ಸಾಮಾನ್ಯರಂತೆ ಶಿಕ್ಷಕರಾಗಿರದೇ ಬುಡಕಟ್ಟು ಸಮುದಾಯಗಳಿಗೆ ವರದಾನವಾಗಿದ್ದಾರೆ. ಶಿಸ್ತು, ಶ್ರದ್ಧೆ, ಸಮಾಜಪರ ಕಾಳಜಿಯನ್ನು ಮೈಗೂಡಿಸಿಕೊಂಡು ಗಿರಿಜನರ ಪರವಾಗಿ ಸರ್ಕಾರದ ಯೋಜನೆಗಳನ್ನು ಬುಡಕಟ್ಟುಗಳು ಇರುವ ಹಾಡಿಗೆ ತಲುಪಿಸುವ ಕಾರ್ಯವನ್ನು ಮಾಡಿದ್ದರ ಹೋರಾಟ ಇಲ್ಲಿ ನೆನಪಿಗೆ ಬರುತ್ತದೆ. ಎನ್.ಹುಚ್ಚಪ್ಪ ಮಾಸ್ತರರು ಸಾಗರ ತಾಲೂಕಿನ ಹಿರೇಮನೆಯಲ್ಲಿ ಹಸಲರ ಮತ್ತು ಇತರ ಬುಡಕಟ್ಟುಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಗೆ ಮಾಡಿದ ಕೆಲಸ ಅವಿಸ್ಮರಣೀಯವಾದುದಾಗಿದೆ.

ಬುಡಕಟ್ಟು ಜನರಿಗೆ ಅವರದ್ದೇ ಆದ ಒಂದು ಬದುಕು ಇರುತ್ತದೆ. ಆ ಬದುಕಿನ ಅಂತರಾಳದ ಅರಿವನ್ನು ಅರಿತವರಾಗಿ ಮಾಸ್ತರರು ನಮಗೆ ಕಾಣುತ್ತಾರೆ. ಮಾಸ್ತರರು ತಮ್ಮ ಬಾಲ್ಯದ ಜೀವನದಿಂದ ಗಿರಿಜನ ಶಾಲೆಯ ಶಿಕ್ಷಕರಾಗುವವರೆಗೆ ವಿವಿಧ ರಂಗಗಳಲ್ಲಿ ತಾವು ತೊಡಗಿಸಿಕೊಂಡು ಸಾಹಿತ್ಯ, ಬರಹ, ಸಮಾಜಸೇವೆಯನ್ನು ಪ್ರಾಮಾಣಿಕವಾಗಿ ಆಡಿದ್ದಾರೆ. ಸದಾ ಒಳ್ಳೆಯದಕ್ಕಾಗಿ ತುಡಿಯುತ್ತಿದ್ದ ಅವರು ಅವ್ಯವಸ್ಥಿತವಾದ ಬದುಕಿನಲ್ಲಿ ಜೀವನ ನಡೆಸುತ್ತಿದ್ದ

ಹಸಲರ ಹಾಡಿಗೆ ಹೋಗಿ ಅಲ್ಲಿ ಸಾಮಾಜಿಕ ಕ್ರಾಂತಿಯನ್ನು ಮಾಡಿದ್ದಾರೆ. ಡಾ॥ ಬಾಬಾಸಾಹೇಬರು ಹೇಳಿದ ಶಿಕ್ಷಣ, ಸಂಘಟನೆ, ಹೋರಾಟದ ಫಲವಾಗಿ ಅನೇಕ ಬುಡಕಟ್ಟು ಸಮುದಾಯಗಳು ಬದುಕಿನ ದಾರಿಯನ್ನು ಕಂಡುಕೊಂಡರೂ ಸಹ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಿರವಾಗಿ ನಿಲ್ಲದೇ ಇಂದಿಗೂ ಸಹ ಒಂದು ಕಡೆಯಿಂದ ಇನ್ನೊಂದು ಕಡೆ ವಲಸೆ ಹೋಗುತ್ತಿರುವುದನ್ನು ಕಾಣುತ್ತೇವೆ.

ಬ್ರಿಟೀಷರು ಭಾರತಕ್ಕೆ ಬಂದ ಮೇಲೆ ಭಾರತ ಬ್ರಿಟೀಷರಿಗೆ ಹಾಲು ಕೊಡುವ ಹಸುವಿನಂತಾಯಿತು ಎಂದು ಇತಿಹಾಸಕಾರರು ಹೇಳಿದ ಮಾತುಗಳನ್ನು ಮರೆಯುವಂತಿಲ್ಲ. ಏಕೆಂದರೆ ಇಲ್ಲಿಯ ನೈಸರ್ಗಿಕ ಸಂಪತ್ತನ್ನು ದೋಚಿದುದು ಒಂದು ಕಡೆಯಾದರೆ ಇನ್ನೊಂದು ಕಡೆ ಭಾರತದ ಪಶ್ಚಿಮಘಟ್ಟಗಳಲ್ಲಿ ವಾಸವಾಗಿದ್ದ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸಿದರು. ಇದರ ಪರಿಣಾಮವಾಗಿ ಬುಡಕಟ್ಟುಗಳು ಬದುಕಿನ ದಾರಿಯನ್ನು ಹುಡುಕುತ್ತಾ ಪರ್ಯಾಯ ವ್ಯವಸ್ಥೆಯನ್ನು ನಿರ್ಮಿಸಿಕೊಂಡು ಬದುಕುತ್ತಿರುವುದನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟುಗಳ ಸಾಂಸ್ಕೃತಿಕ ಬದುಕು ಸಹ ಸ್ಥಿತ್ಯಂತರಕ್ಕೆ ಒಳಗಾಗಿದೆ.

ಭಾರತದ ಸಾಮ್ರಾಜ್ಯಶಾಹಿ ಮತ್ತು ಬ್ರಿಟೀಷರ ಆಧುನಿಕ ಅಸ್ತ್ರಗಳು ಶ್ರಮಿಕ ವರ್ಗಗಳ ಪ್ರತಿಭಟನೆಗಳನ್ನು ಹೀನಾಯವಾಗಿ ಹತ್ತಿಕ್ಕಿರುವುದನ್ನು ಕಾಣಬಹುದು ಈ ಹಿನ್ನೆಲೆಯಲ್ಲಿ ಬುಡಕಟ್ಟುಗಳು ತಮ್ಮ ನೆಲೆಯನ್ನು ಬಿಟ್ಟು ಸುರಕ್ಷಿತವಾದ ತಾಣಗಳಿಗೆ ವಲಸೆ ಹೋಗುತ್ತಿದ್ದಾರೆ. ಇದರಿಂದ ಭಾರತದ ಬುಡಕಟ್ಟುಗಳಷ್ಟೇ ಅಲ್ಲದೆ ಪ್ರಪಂಚದ ಯಾವುದೇ ಬುಡಕಟ್ಟುಗಳು ಬಂಡವಾಳಶಾಹಿಯ ವ್ಯವಸ್ಥೆಗೆ ತತ್ತರಿಸುವಂತಾಗಿರುವುದಲ್ಲದೇ ಅತಂತ್ರ ಬದುಕಿನಲ್ಲಿ ಭವಿಷ್ಯದ ಬಗೆಗಿನ ಭರವಸೆಯನ್ನೇ ಕಳೆದುಕೊಂಡಂತಾಗಿರುವುದು ತಿಳುದುಬರುತ್ತದೆ.

ಮಾಸ್ತರರು ಇಲ್ಲಿ ಶಿಕ್ಷಕ ವೃತ್ತಿಯನ್ನು ನಿಷ್ಪಕ್ಷಪಾತವಾಗಿ ಮಾಡಿರುವುದಲ್ಲದೇ ಸಮಾಜದ ಅದರಲ್ಲೂ ಬುಡಕಟ್ಟುಗಳ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಮೊದಲು ಆರ್ಥಿಕ ಸಂಪನ್ಮೂಲಗಳನ್ನು ಸರ್ಕಾರದಿಂದ ಸಮುದಾಯಗಳಿಗೆ ದೊರಕಿಸುವಂತಹ ಕಾರ್ಯವನ್ನು ಮಾಡಿರುವುದು ತಿಳಿಯುತ್ತದೆ. ಇವರು ಒಳ್ಳೆಯ ಬರಹಗಾರರಾಗಿ ಓದುಗಾರರಾಗಿದ್ದರಿಂದ ಅವರ ಅಭಿವೃದ್ಧಿಗೆ ತೊಡಕಾಗಿರುವ ಯಾವ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ? ನಾವುಗಳು ಹೇಗೆ ನಾಗರೀಕ ಸಮಾಜದಿಂದ ಶೋಷಣೆಗೆ ಒಳಗಾಗುತ್ತಿದ್ದೇವೆ? ನಮ್ಮ ಅಭಿವೃದ್ಧಿಗಾಗಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ? ಆ ಕಾರ್ಯಕ್ರಮಗಳ ಯೋಜನೆಯನ್ನು ಹೇಗೆ ಪಡೆಯಬೇಕು? ನಾವು ಸಾಮಾಜಿಕವಾಗಿ, ಆರ್ಥಿಕವಾಗಿ ಹೇಗೆ ಅಭಿವೃದ್ಧಿ ಆಗಬೇಕು?

ಎಂಬುದರ ಆಲೋಚನೆಯ ಶಕ್ತಿ ಇಲ್ಲದವರಿಗೆ ಎಲ್ಲವನ್ನು ತಿಳಿಸಿಕೊಟ್ಟ ಮನಸ್ಸು ಮಾಸ್ತರರದ್ದಾಗಿದೆ. ಆದ್ದರಿಂದ ಪ್ರತಿಯೊಬ್ಬ ಸಂಶೋಧಕರು ಇದರಿಂದ ತಿಳಿಯಬೇಕಾಗಿರುವುದೇನೆಂದರೆ ಈ ಸಮಾಜದಲ್ಲಿ ಪ್ರಭುತ್ವದ ಹಿನ್ನೆಲೆಯ ಬದುಕನ್ನು ಮಾಡುವವನು ಮೊದಲು ನೊಂದವರ, ಶೋಷಣೆಗೆ ಒಳಗಾದವರ, ತುಳಿತಕ್ಕೆ ಒಳಗಾದವರ ಬಗ್ಗೆ ಆಲೋಚಿಸುವಂತಹ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂಬುದು.

ಬುಡಕಟ್ಟುಗಳು ಕಾಡಿನಲ್ಲಿ ಚಿಕ್ಕ ಚಿಕ್ಕ ಗುಂಪುಗಳಾಗಿ ಪರ್ವತ ಪ್ರದೇಶಗಳಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರುವುದರಿಂದ ಹಾಗೂ ಆಧುನಿಕ ಸರ್ಕಾರದ ಸೌಲಭ್ಯಗಳ ಕೊರತೆಯನ್ನು ಅನುಭವಿಸಿದರೂ ಈ ದೇಶದ ಮಾನವನ ಹಕ್ಕುಗಳನ್ನು ಅನುಭವಿಸದ ವಾತಾವರಣದಲ್ಲಿ ಇದ್ದು ಕಾಡಿನ ಅರಣ್ಯ ಅಧಿಕಾರಿಗಳಿಂದ ವಿವಿಧ ಬಗೆಯ ಅನಾನುಕೂಲತೆಯನ್ನು ಅನುಭವಿಸಿ ಯಾರ ಹತ್ತಿರವೂ ಹೇಳಲಾಗದೇ ಎಲ್ಲಾ ಕಷ್ಟಗಳನ್ನು ಮನಸ್ಸಿನಲ್ಲಿ ಬಚ್ಚಿಟ್ಟುಕೊಂಡು ಪ್ರಕೃತಿಯಂತೆ ಮೌನವಾಗಿರುವ ಮುಗ್ಧರಿಗೆ ಶಿಕ್ಷಣದ ಅಗತ್ಯವಾದರೂ ಹೇಗೆ ತಿಳಿಯಬೇಕು. ಕಾಡೇ ಶ್ರೀಮಂತಿಕೆ, ಕಾಡಿನಲ್ಲಿರುವ ಭೂಮಾಲಿಕರೇ ನಮ್ಮ ಸರ್ಕಾರವೆಂದು ನಂಬಿಕೆಯನ್ನಿಟ್ಟುಕೊಂಡು ಅವರು ಹೇಳಿದಂತೆ ಕೇಳಿಕೊಂಡು ಜೀವನ ಸಾಗಿಸುವ ಬುಡಕಟ್ಟುಗಳ ಹಾಡಿಗೆ ಶಿಕ್ಷಕರಾಗಿ ಹುಚ್ಚಪ್ಪ ಮಾಸ್ತರರು ಹೋದ ಮೇಲೆ ಗಮನಾರ್ಹವಾದ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯ ಕಾರ್ಯಗಳನ್ನು ಮಾಡಿದ್ದಾರೆ. ಆದ್ದರಿಂದ ಯಾವುದೇ ಶಿಕ್ಷಕನಿಗೆ ವೃತ್ತಿಗೆ ಹೊಂದಾಣಿಕೆಯಾಗಿ ಸಮಾಜದ ಅಭಿವೃದ್ಧಿಗೆ ಪೂರಕವಾಗುವ ಮನಸ್ಸನ್ನು ಮೂಡಿಸಿಕೊಳ್ಳಬೇಕಾಗಿರುವುದು ಇಂದು ಅವಶ್ಯವಾಗಿದೆ.

ಗಿರಿಜನ ಆಶ್ರಮ ಶಾಲೆಗಳ ಅವಶ್ಯಕತೆ ಪಶ್ಚಿಮ ಘಟ್ಟಗಳಲ್ಲಿ ಹಿಂದೆ ಮತ್ತು ಮುಂದೆಯೂ ಕೂಡ ಅವಶ್ಯವಾಗಿರುವುದು ಕಂಡುಬರುತ್ತದೆ. ಏಕೆಂದರೆ ಕಾಡಿನಲ್ಲಿರುವ ಬುಡಕಟ್ಟುಗಳು ಹರೆಹೊಟ್ಟೆ, ಹರೆಬಟ್ಟೆಯಿಂದ ಇರುವಾಗ ಮಕ್ಕಳಿಗಾಗಿ ಶಿಕ್ಷಣ ಕೊಡಿಸುವುದು ದುಸ್ತರವಾಗಿತ್ತು. ಅಂದರೆ ಕಾಡಿನಿಂದ ನಾಡಿಗೆ ಬರಬೇಕಾದರೆ ಹರಸಾಹಸ ಮಾಡಬೇಕಾಗುತ್ತದೆ. ನಿಲ್ಲಲಿಕ್ಕೆ ಸರಿಯಾದ ನೆಲೆಯಿಲ್ಲದೇ, ನೆಲೆ ಇದ್ದರೂ ನೆಲೆಯ ಹಕ್ಕುಪತ್ರ ದೊರೆಯದೇ ಬದುಕುವ ಬದುಕು ಬದುಕೇ ಅಲ್ಲ ಎಂಬ ಮಾತು ಅವರ ಬಾಯಿಂದ ಹೊರಬರುವ ಮನಸ್ಸಿನ ಅಂತರಾಳದಲ್ಲಿರುವ ದುಃಖವನ್ನು ತೋರಿಸುವಂತಹದ್ದಾಗಿದೆ. ಸರ್ಕಾರಗಳು ಜಾರಿಗೆ ತರುವ ಕಾನೂನುಗಳು ಹಾಗೂ ಯೋಜನೆಗಳು ಬುಡಕಟ್ಟುಗಳನ್ನು ತಲುಪದೇ ಇರುವುದನ್ನು ಕುರಿತು ವಿಮರ್ಶಿಸಿ, ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಾಗಿದೆ. ಪಶ್ಚಿಮ ಘಟ್ಟದ ಬುಡಕಟ್ಟುಗಳು ವಾಸಿಸುವ

ತಾಣಗಳು ಬದುಕುವ ನೆಲೆಯಾಗಿರದೇ ಕಾಡಿನಿಂದ ಕೂಡಿದ ಇಳಿಜಾರಿನ ಪ್ರದೇಶವಾಗಿದೆ. ನನ್ನ ಕ್ಷೇತ್ರಕಾರ್ಯದ ಸ್ಥಳವಾದ ಸಾಗರ ತಾಲೂಕಿನ ಸುತ್ತಮುತ್ತ ಇರುವ ಸಿದ್ದಿಯರು, ಗೊಂಡರು, ಹಸಲರು, ಕುಡುಬಿಯರು ಹಾಗೂ ಅರೆಅಲೆಮಾರಿ ಮತ್ತು ಅಲೆಮಾರಿಗಳಾದ ಹಕ್ಕಿಪಿಕ್ಕಿಯರು, ಹೆಳವರು ವಿವಿಧ ರೀತಿಯ ಸಮಸ್ಯೆಗಳಿಂದ ಬದುಕುವವರಾಗಿದ್ದು ಇವರ ಆಪದ್ಬಾಂಧವರಂತೆ ಮಾಸ್ತರರು ಇವರ ಗಿರಿಜನ ಶಾಲೆಗಳಿಗೆ ಪ್ರವೇಶ ಮಾಡಿರುವುದು ಸಮಸ್ಯೆಗಳ ಪರಿಹಾರೋಪಾಯ ಮತ್ತು ಸೌಲಭ್ಯಗಳನ್ನು ತಲುಪಿಸುವ ಸೇತುವೆಯಂತೆ ಆಗಿರುವುದು ನಮಗೆ ಗೋಚರಿಸುತ್ತದೆ.

ಮಾಸ್ತರರ ಮುಖಾಮುಖಿ ಸಂದರ್ಶನದಿಂದ ತಿಳುವಳಿಕೆಗೆ ಬಂದ ವಿಷಯಗಳೇನೆಂದರೆ ಏಣಿ–ಶ್ರೇಣಿ ವ್ಯವಸ್ಥೆ, ಬುಡಕಟ್ಟುಗಳ ಸಾಂಪ್ರದಾಯಿಕ ಬಿಕ್ಕಟ್ಟುಗಳು, ಭೂಮಾಲಿಕರ ದಬ್ಬಾಳಿಕೆ, ಪುರೋಹಿತಶಾಹಿಯು ಸೃಷ್ಠಿಮಾಡುವ ಜಾತಿ ಭೇದದಿಂದ ಕೂಡಿದ ಅಸಮಾನತೆಯನ್ನು ಎತ್ತಿಹಿಡಿಯುವ ಸಂಪ್ರದಾಯಗಳೆಲ್ಲವೂ ಮಾಸ್ತರರಿಗೆ ಕಾರ್ಯಚಟುವಟಿಕೆಯಲ್ಲಿ ಕ್ರಿಯಾಶೀಲರಾಗಲು ಮುಖ್ಯ ಪರಿಕರಗಳಾಗಿವೆ. ಈ ಎಲ್ಲಾ ಅಂಶಗಳು ಮಸ್ತರರ ವೈಜ್ಞಾನಿಕ ಮನೋಭಾವನೆಗೆ ಪ್ರೇರಕ ಶಕ್ತಿಯಾಗಿ ಶಿಕ್ಷಕರಾಗಿದ್ದಾಗ್ಯೂ ಮಕ್ಕಳ ಜೊತೆಯಲ್ಲಿ ಮಕ್ಕಳಂತೆಯೇ ವರ್ತಿಸಿ ಕೋಲಾಟದ ಪದ, ಲಾವಣಿ, ಕ್ರಾಂತಿ ಗೀತೆಗಳು, ಸೋಬಾನೆ ಪದ, ಸುಗ್ಗಿ ಕುಣಿತ, ಡೊಳ್ಳು ಕುಣಿತಗಳೆಲ್ಲವೂ ಮಾಸ್ತರರ ತುಂಬಿದ ಸಿರಿಕಂಠದಿಂದ ಸಮಾಜದ ಮುಖ್ಯವಾಹಿನಿಗೆ ತಲುಪಿರುವುದು ಕಂಡುಬರುತ್ತದೆ.

ಮಾಸ್ತರರು ಮಲೆನಾಡಿನ ಸುವ್ಯವಸ್ಥಿತ ಪರಿಸರಕ್ಕೆ ಅವ್ಯವಸ್ಥೆಯಿಂದ ಕೂಡಿದ ಬುಡಕಟ್ಟುಗಳ ಪರಿಸರವನ್ನು ಚೆನ್ನಾಗಿ ಅರ್ಥೈಸಿಕೊಂಡು ಬಡತನದ ಬವಣೆಯಲ್ಲಿರುವ ಬುಡಕಟ್ಟುಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದರ ಬದಲು ಭೂಮಾಲಿಕರ ಗದ್ದೆ ತೋಟಗಳಲ್ಲಿ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗುವ ಪರಿಪಾಠವನ್ನು ತಪ್ಪಿಸಿ ಶಿಕ್ಷಣದ ವೈಜ್ಞಾನಿಕ ಮನೋಭಾವನೆಯನ್ನು ಮತ್ತು ಸಾಮಾಜಿಕ ಜಾಗೃತಿಯನ್ನು ಮೂಡಿಸಿದ್ದಾರೆ.

ಯಾವುದೇ ಒಂದು ಸಮುದಾಯದ ಮಗು ವಿದ್ಯಾವಂತನಾಗಲು ವಿದ್ಯಾದಾನ ಮಾಡಿದ ಶಿಕ್ಷಕನ ಪಾತ್ರ ಮುಖ್ಯವಾದದು. ಶಿಕ್ಷಣದ ಯಶಸ್ಸು ಕೂಡಾ ಶಿಕ್ಷಕರ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಬುಡಕಟ್ಟಿನ ಮಕ್ಕಳ ತಂದೆ ತಾಯಿಗಳಿಗೆ ಶಿಕ್ಷಣದ ಮಹತ್ವ ತಿಳಿದಿಲ್ಲವಾದ್ದರಿಂದ ಅವರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ರೂಪಿಸಲು ಪ್ರೋತ್ಸಹಿಸುವುದಿಲ್ಲವಾದ್ದರಿಂದ ಮಾಸ್ತರರು ತಮ್ಮ ಬಿಡುವಿನ ಸಮಯವನ್ನು ಬುಡಕಟ್ಟುಗಳ

ಮನೆಯಲ್ಲಿ ಮತ್ತು ಶಾಲೆಯಲ್ಲಿಯೇ ಕಳೆದಿರುವ ಪರಿಯನ್ನು ನೆನಪಿಸಬಹುದು. ಬುಡಕಟ್ಟುಗಳ ಮನೆಯಲ್ಲಿಯೂ ಶಿಕ್ಷಣದ ವಾತಾವರಣವಿರದೇ ಇರುವುದರಿಂದ ಶಾಲೆಗೆ ಮಕ್ಕಳನ್ನು ತಾವೇ ಕರೆದುಕೊಂಡು ಬಂದು ಪಾಠ ಹೇಳಿದವರು ಮಾಸ್ತರರಾಗಿದ್ದಾರೆ.

ಇಂದು ಭಾರತದ ರಾಜಕಾರಣವು ಬುಡಕಟ್ಟುಗಳ ಅಭಿವೃದ್ಧಿಯ ಬಗ್ಗೆ ಕೈಕಟ್ಟಿ ಕುಳಿತುಕೋಂಡಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಅನೇಕ ಬುಡಕಟ್ಟುಗಳು ಸಾಮಾಜಿಕ ಸ್ಥರವಿನ್ಯಾಸದ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿಕೊಂಡಿವೆ. ಇಂಥ ವ್ಯವಸ್ಥೆಯಲ್ಲಿ ತಮ್ಮ ಬದ್ಧತೆ ಮತ್ತು ಸಹಜ ಪ್ರೀತಿಯಿಂದ ಬುಡಕಟ್ಟುಗಳನ್ನು ಅಪ್ಪಿಕೊಂಡ ಮಾಸ್ತರರ ಜೀವನ ವಿಧಾನ ಇಂದಿನ ಅನೇಕರಿಗೆ ಮಾರ್ಗದರ್ಶಕವಾಗಿದೆ.

ಮಾಸ್ತರರ ಹುಟ್ಟೂರು ಕುಗ್ವೆಯಾದರೂ ಕಲಿತದ್ದು ಮತ್ತು ಕಲಿಸಿದ್ದು ನೂರಾರು ಊರುಗಳಲ್ಲಿ. ಈ ಹಿನ್ನೆಲೆಯಿಂದ ಶಿವಮೊಗ್ಗ ಜಿಲ್ಲೆಯ ಎನ್.ಹುಚ್ಚಪ್ಪ ಮಾಸ್ತರರೆಂದರೆ ಬುಡಕಟ್ಟು ಮಾಸ್ತರರು ಎಂಬ ರೂಢಿನಾಮ ಪ್ರಸ್ತುತ ಪ್ರಚಲಿತವಿದೆ. ಬುಡಕಟ್ಟುಗಳ ಯಾವುದೇ ವಿಚಾರ ಸಂಕೀರ್ಣಗಳು, ಕಮ್ಮಟಗಳು, ಶಿಬಿರಗಳು, ಸಂವಾದಗಳು, ಬುಡಕಟ್ಟು ಕಲಾಮೇಳಗಳು, ಹಸೆ ಚಿತ್ತಾರ, ರಂಗಕಲಾ ಪ್ರದರ್ಶನ ಇವುಗಳಲ್ಲಿ ಮಾಸ್ತರರ ಪಾತ್ರ ಇದ್ದೇ ಇದೆ. ಇವರು ಜಿಲ್ಲೆಗೆ ಮಾತ್ರ ಸೀಮಿತವಾಗಿರದೆ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾಗಿ ಬುಡಕಟ್ಟುಗಳ ಕಲಾಮೇಳಗಳನ್ನು ಆಯೋಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವುದು ಕಂಡುಬರುತ್ತದೆ. ಇವರ ಸಂಪರ್ಕ ರಾಜ್ಯದ ವ್ಯಾಪ್ತಿಯಲ್ಲಲ್ಲದೇ ಹೊರರಾಜ್ಯಗಳಲ್ಲಿಯೂ ಸಹ ಬುಡಕಟ್ಟುಗಳ ಕಲಾತಂಡವನ್ನು ಕರೆದುಕೊಂಡು ಹೋಗಿ ಕಲಾಪ್ರದರ್ಶನವನ್ನು ನೀಡಿ ಪ್ರಶಸ್ತಿಗಳನ್ನು ಬುಡಕಟ್ಟು ಜನರಿಗೆ ತಲುಪಿಸುವುದರ ಮೂಲಕ ಆಧುನಿತೆಯ ಸಮಾಜದ ಕಡೆ ಸಮುದಾಯಗಳನ್ನು ಮುಖಾಮುಖಿ ಮಾಡಿಸಿ ಬುಡಕಟ್ಟುಗಳ ಸಾಂಸ್ಕೃತಿಕತೆಯನ್ನು ಹಾಗೂ ಅವರ ಅನನ್ಯತೆಯನ್ನು ಎತ್ತಿ ಹಿಡಿಯುವಲ್ಲಿ ಇವರ ಪಾತ್ರ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಎಷ್ಟರ ಮಟ್ಟಿಗೆ ವೈಶಾಲ್ಯತೆ ಹಾಗೂ ವಿಶಾಲತೆಯನ್ನು ತನ್ನದಾಗಿಸಿಕೊಂಡಿದೆ ಎಂಬುದು ಇಲ್ಲಿ ಗಮನಾರ್ಹವಾಗಿದೆ.

ದೇಶದ ಅಭಿವೃದ್ಧಿಯ ದೃಷ್ಠಿಯಿಂದ ಯಾವುದೇ ಮನುಷ್ಯ ಶಿಕ್ಷಣ ಕಲಿಯಬೇಕು. ಎಂಬುದನ್ನು ಅರಿತ ಮಾಸ್ತರರು ಗಿರಿಜನ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಿದ್ದರಿಂದ ಬುಡಕಟ್ಟು ಸಮುದಾಯಗಳಾದ ಹಸಲರು, ಹಕ್ಕಿಪಿಕ್ಕಿಯರು, ಹೆಳವರುಗಳಲ್ಲಿ ಅಕ್ಷರಸ್ಥರ ಪ್ರಮಾಣ ಏರಿಕೆಯಾಗಿ ಇಂದು ಹಸಲರ ಮಕ್ಕಳೇ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವುದು ಇವರು ಶಿಕ್ಷಕ

ವೃತ್ತಿಗೆ ತೋರಿಸಿದ ಗೌರವ ಯಾವ ರೂಪದ್ದೆಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪರಿಸ್ಥಿತಿಯನ್ನು ನಿವಾರಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದಾಗ ಮಾತ್ರ ಅವರ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಇವರು ಯೋಜನಾಬದ್ಧವಾದ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಆದ್ದರಿಂದ ಈ ಅಧ್ಯಯನದ ವಿಷಯ ವಸ್ತುವಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಎನ್.ಹುಚ್ಚಪ್ಪ ಮಾಸ್ತರರ ಪಾತ್ರ ಕುರಿತುದಾಗಿರುವುದರಿಂದ ಬುಡಕಟ್ಟುಗಳ ಮತ್ತು ಮಾಸ್ತರರ ಕುರಿತು ಬರೆಯುತ್ತ ಚರ್ಚೆಯನ್ನು ಪ್ರಾರಂಭಿಸಲಾಗಿದೆ. ಅಲ್ಲದೆ ಪ್ರಸ್ತುತ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತು ಚರ್ಚಿಸಿ ಇಲ್ಲಿ ಅಧ್ಯಯನಕ್ಕೆ ಹುಚ್ಚಪ್ಪ ಮಾಸ್ತರರನ್ನು ಏಕೆ ಆಯ್ಕೆ ಮಾಡಿಕೊಳ್ಳಲಾಯಿತು ಎಂಬುದನ್ನು ವಿವರವಾಗಿ ತಿಳಿಸಲಾಗಿದೆ. ಮುಂದೆ ಅಧ್ಯಾಯ ೨ ರಲ್ಲಿ ಸಾಗರ ತಾಲೂಕಿನ ಭೌಗೋಳಿಕ ಪರಿಚಯ ಮತ್ತು ಸಾಗರ ತಾಲೂಕಿನ ಸಾಮಾಜಿಕ ಸ್ಥಿತಿಗತಿಯನ್ನು ಕುರಿತು ಚರಿತ್ರೆಯ ಮೂಲಕ ಸಾಗರವನ್ನು ಪರಿಚಯಿಸಲಾಗಿದೆ. ಇಲ್ಲಿ ಇಕ್ಕೇರಿ, ಕೆಳದಿ, ಜೋಗ ಜಲಪಾತಗಳ ಚಿತ್ರಣವನ್ನು ಕೊಟ್ಟು ಸಾಗರದ ಭೂಮಾಲಿಕರ ಮಧ್ಯೆ ಬುಡಕಟ್ಟು ಸಮುದಾಯಗಳು ಯಾವ ರೀತಿಯಲ್ಲಿ ತಮ್ಮ ವಂಶ ಪರಂಪರೆಯ ಜೀವನವನ್ನು ಮಾಡುತ್ತಿದ್ದರು ಹಾಗೂ ಬುಡಕಟ್ಟು ಮತ್ತು ಇತರ ಸಮುದಾಯಗಳು ಬೆಳೆದುಬಂದ ಬಗೆಯು ಯಾವ ರೂಪದ್ದು ಎಂದು ಚರ್ಚಿಸಲಾಗಿದೆ. ಅಧ್ಯಾಯ ೩ ರಲ್ಲಿ ಮಾಸ್ತರರ ಬದುಕು ಮತ್ತು ವ್ಯಕ್ತಿತ್ವದ ಒಂದೊಂದು ಎಳೆಯನ್ನು ಈ ಅಧ್ಯಾಯದಲ್ಲಿ ಬಿಡಿಸಲಾಗಿದೆ. ಅಧ್ಯಾಯ ೪ ರಲ್ಲಿ ಸಾಗರ ತಾಲೂಕಿನಲ್ಲಿರುವ ಹಸಲರ ಮತ್ತು ಹಿರೇಮನೆಯಲ್ಲಿರುವ ಹಸಲರ ಬದುಕಿನ ಪ್ರತಿಯೊಂದು ತುಣುಕುಗಳನ್ನು ಸಮಗ್ರವಾಗಿ ತಿಳಿದು ಅವರ ಅಭಿವೃದ್ಧಿಗಾಗಿ ಮಾಸ್ತರರು ಶ್ರಮಿಸಿದ ಬಗ್ಗೆ ತಿಳಿಸಲಾಗಿದೆ. ಮುಂದೆ ಇತರೆ ಬುಡಕಟ್ಟುಗಳ ಸಾಂಸ್ಕೃತಿಕ ಪ್ರಗತಿಯಲ್ಲಿ ಮಾಸ್ತರರು ಯಾವ ರೀತಿಯಲ್ಲಿ ತಮ್ಮ ಪಾತ್ರವನ್ನು ಬೀರಿದ್ದಾರೆ ಎಂಬುದನ್ನು ಚರ್ಚಿಸಲಾಗಿದೆ.

ಒಬ್ಬ ಆದರ್ಶ ಶಿಕ್ಷಕ ಸಮಾಜವನ್ನು ಹೇಗೆ ಪರಿವರ್ತಿಸಬಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಹುಚ್ಚಪ್ಪ ಮಾಸ್ತರರ ಬದುಕು ನಮ್ಮ ಮುಂದೆ ಇದೆ. ಸ್ವಾತಂತ್ರ್ಯ ಬಂದು ಅನೇಕ ದಶಕಗಳೇ ಕಳೆದೂ ಗಿರಿಜನರ ಬದುಕು ಮತ್ತು ಶಿಕ್ಷಣದಲ್ಲಿ ಗಣನೀಯ ಪ್ರಗತಿ ಆಗಿಲ್ಲ. ನೂರಾರು ಆಶ್ರಮ ಶಾಲೆಗಳು ನೆಲಕಚ್ಚಿವೆ. ಅವುಗಳ ಉದ್ದೇಶ ಸಾರ್ಥಕವಾಗಿಲ್ಲ. ಆದರೆ ಹುಚ್ಚಪ್ಪ ಮಾಸ್ತರರ ಸೇವೆ ಮತ್ತು ಕಾಳಜಿಯನ್ನು ಆದರ್ಶವಾಗಿಟ್ಟುಕೊಂಡು ಯೋಜನೆ ರೂಪಿಸಿದಲ್ಲಿ ಗಿರಿಜನರ ಶಿಕ್ಷಣಕ್ಕೆ

ಹೊಸ ಆಯಾಮ ನೀಡಲು ಸಾಧ್ಯ. ಈ ದೃಷ್ಟಿಯಿಂದ ಈ ಪ್ರಬಂಧ ಇವತ್ತಿನ ಬುಡಕಟ್ಟಿನ ಸಮಸ್ಯೆ ಮತ್ತು ಅವುಗಳ ಪರಿಹಾರಕ್ಕೆ ಒಂದು ಪುಟ್ಟ ಕನ್ನಡಿ ಮಾತ್ರ.

ಅನುಬಂಧ

೧. ಪರಾಮರ್ಶನ ಗ್ರಂಥಗಳು

೨. ಛಾಯಾ ಚಿತ್ರಗಳು

ಗ್ರಂಥ ಋಣ:

೧. ಅಭಿವೃದ್ಧಿ ಪಥ, ಹಿ.ಚಿ.ಬೋರಲಿಂಗಯ್ಯ, ಪ್ರಕಾಶನ ಬೆಂಗಳೂರು.

೨. ಆದಿವಾಸಿ ಆಖ್ಯಾನ, ಸಂ. ಎ.ಎಸ್.ಪ್ರಭಾಕರ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೨.

೩. ಅಕ್ಕಮಹಾದೇವಿ (ಅನು) ಬುಡಕಟ್ಟು ನ್ಯಾಯ, ಮೈಸೂರು ಪ್ರಸಾರಂಗ, ೧೯೮೪.

೪. ಅಗ್ನಿಗರ್ಭ, ಮಹಾಶ್ವೇತಾದೇವಿ, ಅನು–ಎಚ್.ಎಸ್.ಶ್ರೀಮತಿ, ಅಂಕಿತ ಪ್ರಕಾಶನ, ಬೆಂಗಳೂರು.

೫. ಆನ್ ಆಕ್ಟ್ ವಾಸ್ ಬಾರ್ನ್, ಮಹಾಶ್ವೇತಾದೇವಿ, ಪು.೩, ೧೯೮೮.

೬. ಅಟ್ ದಿ ಬಾಟಮ್ ಆಫ್ ಇಂಡಿಯನ್ ಸೊಸೈಟಿ ಸ್ಟಿಫನ್ ಫಕ್ಸ್, ೧೯೮೧.

೭. ಅಮಿತಾ ಬವಿಸ್ಕರ್, ಇನ್ ದಿ ಬೆಲ್ಲಿ ಆಫ್ ದಿ ರಿವರ್, ಟ್ರೈಬಲ್ ಕಾನ್ಸ್ಲೆಕ್ಟ್,

೮. ಓವರ್ ಡೆವಲಪ್‌ಮೆಂಟ್ ಇನ್ ನರ್ಮದಾ ವ್ಯಾಲಿ, ನ್ಯೂಡೆಲ್ಲಿ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೭.

೯. ಇಂದಿರಾ ಆರ್., ಸಂಕಷ್ಟದಲ್ಲಿ ಮೂಲ ನಿವಾಸಿಗಳು, ಇಬ್ಬನಿ ೧೯೯೯.

೧೦. ಕಾರ್ಲ್‌ಮಾರ್ಕ್ಸ್, ಬಂಡವಾಳದ ಉದ್ಭವ ಸಂಗತಿ, ಪ್ರಕಾಶನ, ಯುನೆಸ್ಕೋ ೧೯೮೧.

೧೧. ಕಾಳೇಗೌಡ ನಾಗವರ ಎನ್.ಹುಚ್ಚಪ್ಪ ಮಾಸ್ತರ್ ಸಂ. ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.

೧೨. ಜೋಗನ್ ಶಂಕರ್, ಗ್ರಾಮ ಸಮಾಜ, ಜೀವ ಪ್ರಕಾಶನ, ಮೈಸೂರು ೧೯೯೫.

೧೩. ನಂಜಮ್ಮಣಿ ಎಂ., ಸಾಮಾಜಿಕ ಮಾನವ ಶಾಸ್ತ್ರ ಮೈಸೂರು, ೧೯೬೬.

೧೪. ನಾಗೇಗೌಡ ಎಚ್.ಎಲ್., ವೆರಿಯರ್ ಎಲ್ವಿನ್, ಗಿರಿಜನ ಪ್ರಪಂಚ, ಸಾಹಿತ್ಯ ಸಾಧನ ಪ್ರಕಾಶನ, ಬೆಂಗಳೂರು, ೧೯೭೯.

೧೫. ನಾರಾಯಣ ಎಂ., ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ, ಚೇತನ್ ಬುಕ್‌ಹೌಸ್, ಮೈಸೂರು, ೧೯೯೩.

೧೬. ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೧೭. ಬೋರಲಿಂಗಯ್ಯ.ಹಿ.ಚಿ., ಸಿದ್ದಿಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩.

೧೮. ಬೋರಲಿಂಗಯ್ಯ.ಹಿ.ಚಿ., ಕಾಡು ಕಾಂಕ್ರೀಟ್ ಮತ್ತು ಜಾನಪದ ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬.

೧೯. ಬೋರಲಿಂಗಯ್ಯ.ಹಿ.ಚಿ., ಗಿರಿಜನ ನಾಡಿಗೆ ಪಯಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು, ೧೯೯೧.

೨೦. ಬೋರಲಿಂಗಯ್ಯ.ಹಿ.ಚಿ., ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ. ಪಬ್ಲಿಕೇಶನ್, ಬೆಂಗಳೂರು, ೨೦೦೧.

೨೧. ಚಲುವರಾಜು, ಉ.ಸಂ.ಬುಡಕಟ್ಟು ಮಹಾಕಾವ್ಯ ಮಾಲೆ ಜುಂಜಪ್ಪ, ಪ್ರಸಾರಂಗ, ಕ.ವಿ.ವಿ., ಹಂಪಿ.

೨೨. ಡಾ. ಕೆ.ಎಂ.ಮೈತ್ರಿ, ಬುಡಕಟ್ಟುಗಳ ಕುಲಕಸುಬುಗಳು, ಪ್ರಸಾರಂಗ ಕ.ವಿ.ವಿ. ಹಂಪಿ, ೨೦೦೨.

೨೩. ಗಂಗಾಧರ ದೈವಜ್ಞನ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪ್ರಸಾರಂಗ ಕ.ವಿ.ವಿ., ಹಂಪಿ, ೨೦೦೦.

೨೪. ಡಾ. ಕೇಶವನ್ ಪ್ರಸಾದ್, ಸಂ. ಬುಡಕಟ್ಟು ಮಹಾಕಾವ್ಯ ಮಾಲೆ, ಪ್ರಸಾರಂಗ ಕ.ವಿ.ವಿ.ಹಂಪಿ, ೧೯೯೭

ಇಂಗ್ಲೀಷ್ ಗ್ರಂಥಗಳು:

1) Abbe J.A., dubois, mindug Manners customs and ceremonies Oxfod University Press, Bombay 1990.

2) Arun Kumar Mishra, Trading and Communitees in Ancient India Amerika Prakashana Delhi 1992.

3) C.R.Kothari Research Methodology methods and Techniques welef eastern limited New Delhi.

4) Editor, the Urston and Ranyachar K Caste and Tribes of Southern India, New Delhi 1909.

5) Editor, Thurston, Dthonyraphic nites in Southern India, Govt. Press Madras, 1906.

6) Nirmal Kumar Bose, Tribal Life in India, Nationl Book Trust, New Delhi 1971.

7) Introduction to Social Research Keith F Punch Saye Publication London Thousand oaks New Delhi.

8) Robert Yin case study Research Design and methods Second Editiion International Education and professional publisher Thousand oaks London New Delhi.

9) Singh K.S., The Scheduled Tribes (People of India Series) Vol.II Oxford University Press, Delhi, 1995.



1) ಸಾಗರ ತಾಲೂಕಿನ ಭೌಗೋಳಿಕ ನಕ್ಷೆ



2) ಗಾಯನ ನಿರತ ಶ್ರೀ ಹುಚ್ಚಪ್ಪ ಮಾಸ್ತರರು



3) ಅಧ್ಯಯನ ನಿರತ ಶ್ರೀ ಹುಚ್ಚಪ್ಪ ಮಾಸ್ತರರು



4) ಶ್ರೀ ಹುಚ್ಚಪ್ಪ ಮಾಸ್ತರ ದಂಪತಿಗಳು



5) ಶ್ರೀ ಮಹಾತ್ಮಾಗಾಂಧಿ ಗಿರಿಜನ ಆಶ್ರಮ ಶಾಲೆ



6) ಹಿರೆಮನೆ ಗಿರಿಜನ ಆಶ್ರಮ ಶಾಲೆ ಮುಂದೆ ಸಂಶೋಧನ ವಿಧ್ಯಾರ್ಥಿನಿ



7) ಹಿರೇಮನೆ ಆಶ್ರಮ ಶಾಲೆಯ ಹತ್ತಿರ ಇರುವ ಭಾವಿ.



೮) ಗಿರಿಜನ ಮಕ್ಕಳ ವಸತಿ ಶಾಲೆ ಹಿರೆಮನೆ.



೯) ಹಸಲರ ಮನೆಯ ಮುಂದೆ ಸಂಶೋಧನಾ ವಿಧ್ಯಾರ್ಥಿನಿ.



10) ಹಿರೇಮನೆ ಗಿರಿಜನ ಶಾಲೆಯ ಮಕ್ಕಳು ಉಪಯೋಗಿಸುತ್ತಿದ್ದ ಸ್ನಾನಗೃಹ.



11) ಈಗಿರುವ ಹೊಸ ಗಿರಿಜನ ಶಾಲೆ ಹಿರೇಮನೆ.



12) ಹಿರೇಮನೆ ಹಸಲರ ಹಾಡಿಯಲ್ಲಿರುವ ಪ್ರಾಥಮಿಕ ಶಾಲೆ.



13) ಹಿರೇಮನೆ ಹಸಲರ ಅಂಗನವಾಡಿ ಶಾಲೆ.



14) ಹಸಲರ ಮಹಿಳೆಯೊಂದಿಗೆ ಸಂಶೋಧನಾ ವಿಧ್ಯಾರ್ಥಿನಿ.



15) ಕೃಷಿ ಕಾರ್ಯದಲ್ಲಿ ನಿರತ ಹಸಲರು.



16) ಹುಚ್ಚಪ್ಪ ಮಾಸ್ತರರು ಹಸಲರಿಗೆ ಸರಕಾರದಿಂದ ಮಂಜೂರು ಮಾಡಿಸಿದ ಭೂಮಿ.



17) ಮಲೆನಾಡ ದಿವರ ಹಸೆಕಲೆ ಚಿತ್ರಗಳು.



18) ಶ್ರೀಮತಿ ಗೌರಮ್ಮನವರು ಬಿಡಿಸಿದ ಹಸೆಕಲೆ ಚಿತ್ರ



19) ಶ್ರೀ ಹುಚ್ಚಪ್ಪ ಮಾಸ್ತರರಿಗೆ ಬಂದ ಸನ್ಮಾನಗಳ ಚಿತ್ರಗಳು.



20) ಶ್ರೀ ಹುಚ್ಚಪ್ಪ ಮಾಸ್ತರರಿಗೆ ಬಂದ ಪುರಸ್ಕಾರಗಳ ಚಿತ್ರ